ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸಾಗರ ಭದ್ರತೆಗೆ ನೌಕಾ ಥಿಯೇಟರ್ ಕಮಾಂಡ್: ತ್ರಿಪಾಠಿ | ೦೭

ಗಡಿ ಜಿಲ್ಲೆಗಳ ಜನಸಂಖ್ಯೆ ಬದಲು ದೇಶಕ್ಕೆ ಸವಾಲು: ಶಾ | ೦೭



ಮಂಗಳೂರು
ಭಾನುವಾರ, 31 ಮೇ 2026
ಸಂಪುಟ 48, ಸಂಚಿಕೆ 73 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಹುಣ್ಣಿಮೆ, ನಕ್ಷತ್ರ: ಅನುರಾಧೆ

ದಿನದ ಮಾತು

ಕೆಲಸ ಮಾಡುತ್ತಿದ್ದರೆ ಬಡತನವಿರುವುದಿಲ್ಲ. ಪರಮಾತ್ಮನ ಧ್ಯಾನ ಮಾಡುತ್ತಿದ್ದರೆ ಪಾಪ ವುಂಟಾಗುವುದಿಲ್ಲ. ಮೌನವಾಗಿದ್ದರೆ ಜಗಳವುಂಟಾಗುವುದಿಲ್ಲ.

▲ ಚಾಣಕ್ಯ

ಹೀಗೊಂದು ಮಸಾಲೆಪುರಿ ಆರ್ಡರ್ ಪ್ರಕರಣವು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ನಿವೃತ್ತ ನ್ಯಾ.ಪಿ.ಎನ್. ದೇಸಾಯಿ ಮಾನವ ಹಕ್ಕು ಆಯೋಗ ಅಧ್ಯಕ್ಷ

• **ಬೆಂಗಳೂರು:** ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವ ಮೊದಲು ಸಿದ್ದರಾಮಯ್ಯ ಅವರು ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.

• ಪುಟ ೪

ವರ್ಚಸ್ಸು ಹೆಚ್ಚಿಸಿಕೊಳ್ಳಲು ಉಗ್ರ ಪಾಕಿಸ್ತಾನದ ಕಸರತ್ತು

• ಪುಟ ೭

ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ ಜಯಂತಿ ಇಂದು

• ಪುಟ ೭

ಮಲಪ್ಪುರಂ ಸ್ಫೋಟಕ ವಶ ಪ್ರಕರಣ: ಎನ್ಐಎ ದಾಳಿ

• ಪುಟ ೭

ಪಂಜಾಬ್ ಸ್ಥಳೀಯ ಕದನ; ಬಲ ವೃದ್ಧಿಸಿಕೊಂಡ ಬಿಜೆಪಿ

• ಪುಟ ೭

ಉ.ಪ್ರದೇಶದಲ್ಲಿ ಭಾರೀ ಮಳೆಗೆ 28 ಜನ ಸಾವು

• ಪುಟ ೭

ತಿರುವಾಂಕೂರು ರಾಜಮನೆತನದಿಂದ ಸ್ಪಷ್ಟನೆ: ಚಿನ್ನ ನಾಪತ್ತೆಯಾಗಿಲ್ಲ

• ಪುಟ ೭



ರಕ್ಷಣಾ ಸ್ವಾವಲಂಬನೆ

ಭಾರತದ ಸೇನಾ ಬಲ ಹೆಚ್ಚಿಸಿದ ಸೂರ್ಯಾಸ್ತ

• ಪುಟ ೭

ಸುದ್ದಿ ಸಮಗ್ರ

ಸಿಎಲ್‌ಪಿ ನಾಯಕರಾಗಿ ಆಯ್ಕೆ | ರಾಜ್ಯಪಾಲರ ಭೇಟಿ | ಸರ್ಕಾರ ರಚನೆಗೆ ಹಕ್ಕು ಮಂಡನೆ

ಬುಧವಾರ ಡಿಕೆಶಿ ಪ್ರಮಾಣವಚನ

• **ಬೆಂಗಳೂರು:** ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಶನಿವಾರ ಮತ್ತೊಂದು ಮಹತ್ವದ ಅಧ್ಯಾಯ ಆರಂಭವಾಗಿದೆ. ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಸಿದ್ದರಾಮಯ್ಯ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ, ಹೈಕಮಾಂಡ್ ಸೂಚನೆಯಂತೆ ಡಿ.ಕೆ. ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಘೋಷಿಸಲಾಗಿದೆ.

ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಶನಿವಾರ ಸಂಜೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಎಲ್ಲ ಶಾಸಕರು ಒಮ್ಮತದ ನಿರ್ಧಾರ ಕೈಗೊಂಡರು. ಸಭೆಯ ಆರಂಭದಲ್ಲಿಯೇ ಸಿದ್ದರಾಮಯ್ಯ ಅವರು ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯನ್ನು ಹೈಕಮಾಂಡ್‌ಗೆ ಬಿಡಲಾಗಿದೆ ಎಂದರು. ಬಳಿಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ. ಶಿವಕುಮಾರ್ ಅವರು ಆಯ್ಕೆಯಾಗಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯ ದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಘೋಷಿಸಿದರು.

ಡಿಕೆಶಿ ಹೆಸರು ಸೂಚಿಸಿದ ಸಿದ್ದರಾಮಯ್ಯ: 10 ನಿಮಿಷಗಳ ವಿರಾಮದ ಬಳಿಕ ಮತ್ತೆ ಸಭೆ ಸೇರಿ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಡಿ.ಕೆ. ಶಿವಕುಮಾರ್ ಅವರ ಹೆಸರನ್ನು ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಪ್ರಸ್ತಾಪಿಸಿದರು. ಶಾಸಕ ಡಾ.ಜಿ.ಪರಮೇಶ್ವರ್ ಅವರು ಸಿದ್ದರಾಮಯ್ಯ ಪ್ರಸ್ತಾವನೆ ಅನುಮೋದಿಸಿದರು. ಶಿವಕುಮಾರ್ ಹೆಸರು ಅನುಮೋದನೆಯಾಗುತ್ತಿದ್ದಂತೆಯೇ ಸಭೆಯಲ್ಲಿದ್ದ ಶಾಸಕರು ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು. ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಎಲ್ಲಾ ಶಾಸಕರು ಕೈ ಎತ್ತುವ ಮೂಲಕ ಡಿ.ಕೆ. ಶಿವಕುಮಾರ್ ಅವರ ಆಯ್ಕೆಯನ್ನು ಅನುಮೋದಿಸಿದರು.

ಹೈಕಮಾಂಡ್ ನಿರ್ಧಾರಕ್ಕೆ ಶಾಸಕರ ಸಹಮತ: ಸಿದ್ದರಾಮಯ್ಯ ಅವರ ರಾಜೀನಾಮೆ ಬಳಿಕ ಮುಂದಿನ ಮುಖ್ಯಮಂತ್ರಿ ಯಾರು ಎಂಬ ಕುತೂಹಲಕ್ಕೆ ಹೈಕಮಾಂಡ್ ಈಗಾಗಲೇ ತೆರೆ ಎಳೆದಿತ್ತು. ➡ ಪುಟ ೪



17 ವರ್ಷ ಬಳಿಕ ಪಟ್ಟ ಬಿಟ್ಟುಕೊಟ್ಟ ಸಿದ್ದರಾಮಯ್ಯ

ಮಾಜಿ ಸಿಎಂ ಸಿದ್ದರಾಮಯ್ಯನವರು ಬರೋಬ್ಬರಿ 17 ವರ್ಷ ಸುದೀರ್ಘವಾಗಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿದ್ದರು. ಇದೀಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಶಾಸಕಾಂಗ ಪಕ್ಷದ ನಾಯಕನ ಸ್ಥಾನವನ್ನು ಬಿಟ್ಟುಕೊಟ್ಟಿದ್ದಾರೆ.

ಸಿದ್ದರಾಮಯ್ಯ ಪರ ಡಿಕೆಶಿ ಗೌರವ ನಿರ್ಣಯ ಮಂಡನೆ

ಸಿದ್ದರಾಮಯ್ಯನವರು ಒಂದೇ ವಾಕ್ಯದ ನಿರ್ಣಯ ಮಂಡಿಸುವುದರ ಮೂಲಕ ಡಿ.ಕೆ. ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯನಾಗಿ ಆಯ್ಕೆ ಮಾಡಲಾಯಿತು. ಬಳಿಕ ಡಿಕೆ ಶಿವಕುಮಾರ್ ಅವರು ಸಿದ್ದರಾಮಯ್ಯ ಪರ ಗೌರವ ನಿರ್ಣಯ ಮಂಡಿಸಿದ್ದು, ಸಿಎಂ ಆಗಿ ಅವರ ಸೇವೆಯನ್ನು ಸಭೆಯಲ್ಲಿ ಮೆಲುಕು ಹಾಕಲಾಗುತ್ತದೆ.

ನುಡಿದಂತೆ ನಡೆದಿದ್ದೇವೆ: ಸಿಎಲ್‌ಪಿ ಸಭೆಯಲ್ಲಿ ಸಿದ್ದರಾಮಯ್ಯ

ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಮಾತನಾಡಿದ ಮಾಜಿ ಸಿಎಂ ಸಿದ್ದರಾಮಯ್ಯ, ತಮ್ಮ ಆಡಳಿತದ ಬಗ್ಗೆ ವಿವರಿಸಿದರು. ರಾಜ್ಯದಲ್ಲಿ ನುಡಿದಂತೆ ನಡೆದಿದ್ದೇವೆ. ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ. ಸರ್ವ ಜನರ ಏಳಿಗೆಗಾಗಿ ನಾನು ಸೇರಿದಂತೆ ನಮ್ಮ ಪಕ್ಷದ ಎಲ್ಲ ಶಾಸಕರು, ಸಂಪುಟ ಸಹೋದ್ಯೋಗಿಗಳು ಉತ್ತಮ ಕೆಲಸ ನಿರ್ವಹಿಸಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಹೈಕಮಾಂಡ್‌ನ ಎಲ್ಲ ನಾಯಕರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ಡಿಕೆಶಿ

ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಯಾದ ಬೆನ್ನಲ್ಲೇ ಡಿ.ಕೆ. ಶಿವಕುಮಾರ್ ಅವರು ಲೋಕಭವನಕ್ಕೆ ತೆರಳಿ ರಾಜ್ಯಪಾಲ ರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ಶಾಸಕಾಂಗ ಪಕ್ಷದ ನಿರ್ಣಯದ ಪತ್ರದೊಂದಿಗೆ ರಾಜ್ಯಪಾಲ ರನ್ನು ಭೇಟಿ ಮಾಡಿ, ತಮಗೆ ಬಹುಮತ ಇರುವ ಬಗ್ಗೆ ಮಾಹಿತಿ ನೀಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಈ ವೇಳೆ ಮಾಜಿ ಸಿಎಂ ಸಿದ್ದರಾಮಯ್ಯ, ಕೆ.ಸಿ.ವೇಣು ಗೋಪಾಲ್, ಸುರ್ಜೇವಾಲಾ ಇದ್ದರು.

ಜೂ.3ರಂದು ಪ್ರಮಾಣವಚನ

ಡಿ.ಕೆ.ಶಿವಕುಮಾರ್ ಅವರ ಪದ ಗ್ರಹಣ ಸಮಾರಂಭಕ್ಕೆ ಈಗಾಗಲೇ ದಿನಾಂಕ ಮತ್ತು ಸಮಯ ನಿಗದಿ ಯಾಗಿದೆ. ಬರುವ ಬುಧವಾರ (ಜೂ.3) ಸಂಜೆ 4.05 ಗಂಟೆಗೆ ಬೆಂಗಳೂರಿನ ಲೋಕಭವನದಲ್ಲಿ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ಸಮಾರಂಭಕ್ಕೆ ದೆಹಲಿಯ ಹೈಕ ಮಾಂಡ್ ನಾಯಕರು ಹಾಗೂ ನೆರೆಯ ರಾಜ್ಯಗಳ ಮುಖ್ಯಮಂತ್ರಿಗಳು ಸಾಕ್ಷಿಯಾಗಲಿದ್ದಾರೆ.

ಅಜ್ಜಯ್ಯಗೆ ಡಿ.ಕೆ. ಶಿವಕುಮಾರ್ ವಿಶೇಷ ಪೂಜೆ

ಸಿಎಲ್‌ಪಿ ಸಭೆಗೂ ಮುನ್ನವೇ ಡಿ.ಕೆ. ಶಿವಕುಮಾರ್ ತಮ್ಮ ನೆಚ್ಚಿನ ಗುರುಗಳಾದ ಅಜ್ಜಯ್ಯರಿಗೆ ವಿಶೇಷ ಪೂಜೆ ಸಲ್ಲಿಸಿದರು.ಎಲ್ಲರನ್ನೂ ಹೊರಗೆ ಕಳುಹಿಸಿ ವಿಧಾನಸೌಧ ಕೊಠಡಿ ಯಲ್ಲಿ ಆರಾಧ್ಯ ದೈವ ಅಜ್ಜಯ್ಯರಿಗೆ ಪೂಜೆ ಸಲ್ಲಿಸಿದರು. ಬಳಿಕ ಶಾಸಕಾಂಗ ಪಕ್ಷದ ಸಭೆಗೆ ತೆರಳಿದರು.

> **ಚುನಾವಣಾ ಪೂರ್ವದಲ್ಲಿ ಜನರಿಗೆ ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ಗ್ಯಾರಂಟಿ ಯೋಜನೆ ಅನುಷ್ಠಾನ ಮಾಡಿದ್ದೇವೆ. ಇದರೊಂದಿಗೆ ಅತ್ಯುತ್ತಮ ಆಡಳಿತ ನೀಡುವ ಪ್ರಯತ್ನ ಮಾಡಿದ್ದೇನೆ. ಕೇಂದ್ರದ ತಾರತಮ್ಯ ನೀತಿಯ ಹೊರತಾಗಿಯೂ ಉತ್ತಮ ಆರ್ಥಿಕ ನಿರ್ವಹಣೆ ಮಾಡಿದ್ದೇವೆ.**
> ■ ಸಿದ್ದರಾಮಯ್ಯ, ಮಾಜಿ ಸಿಎಂ

> **ಸಾಮಾಜಿಕ ನ್ಯಾಯದ ಮೇಲಿನ ಸಿದ್ದರಾಮಯ್ಯ ಅವರ ಸಮರ್ಪಣಾ ಭಾವ ಮತ್ತು ಆಡಳಿತಾತ್ಮಕ ಸಾಮರ್ಥ್ಯವು ಪ್ರತಿ ಕಾಂಗ್ರೆಸ್ಸಿಗನಿಗೂ ಮಾದರಿಯಾಗಿದೆ. ಅವರ ಮಾರ್ಗದರ್ಶನದಲ್ಲಿ ನಮ್ಮ ಸರ್ಕಾರ ಮುನ್ನಡೆಯಲಿದೆ**
> ■ ಡಿ.ಕೆ.ಶಿವಕುಮಾರ್, ನಿಯೋಜಿತ ಸಿಎಂ

> **ಹೈಕಮಾಂಡ್ ನಿರ್ಣಯದಂತೆ ಡಿ.ಕೆ.ಶಿವಕುಮಾರ್ ಅವರನ್ನು ಒಮ್ಮತದಿಂದ ಶಾಸಕಾಂಗ ಸಭೆಯ ನಾಯಕರನ್ನಾಗಿ ಆಯ್ಕೆ ಮಾಡಿದ್ದೇವೆ. ಸಿದ್ದರಾಮಯ್ಯ ಅವರು ಶಿವಕುಮಾರ್ ಹೆಸರನ್ನು ಸೂಚಿಸಿದ್ದು, ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.**
> ■ ಕೆ.ಸಿ.ವೇಣುಗೋಪಾಲ್, ಎಐಸಿಸಿ ಪ್ರಧಾನ ಕಾರ್ಯದರ್ಶಿ

ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿಕೆ

ಆಪರೇಷನ್ ಸಿಂದೂರ್ 2.0ಗೆ ಸಿದ್ಧ

• **ಹೊಸದಿಲ್ಲಿ:** ನಮ್ಮ ಮೂರು ಸೇನಾ ಪಡೆಗಳೂ ಆಪರೇಷನ್ ಸಿಂದೂರ್ 2.0ಗೆ ಸಂಪೂರ್ಣವಾಗಿ ಸಿದ್ಧವಾಗಿವೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಶನಿವಾರ ಹೇಳಿದ್ದಾರೆ.



ಮೂರು ಸೇವೆಗಳು ಭೂಮಿ, ವಾಯು ಮತ್ತು ಸಮುದ್ರವನ್ನು ಮೀರಿ ವಿಸ್ತರಿಸಿರುವ ಆಧುನಿಕ ಮಲ್ಟಿ-ಡೊಮೇನ್ ಯುದ್ಧಕ್ಕೆ ಭಾರತೀಯ ಸೇನೆ ಸನ್ನದ್ಧವಾಗಿದೆ ಎಂದು ತಿಳಿಸಿದ್ದಾರೆ. ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ (ಎನ್‌ಡಿಎ) 150ನೇ ಕೋರ್ಸ್‌ನ ಪಾಸಿಂಗ್ ಔಟ್ ಪರೇಡ್ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಜನರಲ್ ದ್ವಿವೇದಿ, ಪ್ರಸ್ತುತ ಕದನ ವಿರಾಮ ಅಸ್ತಿತ್ವದಲ್ಲಿದ್ದರೂ, ಮುಂದಿನ ಹಂತಕ್ಕೆ ಎಲ್ಲಾ ಮೂರು ಪಡೆಗಳು ತೀವ್ರವಾಗಿ ತಯಾರಿ ನಡೆಸುತ್ತಿವೆ ಎಂದು ಹೇಳಿದರು.

ಆಪರೇಷನ್ ಸಿಂದೂರ ಇನ್ನೂ ಮುಗಿದಿಲ್ಲ. ಅದು ಮುಂದುವರಿದಿದೆ. ಯುದ್ಧಕ್ಕೆ ತಾತ್ಕಾಲಿಕ ಕದನ ವಿರಾಮ ಇದೆ ಅಷ್ಟೇ. ಆದ್ದರಿಂದ ಭಾರತೀಯ ಸೇನೆ ಮತ್ತು ಎಲ್ಲಾ ಮೂರು ಸೇವೆಗಳು ಆಪರೇಷನ್ ಸಿಂದೂರ್ 2.0ಗೆ ಉತ್ತಮವಾಗಿ ತಯಾರಿ ನಡೆಸುತ್ತಿವೆ ಎಂದು ಹೇಳಿದರು.

ಆಧುನಿಕ ಯುದ್ಧಕ್ಕೆ ಸಿದ್ಧ: ಭವಿಷ್ಯದ ಯುದ್ಧವು ಭೂಮಿ, ಕಡಲ ಮತ್ತು ಗಾಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಬಾಹ್ಯಾಕಾಶ, ಸೈಬರ್ ಮತ್ತು ಅರಿವಿನ ಯುದ್ಧದಂತಹ ಉದಯೋನ್ಮುಖ ಕ್ಷೇತ್ರಗಳಿಂದ ಹೆಚ್ಚು ಪ್ರಭಾವಿತವಾಗಿರುತ್ತದೆ. ಆಧುನಿಕ ಯುದ್ಧಭೂಮಿಗಳು ಹೆಚ್ಚು ಪಾರದರ್ಶಕವಾಗಿವೆ. ಮಿಲಿಟರಿ ಯೋಜಕರು ನಿಯೋಜನೆ ಮತ್ತು ರಕ್ಷಣಾ ಕ್ರಮಗಳ ಬಗ್ಗೆ ಜಾಗರೂಕರಾಗಿರಬೇಕು ಎಂದು ಜನರಲ್ ದ್ವಿವೇದಿ ಹೇಳಿದರು. ➡ ಪುಟ ೪

ದಾವೂದ್ ಜತೆ ನಂಟು | ಅಪಾರ ಮದ್ದುಗುಂಡು, ಶಸ್ತ್ರಾಸ್ತ್ರ ವಶ

ದಾಳಿ ಸಂಚು: 9 ಶಂಕಿತ ಉಗ್ರರ ಸೆರೆ

• **ಹೊಸದಿಲ್ಲಿ:** ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಮತ್ತು ಭೂಗತ ಪಾತಕಿ ದಾವೂದ್ ಇಬ್ರಾಹಿಂನೊಂದಿಗೆ ಸಂಪರ್ಕ ಹೊಂದಿರುವ 9 ಶಂಕಿತ ಉಗ್ರರನ್ನು ದಿಲ್ಲಿಯಲ್ಲಿ ಬಂಧಿಸಲಾಗಿದೆ.



ಈ ತಂಡ ದಿಲ್ಲಿ, ಮುಂಬೈ ಮತ್ತು ದೇಶದ ಇತರ ಭಾಗಗಳಲ್ಲಿ ದಾಳಿ ನಡೆಸಲು ಯೋಜಿಸಿತ್ತು ಎಂಬ ಸ್ಫೋಟಕ ಮಾಹಿತಿ ತನಿಖೆಯಲ್ಲಿ ಬಹಿರಂಗಗೊಂಡಿತ್ತು. ಬಂಧಿತ ಆರೋಪಿಗಳು ದಿಲ್ಲಿ, ಮುಂಬೈ ಮತ್ತು ಪಂಜಾಬ್ ನಿವಾಸಿಗಳಾಗಿದ್ದು, ಕೆಲವರು ವಿದೇಶಿ ಪ್ರಜೆಗಳಾಗಿದ್ದಾರೆ ಎಂದು ದಿಲ್ಲಿ ಪೊಲೀಸರ ವಿಶೇಷ ಘಟಕ ತಿಳಿಸಿದೆ. ಬಂಧಿತರ ಬಳಿಯಿದ್ದ ಭಾರೀ ಪ್ರಮಾಣದ ಮದ್ದುಗುಂಡು ಮತ್ತು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ➡ ಪುಟ ೪

ಜಾಲದ ಸಮಗ್ರ ತನಿಖೆ

ಸದ್ಯ ವಿಶೇಷ ಘಟಕವು ಈಗ ಹಣಕಾಸಿನ ಜಾಡು, ಸಂವಹನ ದಾಖಲೆಗಳು ಮತ್ತು ಘಟಕಕ್ಕೆ ಸಂಬಂಧಿಸಿದ ವ್ಯಾಪಕ ಜಾಲದ ಬಗ್ಗೆ ತನಿಖೆ ನಡೆಸುತ್ತಿದೆ. ಲಾಜಿಸ್ಟಿಕ್ಸ್, ಹಣಕಾಸು ಇತ್ಯಾದಿಗಳಿಗಾಗಿ ಆರೋಪಿಗಳು ಮತ್ತು ಸಂಘಟಿತ ಅಪರಾಧ ಜಾಲಗಳ ನಡುವಿನ ಸಂಭಾವ್ಯ ಸಂಪರ್ಕಗಳನ್ನು ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಐಎಸ್‌ಐ ಬೆಂಬಲಿತ ಎಂದು ಹೇಳಲಾಗುವ ದೇಶಭ್ರಷ್ಟ ಗ್ಯಾಂಗ್‌ಸ್ಟರ್ ದಾವೂದ್ ಇಬ್ರಾಹಿಂನ ಭೂಗತ-ಭಯೋತ್ಪಾದಕ ಜಾಲಕ್ಕೆ ಸಂಬಂಧಿಸಿರುವ ಇತ್ತೀಚಿನ ಬಂಧನಗಳ ನಂತರ ಈ ಕಾರ್ಯಾಚರಣೆ ನಡೆದಿದೆ.

ಮಹಿಳೆಯರಿಂದ ಕಾನೂನು ದುರ್ಬಳಕೆ: ಸುಪ್ರೀಂ ಆತಂಕ

• **ಹೊಸದಿಲ್ಲಿ :** ವರದಕ್ಷಿಣೆ ಹಿಂಸೆ, ಕೌಟುಂಬಿಕ ಹಿಂಸೆ, ಪೋಸ್ಕೋ ಹೆಸರಿನಲ್ಲಿ ಪತಿ ಮತ್ತು ಅತ್ತೆ-ಮಾವನ ವಿರುದ್ಧ ಕ್ಷುಲ್ಲಕ ಮತ್ತು ಕಿರುಕುಳ ನೀಡುವ ದೂರುಗಳನ್ನು ದಾಖಲಿಸುವ ಮೂಲಕ ಕಾನೂನನ್ನು ದುರ್ಬಳಕೆ ಮಾಡುವ ಮಹಿಳೆಯರ ಪ್ರಮಾಣ ಹೆಚ್ಚುತ್ತಿರುವ 'ಆತಂಕಕಾರಿ ಪ್ರವೃತ್ತಿ'ಯ ಬಗ್ಗೆ ಸುಪ್ರೀಂಕೋರ್ಟ್ ಶುಕ್ರವಾರ ಕಳವಳ ವ್ಯಕ್ತಪಡಿಸಿದೆ.ಲಾಭದಾಯಕ ಇತ್ಯರ್ಥಗಳಿಗಾಗಿ ಸುಳ್ಳು ದೂರುಗಳನ್ನು ದಾಖಲಿಸುವ ಮೂಲಕ 'ತೋಳುತಿರುಚುವ' ವಿಧಾನ ಅನುಸರಿಸುವ ಪತ್ನಿಯರ ಪ್ರಮಾಣ ಮಿತಿ ಮೀರುತ್ತಿರುವುದರಿಂದಾಗಿ ನಿಜವಾದ ಪ್ರಕರಣಗಳು ಮರೆಮಾಚಲ್ಪಡುತ್ತಿವೆ. ➡ ಪುಟ ೪

ಲಾಭದಾಯಕ ಇತ್ಯರ್ಥಗಳಿಗಾಗಿ ಸುಳ್ಳು ದೂರು ದಾಖಲು



ಉಭಯ ತಂಡಗಳ ಮುಖಾಮುಖಿ

ಪಂದ್ಯ	8
ಆರ್‌ಸಿಬಿ	4
ಗುಜರಾತ್	4

ಗೆದ್ದವರಿಗಿದು ಎರಡನೇ ಕಪ್

- ಆರ್‌ಸಿಬಿ-2025
- ಗುಜರಾತ್-2022

- ಟ್ರೋಫಿ ಉಳಿಸಿಕೊಂಡ ತಂಡ ದಾಖಲೆ ಮೇಲೆ ಆರ್‌ಸಿಬಿ ಕಣ್ಣು
- ಸಮಬಲ ಪೈಪೋಟಿಯಲ್ಲಿ ಗೆದ್ದವರೇ ಕಿಂಗ್!

ಆರ್‌ಸಿಬಿ ಬಲ VS **ಗುಜರಾತ್ ಬಲ**

ಆರ್‌ಸಿಬಿ ಬಲ	ಗುಜರಾತ್ ಬಲ
ವಿರಾಟ್ ಕೊಹ್ಲಿ: 600 ರನ್	ಶುಭಮನ್ ಗಿಲ್: 722 ರನ್
ರಜತ್ ಪಾಟಿದಾರ್: 486 ರನ್	ಸಾಯಿ ಸುದರ್ಶನ್: 710 ರನ್
ಭುವನೇಶ್ವರ್ : 26 ವಿಕೆಟ್	ಕಾಗಿಸೋ ರಬಾಡ: 28 ವಿಕೆಟ್

ಪಂದ್ಯ ವಿವರ

ಯಾವಾಗ: ಭಾನುವಾರ
ಎಲ್ಲಿ: ಅಹಮದಾಬಾದ್, ನರೇಂದ್ರ ಮೋದಿ ಕ್ರೀಡಾಂಗಣ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಶೇ.96.5 ಮನೆಗಳಿಗೆ ಶುದ್ಧ ನೀರು

2023-24ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಟ

• **ಹೊಸದಿಲ್ಲಿ :** 2023-24ನೇ ಸಾಲಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ(ಎನ್‌ಎಫ್‌ಎಚ್ ಎಸ್-6) ಬಿಡುಗಡೆ ಯಾಗಿದ್ದು, ಇದರಂತೆ ದೇಶದ ಶೇ.98.3ರಷ್ಟು ಮನೆಗಳಿಗೆ ಈಗ ವಿದ್ಯುತ್ ಸೌಲಭ್ಯ ಲಭಿಸಿದ್ದು, ಶುದ್ಧ ಕುಡಿಯುವ ನೀರು ಶೇ.96.5ರಷ್ಟು ಮನೆಗಳಿಗೆ ಲಭಿಸು ತ್ತಿದೆ. ಅಂತರ್ಜಾಲ ಬಳಸುವ ಮಹಿಳೆಯರ ಪ್ರಮಾಣ ದುಪ್ಪ ಟ್ಟಾಗಿದ್ದು, ಶೇ.64.3ಕ್ಕೇರಿದೆ. ಮನೆ ಅಥವಾ ಜಾಗ ಹೊಂದುವ ಮೂಲಕ ಭೂಮಿಯ ಒಡೆತನ ಹೊಂದಿರುವ ಮಹಿಳೆಯರ ಪ್ರಮಾಣವೂ ಶೇ.18.8ಕ್ಕೇರಿದೆ.

➡ ಪುಟ ೪





ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,72,000(2,72,800) ಅಪರಂಜಿ ಚಿನ್ನ: 15,740(15,740) ಆಭರಣ ಚಿನ್ನ: 14,450(14,450) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) $1 = ₹95.01

ವಿದ್ಯಾರ್ಥಿ ರಾಜಕೀಯದಿಂದ ಸಿಎಂ ಕುರ್ಚಿಯವರೆಗೆ ಡಿ.ಕೆ. ಶಿವಕುಮಾರ್



ದೊಡ್ಡಆಲಹಳ್ಳಿ ಕೆಂಪೇಗೌಡ ಶಿವಕುಮಾರ್ ಆದ ನಾನು...

– ಹೀಗೆ ಕರ್ನಾಟಕದ 32ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಡಿ.ಕೆ. ಶಿವಕುಮಾರ್ ಅವರು ರಾಜಕೀಯ ಜೀವನವೇ ಒಂದು ಕುಲುಮೆಯಲ್ಲಿ ಬೆಂದ ಲೋಹದಂತೆ. ಬಲು ಗಟ್ಟಿ. ನೂರಾರು ಸವಾಲುಗಳು, ಅವಮಾನ, ಅಡೆತಡೆಗಳು ಎದುರಾದರೂ ಜೀವನದುದ್ದಕ್ಕೂ ಅವರ ತಾಳ್ಮೆಯೇ ಮೇಲುಗೈ ಸಾಧಿಸುತ್ತದೆ.

ಶಿವಕುಮಾರ್ ತಮ್ಮ ಬಾಲ್ಯವನ್ನು ರಾಜಾಜಿನಗರದಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಿಠಲ ಶಾಖೆಯಲ್ಲಿ ಭಾಗವಹಿಸುತ್ತಾ ಕಳೆದರು. ಆದರೆ, ಈ ಒಡನಾಟವೂ ದೀರ್ಘಾವಧಿಯವರೆಗೆ ಮುಂದುವರಿಯಲಿಲ್ಲ. ಆರ್‌ಎಸ್‌ಎಸ್ (ಸಂಘ) ಜೊತೆಗಿನ ಅಲ್ಪಾವಧಿಯ ಒಡನಾಟದಲ್ಲಿ ಅದರ ಅನೇಕ ಕಾರ್ಯಕ್ರಮಗಳಿಗೆ ಹಾಜರಾಗಿದ್ದರು. ಸಂಘದ ಗಣವೇಷ(ಸಮವಸ್ತ್ರ)ವನ್ನೂ ಧರಿಸಿದ್ದರು. ಶಿವಕುಮಾರ್ 1985ರಲ್ಲಿ ವಿಧಾನಸಭಾ ಚುನಾವಣೆಗೆ ಪಾದಾರ್ಪಣೆ ಮಾಡುವ ಮೊದಲು, ಕಾಂಗ್ರೆಸ್ ಬೆಂಬಲಿತ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾ (ಎನ್‌ಎಸ್‌ಯುಐ) ಅವರಿಗೆ ವಿದ್ಯಾರ್ಥಿ ಚುನಾವಣಾ ಟಿಕೆಟ್ ನಿರಾಕರಿಸಿತ್ತು. ಆ ಸಮಯದಲ್ಲಿ, ಬಿಜೆಪಿಯ ಅನಂತ್ ಕುಮಾರ್ ಅವರು ಶಿವಕುಮಾರ್ ಅವರನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ)ಗೆ ಕರೆತರಲು ಪ್ರಯತ್ನಿಸಿದ್ದರು.



ಆರಂಭಿಕ ವರ್ಷಗಳು

ಬೆಂಗಳೂರಿನ ವಿದ್ಯಾರ್ಥಿ ರಾಜಕೀಯದಿಂದ ಹಿಡಿದು ಕರ್ನಾಟಕದ ಕಾಂಗ್ರೆಸ್‌ನ ಅತ್ಯಂತ ಶಕ್ತಿಶಾಲಿ ನಾಯಕರಲ್ಲಿ ಒಬ್ಬರಾಗುವವರೆಗೆ, ಶಿವಕುಮಾರ್ ಅವರ ಏಳಿಗೆಯು ಎಂಟು ವಿಧಾನಸಭಾ ಚುನಾವಣೆ ಗೆಲುವುಗಳು, ದಶಕಗಳ ಸರ್ಕಾರದಲ್ಲಿ, ಜೈಲಿನಲ್ಲಿ ಮತ್ತು ತಳಮಟ್ಟದ ರಾಜಕೀಯದ ಮೇಲಿನ ಬಲವಾದ ಹಿಡಿತದಿಂದ ರೂಪುಗೊಂಡಿದೆ. ಶಿವಕುಮಾರ್ 1981ರಲ್ಲಿ ಎನ್‌ಎಸ್‌ಯುಐ ಸೇರಿದಾಗ ಅವರಿಗೆ ಕೇವಲ 18 ವರ್ಷ. ಅವರು ರಾಮ್ ನಾರಾಯಣ್ ಚೆಲ್ಲಾರಂ ಕಾಲೇಜಿನಲ್ಲಿ ಓದುತ್ತಿರುವಾಗಲೇ ಎನ್‌ಎಸ್‌ಯುಐನ ಬೆಂಗಳೂರು ಜಿಲ್ಲಾಧ್ಯಕ್ಷರಾಗಿ ಮತ್ತು ನಂತರ ಕರ್ನಾಟಕ ಯುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿ ಬೆಳೆದರು. 1985 ರಲ್ಲಿ ಅವರಿಗೆ ಮೊದಲ ನಿಜವಾದ ಪರೀಕ್ಷೆ ಎದುರಾಯಿತು, ಕಾಂಗ್ರೆಸ್ ಪಕ್ಷವು ಯುವ ನಾಯಕನನ್ನು ಜನತಾದಳದ ಅತ್ಯಂತ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರಾದ ಎಚ್.ಡಿ. ದೇವೇಗೌಡ ಅವರ ವಿರುದ್ಧ ಸಾತನೂರಿನಲ್ಲಿ ಕಣಕ್ಕಿಳಿಸಿತು. ಆದರೆ ಅವರು ಅಲ್ಪ ಮತಗಳ ಅಂತರದಲ್ಲಿ ಸೋತರು. ಶಿವಕುಮಾರ್ ಅವರು ಕ್ಷೇತ್ರದ ಜನರಿಗೆ ಹೆಚ್ಚು ಪರಿಚಿತರಲ್ಲದಿದ್ದರೂ ಭವಿಷ್ಯದ ಪ್ರಧಾನಿಗೆ ಸೆಡ್ಡು ಹೊಡೆದದ್ದು ಎಲ್ಲರ ದೃಷ್ಟಿ ಅವರತ್ತ ನೆಟ್ಟಿತು. ಅವರು 1987 ರ ಹೊತ್ತಿಗೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರು. ಶಿವಕುಮಾರ್ ಅವರ ಗೆಲುವಿನ ನಾಗಾಲೋಟಕ್ಕೆ ಅದು ಅಡಿಪಾಯವಾಗಿತ್ತು.

ಕಾಂಗ್ರೆಸ್‌ನಿಂದ ಗೆಲುವು-ಟಿಕೆಟ್ ನಿರಾಕರಣೆ

ಶಿವಕುಮಾರ್ 1989ರಲ್ಲಿ ಮೊದಲ ಬಾರಿಗೆ ಸಾತನೂರು ವಿಧಾನಸಭಾ ಕ್ಷೇತ್ರದಿಂದ ವಿಜಯ ಸಾಧಿಸುವ ಮೂಲಕ ರಾಜ್ಯ ಆಡಳಿತ ಶಕ್ತಿಕೇಂದ್ರವಾಗಿರುವ ವಿಧಾನಸೌಧವನ್ನು ಪ್ರವೇಶಿಸಿದರು. ಈ ಚುನಾವಣೆಯಲ್ಲಿ ಸುಮಾರು ಶೇ. 49 ರಷ್ಟು ಮತಗಳನ್ನು ಗಳಿಸಿದರು. ಮೊದಲ ಬಾರಿ ವಿಧಾನಸಭೆ ಪ್ರವೇಶಿಸುವಾಗ ಅವರ ವಯಸ್ಸು ಕೇವಲ 27 ವರ್ಷ. ತರುವಾಯ 1994ರಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಗೆ ಅವರಿಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ನಿರಾಕರಿಸಲಾಯಿತು. ಹೀಗಾಗಿ, ಅವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಮೂಲಕ ಸಾತನೂರು ಕ್ಷೇತ್ರದಿಂದ ಎರಡನೇ ಬಾರಿಗೆ ವಿಧಾನಸಭೆಗೆ ಆಯ್ಕೆಯಾದರು. ಅವರ ಮತ ಹಂಚಿಕೆ ಶೇ. 46ರಷ್ಟಿತ್ತು. ಶಿವಕುಮಾರ್ ಅವರ ಈ ಗೆಲುವು ಕಾಂಗ್ರೆಸ್ ಹೈಕಮಾಂಡ್‌ಗೆ ಒಂದು ಪ್ರಮುಖ ವಿಷಯ ಮನವರಿಕೆ ಮಾಡಿತು. ಅದು ಬೇರ್ಯಾವುದೂ ಅಲ್ಲ, ಡಿ.ಕೆ. ಶಿವಕುಮಾರ್ ಅವರ ರಾಜಕೀಯ ಮುನ್ನಡೆಗೆ ಪಕ್ಷದ ಹಣೆಪಟ್ಟಿಯ ಅಗತ್ಯವಿಲ್ಲ ಎಂಬುದಾಗಿತ್ತು.





ಟ್ರಬಲ್ ಶೂಟರ್

ಕಾಂಗ್ರೆಸ್ ಪಕ್ಷದಲ್ಲಿ ಡಿ.ಕೆ. ಶಿವಕುಮಾರ್ ತಮ್ಮನ್ನು ತಾವು ಟ್ರಬಲ್ ಶೂಟರ್ ಎಂಬುದನ್ನು ಸಾಬೀತು ಪಡಿಸುವ ಮೂಲಕ ಉನ್ನತ ಹುದ್ದೆಗೆ ಏರಿದರು. 2002ರಲ್ಲಿ, ಆಗಿನ ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶ್‌ಮುಖ್ ಅವರ ಸರ್ಕಾರ ಬೀಳದಂತೆ ತಮ್ಮ ಶಾಸಕರ ಖರೀದಿ ಭಯದಿಂದ ಅವರನ್ನು ರಕ್ಷಿಸಲು ಆಗಿನ ಕರ್ನಾಟಕ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಸಹಾಯ ಕೋರಿದರು. ಆ ಸಮಯದಲ್ಲಿ, ಶಿವಕುಮಾರ್ ಅವರೇ ರಕ್ಷಣೆಗೆ ಬಂದು ಶಾಸಕರನ್ನು ಬಿಡದಿಯ ರೆಸಾರ್ಟ್‌ನಲ್ಲಿ ಇರಿಸಿದ್ದರು. ಅದೇ ರೀತಿ, 2017ರಲ್ಲಿ ಗುಜರಾತ್‌ನ 44 ಶಾಸಕರನ್ನು ಕರ್ನಾಟಕಕ್ಕೆ ಕರೆ ತಂದು ರಕ್ಷಿಸಿದವರು ಇದೇ ಶಿವಕುಮಾರ್.

ಮೂರನೇ ಬಾರಿಗೆ, 2018ರ ಕರ್ನಾಟಕ ವಿಧಾನಸಭಾ ಚುನಾವಣೆಯ ನಂತರ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರ ರಚನೆಗೆ ಶಾಸಕರನ್ನು ಕುದುರೆ ವ್ಯಾಪಾರದಿಂದ ರಕ್ಷಿಸುವ ಕಾರ್ಯವನ್ನು ಕೈಗೆತ್ತಿಕೊಂಡರು. ರಾಜ್ಯ ರಾಜಕಾರಣದಲ್ಲಿ ಅತಂತ್ರ ಸನ್ನಿವೇಶ ಎದುರಾದಾಗ ಹೈಕಮಾಂಡ್ ಸೂಚನೆಗೆ ತಲೆಬಾಗಿ ದೇವೇಗೌಡ ಕುಟುಂಬದೊಂದಿಗಿನ ರಾಜಕೀಯ ವೈಷಮ್ಯವನ್ನು ಬದಿಗಿರಿಸಿ, ಮೈತ್ರಿ ಸರ್ಕಾರದ ರಚನೆಯಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. 2024ರ ರಾಜ್ಯಸಭಾ ಚುನಾವಣೆ ಸಂದರ್ಭದಲ್ಲಿ ಹಿಮಾಚಲ ಪ್ರದೇಶದ ಕಾಂಗ್ರೆಸ್ ಪಕ್ಷದ ಆರು ಶಾಸಕರು ಬಿಜೆಪಿಗೆ ಮತ ಚಲಾಯಿಸುವುದರೊಂದಿಗೆ ಭಿನ್ನಮತ ಇನ್ನಷ್ಟು ಜೋರಾಯಿತು. ಆಗಲೂ ಈ ಸಮಸ್ಯೆಯನ್ನು ಬಗೆಹರಿಸಲು ಹೋಗಿದ್ದು ಇದೇ ಡಿ.ಕೆ. ಶಿವಕುಮಾರ್. 2004ರಲ್ಲಿ ಪ್ರಥಮ ಬಾರಿಗೆ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ರೂಪುಗೊಂಡಾಗ ಎಸ್.ಎಂ. ಕೃಷ್ಣ ಅವರನ್ನು ಕಡೆಗಣಿಸಿ ಎಚ್.ಡಿ. ದೇವಗೌಡರ ಒಪ್ಪಿಗೆಯಂತೆ ಧರ್ಮಸಿಂಗ್ ಅವರನ್ನು ಮುಖ್ಯಮಂತ್ರಿ ಮಾಡಬೇಕಾಗಿ ಬಂದಾಗ ಎಸ್.ಎಂ. ಕೃಷ್ಣ ಅವರಿಗೆ ಬದಲಿಯಾಗಿ ಯಾವುದಾದರೊಂದು ಸ್ಥಾನ ಕೊಡಲೇಬೇಕೆಂದು ಪಕ್ಷದ ವರಿಷ್ಠರ ಮನವೊಲಿಸಿ ಕೃಷ್ಣ ಅವರು ಮಹಾರಾಷ್ಟ್ರದ ರಾಜ್ಯಪಾಲರಾಗುವಂತೆ ಮಾಡುವಲ್ಲಿ ಯಶಸ್ವಿಯಾದರು. ಮತ್ತೆ ಅವರನ್ನು ರಾಜ್ಯ ರಾಜಕಾರಣಕ್ಕೆ ಕರೆತಂದು ರಾಜ್ಯಸಭಾ ಸದಸ್ಯರಾಗುವಂತೆ ನೋಡಿಕೊಂಡರು.











ಕಿಂಗ್‌ಮೇಕರ್ ಆದ ಶಿವಕುಮಾರ್

ಶಿವಕುಮಾರ್ 1999ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮರಳಿದರು. ಎಸ್.ಎಂ. ಕೃಷ್ಣ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವನ್ನು 139 ಸ್ಥಾನಗಳೊಂದಿಗೆ ಅಧಿಕಾರಕ್ಕೆ ತಂದ ಐತಿಹಾಸಿಕ ಪ್ರಚಾರ ಯಾತ್ರೆ ಆಯೋಜಿಸಲು ಡಿ.ಕೆ. ಶಿವಕುಮಾರ್ ಸಹಾಯ ಮಾಡಿದರು. ಆ ವರ್ಷ ಅವರು ಸಾತನೂರಿನಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರನ್ನು ಸೋಲಿಸಿದರು. ಇದು 15 ವರ್ಷಗಳ ಹಿಂದೆ ತಮ್ಮನ್ನು ಸೋಲಿಸಿದ್ದ ಗೌಡ ಕುಟುಂಬದ ವಿರುದ್ಧ ಸಾಂಕೇತಿಕ ಗೆಲುವಾಗಿತ್ತು. ಕಾಂಗ್ರೆಸ್‌ನ ಅಭೂತಪೂರ್ವ ಗೆಲುವಿಗೆ ಕಾರಣರಾದ ಶಿವಕುಮಾರ್ ಅವರು ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಸಹಕಾರ ಖಾತೆಯನ್ನು ಮತ್ತು ನಂತರ ನಗರಾಭಿವೃದ್ಧಿ ಹಾಗೂ ರಾಜ್ಯ ಯೋಜನಾ ಮಂಡಳಿಯನ್ನು ನಿರ್ವಹಿಸಿದರು.

ಸಾತನೂರಿನಿಂದ ಕನಕಪುರಕ್ಕೆ ಸ್ಥಳಾಂತರ

ಸತತ ನಾಲ್ಕು ಬಾರಿ ಗೆದ್ದಿದ್ದ ಸಾತನೂರು ಕ್ಷೇತ್ರದಿಂದ ಡಿ.ಕೆ. ಶಿವಕುಮಾರ್ ಅವರು 2008ರಲ್ಲಿ ಕನಕಪುರಕ್ಕೆ ಸ್ಥಳಾಂತರಗೊಂಡರು. ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಸಾತನೂರು ವಿಧಾನಸಭಾ ಕ್ಷೇತ್ರಗಳ ಪಟ್ಟಿಯಿಂದಲೇ ಹೊರಗುಳಿಯಿತು. ಈ ಲೆಕ್ಕಾಚಾರ ತಪ್ಪಾಗಲಿಲ್ಲ, ಅವರು ಅಲ್ಲಿಯೂ ಗೆದ್ದರು. ಆ ಚುನಾವಣೆಯಲ್ಲಿ ಶೇ.48 ರಷ್ಟು ಮತ ಹಂಚಿಕೆಯಾಗಿತ್ತು. ತರುವಾಯ 2013 ರಲ್ಲಿ ಶೇ. 57ಕ್ಕೆ ಏರಿಕೆಯಾಗಿತ್ತು. ನಂತರ 2018ರಲ್ಲಿ ಅದು ಶೇ. 69ರಷ್ಟು ಆಗಿತ್ತು. 2023ರಲ್ಲಿ ಅದು ಶೇ. 75ಕ್ಕೆ ಹೆಚ್ಚಳವಾಗಿತ್ತು. ಪ್ರತಿ ವಿಧಾನಸಭಾ ಚುನಾವಣೆಯಲ್ಲೂ ಅವರ ಮತ ಹಂಚಿಕೆ ನಿರಂತರವಾಗಿ ಬೆಳೆಯುತ್ತಿದೆ.

ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷದ ಸಂಘಟನೆ

ಡಿ.ಕೆ. ಶಿವಕುಮಾರ್ ಅವರನ್ನು 2020ರ ಮಾರ್ಚ್ 11ರಂದು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸೋನಿಯಾ ಗಾಂಧಿ ಅವರು ನೇಮಿಸಿದರು. ಈ ನೇಮಕವಾದ ಕೆಲವೇ ದಿನಗಳಲ್ಲಿ ಕೋವಿಡ್ ಮಹಾಮಾರಿ ದೇಶದೆಲ್ಲೆಡೆ ಆವರಿಸಿತು. ಈ ಸಂದರ್ಭದಲ್ಲಿ ಮನೆಯಲ್ಲಿ ಕೂರದ ಶಿವಕುಮಾರ್ ಅವರು ಪಕ್ಷದ ನಾಯಕರು ಹಾಗೂ ಕಾರ್ಯಕರ್ತರಿಗೆ ಉತ್ತೇಜನ ನೀಡಿ ಅವರು ಕೂಡ ಸಂಕಷ್ಟಕ್ಕೆ ಸಿಲುಕಿರುವ ಜನರಿಗೆ ಸಹಾಯ ಮಾಡಲು ಕರೆ ನೀಡಿದರು.



ನಂತರ ಮೂರು ವರ್ಷಗಳ ಅವಧಿಯಲ್ಲಿ ಕರ್ನಾಟಕದಲ್ಲಿ ಶಿವಕುಮಾರ್ ಪಕ್ಷವನ್ನು ಸಂಘಟಿಸಿದ ರೀತಿ ಎಲ್ಲಾ ರಾಜಕೀಯ ನಾಯಕರಿಗೆ ಮಾದರಿಯಾಗಿ ಉಳಿದಿದೆ ಎಂದರೆ ತಪ್ಪಾಗುವುದಿಲ್ಲ. ಕೋವಿಡ್ ಸಮಯದಲ್ಲಿ ಹಗಲಿರುಳು ತಾವೂ ಕೆಲಸ ಮಾಡಿ, ತಮ್ಮ ಪಕ್ಷದ ಕಾರ್ಯಕರ್ತರು ಜನರ ಬಳಿ ಹೋಗಿ ಕೆಲಸ ಮಾಡಿ ಅವರ ವಿಶ್ವಾಸ ಗೆಲ್ಲುವಂತೆ ಸೂಚನೆ ನೀಡಿದರು. ಲಾಕ್ ಡೌನ್, ಆದಾಯವಿಲ್ಲದೆ, ಮಾರುಕಟ್ಟೆ ಇಲ್ಲದೆ ಕಂಗಾಲಾಗಿದ್ದ ರೈತರು, ಕಾರ್ಮಿಕರು, ಬಡವರು, ಅಸಂಘಟಿತ ಕಾರ್ಮಿಕರ ಸಂಕಷ್ಟಗಳಿಗೆ ಸ್ಪಂದಿಸಿದರು.

ಅವರ ಪರವಾಗಿ ಧ್ವನಿಯಾಗಿ ಸರ್ಕಾರದ ಗಮನ ಸೆಳೆದರು. ಕೋವಿಡ್ ಸಮಯದಲ್ಲಿ ತಮ್ಮ ಊರುಗಳಿಗೆ ಮರಳಲು ಮುಂದಾದ ವಲಸೆ ಕಾರ್ಮಿಕರಿಂದ ಸರ್ಕಾರವೇ ಮೂರು ಪಟ್ಟು ಟಿಕೆಟ್ ದರ ವಸೂಲಿಗೆ ನಿಂತಾಗ ಅದರ ವಿರುದ್ಧ ಹೋರಾಡಿ ಪಕ್ಷದಿಂದ 1 ಕೋಟಿ ರೂ. ಚೆಕ್ ನೀಡಲು ಮುಂದಾದರು. ಆಗ ಸರ್ಕಾರ ಎಚ್ಚೆತ್ತು ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿತು. ನಂತರ ಇದು ಇಡೀ ದೇಶಕ್ಕೆ ಮಾದರಿಯಾಯಿತು.


ಇನ್ನು ರಾಷ್ಟ್ರೀಯ ಕಾಂಗ್ರೆಸ್ ವತಿಯಿಂದ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನ ಆರಂಭಿಸಿದಾಗ, ಮತ್ತೆ ತಮ್ಮ ಕಾರ್ಯಕರ್ತರನ್ನು ಜನರತ್ತ ಕಳುಹಿಸಿ ರಾಜ್ಯದಲ್ಲಿ ಯಶಸ್ವಿಯಾಗಿ ಸದಸ್ಯತ್ವ ನೋಂದಣಿ ಅಭಿಯಾನ ಮಾಡಿದರು. ಪಕ್ಷದ ಸದಸ್ಯತ್ವ ಅಭಿಯಾನ ಯಶಸ್ವಿ ಜಾರಿ ಹಾಗೂ ರಾಜ್ಯದಲ್ಲಿ 78 ಲಕ್ಷ ಸದಸ್ಯತ್ವ ನೋಂದಣಿ ಮೂಲಕ ದೇಶದಲ್ಲಿ ಪ್ರಥಮ ಸ್ಥಾನ ಪಡೆದು ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ತುಂಬಿದರು.



ಕಾವೇರಿ ಜಲಾನಯನ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ಉತ್ಪಾದನೆ ಸೇರಿದಂತೆ ಹಲವು ಪ್ರಯೋಜನಗಳನ್ನು ಹೊಂದಿರುವ ಮೇಕೆದಾಟು ಯೋಜನೆಗೆ ಸರ್ಕಾರ ನಿರ್ಲಕ್ಷ್ಯ ವಹಿಸಿದಾಗ ಈ ಯೋಜನೆ ಆಗ್ರಹಿಸಿ, ಈ ಭಾಗದಲ್ಲಿ 160 ಕಿ.ಮೀ. ಪಾದಯಾತ್ರೆ ಮಾಡಿದರು. ಈ ಹಂತದಲ್ಲಿ ಸರ್ಕಾರ ಸುಳ್ಳು ಕೇಸ್ ದಾಖಲಿಸಿ ಹೋರಾಟ ಹತ್ತಿಕ್ಕಲು ಪ್ರಯತ್ನಿಸಿತಾದರೂ ಕೆಚ್ಚೆದೆಯಿಂದ ತಾವು ಹಾಗೂ ಪಕ್ಷದ ನಾಯಕರು ಕಾರ್ಯಕರ್ತರನ್ನು ಸಂಘಟಿಸಿ ಪಾದಯಾತ್ರೆ ಯಶಸ್ವಿ ಮಾಡಿದರು.

ರಾಹುಲ್ ಗಾಂಧಿ ಅವರು ಭಾರತ ಜೋಡೋ ಯಾತ್ರೆ ಆರಂಭಿಸಿದ ನಂತರ ಕರ್ನಾಟಕದಲ್ಲಿ 21 ದಿನಗಳ ಕಾಲ 550 ಕಿ.ಮೀ ಉದ್ದದ ಭಾರತ ಜೋಡೋ ಯಾತ್ರೆ ಯಶಸ್ವಿ ಆಯೋಜನೆ ಮಾಡಿದರು. ಈ ಯೋಜನೆ ಹಾದುಹೋದ ಮಾರ್ಗದಲ್ಲಿ ಕಾಂಗ್ರೆಸ್ ಪಕ್ಷ 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸುವಲ್ಲಿ ಪ್ರಮುಖ ಕಾರಣವಾಯಿತು. ಪ್ರಜಾಧ್ವನಿ ಯಾತ್ರೆ ಮೂಲಕ ರಾಜ್ಯದ ಮೂಲೆ ಮೂಲೆ ಪ್ರವಾಸ ಮಾಡಿ ಎಲ್ಲ ವರ್ಗಗಳ ಜನರ ಸಂಕಷ್ಟ ಆಲಿಸಿದರು. ಅವುಗಳಿಗೆ ಪರಿಹಾರ ಕಂಡುಕೊಳ್ಳು ಯೋಜನೆಗಳನ್ನು ರೂಪಿಸಲು ನೆರವಾದರು. ಮೀನುಗಾರರು, ನೇಕಾರರು, ತಿಗಲರು, ಮಡಿವಾಳ, ಲೈಂಗಿಕ ಅಲ್ಪಸಂಖ್ಯಾತ ಸಮುದಾಯಗಳ ಕಷ್ಟ ಆಲಿಸಿದರು.





ಕಾಂಗ್ರೆಸ್ ಪಕ್ಷದ ಬಗ್ಗೆ ಜನರ ವಿಶ್ವಾಸ ಹೆಚ್ಚಿಸಿ, ಅನ್ಯ ಪಕ್ಷದ ನಾಯಕರನ್ನು ಪಕ್ಷಕ್ಕೆ ಕರೆ ತಂದರು. ಜೆಡಿಎಸ್ ಪಕ್ಷದ ಅನೇಕ ಶಾಸಕರು, ವಿಧಾನಸಭಾ ಸದಸ್ಯರು, ಬಿಜೆಪಿಯ ಶಾಸಕರು ಹಾಗೂ ಪರಿಷತ್ ಸದಸ್ಯರುಗಳನ್ನು ಪಕ್ಷಕ್ಕೆ ಸೇರಿಸಿಕೊಂಡು ಪಕ್ಷದ ಬಲವರ್ಧನೆ ಮಾಡಿದರು. ನಾ ನಾಯಕಿ ಕಾರ್ಯಕ್ರಮದ ಮೂಲಕ ಮಹಿಳೆಯರಿಗೆ ಉತ್ತೇಜನ ನೀಡಿ ಮಹಿಳೆಯರನ್ನು ಕಾಂಗ್ರೆಸ್ ಪಕ್ಷದ ಕಡೆ ಸೆಳೆಯುವಲ್ಲಿ ಯಶಸ್ವಿಯಾದರು. ಎಲ್ಲಾ ಸಮುದಾಯ, ಧರ್ಮಗಳ ಧರ್ಮಗುರುಗಳು, ಮಠಾಧೀಶರ ವಿಶ್ವಾಸ ಪಡೆದಿದ್ದು, ಅವರ ಬೆಂಬಲ ಪಡೆದು ಪಕ್ಷವನ್ನು ಸಂಘಟಿಸಿ ಶಕ್ತಿ ತುಂಬಿದರು. ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಪಕ್ಷ 2023ರ ವಿಧಾನಸಭೆ ಚುನಾವಣೆಯಲ್ಲಿ 136 ಕ್ಷೇತ್ರಗಳಲ್ಲಿ ಗೆದ್ದು ಭರ್ಜರಿ ಬಹುಮತದೊಂದಿಗೆ ಸರ್ಕಾರ ರಚನೆ ಮಾಡಿತು.

ಬಂದೀಖಾನೆ ಮಂತ್ರಿಯಿಂದ ಸಿಎಂವರೆಗೆ



1991ರಲ್ಲಿ ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು ಅನಾರೋಗ್ಯದ ಕಾರಣ ಮುಖ್ಯಮಂತ್ರಿ ಪದವಿಯನ್ನು ತ್ಯಜಿಸಬೇಕಾಗಿ ಬಂದಾಗ ಅವರ ಉತ್ತರಾಧಿಕಾರಿಯನ್ನಾಗಿ ಸೋರೆಕೊಪ್ಪ ಬಂಗಾರಪ್ಪ ಅವರು ಸರ್ವಾನುಮತದಿಂದ ಆಯ್ಕೆಯಾಗುವಂತೆ ಮಾಡುವಲ್ಲಿ ಡಿ.ಕೆ. ಶಿವಕುಮಾರ್ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದರು. ಇದಕ್ಕೆ ಬಹುಮಾನದ್ಯೋತಕವಾಗಿ ಬಂಗಾರಪ್ಪ ಅವರು ಈ ಯುವಕನನ್ನು ರಾಜ್ಯಮಟ್ಟದ ಸಚಿವರನ್ನಾಗಿ ಮಾಡಿ ಬಂದೀಖಾನೆ ಖಾತೆ ನೀಡಿದರು. 1999ರಲ್ಲಿ ಎಸ್.ಎಂ. ಕೃಷ್ಣ ಅವರ ಸರ್ಕಾರ ರಚನೆಯಾದಾಗ ಅವರು ಸಂಪುಟ ದರ್ಜೆ ಸಚಿವರನ್ನಾಗಿ ನೇಮಿಸಿ ಮಹತ್ವದ ಸಹಕಾರ ಖಾತೆ (1999–2002) ನೀಡುವ ಮೂಲಕ ಡಿ.ಕೆ. ಶಿವಕುಮಾರ್ ಅವರ ಶ್ರಮಕ್ಕೆತಕ್ಕ ಮನ್ನಣೆ ನೀಡಿದರು. 2002ರಲ್ಲಿ ನಗರಾಭಿವೃದ್ಧಿ ಖಾತೆ ಸಚಿವರಾಗಿ ರಾಜ್ಯ ನಗರಯೋಜನಾ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರಾಗಿ ಯುವಕರನ್ನು ಸಂಘಟಿಸಿ ಜೀವನದಲ್ಲಿ ನೆಲೆಗೊಳಿಸುವ ರಾಜೀವ್ ಯುವ ಶಕ್ತಿ ಸಂಘಟನೆಗಳು ರಾಜ್ಯದಲ್ಲಿ ತಲೆಎತ್ತಲು ಕಾರಣೀಭೂತರಾದರು. ವಿಶ್ವದಲ್ಲಿಯೇ ಮೊದಲನೆಯದು ಎನ್ನಿಸಿದ ಸ್ತ್ರೀ ಶಕ್ತಿ ಸಂಘಟನೆಗಳನ್ನು ಆರಂಭಿಸುವಲ್ಲಿ ಶಿವಕುಮಾರ್ ಅವರ ಪಾಲು ಮಹತ್ವದ್ದು.

2013ರಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೇರಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿ ಆಯ್ಕೆಯಾದಾಗ ಪಕ್ಷದಲ್ಲಿನ ವಿರೋಧಿಗಳು ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿ ಅವರಿಗೆ ಸಚಿವ ಸ್ಥಾನ ತಪ್ಪುವಂತೆ ಮಾಡಿದರು. ಆದರೆ, ಈ ಸುಳ್ಳು ಆರೋಪದಿಂದ ಮುಕ್ತರಾದ ಶಿವಕುಮಾರ್ ಏಳು ತಿಂಗಳ ಬಳಿಕ ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವ ಸ್ಥಾನ ಪಡೆದುಕೊಂಡರು. ಇಂಧನ ಖಾತೆಯಂತಹ ಪ್ರಮುಖ ಖಾತೆ ನಿಭಾಯಿಸಿದರು. ಇಂಧನ ಇಲಾಖೆಯನ್ನು ಆಮೂಲಾಗ್ರ ಸುಧಾರಣೆ ಮಾಡಿದರು. ರೈತ ಸೂರ್ಯ ಯೋಜನೆಯನ್ನು ರೂಪಿಸಿ ಭೂ ಮಾಲೀಕರಾದ ರೈತರು ಸ್ವಯಂ 1 ರಿಂದ 3 ಮೆ.ವ್ಯಾ. ಸೌರವಿದ್ಯುತ್ ಉತ್ಪಾದನೆ ಮಾಡುವಂತೆ ಅವಕಾಶ ಕಲ್ಪಿಸಿದರು.

2018ರಲ್ಲಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಮೊದಲಿಗೆ ಜಲಸಂಪನ್ಮೂಲ ನಂತರ ಹೆಚ್ಚುವರಿಯಾಗಿ ಕನ್ನಡ ಮತ್ತು ಸಂಸ್ಕೃ ತಿ ಖಾತೆಯನ್ನು ಪಡೆದ ಡಿ.ಕೆ.ಶಿವಕುಮಾರ್ ಅವರು ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರು. ಮಹದಾಯಿ ಸಮಸ್ಯೆ ಪರಿಹಾರ, ಎತ್ತಿನಹೊಳೆ, ಮೇಕೆದಾಟು ಯೋಜನೆಗಳ ಪ್ರಗತಿಗೆ ತಮ್ಮದೇ ಆದ ಕೊಡುಗೆ ನೀಡಿದ ಅವರು ರಾಜ್ಯದಲ್ಲಿ ಅತೀ ಹೆಚ್ಚು ಪ್ರಮಾಣದ ಚೆಕ್ ಡ್ಯಾಮ್‌ಗಳ ನಿರ್ಮಾಣಕ್ಕೆ ಪ್ರೋತ್ಸಾಹ ಧನ ನೀಡಿಕೆ ಮೂಲಕ ಉತ್ತೇಜಿಸಿದರು.

2023ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಪೀಠಕ್ಕೇರಿದಾಗ ಉಪ ಮುಖ್ಯಮಂತ್ರಿಯಾಗಿ, ಜಲಸಂಪನ್ಮೂಲ ಇಲಾಖೆ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ಅಧಿಕಾರ ನಡೆಸಿದರು. ಜಲಸಂಪನ್ಮೂಲ ಸಚಿವರಾಗಿ ಎತ್ತಿನ ಹೊಳೆ ಯೋಜನೆಗೆ ಇದ್ದ ಅಡೆತಡೆಗಳನ್ನು ನಿವಾರಿಸಿ ನೀರನ್ನು ಆ ಭಾಗದಿಂದ ಹೊರಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಬೆಂಗಳೂರಿನ 110 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಕಾವೇರಿ 5ನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣಗೊಳಿಸಿದ ಹೆಗ್ಗಳಿಕೆ ಇವರದ್ದಾಗಿದೆ. ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ಕಾರ್ಯಕ್ರಮ, ಬೆಂಗಳೂರಿನ ಇತಿಹಾಸದಲ್ಲಿ ಮೊದಲ ಬಾರಿಗೆ ಸ್ಯಾಂಕಿ ಕೆರೆಯಲ್ಲಿ ಕಾವೇರಿ ಆರತಿ ಕಾರ್ಯಕ್ರಮ ಆಯೋಜಿಸಿದರು. ಬೆಂಗಳೂರನ್ನು ಜಾಗತಿಕ ನಗರವನ್ನಾಗಿ ಮಾಡಲು ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯನ್ನು ಪರಿಚಯಿಸಿದರು. ಟನಲ್ ರಸ್ತೆ, ಡಬಲ್ ಡೆಕ್ಕರ್ ಮೇಲ್ಸೇತುವೆ, ಎಲಿವೇಟೆಡ್ ಕಾರಿಡಾರ್, 300 ಕಿ.ಮೀ ಬಫರ್ ರಸ್ತೆಗಳ ನಿರ್ಮಾಣ, ಮೆಟ್ರೋ 3ನೇ ಹಂತದ ಯೋಜನೆ ಡಿಪಿಆರ್, ಬೆಂಗಳೂರಿನ ನಾಲ್ಕು ದಿಕ್ಕಿನಲ್ಲಿ ಹೊರ ವಲಯಗಳಲ್ಲಿ ಕಸ ವಿಲೇವಾರಿ ಘಟಕ ಸ್ಥಾಪನೆ, ಪ್ರವಾಸಿಗರ ಆಕರ್ಷಣೆಗೆ ಸ್ಕೈ ಡೆಕ್ ನಿರ್ಮಾಣದಂತಹ ಯೋಜನೆಗಳನ್ನು ರೂಪಿಸಿದರು. ಇನ್ನು ಪಾಲಿಕೆ ಪರಿಣಾಮಕಾರಿ ಆಡಳಿತಕ್ಕೆ ಗ್ರೇಡರ್ ಬೆಂಗಳೂರು ಪ್ರಾಧಿಕಾರ ರಚಿಸಿದ್ದಾರೆ.

ಕಿರುಸುದ್ದಿ

ಜೂ.2: ಕಲ್ಲಡ್ಕ ಶ್ರೀರಾಮ ಪದವಿ ಮಹಾವಿದ್ಯಾಲಯದಲ್ಲಿ ದೀಪ ಪ್ರದಾನ

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪದವಿ ಮಹಾವಿದ್ಯಾಲಯದಲ್ಲಿ 2025–26ನೇ ಸಾಲಿನ ಅಂತಿಮ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ – ದೀಪಪ್ರದಾನ ಕಾರ್ಯಕ್ರಮ ಜೂ. 2 ರಂದು ಆಜಾದ್ ಭವನದಲ್ಲಿ ನಡೆಯಲಿದೆ. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಜ್ಯುವೆಲ್ಲರಿ ಅಸೋಸಿಯೇಷನ್ ಬೆಂಗಳೂರು ಇದರ ಅಧ್ಯಕ್ಷ ಡಾ. ಚೇತನ್ ಕುಮಾರ್ ಮೆಹ್ತಾ ಹಾಗೂ ಮಂಗಳೂರಿನ ವೈದ್ಯರು ಮತ್ತು ಉದ್ಯಮಿಗಳಾದ ಡಾ. ಪ್ರಕಾಶ್ ಶೆಟ್ಟಿ ಅಭ್ಯಾಗತರಾಗಿ ಆಗಮಿಸಲಿದ್ದಾರೆ. ಸಂಸ್ಥೆಯ ಅಧ್ಯಕ್ಷ ಬಿ. ನಾರಾಯಣ ಸೋಮಯಾಜಿ, ಸಂಚಾಲಕ ವಸಂತ ಮಾಧವ, ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ ಕಾಯರ್‌ಕಟ್ಟೆ ಮತ್ತಿತರರು ಉಪಸ್ಥಿತರಿರುತ್ತಾರೆ ಎಂದು ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ. ಚಂದ್ರಶೇಖರ ದಾಮ್ಲೆಗೆ 'ಯಕ್ಷಗಾನ ಕಲಾರಂಗ ಪ್ರಶಸ್ತಿ'



ಉಡುಪಿ: ಇಲ್ಲಿನ ಯಕ್ಷಗಾನ ಕಲಾರಂಗ, ತಲ್ಲೂರು ಕನಕಾ–ಅಣ್ಣಯ್ಯ ಶೆಟ್ಟಿ ನೆನಪಿನಲ್ಲಿ ವಿದ್ವಾಂಸರಿಗೆ ನೀಡುವ 'ಯಕ್ಷಗಾನ ಕಲಾರಂಗ ಪ್ರಶಸ್ತಿ'ಗೆ ನಿವೃತ್ತ ಪ್ರಾಧ್ಯಾಪಕ, ಶಿಕ್ಷಣ ತಜ್ಞ, ಲೇಖಕ, ಪ್ರಸಂಗ ಕರ್ತ, ಕಲಾವಿಮರ್ಶಕ, ಅರ್ಥಧಾರಿ, ತೆಂಕುತಿಟ್ಟು ಹಿತರಕ್ಷಣಾ ವೇದಿಕೆ ಸ್ಥಾಪಿಸಿ ನಿರಂತರ ಯಕ್ಷಗಾನ ಸಂಬಂಧಿ ಕಾರ್ಯಕ್ರಮ ನಡೆಸಿಕೊಂಡು ಬಂದಿರುವ ಹಿರಿಯ ವಿದ್ವಾಂಸ ಡಾ. ಚಂದ್ರಶೇಖರ ದಾಮ್ಲೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭ ಜೂನ್ 5ರಂದು ಸಂಜೆ 4 ಗಂಟೆಗೆ ಸಂಸ್ಥೆಯ ಐವೈಸಿ ಸಭಾಂಗಣದಲ್ಲಿ ಜರಗಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್, ಕಾರ್ಯದರ್ಶಿ ಮುರಲಿ ಕಡೆಕಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಡಾ. ತಲ್ಲೂರು ಶಿವರಾಮ ಶೆಟ್ಟಿ ನೇತೃತ್ವದ ತಲ್ಲೂರು ಫ್ಯಾಮಿಲಿ ಟ್ರಸ್ಟ್ ಪ್ರಾಯೋಜಿತ ಈ ಪ್ರಶಸ್ತಿಯು ರೂ.60,000 ನಗದು ಪುರಸ್ಕಾರ ಒಳಗೊಂಡಿದೆ.

ಪುತ್ತೂರು ದೇವಸ್ಥಾನದಲ್ಲಿ ನಾಳೆ ಸೀಯಾಳಾಭಿಷೇಕ

ಪುತ್ತೂರು: ಉತ್ತಮ ಮಳೆ, ಬೆಳೆ ಹಾಗೂ ಲೋಕಕಲ್ಯಾಣಾರ್ಥವಾಗಿ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಜೂ.1 ರಂದು ಶ್ರೀ ದೇವರಿಗೆ ಸೀಯಾಳಾಭಿಷೇಕ ನಡೆಯಲಿದೆ. ಭಕ್ತರ ಸೇವಾರ್ಥವಾಗಿ ನಡೆಯುವ ಸೀಯಾಲಾಭಿಷೇಕ್ಕೆ ಸೀಯಾಳ ತಂದೊಪ್ಪಿಸುವಂತೆ ಪ್ರಕಟನೆ ವಿನಂತಿಸಿದೆ.

ಜೂ.14 ರಂದು ರಕ್ತದಾನಿಗಳಿಗೆ ಸನ್ಮಾನ

ಮಂಗಳೂರು : ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ದಕ್ಷಿಣ ಕನ್ನಡ ಜಿಲ್ಲಾ ಶಾಖೆಯ ವತಿಯಿಂದ ಜೂ.14ರಂದು ವಿಶ್ವ ರಕ್ತದಾನಿಗಳ ದಿನ ಆಚರಿಸಲಾಗುವುದು. ಕಾರ್ಯಕ್ರಮದ ಅಂಗವಾಗಿ ಅತಿ ಹೆಚ್ಚು ಬಾರಿ ರಕ್ತದಾನ ಮಾಡಿದ ರಕ್ತದಾನಿಗಳನ್ನು ಜಿಲ್ಲಾ ಮಟ್ಟದಲ್ಲಿ ಸನ್ಮಾನಿಸಲಾಗುವುದು. ಅತಿ ಹೆಚ್ಚು ಬಾರಿ ರಕ್ತದಾನ ಮಾಡಿದ ಜಿಲ್ಲೆಯ ಓರ್ವ ರಕ್ತದಾನಿಯನ್ನು ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ವತಿಯಿಂದ ಬೆಂಗಳೂರಿನಲ್ಲಿ ವಿಶೇಷವಾಗಿ ಗೌರವಿಸಲಾಗುವುದು. 10 ಅಥವಾ ಅದಕ್ಕಿಂತ ಹೆಚ್ಚು ಬಾರಿ ರಕ್ತದಾನ ಮಾಡಿದ ದ.ಕ. ಜಿಲ್ಲೆಯ ರಕ್ತದಾನಿಗಳು ತಮ್ಮ ರಕ್ತದಾನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಜೂ.6ರ ಒಳಗಾಗಿ ಕಚೇರಿ ವಿಳಾಸ: ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಶಾಖೆ, 'ಶತಮಾನೋತ್ಸವ ಕಟ್ಟಡ' ಹಳೇ ಜಿಲ್ಲಾಧಿಕಾರಿ ಕಚೇರಿ ಆವರಣ, ಓಲ್ಡ್ ಪೋರ್ಟ್ ರೋಡ್, ಮಂಗಳೂರು –575001 ಈ ವಿಳಾಸಕ್ಕೆ ಸಲ್ಲಿಸಬೇಕು. ಈ ಹಿಂದೆ ರೆಡ್ ಕ್ರಾಸ್ ಸಂಸ್ಥೆಯಿಂದ ರಕ್ತದಾನಕ್ಕಾಗಿ ಸನ್ಮಾನಿತರಾದವರು ಆಯ್ಕೆಗೆ ಅರ್ಹರಾಗಿರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ. ದಾಖಲೆಗಳನ್ನು ಇ–ಮೇಲ್ ಅಥವಾ ವಾಟ್ಸಪ್ ಮೂಲಕವೂ ಕಳುಹಿಸಬಹುದಾಗಿದೆ. ವಾಟ್ಸಪ್ : 96068 66210, ಇಮೈಲ್ : ircsdkd@gmai.com

ಅತಿಥಿ ಶಿಕ್ಷಕರ ಹುದ್ದೆ: ಅರ್ಜಿ ಆಹ್ವಾನ

ಮಂಗಳೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೌಲಾನ ಆಜಾದ್ ಮಾದರಿ ಶಾಲೆ ಬೋಳಿಯಾರು, ಕಿನ್ಯಾ ಮತ್ತು ಕಕ್ಕಿಂಜೆ ಮತ್ತು ಸರ್ಕಾರಿ ಮುಸ್ಲಿಂ ವಸತಿ ಶಾಲೆ ಅಸೈ ಮದಕ ಇಲ್ಲಿಗೆ ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ಅತಿಥಿ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಹುದ್ದೆಗಳ ವಿದ್ಯಾರ್ಹತೆ ಮೇರೆಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ 9886015827, 7760921446, 9902293646 ಮತ್ತು 9448912253 ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಚಿತ್ರನಟ ಗಣೇಶ್ ಸಾಲಿಗ್ರಾಮ ದೇವಸ್ಥಾನ ಹಾಗೂ ಆಂಜನೇಯ ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆದರು. ಸಾಲಿಗ್ರಾಮ ಶ್ರೀಗುರುನರಸಿಂಹ ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಪ್ರಕಾಶ ಕಾರಂತರು ಗಣೇಶರಿಗೆ ಶಾಲು ಹೊದಿಸಿ, ಪ್ರಸಾದ ನೀಡಿ ಗೌರವಿಸಿದರು. ದೇವಸ್ಥಾನದ ಆಡಳಿತ ಮಂಡಳಿಯ ಉಪಾಧ್ಯಕ್ಷ ಸಿ . ಚಂದ್ರಶೇಖರ ಉಪಾಧ್ಯ ಹಾಗೂ ಆಡಳಿತ ಮಂಡಳಿಯ ಸದಸ್ಯ ಕೆ. ತಾರಾನಾಥ ಹೊಳ್ಳ, ಕೂ.ಮ.ಜ. ಸಾಲಿಗ್ರಾಮ ಅಂಗ ಸಂಸ್ಥೆಯ ಅಧ್ಯಕ್ಷ ಪಿ. ಚಂದ್ರಶೇಖರ ಹೊಳ್ಳ, ಬ್ರಾಹ್ಮಣ ಸಭಾ ಸಾಲಿಗ್ರಾಮದ ಅಧ್ಯಕ್ಷ ಪಟ್ಟಾಭಿ ರಾಮಚಂದ್ರ ಸೋಮಯಾಜಿ, ಕಾರ್ಯದರ್ಶಿ ರಾಜರಾಮ ಐತಾಳ ಉಪಸ್ಥಿತರಿದ್ದರು.

ನೃತ್ಯೋಪಾಸನಾ ಅಕಾಡೆಮಿಯ ಭಾರತಿ
ದೂರದರ್ಶನ 'ಬಿ' ಗ್ರೇಡ್ ಕಲಾವಿದೆ

ಪುತ್ತೂರು: ನಗರದ ನೃತ್ಯೋಪಾನಾ ಕಲಾ ಅಕಾಡೆಮಿಯ ವಿದ್ಯಾರ್ಥಿನಿ ಭಾರತಿ ಎಂ. ಅವರು ದೂರದರ್ಶನದ 'ಬಿ' ಗ್ರೇಡ್ ಭರತನಾಟ್ಯ ಕಲಾವಿದೆಯಾಗಿ ಆಯ್ಕೆಯಾಗಿದ್ದಾರೆ. ಇಲ್ಲಿವರೆಗೆ ಅಕಾಡೆಮಿಯ ಇಬ್ಬರು ವಿದ್ಯಾರ್ಥಿಗಳು 'ಬಿ' ಗ್ರೇಡ್ ಕಲಾವಿದರಾಗಿ ಆಯ್ಕೆಯಾದಂತಾಗಿದೆ.



ಬೆಂಗಳೂರು ದೂರದರ್ಶನ ಕೇಂದ್ರ 2025ರ ನವೆಂಬರ್‌ನಲ್ಲಿ ನಡೆಸಿದ ಭರತನಾಟ್ಯ ವಿಭಾಗದ ಆಡಿಷನ್‌ಗೆ ಹಾಜರಾಗಿದ್ದ ಭಾರತಿ ಎಂ. 'ಬಿ' ಗ್ರೇಡ್ ಕಲಾವಿದೆಯಾಗಿ ಆಯ್ಕೆಯಾಗಿದ್ದಾರೆ. ನೃತ್ಯೋಪಾಸನಾ ಕಲಾ ಅಕಾಡೆಮಿಯ ನೃತ್ಯಗುರು ವಿದುಷಿ ಶಾಲಿನಿ ಆತ್ಮಭೂಷಣ್ ಅವರಲ್ಲಿ ಕಳೆದ 11 ವರ್ಷಗಳಿಂದ ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಭಾರತಿ ಎಂ. ದೂರದರ್ಶನದ ಆಡಿಷನ್‌ಗೆ ಹಾಜರಾಗಿದ್ದರು. ತನ್ನ 10ನೇ ವಯಸ್ಸಿನಲ್ಲಿ ಭರತನಾಟ್ಯ ಕಲಿಕೆಯನ್ನು ಪ್ರಾರಂಭಿಸಿ ಇತ್ತೀಚೆಗೆ ವಿದ್ವತ್ ಪೂರ್ವ ಪರೀಕ್ಷೆಯನ್ನು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದರು. ನೃತ್ಯಾಭ್ಯಾಸದ ಜೊತೆಗೆ, ಗುರು ವಿದ್ವಾನ್ ಶ್ರೀಕಾಂತ್ ಕುದುಮಾರು ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಅಧ್ಯಯನ ಮಾಡಿರುವ ಭಾರತಿ, ಸಂಗೀತದ ಜೂನಿಯರ್ ಪರೀಕ್ಷೆ ಪೂರ್ಣಗೊಳಿಸಿದ್ದಾರೆ.

ಭಾರತಿ ಎಂ. ಅವರು 60ಕ್ಕೂ ಹೆಚ್ಚು ಸಮೂಹದ ಜೊತೆಗೆ ಏಕವ್ಯಕ್ತಿ ಭರತನಾಟ್ಯ ಪ್ರದರ್ಶನವನ್ನು ನೀಡಿದ್ದಾರೆ. ಕಡಬ ಬಳಿಯ ಕನಕವನ ನಿವಾಸಿ ಎಂ. ಮಾಧವ ಭಟ್ ಹಾಗೂ ಗಾಯತ್ರಿ ದಂಪತಿಯ ಪುತ್ರಿಯಾದ ಅವರು ಪ್ರಸ್ತುತ ವಾಣಿಜ್ಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಅವರು ಫೆಬ್ರವರಿಯಲ್ಲಿ ಪುತ್ತೂರಿನಲ್ಲಿ ತೆರೆದ ವೇದಿಕೆಯಲ್ಲಿ ಭರತನಾಟ್ಯ ರಂಗಪ್ರವೇಶವನ್ನು ಯಶಸ್ವಿಯಾಗಿ ನಡೆಸಿದ್ದರು.

ಜನಗಣತಿ ನೆಪದಲ್ಲಿ ಶಾಲಾ ಶಿಕ್ಷಕರ ಸಾಮಾನ್ಯ ವರ್ಗಾವಣೆಗೆ ತಡೆ
ಶಿಕ್ಷಣ ಇಲಾಖೆ ವಿರುದ್ಧ ಪ್ರತಿಭಟನೆ

ಕಾಸರಗೋಡು: 2026–27ನೇ ಶೈಕ್ಷಣಿಕ ವರ್ಷದ ಶಾಲಾ ಶಿಕ್ಷಕರ ಸಾಮಾನ್ಯ ವರ್ಗಾವಣೆಯನ್ನು ಜನಗಣತಿ ಚಟುವಟಿಕೆಗಳ ಹೆಸರಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ದಿಢೀರನೆ ತಡೆ ಹಿಡಿದಿರುವುದರ ವಿರುದ್ಧ ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳ ರಾಜ್ಯಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಈ ಆದೇಶವನ್ನು ಖಂಡಿಸಿ ಆಡಳಿತ ಹಾಗೂ ವಿರೋಧ ಪಕ್ಷಗಳ ವಿವಿಧ ಶಿಕ್ಷಕರ ಸಂಘಟನೆಗಳು ಜಂಟಿಯಾಗಿ ಪ್ರಬಲ ಪ್ರತಿಭಟನೆಗೆ ಮುಂದಾಗಿವೆ. ಸಾರ್ವಜನಿಕ ಶಿಕ್ಷಣ ನಿರ್ದೇಶಕರ ಕಚೇರಿಯು ವರ್ಗಾವಣೆಗೆ ಸಂಬಂಧಿಸಿದ ತಾತ್ಕಾಲಿಕ ಪಟ್ಟಿಯನ್ನು ನಿರ್ಬಂಧಿಸಿರುವುದರಿಂದ ಮೇ 30ರಂದು ಪ್ರಕಟವಾಗಬೇಕಾಗಿದ್ದ ಅಂತಿಮ ವರ್ಗಾವಣೆ ಪಟ್ಟಿಯು ಈಗ ಸಂಪೂರ್ಣವಾಗಿ ಅನಿಶ್ಚಿತಗೊಂಡಿದೆ.

ಜೂನ್ ಮೊದಲ ವಾರದಲ್ಲಿ ಶಾಲೆಗಳು ಪುನರಾರಂಭಗೊಳ್ಳಲಿದ್ದು, ಅದಕ್ಕೂ ಮುನ್ನವೇ ಜಿಲ್ಲಾ ಮತ್ತು ಅಂತರ್ ಜಿಲ್ಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಶೈಕ್ಷಣಿಕ ಇಲಾಖೆಯು ನೀಡಿದ್ದ ಭರವಸೆಯು ಇದೀಗ ಹುಸಿಯಾಗಿದೆ.

ಜನಗಣತಿ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಸರಕಾರಿ ನೌಕರರನ್ನು ವರ್ಗಾವಣೆ ಮಾಡಬಾರದು ಎಂದು ಸಾರ್ವಜನಿಕ ಆಡಳಿತ ಇಲಾಖೆಯು ಕಳೆದ ಮಾರ್ಚ್ ತಿಂಗಳಲ್ಲಿ ಆದೇಶ ಹೊರಡಿಸಿತ್ತು. ಈ ಆದೇಶವನ್ನೇ ನೆಪವಾಗಿಟ್ಟುಕೊಂಡು ಶಿಕ್ಷಣ ಇಲಾಖೆಯು ಅಧ್ಯಾಪಕರ ವರ್ಗಾವಣೆಗೆ ತಡೆ ನೀಡಿದೆ. ಆದರೆ ಇದೇ ಇಲಾಖೆಯು ಏಪ್ರಿಲ್ ತಿಂಗಳಲ್ಲಿ ಸಾಮಾನ್ಯ ವರ್ಗಾವಣೆಗಾಗಿ ಅರ್ಜಿಗಳನ್ನು ಆಹ್ವಾನಿಸಿದಾಗ ಜನಗಣತಿ ಕರ್ತವ್ಯದ ಯಾವುದೇ ಮುನ್ಸೂಚನೆಯನ್ನು ನೀಡಿರಲಿಲ್ಲ ಎಂದು ಅಧ್ಯಾಪಕರ ಸಂಘಟನೆಗಳು ಪ್ರಬಲವಾಗಿ ಆಕ್ಷೇಪಿಸಿವೆ.

ಮಾತ್ರವಲ್ಲದೆ ಹೈಯರ್ ಸೆಕೆಂಡರಿ ಶಿಕ್ಷಕರ ವರ್ಗಾವಣೆ ಮಾನದಂಡಗಳ ಕುರಿತು ಇಲಾಖೆಯು ಅಂತಿಮ ತೀರ್ಮಾನ ಕೈಗೊಳ್ಳದ ಕಾರಣ ಆ ವಿಭಾಗದ ವರ್ಗಾವಣೆಯೂ ನೆನೆಗುದಿಗೆ ಬಿದ್ದಿದೆ.





ತಡೆ ಆದೇಶವನ್ನು ಹಿಂಪಡೆಯಲು ಆಗ್ರಹ

ಕಾಸರಗೋಡು ಸಹಿತ ಕೇರಳದ ಎಲ್ಲಾ ಜಿಲ್ಲೆಗಳಲ್ಲಿ ಅಧ್ಯಾಪಕರ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಯನ್ನು ತಕ್ಷಣವೇ ಆರಂಭಿಸದಿದ್ದರೆ ನಿವೃತ್ತಿಯಿಂದ ತೆರವಾಗಿರುವ ನೂರಾರು ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರ ಹುದ್ದೆಗಳು ಖಾಲಿ ಉಳಿಯಲಿವೆ. ಇದರಿಂದಾಗಿ ಹೊಸ ಶೈಕ್ಷಣಿಕ ವರ್ಷದ ಆರಂಭದಲ್ಲೇ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಉಂಟಾಗಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗಲಿದೆ. ಆದಕಾರಣ ಕೂಡಲೇ ಈ ತಡೆ ಆದೇಶವನ್ನು ಹಿಂತೆಗೆದುಕೊಂಡು ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಶಿಕ್ಷಕರ ವಿವಿಧ ಸಂಘಟನೆಗಳು ಒತ್ತಾಯಿಸಿವೆ.

ಅಡ್ಡಿಯಾಗುವುದಿಲ್ಲ

ಪ್ರಸ್ತುತ ಜನಗಣತಿಯ ಪ್ರಾಥಮಿಕ ಹಂತದ ಕೆಲಸಗಳು ಮಾತ್ರ ನಡೆಯುತ್ತಿವೆ. ಶಿಕ್ಷಕರ ವರ್ಗಾವಣೆಗಳು ಹೆಚ್ಚಾಗಿ ಜಿಲ್ಲೆಯ ಒಳಗೆ ಮಾತ್ರ ನಡೆಯುವುದರಿಂದ ಜನಗಣತಿ ಕಾರ್ಯಕ್ಕೆ ಯಾವುದೇ ಅಡ್ಡಿಯಾಗುವುದಿಲ್ಲ. ಹಿಂದಿನ 2011ರ ಜನಗಣತಿ ವೇಳೆಯೂ ವರ್ಗಾವಣೆಗಳನ್ನು ತಡೆಯಲಾಗಿರಲಿಲ್ಲ ಎಂದು ಪ್ರಮುಖ ಅಧ್ಯಾಪಕರ ಸಂಘಟನೆಗಳು ಸ್ಪಷ್ಟಪಡಿಸಿವೆ.

ಕೆಪಿಎಸ್‌ಟಿಎ, ಕೆಎಸ್‌ಟಿಎ, ಎಕೆಎಸ್‌ಟಿಯು ಮತ್ತು ಕೆಪಿಎಸ್‌ಎಂಎ ಸೇರಿದಂತೆ ಪ್ರಮುಖ ಶಿಕ್ಷಕರ ಒಕ್ಕೂಟಗಳು ರಾಜ್ಯ ಸರಕಾರದ ಕ್ರಮದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ.

ಸುಳ್ಳು ಆಪಾದನೆಯ ಬಗ್ಗೆ ಆರೋಪ

ಮಂಗಳೂರು: ನಗರದ ವಿವಿಧೆಡೆ ಬೀದಿಬದಿ ವ್ಯಾಪಾರ ನಡೆಸುತ್ತಿರುವ ವ್ಯಾಪಾರಿಗಳನ್ನು ಸುಳ್ಳು ಆರೋಪ ಹೊರಿಸಿ ಜನರಲ್ಲಿ ಪರಸ್ಪರ ಅಪನಂಬಿಕೆ ಮೂಡಿಸುವ ಕೃತ್ಯವನ್ನು ಕೆಲವರು ಎಸಗುತ್ತಿದ್ದು ಅಂತಹವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದ.ಕ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘ (ಸಿಐಟಿಯು) ಒತ್ತಾಯಿಸಿದೆ.

ನಗರದ ಟೌನ್ ಹಾಲ್ ಬಳಿ ಭಾನುವಾರ ದಿನ ಹಳೆ ಬಟ್ಟೆ ವ್ಯಾಪಾರ ಮಾಡುವ ವ್ಯಾಪಾರಿಗಳನ್ನು ಮೈಸೂರಿನಿಂದ ಬಂದು ವ್ಯಾಪಾರ ಮಾಡುತ್ತಾರೆ ಎಂದು ಆಕ್ಷೇಪ ವ್ಯಕ್ತಪಡಿಸಿ ಅವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರು ದಾಖಲು ಮಾಡಿದ್ದಾರೆ ಎಂದು ಸಂಘದ ಗೌರವಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಕಾರ್ಯಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. 'ಬೀದಿಬದಿ ವ್ಯಾಪಾರಿಗಳ ಜೀವನೋಪಾಯ ಸಂರಕ್ಷಣೆ ಮತ್ತು ನಿಯಂತ್ರಣ ಕಾಯಿದೆ 2014' ಕಾನೂನಿಗೆ ಪೂರಕವಾಗಿ ಜಾರಿಯಲ್ಲಿರುವ ಕರ್ನಾಟಕ ಬೀದಿ ವ್ಯಾಪಾರದ ಅಧಿನಿಯಮ 2019 ರ ಪ್ರಕಾರ ಬೀದಿಬದಿ ವ್ಯಾಪಾರಿಗಳು ವ್ಯಾಪಾರದ ಪ್ರಮಾಣ ಪತ್ರ ಮತ್ತು ವ್ಯಾಪಾರಿಗಳು ಗುರುತಿನ ಚೀಟಿ ಪಡೆಯಲು ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಬದಲಾಗಿ ನಗರಪಾಲಿಕೆಯ ಪಟ್ಟಣ ವ್ಯಾಪಾರ ಸಮಿತಿಯು ಸಮೀಕ್ಷೆ ನಡೆಸಿ ಅವರಿಗೆ ಪ್ರಮಾಣ ಪತ್ರ, ಐಡಿ ಕಾರ್ಡ್ ವಿತರಣೆ ಮಾಡಬೇಕಿತ್ತು. ಬೀದಿ ವ್ಯಾಪಾರದ ಕಾನೂನನ್ನು ಜಾರಿ ಮಾಡದ ನಗರಪಾಲಿಕೆಯ ತಪ್ಪನ್ನು ಬಡ ಬೀದಿ ವ್ಯಾಪಾರಿಗಳ ಮೇಲೆ ಹೊರಿಸಿ ಅವರನ್ನು ಅಪರಾಧಿಗಳಂತೆ ಬಿಂಬಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಸಂಘದ ಅಧ್ಯಕ್ಷ ಮುಜಾಫರ್ ಅಹ್ಮದ್, ಪ್ರಧಾನ ಕಾರ್ಯದರ್ಶಿ ಸಂತೋಷ್ ಆರ್. ಎಸ್., ಎಂ. ಎನ್. ಶಿವಪ್ಪ, ಮುತ್ತುರಾಜ್, ಹಂಝು ಮೊಹಮ್ಮದ್, ವಿಜಯ್ ಜೈನ್, ಅಬ್ದುಲ್ ಖಾದರ್ ವಾಮಂಜೂರು, ಗುಡ್ಡಪ್ಪ, ಉಪಸ್ಥಿತರಿದ್ದರು.

ರಾಜ್ಯದ 9 ನಗರಗಳ ಮಕ್ಕಳ ಬೇಸಿಗೆ ಶಿಬಿರಗಳ ಸಮಾಪನ ಜಂಬೂರಿ ಸಂಪನ್ನ



ಮಂಗಳೂರು: ಮಂಗಳೂರು, ಕಟಪಾಡಿ, ಉಡುಪಿ–ಮಣಿಪಾಲ, ಬ್ರಹ್ಮಾವರ, ಕುಂದಾಪುರ, ಗಂಗೊಳ್ಳಿ, ಮೈಸೂರು, ಉಳ್ಳಾಲ, ಪುತ್ತೂರು ಸೇರಿದಂತೆ ರಾಜ್ಯದ ಒಂಭತ್ತು ನಗರಗಳಲ್ಲಿ ನಡೆದ ಬೇಸಿಗೆ ಶಿಬಿರದ ಸಮಾಪನ 'ಜಂಬೂರಿ' ಮಂಗಳೂರಿನಲ್ಲಿ ಮಕ್ಕಳ ಖುಷಿ, ಸಂಭ್ರಮ ದೊಂದಿಗೆ ಸಂಪನ್ನಗೊಂಡಿತ್ತು.

ಆಯಾ ಊರುಗಳಲ್ಲಿ ಒಟ್ಟು ಆರು ದಿನ ಬೆಳಿಗ್ಗೆಯಿಂದ ಸಂಜೆಯವರೆಗೆ ನಡೆದ ಶಿಬಿರದ ಕೊನೆಯ ಏಳನೇಯ ದಿನ ಎಲ್ಲಾ ಊರುಗಳ ಮಕ್ಕಳು ಒಂದೇ ಕಡೆಯಲ್ಲಿ ಸೇರುವ ವ್ಯವಸ್ಥೆ ಮಾಡಲಾಗಿತ್ತು. ಡೊಂಗರಕೇರಿಯಲ್ಲಿರುವ ಕೆನರಾ ಹೈಸ್ಕೂಲ್ ಆವರಣದಲ್ಲಿರುವ ಭುವನೇಂದ್ರ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇಲ್ಲಿ ಮಕ್ಕಳಿಗೆ ಭಗವದ್ಗೀತಾ ಕಂಠಪಾಠ ಸ್ಪರ್ಧೆ, ಭಜನಾ ಸ್ಪರ್ಧೆ, ಚಿತ್ರ ಬಿಡಿಸುವ ಸ್ಪರ್ಧೆ, ಕಥೆ ಬರೆಯುವ ಸ್ಪರ್ಧೆ, ಸಂಗೀತ ವಾದ್ಯ ನುಡಿಸುವ ಸ್ಪರ್ಧೆ, ಯೋಗಾಸನ ಸ್ಪರ್ಧೆ, ಕೋಲಾಜ್ ಚಿತ್ರ ಸ್ಪರ್ಧೆ, ಸ್ಥಳದಲ್ಲಿಯೇ ಚೀಟಿ ತೆಗೆದು ಆಯ್ದ ವಿಷಯಗಳ ಬಗ್ಗೆ ಮಾತನಾಡುವ ಸ್ಪರ್ಧೆ, ಕೊಂಕಣಿ ಹಾಗೂ ಸಂಸ್ಕೃತದಲ್ಲಿ ಭಾಷಣ ಸ್ಪರ್ಧೆ, ಕಥೆ ಹೇಳುವ ಸ್ಪರ್ಧೆ, ರಸಪ್ರಶ್ನೆಯ ಸ್ಪರ್ಧೆ ಹಾಗೂ ನಾಟಕ ಸ್ಪರ್ಧೆ ಆಯೋಜಿಸಲಾಗಿತ್ತು. ಮಕ್ಕಳಿಗೆ ವಿವಿಧ ಆಟಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗೆಲ್ಲುವ ವ್ಯವಸ್ಥೆ ಮಾಡಲಾಗಿತ್ತು. 250 ಮಕ್ಕಳು ಭಾಗವಹಿಸಿದ್ದರು.

ಸಮಗ್ರಪ್ರಶಸ್ತಿಯನ್ನುಬ್ರಹ್ಮಾವರತಂಡ ಗೆದ್ದುಕೊಂಡರೆ, ನಾಟಕ ಸ್ಪರ್ಧೆಯಲ್ಲಿ ಮೈಸೂರು ತಂಡ ವಿಜಯಮಾಲೆ ಧರಿಸಿತು. ಎಲ್ಲಾ ಮಕ್ಕಳಿಗೆ ವಿವಿಧ ಬಣ್ಣದ ಸಮವಸ್ತ್ರ ಹಾಗೂ ಕ್ಯಾಪ್ ನೀಡಲಾಗಿತ್ತು. ಸಮಾರೋಪ ಸಮಾರಂಭದಲ್ಲಿ ಭಾರತ ಸರಕಾರದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ ಕಾಮತ್, ಮಕ್ಕಳ ತಜ್ಞ ಡಾ. ಕಿರಣ್ ಬಾಳಿಗಾ, ದಂತ ವೈದ್ಯೆ ಡಾ. ಅನುಪಮಾ ಬಾಳಿಗಾ, ಸಿಎ ಗೌತಮ್ ಪೈ ಬಹುಮಾನಗಳನ್ನು ವಿತರಿಸಿ, ಶುಭ ಹಾರೈಸಿದರು. ಐದನೇ ತರಗತಿಯಿಂದ ಒಂಭತ್ತನೇ ತರಗತಿಯವರೆಗಿನ ಮಕ್ಕಳಿಗಾಗಿಯೇ ಆಯೋಜಿಸಿದ್ದ ಈ ಬೇಸಿಗೆ ಶಿಬಿರವನ್ನು ಯೂತ್ ಆಫ್ ಜಿಎಸ್‌ಬಿ ಸಂಘಟಿಸಿತ್ತು. ಆಯೋಜಕರಾದ ಮಂಗಲ್ಪಾಡಿ ನರೇಶ್ ಶೆಣೈ, ಸಿಎ ಗಿರಿಧರ್ ಕಾಮತ್, ಗುರು ಬಂಟ್ವಾಳಕರ್, ಸಹನಾ ಕಿಣಿ ಹಾಗೂ ಯೂತ್ ಆಫ್ ಜಿಎಸ್‌ಬಿಯ ಕಾರ್ಯಕರ್ತರು ಉಪಸ್ಥಿತರಿದ್ದರು. ಕಿರಣ್ ಶೆಣೈ ನಿರೂಪಿಸಿದರು.

ವಿದ್ವಾಂಸ ಕಟೀಲು ಪಾಂಡುರಂಗ ಭಟ್ ನಿಧನ

ಕಟೀಲು : ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಕಳೆದ 55 ವರ್ಷಗಳಿಂದ ಉದ್ಯೋಗಿಯಾಗಿದ್ದ, ಗುಂಡ್ಯಡ್ಕ ಶ್ರೀನಿವಾಸಪುರ ವಿಠೋಭ ರುಕುಮಾಯಿ ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಪಾಂಡುರಂಗ ಭಟ್ ಶುಕ್ರವಾರ ರಾತ್ರಿ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಮೃತರು 94ರ ಇಳಿಹರೆಯದ ತಾಯಿ, ಪತ್ನಿ, ಇಬ್ಬರು ಗಂಡು, ಓರ್ವ ಹೆಣ್ಣು ಮಗಳನ್ನು ಅಗಲಿದ್ದಾರೆ.



ಕಟೀಲು ದೇವಸ್ಥಾನದಲ್ಲಿ ಅತ್ಯಂತ ಹೆಚ್ಚು ವರ್ಷಗಳಿಂದ ಉದ್ಯೋಗಿಯಾಗಿ ಕಾರ್ಯ ನಿರ್ವಹಿಸಿದ ಪಾಂಡುರಂಗ ಭಟ್ಟರು, ತನ್ನ 20ನೆಯ ವಯಸ್ಸಿಗೆ ಕಟೀಲು ದೇವಸ್ಥಾನಕ್ಕೆ ಸೇರಿದ್ದರು. 65ನೆಯ ವಯಸ್ಸಿಗೆ ನಿವೃತ್ತರಾದರೂ, ಅವರ ನಿಸ್ಪೃಹ ಸೇವೆ, ಭಕ್ತರೊಂದಿಗಿನ ಆತ್ಮೀಯತೆ, ಆತಿಥ್ಯ, ದಿನಂಪ್ರತಿ ಆಗುವ ಹನ್ನೆರಡು ರಂಗಪೂಜೆಗಳ ಸೇವಾದಾರರ ಸಂಪರ್ಕ, ದೇಗುಲಕ್ಕೆ ಬರುವ ಗಣ್ಯರರನ್ನು ಆದರಿಸುವ ರೀತಿ, ನೊಂದು ದೇವರಲ್ಲಿ ಶರಣಾಗತಿಯಿಂದ ಬರುವ ಭಕ್ತರನ್ನು ಸಂತೈಸಿ ಕಳುಹಿಸುವ ಮಾನವೀಯತೆ ಯಂತಹ ಗುಣಗಳನ್ನು ಗೌರವಿಸಿ ಮತ್ತೆ ದೇಗುಲದಲ್ಲೇ ಮುಂದುವರಿಯುವಂತೆ ಆಡಳಿತ ಮಂಡಳಿ ಅವಕಾಶ ನೀಡಿತ್ತು.

ಸ್ವತಃ ಭಜನಾಕಾರರಾಗಿ, ತಬಲಾ ವಾದಕರಾಗಿ, ಯಕ್ಷಗಾನ ಕಲಾವಿದರಾಗಿ, ಕಟೀಲು ಮೇಳಗಳ ಹಿರಿಯ ಕಲಾವಿದರ ಒಡನಾಡಿಯಾಗಿ, ದೇಗುಲಕ್ಕೆ ಬರುವ ಬಹುಶ್ರುತ ವಿದ್ವಾಂಸರ ಆತ್ಮೀಯರಾಗಿದ್ದ ಪಾಂಡುರಂಗ ಭಟ್ಟರಿಗೆ ಅಪಾರ ಅಭಿಮಾನಿಗಳಿದ್ದರು. ಕೊರ್ಗಿ ವೆಂಕಟೇಶ ಉಪಾಧ್ಯಾಯ, ಪು. ಶ್ರೀನಿವಾಸ ಭಟ್, ಡಾ. ಕೆ.ಪಿ. ರಾವ್, ಡಾ. ಭಾಸ್ಕರಾನಂದ ಕುಮಾರ್ ಹೀಗೆ ನೂರಾರು ಮಂದಿಯ ಸ್ನೇಹಿತರಾಗಿದ್ದರು. ದೇಗುಲದ ಅರ್ಚಕರಾದ ಗೋಪಾಲ ಕೃಷ್ಣ ಆಸ್ರಣ್ಣರಿಂದ ಆರಂಭಿಸಿ, ಇಂದಿನ ಮೂರನೆಯ ತಲೆಮಾರಿನ ಅರ್ಚಕರ ಆತ್ಮೀಯ ವಲಯದಲ್ಲಿ ಗುರುತಿಸಿ ಕೊಂಡಿದ್ದರು.

ಪರೋಪಕಾರಿ

ಪಾಂಡುರಂಗ ಭಟ್ಟರ ಕೆಲವು ಬರಹಗಳು ಪತ್ರಿಕೆ, ಸ್ಮರಣ ಸಂಚಿಕೆಗಳಲ್ಲಿ ಪ್ರಕಟ ವಾಗಿವೆ. ಅನೇಕ ಭಾಷೆಗಳ ಬಲ್ಲವರಾಗಿದ್ದರು. ನಾನಾ ಸಮಸ್ಯೆ, ಸಂಕಟಗಳಿಂದ ಬಂದ ಭಕ್ತರನೇಕರಿಗೆ ಸುಲಭ ಸೇವೆ ಬಗ್ಗೆ ಮನದಟ್ಟು ಮಾಡಿಸಿ, ವಾಪಾಸು ಹೋಗಲು ಖರ್ಚಿಗೂ ಕೊಟ್ಟು ಕಳುಹಿಸಿದ ಉದಾಹರಣೆಗಳಿವೆ. ಅನೇಕರಿಗೆ ಆರ್ಥಿಕ ಸಹಾಯ ಮಾಡಿದ್ದೂ ಇದೆ.

ವಿಚಾರಣೆ ಕೌಂಟರಿನಲ್ಲಿ ಕಾರ್ಯ ನಿರ್ವಹಿಸುತ್ತ, ದೇಗುಲದ ಸೇವೆಗಳ ವಿವರ ನೀಡುತ್ತ, ಭಕ್ತರ ಮಧ್ಯೆ ಕೊಂಡಿಯಂತೆ ಪ್ರೀತಿ ಯಿಂದ ವ್ಯವಹರಿಸುತ್ತಿದ್ದರು. ರಾಜಕಾರಣಿಗಳು, ಸಾಹಿತಿಗಳು, ಸಂಗೀತ ಕ್ಷೇತ್ರದ ವಿದ್ವಾಂಸರು ಹೀಗೆ ಅತಿ ಗಣ್ಯರನ್ನು ಸತ್ಕರಿಸುತ್ತಿದ್ದ ರೀತಿಗೆ ದೊಡ್ಡ ಸಂಖ್ಯೆಯಲ್ಲಿ ಆತ್ಮೀಯವಲಯವನ್ನು ಸೃಷ್ಟಿಸಿಕೊಂಡಿದ್ದ ಪಾಂಡುರಂಗ ಭಟ್ಟರು ಮಹಾ ಓದುಗರಾಗಿದ್ದರು. ಸಾವಿರಾರು ಕೃತಿಗಳನ್ನು ಓದಿಕೊಂಡಿದ್ದ ಅವರು ಸಂಗೀತ, ಸಾಹಿತ್ಯ, ರಾಜಕೀಯ ಹೀಗೆ ನಾನಾ ವಿಚಾರಗಳನ್ನು ಆಳವಾಗಿ ಬಲ್ಲವರಾಗಿದ್ದರು. ಹಳೆಗನ್ನಡದ ಕಾವ್ಯಗಳು, ನೂರಾರು ದಾಸರ ಪದಗಳು ಕಂಠಪಾಠವಾಗಿದ್ದವು. ನೂರಾರು ವ್ಯಕ್ತಿಚಿತ್ರಗಳು ಅವರಲ್ಲಿ ಅಚ್ಚಾಗಿದ್ದವು. ಅವರ ಅಪಾರ ಓದಿನ ಅನುಭವದಿಂದ ಯಾರಾದರೂ ಗಣ್ಯರು ದೇಗುಲಕ್ಕೆ ಬಂದರೆ, ಅವರ ಪೂರ್ವಾಪರ, ಸಾಧನೆ, ಅವರ ಕೌಟುಂಬಿಕ ಹಿನ್ನಲೆ ಹೀಗೆ ಅವರ ಕುರಿತಾಗಿ ತನಗೆ ಗೊತ್ತಿರುವ ಅನೇಕ ಮಾಹಿತಿಗಳನ್ನು ಹೇಳಿ ಅವರಿಗೇ ಅಚ್ಚರಿಯಾಗುವಂತೆ ಮಾಡುತ್ತಿದ್ದರು!

ಗುಂಡ್ಯಡ್ಕ ವಿಠೋಭ ರುಕುಮಾಯಿ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದರು.

ಕಟೀಲು ದೇಗುಲದ ಅರ್ಚಕರಾದ ಆಸ್ರಣ್ಣ ಬಂಧುಗಳು, ನಾನಾ ಕ್ಷೇತ್ರಗಳ ಗಣ್ಯರು ಪಾಂಡುರಂಗ ಭಟ್ಟರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

ಅಮಾಸೆಬೈಲು: 'ಯಕ್ಷಗಾನ ಕಲಾರಂಗ'ದಿಂದ 97ನೇ ನೂತನ ಮನೆ ಹಸ್ತಾಂತರ

ಉಡುಪಿ: ವಿದ್ಯಾಪೋಷಕ್ ಯಕ್ಷಗಾನ ಕಲಾರಂಗ ಸಂಸ್ಥೆ ವತಿಯಿಂದ ತೀರಾ ಬಡ ಕುಟುಂಬದ ವಿದ್ಯಾರ್ಥಿನಿಗೆ ನಿರ್ಮಿಸಿಕೊಡಲಾದ ಸಂಸ್ಥೆಯ 97ನೇ ನೂತನ ಮನೆ 'ರಾಮಮೂರ್ತಿಯು ಕುಂದಾಪುರ ತಾಲೂಕಿನ ಅಮಾಸೆಬೈಲಿನಲ್ಲಿ ಮೇ 28ರಂದು ಅದ್ದೂರಿಯಾಗಿ ಉದ್ಘಾಟನೆಗೊಂಡು, ಹಸ್ತಾಂತರವಾಯಿತು.

ಅಮಾಸೆಬೈಲಿನ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಸಾನ್ವಿತಾ (ಶೋಭಾ ಮತ್ತು ಸುರೇಶ್ ಕೊಠಾರಿ ದಂಪತಿ ಪುತ್ರಿ) ಇವರ ಕುಟುಂಬಕ್ಕಾಗಿ ಈ ಮನೆಯನ್ನು ನಿರ್ಮಿಸಲಾಗಿದೆ. ಉಡುಪಿ ಅಂಬಲಪಾಡಿಯ ಮೀರಾ ರಾಮಮೂರ್ತಿ ಭಟ್ ಮತ್ತು ಅವರ ಮಕ್ಕಳು, ದಿವಂಗತ ರಾಮಮೂರ್ತಿ ಭಟ್ ಅವರ ಸ್ಮರಣಾರ್ಥ ಈ ನೂತನ ಗೃಹವನ್ನು ನಿರ್ಮಿಸಿಕೊಟ್ಟಿದ್ದಾರೆ.

ನೂತನ ಮನೆಯ ಜ್ಯೋತಿ ಬೆಳಗಿಸಿ ಮಾತನಾಡಿದ ದಾನಿ ಮೀರಾ ರಾಮಮೂರ್ತಿ ಭಟ್, 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬ ದಾಸರ ವಾಣಿಯಂತೆ ಭಗವಂತ ನನಗೆ ನೀಡಿದ ಸಂಪತ್ತಿನಲ್ಲಿ ಒಂದು ಸಣ್ಣ ಅಂಶವನ್ನು ಸಮಾಜಕ್ಕೆ ವಾಪಸ್ ನೀಡಿದ್ದೇನಷ್ಟೆ. ಯಕ್ಷಗಾನ ಕಲಾರಂಗದ ಪದಾಧಿಕಾರಿಗಳು ಎಲ್ಲಾ ಶ್ರಮವನ್ನು ವಹಿಸಿಕೊಂಡು, ಅರ್ಹ ಬಡ ಹುಡುಗಿಯ ಕುಟುಂಬಕ್ಕೆ ಸುಂದರ ಮನೆ ನಿರ್ಮಿಸಿಕೊಟ್ಟಿದ್ದಾರೆ. ಈ ಮೂಲಕ ನಮಗೊಂದು ಪುಣ್ಯದ ಅವಕಾಶ ಕಲ್ಪಿಸಿಕೊಟ್ಟ ಸಂಸ್ಥೆಗೆ ಕೃತಜ್ಞತೆಗಳು ಎಂದು ಭಾವುಕರಾಗಿ ನುಡಿದರು.

ಪ್ರಚಾರವಿಲ್ಲದ ಸಮಾಜಮುಖಿ ಸೇವೆ ಶ್ಲಾಘನೀಯ: ಕಿರಣ್ ಕುಮಾರ್ ಕೊಡ್ಗಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಮಾತನಾಡಿ, ಯಕ್ಷಗಾನ ಕಲಾರಂಗ ಸಂಸ್ಥೆಯು ಯಾವುದೇ ರೀತಿಯ ಆಡಂಬರ, ದುಂದುವೆಚ್ಚ ಹಾಗೂ ಪ್ರಚಾರವನ್ನು ಅಪೇಕ್ಷಿಸದೆ ಮಾಡುತ್ತಿರುವ ಇಂತಹ ಸಮಾಜಪರ ಕಾರ್ಯಗಳು ನನಗೆ ಅತ್ಯಂತ ಇಷ್ಟವಾಗಿವೆ. ಈ ಕಾರಣಕ್ಕಾಗಿಯೇ ನಾನು ಸಂಸ್ಥೆಯ ಅಭಿಮಾನಿಯಾಗಿ ಇಲ್ಲಿಗೆ ಬಂದು ಸಂತೋಷ ಅನುಭವಿಸುತ್ತಿದ್ದೇನೆ ಎಂದರು.



ನೈಜ ಸಮಾಜಪರ ಕಳಕಳಿಯ ದರ್ಶನ

ದಿವಂಗತ ರಾಮಮೂರ್ತಿ ಅವರ ಮಕ್ಕಳಾದ ಮನು ಭಾರದ್ವಾಜ್ ಮತ್ತು ಡಾ. ಪೂರ್ಣಶ್ರೀ ಮಾತನಾಡಿ, ಈ ಗೃಹ ಹಸ್ತಾಂತರ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗಷ್ಟೇ ನಮಗೆ ಕಲಾರಂಗ ಸಂಸ್ಥೆಯ ನೈಜ ಸಮಾಜಪರ ಕಳಕಳಿಯ ದರ್ಶನವಾಯಿತು. ಮುಂಬರುವ ದಿನಗಳಲ್ಲೂ ನಮ್ಮ ಕುಟುಂಬವು ಈ ಸಂಸ್ಥೆಯೊಂದಿಗೆ ಸದಾ ಇರಲಿದೆ ಎಂದು ಭರವಸೆ ನೀಡಿದರು.

- ವಿದ್ಯಾಪೋಷಕ್ ಯಕ್ಷಗಾನ ಕಲಾರಂಗ ಸಂಸ್ಥೆಯ 94ನೇ ಮನೆ
- ದಿವಂಗತ ರಾಮಮೂರ್ತಿ ಭಟ್ ಅವರ ಸ್ಮರಣಾರ್ಥ ವಾಗಿ ನಿರ್ಮಾಣವಾಗಿದೆ ನೂತನ ಗೃಹ .
- ಯಕ್ಷಗಾನ ಕಲಾರಂಗದ ಪದಾಧಿಕಾರಿಗಳು ಎಲ್ಲಾ ಶ್ರಮ ವಹಿಸಿಕೊಂಡು, ಅರ್ಹ ಬಡ ಹುಡುಗಿಯ ಕುಟುಂಬಕ್ಕೆ ನಿರ್ಮಿಸಲಾಗಿದೆ ಸುಂದರ ಮನೆ

ಗಣ್ಯರ ಉಪಸ್ಥಿತಿ

ಕೋಟೇಶ್ವರ ಗೀತಾ ಎಚ್.ಎಸ್.ಎನ್. ಫೌಂಡೇಶನ್ ಅಧ್ಯಕ್ಷ ಎ. ಶಂಕರ ಐತಾಳ್, ಶಿಕ್ಷಣ ಪ್ರೇಮಿ ಸಖಾರಾಮ್ ಸೋಮಯಾಜಿ, ಸಹನಾ ಭಾರದ್ವಾಜ್ ಹಾಗೂ ಮೂಕಾಂಬಿಕಾ ವಾರಂಬಳ್ಳಿ ಅಭ್ಯಾಗತರಾಗಿ ಭಾಗವಹಿಸಿದ್ದರು. ವೇದಿಕೆಯಲ್ಲಿ ಪ್ರಮುಖರಾದ ನಿರಂಜನ ಬಲ್ಲಾಳ್, ಲಲಿತಾ ಬಲ್ಲಾಳ್, ಯಶೋದಾ ನಾಗೇಶನ್, ಶ್ಯಾಮಲಾ ಪ್ರಸಾದ್ ಮತ್ತು ದೇವಕಿ ಉಪಸ್ಥಿತರಿದ್ದರು.

ಯಕ್ಷಗಾನ ಕಲಾರಂಗದ ಹಿರಿಯರಾದ ಪ್ರೊ. ಕೆ. ಸದಾಶಿವ ರಾವ್, ವಿದ್ಯಾಪ್ರಸಾದ್, ಯು. ವಿಶ್ವನಾಥ ಶೆಣೈ, ವಿಜಯಕುಮಾರ್ ಮುದ್ರಾಡಿ, ಭುವನಪ್ರಸಾದ್ ಹೆಗ್ಡೆ, ಅನಂತರಾಜ್ ಉಪಾಧ್ಯ, ಡಾ. ರಾಜೇಶ್ ನಾವುಡ, ಹಿರಿಯಣ್ಣ ಕಿದಿಯೂರು, ಕೆ. ಅಜಿತ್ ಕುಮಾರ್, ಡಾ. ಪ್ರತಿಮಾ ಜೆ. ಆಚಾರ್ಯ, ಜಯರಾಮ ಪಡಿಯಾರ್, ವಿನೋದಾ ಎಂ. ಹಾಗೂ ಡಾ. ಶ್ರೀಕಾಂತ್ ಸಿದ್ದಾಪುರ, ವಿಶ್ವನಾಥ, ಕೃಷ್ಣ ಪೂಜಾರಿ ಪಾಲ್ಗೊಂಡಿದ್ದರು.

ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ನಾರಾಯಣ ಎಂ. ಹೆಗಡೆ ವಂದಿಸಿದರು. ಸಂಸ್ಥೆಯ ಕಾರ್ಯದರ್ಶಿ ಮುರಲಿ ಕಡೆಕಾರ್ ಪ್ರಸ್ತಾವನೆಯೊಂದಿಗೆ ನಿರ್ವಹಿಸಿದರು.

ರೈತರ ಅಂಚೆ ಕಾರ್ಯಕ್ರಮಕ್ಕೆ ಕೆ.ಪ್ರಕಾಶ್ ಚಾಲನೆ

• **ಬೆಂಗಳೂರು:** ಹಾಪ್‌ಕಾಮ್ಸ್ ಸಹಯೋಗದೊಂದಿಗೆ ಭಾರತೀಯ ಅಂಚೆ ಇಲಾಖೆ, ಪ್ರಸಕ್ತ ಸಾಲಿನಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಪಾರ್ಸೆಲ್ ಮೂಲಕ ಮಾವಿನ ಹಣ್ಣು ತಲುಪಿಸುವ ಸೇವೆ ರೈತರ ಅಂಚೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ನಗರದ ಜಿಪಿಒ ಮುಖ್ಯಅಂಚೆಪಾಲಕರ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮನೆಬಾಗಿಲಿಗೆ ಗುಣಮಟ್ಟದ ಮಾವಿನ ಹಣ್ಣು ತಲುಪಿಸುವ ಯೋಜನೆಗೆ, ಕರ್ನಾಟಕ ಅಂಚೆ ವಲಯದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕೆ.ಪ್ರಕಾಶ್ ಚಾಲನೆ ನೀಡಿ ಮಾತನಾಡಿ, ಮಾವು ಬೆಳೆಗಾರರೊಂದಿಗೆ ಬುಕ್ ನೌ ಪೇ ಲೇಟರ್ ಒಪ್ಪಂದದಡಿ ಪಾರ್ಸೆಲ್ ಸೇವೆ ಒದಗಿಸಲಾಗುತ್ತಿದೆ. ಇದರಿಂದ ರೈತರಿಗೆ ಉತ್ತಮ ಬೆಲೆ ದೊರೆಯುವ ಜತೆಗೆ ಗ್ರಾಹಕರಿಗೆ ತಾಜಾ ಮಾವಿನ ಹಣ್ಣು ಖರೀದಿಸಲು ಸಹಯವಾಗಲಿದೆ. ರೈತರು ತಲಾ 3ಕೆಜಿ ಮಾವಿನ ಹಣ್ಣು ಬಾಕ್ಸ್‌ನಲ್ಲಿ ಪ್ಯಾಕ್ ಮಾಡುತ್ತಾರೆ. ಪ್ಯಾಕ್ ಮಾಡಿದ ಮಾವಿನ ಹಣ್ಣನ್ನು ಅದೇ ದಿನ ಅಥವಾ ಮರು ದಿನದಂದು ಬುಕಿಂಗ್ ಮಾಡಿರುವ ಗ್ರಾಹಕರಿಗೆ ವಿತರಿಸಲಾಗುವುದು. ಬೆಂಗಳೂರು ನಗರ ಸೇರಿ ದೇಶದ ಆಯ್ದ ಸ್ಥಳಗಳಿಗೆ 24 ಗಂಟೆಯಲ್ಲಿ ಸ್ಪೀಡ್ ಸೇವೆಯಡಿ ಹಣ್ಣು ವಿತರಿಸುವ ಸೌಲಭ್ಯವಿದೆ. 2019ರ ಮಾರ್ಚ್‌ನಿಂದ 2025ರ ಜೂನ್‌ವರೆಗೆ 3,81,183 ಕೆಜಿ ಮಾವಿನ ಹಣ್ಣು ಅನ್ನು 1.13 ಲಕ್ಷದ ಪಾರ್ಸೆಲ್ ಮೂಲಕ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸಿದ್ದೇವೆ ಎಂದರು. ರೇಷ್ಮೆ ಇಲಾಖೆ ಕಾರ್ಯದರ್ಶಿ ಆರ್.ಗಿರೀಶ್, ಬೆಂಗಳೂರು ಮುಖ್ಯಾಲಯ ಕ್ಷೇತ್ರದ ಅಂಚೆ ಸೇವೆಗಳ ನಿರ್ದೇಶಕಿ ವಿ.ತಾರಾ, ತೋಟಗಾರಿಕೆ ಇಲಾಖೆ ನಿರ್ದೇಶಕ ಇಬ್ರಾಹಿಂ ಮೈಗೂರ್, ಹಾಪ್‌ಕಾಮ್ಸ್ ಉಪಾಧ್ಯಕ್ಷ ನಾರಾಯಣಗೌಡ ಮತ್ತಿತರರಿದ್ದರು.




ರೈತರ ಅಂಚೆ ಎಂಬ ವಿಶಿಷ್ಟ ಆನ್‌ಲೈನ್ ವ್ಯಾಪಾರ

ಹಾಪ್‌ಕಾಮ್ಸ್ ಅಧ್ಯಕ್ಷ ಎ.ಎಸ್.ಚಂದ್ರೇಗೌಡ ಮಾತನಾಡಿ, ಮೊದಲ ಬಾರಿಗೆ ಹಾಪ್‌ಕಾಮ್ಸ್ ನಿಂದ ರೈತರ ಅಂಚೆ ಎಂಬ ವಿಶಿಷ್ಟ ಆನ್‌ಲೈನ್ ವ್ಯಾಪಾರ ಸೇವೆ ಪರಿಚಯಿಸಿದ್ದೇವೆ. ಅಂಚೆ ಮೂಲಕ ಮಾವು ಸೇರಿ ಇತರೆ ವಿಶೇಷ ಹಣ್ಣುಗಳನ್ನು ಗ್ರಾಹಕರ ಮನೆಬಾಗಿಲಿಗೆ ತಲುಪಿಸುವ ವ್ಯವಸ್ಥೆ ಇದಾಗಿದೆ. ನೈಸರ್ಗಿಕವಾಗಿ ಮಾಗಿಸಿದ ಹಣ್ಣನ್ನು 3 ಕೆ.ಜಿ. ಹಾಗೂ 5 ಕೆ.ಜಿ. ಸಾಮರ್ಥ್ಯ ಬಾಕ್ಸ್‌ಗಳಲ್ಲಿ ಅಂಚೆ ಮೂಲಕ ಮಾವು ತರಿಸಿಕೊಳ್ಳಬಹುದು. ಬೆಂಗಳೂರಿನ ಎಲ್ಲ ಬಡಾವಣೆಗಳಲ್ಲಿ ಹಾಪ್‌ಕಾಮ್ಸ್ ಮಳಿಗೆಗಳಿಲ್ಲ. ಆದ್ದರಿಂದ, ಗ್ರಾಹಕರಿಗೆ ತಾಜಾ ಹಣ್ಣುಗಳನ್ನು ಒದಗಿಸಲು ಈ ಸೇವೆಯನ್ನು ಆರಂಭಿಸಿದ್ದೇವೆ ಎಂದರು.

ಬುಕ್ ಮಾಡುವುದು ಹೇಗೆ?

ಆಸಕ್ತರು https://hopcomsbengaluru.com ಗೆ ಲಾಗಿನ್ ಆಗಿ ಹೆಸರು ನೋಂದಾಯಿಸಬೇಕು. (ಒಂದು ಬಾರಿ ನೋಂದಾಯಿಸಿದರೆ ಸಾಕು) ಬೇಕಾದ ಹಣ್ಣುಗಳನ್ನು ಆಯ್ಕೆ ಮಾಡಿ ಆನ್‌ಲೈನ್‌ನಲ್ಲಿ ಹಣ ಪಾವತಿಸಿ ಆರ್ಡರ್ ಮಾಡಿದರೆ, 24 ಗಂಟೆಗಳೊಳಗೆ ಅಂಚೆ ಸಿಬ್ಬಂದಿ ಮನೆ ಬಾಗಿಲಿಗೆ ತಲುಪಿಸುತ್ತಾರೆ.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ದೈವಾನುಗ್ರಹವಿದ್ದರೆ ಮಾತ್ರ ಬದುಕಿನಲ್ಲಿ ಸಾಧಿಸಲು, ಪಡೆಯಲು ಸಾಧ್ಯ
– ಭೀಮೇಶ್ವರ ಜೋಷಿ

– ಗದ್ದೆಯನ್ನು ಉತ್ತು ಬಿತ್ತಿ ಬೇಕಾದಷ್ಟು ಗೊಬ್ಬರ, ನೀರು ಹಾಕಿದರೂ ಬೆಳೆ ಬರಲು ದೈವಾನುಗ್ರಹ ಬೇಕು, ವ್ಯಾಪಾರಿ ರಾಶಿ ರಾಶಿ ಸರಕುಗಳನ್ನು ತಂದು ಅಂಗಡಿಯನ್ನು ತುಂಬಿದರೂ ಅದನ್ನು ಖರೀದಿಸುವ ಗಿರಾಕಿ ಬರಬೇಕಾದರೂ ದೈವಾನುಗ್ರಹವಿರಲೇ ಬೇಕು!

ದಿನ ಭವಿಷ್ಯ

ಮೇಷ ನಿಮ್ಮ ಸುತ್ತ ಹರ್ಷದ ವಾತಾವರಣ. ಮನೆಯಲ್ಲಿ ಸಂಭ್ರಮ. ನೀವೂ ಭಾಗಿಯಾಗಿರಿ. ಸಣ್ಣ ವಿಷಯಕ್ಕೆ ವಾಗ್ವಾದ ನಡೆಸಲು ಹೋಗದಿರಿ.

ವೃಷಭ ನಿಮ್ಮ ಕಾರ್ಯ ಪೂರೈಸಲು ಹೆಚ್ಚು ಪರಿಶ್ರಮ ಬೇಕು. ಅರ್ಥಕ್ಕೆ ಕೈ ಬಿಡಬೇಡಿ. ವಿವಾಹ ಪ್ರಸ್ತಾಪ ಸಫಲ. ಆರೋಗ್ಯ ಸಮಸ್ಯೆ ನಿವಾರಣೆ.

ಮಿಥುನ ಕೌಟುಂಬಿಕ ವಿಚಾರ ಇತ್ಯರ್ಥಕ್ಕೇ ಈ ದಿನ ಮೀಸಲಾಗಲಿದೆ. ಉತ್ಸಾಹ ಹೆಚ್ಚುವ ಬೆಳವಣಿಗೆ. ಕಾರ್ಯ ಪ್ರಗತಿ. ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ.

ಕಟಕ ನಿಮ್ಮ ಕಾರ್ಯಕ್ಕೆ ಅವಶ್ಯ ಬೆಂಬಲ ಲಭ್ಯ. ಖರೀದಿ ಹುಮ್ಮಸ್ಸಿನಿಂದ ಖರ್ಚು ಹೆಚ್ಚಬಹುದು. ಆಸ್ತಿ ಖರೀದಿಗೆ ಕಾಲ ಸದ್ಯ ಕೂಡಿಬರದು.

ಸಿಂಹ ಪ್ರಮುಖ ಕಾರ್ಯ ಇಂದು ಸಾಧಿಸುವಿರಿ. ವೃತ್ತಿಯಲ್ಲಿ ಯಶಸ್ಸು. ಸ್ವಂತ ಉದ್ಯೋಗಿಗಳಿಗೆ ಆರ್ಥಿಕ ಉನ್ನತಿ. ಕೌಟುಂಬಿಕ ಪರಿಸ್ಥಿತಿ ಸಮಾಧಾನಕರ.

ಕನ್ಯಾ ಯುವಜನರು ಹೆತ್ತವರ ಜತೆ ಸಂಘರ್ಷ ನಡೆಸಿಯಾರು. ಉದ್ದಿಮೆ ಯಲ್ಲಿ ಧನಹಾನಿ. ಇತರರ ಮನಸ್ಸಿಗೆ ಘಾಸಿ ಎಸಗದಿರಿ. ವಿನಯವಿರಲಿ.

ತುಲಾ ನೀವು ಬಯಸಿದ ಕಾರ್ಯ ಸರಾಗ. ಅಡ್ಡಿಗಳ ನಿವಾರಣೆ. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಸಂಬಂಧ ವೃದ್ಧಿಯ ಬೆಳವಣಿಗೆ ಸಂಭವ.

ವೃಶ್ಚಿಕ ಕೆಲಸದಲ್ಲಿ ಪ್ರಗತಿ. ಹಿರಿಯರ ಮೆಚ್ಚುಗೆ. ಮನೆಯಲ್ಲಿ ಕೆಲವು ಬದಲಾವಣೆ ಆದೀತು. ಆರೋಗ್ಯ ಸಮಸ್ಯೆ ನಿವಾರಣೆ, ನಿರಾಳತೆ.

ಧನು ಎಲ್ಲ ಸುಸೂತ್ರವಾಗಿ ನಡೆದರೂ ಮನಸ್ಸಿಗೆ ಸಮಾಧಾನವಿರದು. ಏನೋ ಅತೃಪ್ತಿ. ಕೆಲವರ ವರ್ತನೆಗೆ ಅಸಹನೆ. ಧ್ಯಾನ, ಅಧ್ಯಾತ್ಮ ಸಹಕಾರಿ.

ಮಕರ ಆಪ್ತರ ಜತೆಗಿನ ಭಿನ್ನಮತ ಪರಿಹರಿಸಿ. ಪ್ರೀತಿಗೆ ಸಂಬಂಧಿಸಿದ ಬಿಕ್ಕಟ್ಟು ನಿವಾರಿಸಿ. ವೃತ್ತಿಯಲ್ಲಿ ವಾಗ್ವಾದ, ಸಂಘರ್ಷ ನಡೆದೀತು.

ಕುಂಭ ಶೀಘ್ರ ಪ್ರಗತಿ ಸಾಧಿಸಬೇಕು ಎನ್ನುವುದು ನಿಮ್ಮ ಆಸೆ. ತಾಳ್ಮೆ ಬೆಳೆಸಿಕೊಳ್ಳಿ. ದುಡುಕು ಹಾನಿ ತಂದೀತು. ಕೌಟುಂಬಿಕ ಸಹಕಾರ.

ಮೀನ ಈ ದಿನ ನಿಮಗೆ ಪ್ರತಿಕೂಲ. ಪ್ರಮುಖ ಕಾರ್ಯ ಇಂದು ಬೇಡ. ಸಂಗಾತಿ ಜತೆ ಸಂಘರ್ಷ ಸಂಭವ. ತಾಳ್ಮೆಯ ವ್ಯವಹಾರ ಅಗತ್ಯ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 1,8,4,7

ಶಿವಕುಮಾರ್‌ಗೆ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆ

ಡಿಕೆಶಿ ಪಕ್ಷ ನಿಷ್ಠೆ ಅಚಲ

• **ಬೆಂಗಳೂರು:** ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಡಿ.ಕೆ. ಶಿವಕುಮಾರ್ ಅವರಿಗೆ ಹಂಗಾಮಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅಭಿನಂದನೆ ಸಲ್ಲಿಸಿದ್ದು, ನಿಮ್ಮ ನಿರಂತರ ಚೈತನ್ಯ, ಸಂಘಟನೆ ಸಾಮರ್ಥ್ಯ ಹಾಗೂ ಕಾಂಗ್ರೆಸ್ ಪಕ್ಷದಲ್ಲಿ ಇರುವ ಅಚಲ ನಿಷ್ಠೆ ಯನ್ನು ನಾನು ಹತ್ತಿರದಿಂದ ಗಮನಿಸಿದ್ದೇನೆ. ಈ ಎಲ್ಲ ಗುಣಗಳು ರಾಜ್ಯದ ಜನರ ಹಿತಕ್ಕಾಗಿ ಅತ್ಯುತ್ತಮವಾಗಿ ಬಳಸಲ್ಪಡಲಿ ಎಂದು ಹಾರೈಸುತ್ತೇನೆ ಎಂದು ತಿಳಿಸಿದ್ದಾರೆ.



ಎಕ್ಸ್‌ನಲ್ಲಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿರುವ ಸಿದ್ದರಾಮಯ್ಯ ಅವರು, 8 ವರ್ಷದ ಅವಧಿಯಲ್ಲಿ ಕರ್ನಾಟಕವನ್ನು ಸಮೃದ್ಧ, ಸ್ವಾವಲಂಬಿ ಹಾಗೂ ಸ್ವಾಭಿಮಾನಿ ರಾಜ್ಯವನ್ನಾಗಿ ರೂಪಿಸಲು ಸಾಧ್ಯವಾದುದು ನನಗೆ ಹೆಮ್ಮೆಯ ವಿಷಯವಾಗಿದೆ. ಈ ಅಭಿವೃದ್ಧಿಯ ರಥವನ್ನು ಮುಂದುವರಿಸುವ ಹೊಣೆಗಾರಿಕೆ ಈಗ ನಿಮ್ಮ ಹೆಗಲ ಮೇಲೆ ಬಂದಿದೆ. ಅದನ್ನು ಸಮರ್ಥವಾಗಿ ಮುನ್ನಡೆಸಲು ಬೇಕಾದ ಸ್ಥೈರ್ಯ, ಸಾಮರ್ಥ್ಯ ಮತ್ತು ದೂರದೃಷ್ಟಿ ನಿಮ್ಮಲ್ಲಿದೆ ಎಂಬ ದೃಢ ನಂಬಿಕೆ ನನಗಿದೆ ಎಂದು ತಿಳಿಸಿದ್ದಾರೆ.

ದೇಶದ ಏಕತೆ, ಅಖಂಡತೆಯನ್ನು ಕಾಪಾಡಲು ಹಾಗೂ ಸಂವಿಧಾನದ ಗೌರವವನ್ನು ಉಳಿಸಲು ನಾವು ಎರಡನೇ ಸ್ವಾತಂತ್ರ್ಯ ಹೋರಾಟ ನಡೆಸಬೇಕಾದ ಘಟ್ಟದಲ್ಲಿದ್ದೇವೆ. ಈ ಹೋರಾಟದಲ್ಲಿ ಕೇವಲ ವಿಧಾನಮಂಡಲ ಪಕ್ಷವಷ್ಟೇ ಅಲ್ಲ, ರಾಜ್ಯದ ಏಳು ಕೋಟಿ ಜನರೂ ನಿಮ್ಮೊಂದಿಗೆ ನಿಲ್ಲಲಿದ್ದಾರೆ. ನೀವು ಸದಾ ಯಶಸ್ಸನ್ನು ಸಾಧಿಸಲಿ ಎಂಬ ಹಾರೈಸಿದ್ದಾರೆ.

ಪ್ರಿಯ ಶಿವಕುಮಾರ್ ಅವರೇ, ಸಹೋದ್ಯೋಗಿಯಾಗಿ ಇಂದು ಕರ್ನಾಟಕವು ಕೇವಲ ಖಜಾನೆ ಹಾಗೂ ಆರ್ಥಿಕ ಬಲದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರುವ ರಾಜ್ಯವಷ್ಟೇ ಅಲ್ಲ, ಸಂಪತ್ತು, ಅಧಿಕಾರ ಮತ್ತು ಅವಕಾಶಗಳ ಸಮಾನ ಹಂಚಿಕೆಯಲ್ಲಿ ದೇಶಕ್ಕೆ ಮಾದರಿಯಾಗಿಯೂ ಹೊರಹೊಮ್ಮಿದೆ. ನಾವು ಜಾರಿಗೊಳಿಸಿರುವ ಪ್ರತಿಯೊಂದು ಜನಪರ ಯೋಜನೆಯೂ ಇತರ ರಾಜ್ಯಗಳಿಂದ ಮಾದರಿಯಾಗಿ ಸ್ವೀಕರಿಸಿ ಅನುಷ್ಠಾನಗೊಳ್ಳುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮಟ್ಟದಲ್ಲಿ ಕೆಲವು ರಾಜಕೀಯ ಹಿನ್ನಡೆಗಳನ್ನು ಎದುರಿಸಿದೆ. ಚುನಾವಣೆಯಲ್ಲಿ ನಾವು ಸೋಲಬಹುದು ಅಥವಾ ಗೆಲ್ಲಬಹುದು. ಆದರೆ ತಾತ್ವಿಕವಾಗಿ ನಾವು ಎಂದಿಗೂ ಸೋಲಬಾರದು. ಒಂದು ರಾಜಕೀಯ ಪಕ್ಷ ತಾತ್ವಿಕವಾಗಿ ಸೋತರೆ, ಆ ಪಕ್ಷವು ಚುನಾವಣೆಯಲ್ಲಿಯೂ ಗೆಲ್ಲಲು ಸಾಧ್ಯವಿಲ್ಲ ಹಾಗೂ ಕೊನೆಗೆ ನಾಶವಾಗುತ್ತದೆ ಎಂಬ ನಂಬಿಕೆ ನನ್ನದು ಎಂದು ತಿಳಿಸಿದರು.

ಡಿಕೆಶಿಗೆ ಅಭಿನಂದನೆ, ಸಿದ್ದುಗೆ ಧನ್ಯವಾದ ಹೇಳಿದ ಸುರ್ಜೇವಾಲ



ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು, ಕರ್ನಾಟಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಡಿ.ಕೆ ಶಿವಕುಮಾರ್ ಅಭಿನಂದನೆ ಮತ್ತು ಸಿದ್ದರಾಮಯ್ಯ ಅವರಿಗೆ ಧನ್ಯವಾದ ತಿಳಿಸಿದ್ದಾರೆ. ಡಿಕೆ ಶಿವಕುಮಾರ್ ಅವರು ಕರ್ನಾಟಕವನ್ನು ಸಮಗ್ರ ಅಭಿವೃದ್ಧಿ ಮತ್ತು ವೈಭವದ ಹೊಸ ಎತ್ತರಗಳಿಗೆ ಕೊಂಡೊಯ್ಯುವ ಮಹತ್ವಾಕಾಂಕ್ಷಿ ಕನಸನ್ನು ಹೊಂದಿದ್ದಾರೆ. ಅವರ ಎಲ್ಲಾ ಪ್ರಯತ್ನಗಳು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ ಎಂದಿದ್ದಾರೆ. ಕರ್ನಾಟಕದ ಕಾಂಗ್ರೆಸ್ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ನಿರ್ವಹಿಸಿದ ಎಂಟು ವರ್ಷಗಳ ಅವಧಿ, ದೂರದೃಷ್ಟಿಯ ನಾಯಕತ್ವ, ಸಾಮಾಜಿಕ ನ್ಯಾಯದತ್ತ ಅಚಲ ಬದ್ಧತೆ ಹಾಗೂ ಜನಕಲ್ಯಾಣ ಮತ್ತು ಅಭಿವೃದ್ಧಿಯನ್ನು ಸಮಾನವಾಗಿ ಮುನ್ನಡೆಸಿದ ಸುವರ್ಣಯುಗವಾಗಿ ಸದಾ ನೆನಪಿನಲ್ಲಿ ಉಳಿಯಲಿದೆ ಎಂದು ಧನ್ಯವಾದ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಫಲಿತಾಂಶ: ಶೇ.98.08ಕ್ಕೆ ಏರಿಕೆ

• **ಬೆಂಗಳೂರು:** 2026ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ರ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ(ಕೆಎಸ್‌ಇಎಬಿ) ಶನಿವಾರ ಪ್ರಕಟಿಸಿದ್ದು, ಶೇಕಡಾ 62.98ರಷ್ಟು ಫಲಿತಾಂಶ ದಾಖಲಾಗಿದ್ದು, ಇದರೊಂದಿಗೆ ಪರೀಕ್ಷೆ-1 ಮತ್ತು 2 ರ ಒಟ್ಟಾರೆ ಕ್ರೋಢೀಕೃತ ಫಲಿತಾಂಶವು ಶೇ. 98.08 ಕ್ಕೆ ಏರಿಕೆಯಾಗಿದೆ. 2025ರ ಸಾಲಿನ ಕ್ರೋಢೀಕೃತ ಫಲಿತಾಂಶಕ್ಕೆ (ಶೇ. 80.04) ಹೋಲಿಸಿದರೆ ಈ ಬಾರಿ ದಾಖಲೆಯ ಪ್ರಗತಿ ಕಂಡುಬಂದಿದೆ.

ರಾಜ್ಯಾದ್ಯಂತ ಮೇ 18 ರಿಂದ ಮೇ 25 ರವರೆಗೆ ಒಟ್ಟು 358 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ-2ನ್ನು ನಡೆಸಲಾಗಿತ್ತು. ಪರೀಕ್ಷೆ ಮುಗಿದು ಕೇವಲ ಮೂರೇ ದಿನಗಳಲ್ಲಿ ರಾಜ್ಯದ 8 ಶೈಕ್ಷಣಿಕ ಜಿಲ್ಲೆಗಳ 52 ಕೇಂದ್ರಗಳಲ್ಲಿ ಅತ್ಯಂತ ವೇಗವಾಗಿ ಮೌಲ್ಯಮಾಪನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಫಲಿತಾಂಶ ಪ್ರಕಟಿಸಲಾಗಿದೆ. ಪರೀಕ್ಷೆ-2ಕ್ಕೆ ಒಟ್ಟು 49,351 ಶಾಲಾ ವಿದ್ಯಾರ್ಥಿಗಳು, 18,471 ಹೊಸ ವಿದ್ಯಾರ್ಥಿಗಳು, 32,740 ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ 2,557 ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 1,03,119 ಅಭ್ಯರ್ಥಿಗಳು ಹಾಜರಾಗಿದ್ದರು.

ಪರೀಕ್ಷೆ-2 ಬರೆದ 49,351 ಶಾಲಾ ವಿದ್ಯಾರ್ಥಿಗಳಲ್ಲಿ 31,080 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪರೀಕ್ಷೆ-1, ಪರೀಕ್ಷೆ-2 ಎರಡನ್ನೂ ಸೇರಿಸಿ ರಾಜ್ಯದಲ್ಲಿ ಈ ವರ್ಷ ಒಟ್ಟು 8,18,956 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿದಂತಾಗಿದೆ. ಪರೀಕ್ಷೆ-2ರಲ್ಲಿ ಬಾಲಕರು ಉತ್ತಮ ಪ್ರದರ್ಶನ ನೀಡಿದ್ದು, ಪರೀಕ್ಷೆ ಬರೆದ 32,888 ಬಾಲಕರಲ್ಲಿ 20,815 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ. 63.29 ಫಲಿತಾಂಶ ದಾಖಲಿಸಿದ್ದಾರೆ. ಹಾಜರಾಗಿದ್ದ 16,463 ಬಾಲಕಿ ಯರಲ್ಲಿ 10, 265 ವಿದ್ಯಾರ್ಥಿನಿಯರು ಪಾಸ್ ಆಗಿದ್ದು, ಶೇ.62.35 ಫಲಿತಾಂಶ ಪಡೆದಿದ್ದಾರೆ.

ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆ-3 ಇಲ್ಲ

ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆ-3 ನಡೆಸುವುದಿಲ್ಲ ಎಂದು ಶಿಕ್ಷಣ ಇಲಾಖೆ ಈಗಾಗಲೇ ಸ್ಪಷ್ಟಪಡಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರಲ್ಲಿ ಉತ್ತಮ ಫಲಿತಾಂಶ ಬಂದಿರುವ ಹಿನ್ನೆಲೆಯಲ್ಲಿ ಮೂರನೇ ಪರೀಕ್ಷೆ ನಡೆಸುವ ಅಗತ್ಯ ಇಲ್ಲವೆಂದು ಶಿಕ್ಷಣ ಸಚಿವರು ತಿಳಿಸಿದ್ದರು. ಅದರಂತೆ ವಿದ್ಯಾರ್ಥಿಗಳಿಗೆ ಈ ಬಾರಿ ಪರೀಕ್ಷೆ-2 ಕೊನೆಯ ಅವಕಾಶವಾಗಿತ್ತು.

ಮಹಿಳೆಯರಿಂದ ಕಾನೂನು ದುರ್ಬಳಕೆ: ಸುಪ್ರೀಂ ಆತಂಕ

ಪುಟ ೧➡ ಪತಿಯ ವಿರುದ್ಧ ಲೈಂಗಿಕ ಕಿರುಕುಳದ ಸುಳ್ಳು ಪೋಸ್ಕೊ ಕೇಸುಗಳನ್ನು ಮತ್ತು ಸ್ವಂತ ಅಪ್ರಾಪ್ತ ಮಗಳ ಮೇಲೆಯೇ ಪತಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆಂದು(ಮಗಳಿಂದ ಬಲವಂತವಾಗಿ ಕೇಸು ಕೊಡಿಸುವ) ಸುಳ್ಳು ಪ್ರಕರಣ ದಾಖಲಿಸುವಂತಹ ವೈಪರೀತ್ಯಗಳೂ ನಡೆಯುತ್ತಿರುವುದನ್ನು ನ್ಯಾಯಾಲಯ ಕಳವಳದಿಂದ ಉಲ್ಲೇಖಿಸಿದೆ.

ಇತ್ತೀಚಿನ ದಿನಗಳಲ್ಲಿ, ಸಂಬಂಧ ಹಳ ಸಿದ ಬಳಿಕ ಸಂಗಾತಿಯಿಂದ 'ವೈವಾಹಿಕ ಪುಷ್ಪ ಗುಚ್ಛ' ನೀಡಲಾಗುತ್ತಿದೆ ಎಂದು ನ್ಯಾ.ಬಿ.ವಿ. ನಾಗರತ್ನ ಮತ್ತು ನ್ಯಾ.ಉಜ್ವಲ್ ಭೂಯಾನ್ ಅವರನ್ನೊಳಗೊಂಡ ಪೀಠ ಮಾರ್ಮಿಕವಾಗಿ ವ್ಯಾಖ್ಯಾನಿಸಿದೆ. ಇಂತಹ ಕೇಸಿನ ಸೆಟ್‌ಗಳಲ್ಲಿ, ಮತ್ತೆ ಮತ್ತೆ ಬೋಗಸ್ ಹಾಗೂ ಹುಸಿ ಆರೋಪಗಳು, ದೌರ್ಜನ್ಯ, ಕ್ರೌರ್ಯ, ವೈವಾಹಿಕ ಬದುಕಿನ ಸಂಕಷ್ಟಗಳ ಕುರಿತಾದ ಸುಳ್ಳು ಹೇಳಿಕೆಗಳನ್ನು ಕಾಣಬಹುದಾಗಿದೆ. ಆದರೆ ಇವುಗಳಿಗೆ ಯಾವುದೇ ಸೂಕ್ತ ಆಧಾರ, ಸಾಕ್ಷ್ಯಗಳ ಬೆಂಬಲ ಕಂಡುಬರುವುದಿಲ್ಲ. ಇಂತಹ ನಕಲಿ ಪ್ರಕರಣಗಳ ಮೂಲಕ ನ್ಯಾಯಾಲಯಗಳನ್ನು ದುರುಪಯೋಗಪಡಿಸುವ ಮತ್ತು ನ್ಯಾಯಾಲಯಗಳಿಗೆ ಹೊರೆಯುಂಟು ಮಾಡುತ್ತಿರುವ ಬಗ್ಗೆ ನ್ಯಾಯಪೀಠ ನೋವಿನಿಂದ ಉಲ್ಲೇಖಿಸಿದೆ. ಈಗ ಕಾಳಿನಿಂದ ಜೊಳ್ಳನ್ನು ಬೇರ್ಪಡಿಸುವ ಕೆಲಸ ಆಗಬೇಕಿದೆ. ಇಂತಹ ಸುಳ್ಳು ಪ್ರಕರಣಗಳ ಹಾವಳಿಯಿಂದ ನಿಜವಾಗಿಯೂ ಅನ್ಯಾಯಕ್ಕೊಳಗಾದ ಮುಗ್ಧರನ್ನು ಸೋಲದಂತೆ ನೋಡಿಕೊಳ್ಳಬೇಕಿದೆ ಎಂದು ನ್ಯಾಯಾಲಯ ಕಳಕಳಿ ವ್ಯಕ್ತಪಡಿಸಿದೆ.

ಇಂತಹ ಯಾವುದೇ ತಪ್ಪು ಹೆಜ್ಜೆ ಸಂಬಂಧಿಸಿದವರ ದೈಹಿಕ, ಮಾನಸಿಕ ಆರೋಗ್ಯದ ಮೇಲೆ ಬೀಳಬಹುದಾದ ಹಾನಿಕಾರಕ ಪರಿಣಾಮ ಮತ್ತು ವಿವಾಹದ ಪಾವಿತ್ರ್ಯಕ್ಕೆ ಧಕ್ಕೆ ಉಂಟು ಮಾಡುವುದರಿಂದ ಇಂತಹ ಪ್ರಕರಣಗಳ ವಿಚಾರಣೆಯಲ್ಲಿ ನ್ಯಾಯಾಲಯಗಳು ಹೆಚ್ಚು ಸಂಯಮ ವಹಿಸಬೇಕೆಂದು ಸರ್ವೋಚ್ಚ ನ್ಯಾಯಾಲಯ ಹೇಳಿತು.

ದಾಳಿ ಸಂಚು: 9 ಶಂಕಿತ ಉಗ್ರರ ಸೆರೆ

ಪುಟ ೧➡ ದಿಲ್ಲಿಯ ಪ್ರಮುಖ ಸೇನಾ ನೆಲೆಗಳು ಮತ್ತು ಭದ್ರತಾ ಸಿಬ್ಬಂದಿ ಮೇಲೆ ದಾಳಿ ನಡೆಸಲು ಯೋಜಿಸುತ್ತಿದ್ದ ಐಎಸ್‌ಐ-ಮುಂಬೈ ಭೂಗತ ಜಾಲಕ್ಕೆ ಸಂಬಂಧಿಸಿದ 9 ಶಂಕಿತ ಉಗ್ರರನ್ನು ಪೊಲೀಸರ ವಿಶೇಷ ಘಟಕ ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಪ್ರಮುಖ ಸೇನಾ ನೆಲೆಗಳು ಮತ್ತು ಭದ್ರತಾ ಸಿಬ್ಬಂದಿ ಮೇಲೆ ದಾಳಿ ಮಾಡಲು ಅವರನ್ನು ನಿಯೋಜಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಶಂಕಿತ ಉಗ್ರರ ದಾಳಿ ಯೋಜನೆಯಲ್ಲಿ ಪರಮಾಣು ಸೌಲಭ್ಯಗಳು, ವಿಮಾನ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಮತ್ತು ವಿದ್ಯುತ್ ಸ್ಥಾವರಗಳು ಇದ್ದವು ಎಂದು ಮೂಲಗಳು ತಿಳಿಸಿವೆ. ಕೆಲ ಸಮಯದಿಂದ ಈ ತಂಡ ಪೊಲೀಸ್ ಕಣ್ಗಾವಲಿನಲ್ಲಿ ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಂಟ್ರಿ ಬಂದೂಕು ತಯಾರಿಸುತ್ತಿದ್ದ ಖದೀಮರ ಬಂಧನ

9 ಪಿಸ್ತೂಲ್ ವಶ: 13 ಆರೋಪಿಗಳ ಸೆರೆ

• **ಬೆಳಗಾವಿ:** ಜಿಲ್ಲೆಯ ಖಾನಾಪೂರ ತಾಲೂಕಿನಲ್ಲಿ ಅಕ್ರಮವಾಗಿ ಕಂಟ್ರಿ ಪಿಸ್ತೂಲ್ ತಯಾರಿಸುತ್ತಿದ್ದ 13 ಆರೋಪಿಗಳನ್ನು ಬಂಧಿಸಿದ ಬೆಳಗಾವಿ ಪೊಲೀಸರು, ಆರೋಪಿಗಳಿಂದ 9 ಪಿಸ್ತೂಲ್ ಹಾಗೂ ಮದ್ದು ಗುಂಡುಗಳು, ತಯಾರಿಕೆಗೆ ಉಪಯೋಗಿಸುತ್ತಿದ್ದ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ ಎಂದು ಎಸ್ಪಿ ಕೆ. ರಾಮರಾಜನ್ ಹೇಳಿದರು.



ಶನಿವಾರ ತಮ್ಮ ಕಚೇರಿಯಲ್ಲಿ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಖಾನಾಪೂರ ತಾಲೂಕಿನ ಕಾಟಗಾಳಿ ಗ್ರಾಮದಲ್ಲಿ 9 ಕಂಟ್ರಿ ಬಂದೂಕುಗಳ ಜಪ್ತಿ ಮಾಡಲಾಗಿದೆ. ಬಂದೂಕು ತಯಾರಿಸುತ್ತಿದ್ದವ, ಬಂದೂಕು ಖರೀದಿಸಿದವರು, ಅಕ್ರಮವಾಗಿ ಮದ್ದು ಗುಂಡುಗಳನ್ನು ಮಾರಾಟ ಮಾಡಿದವರು ಮತ್ತು ಬಂದೂಕಿನ ಬ್ಯಾರೆಲ್‌ಗಳನ್ನು ವೆಲ್ಡಿಂಗ್ ಮಾಡಿಕೊಡುತ್ತಿದ್ದವನು ಸೇರಿ 13 ಜನರನ್ನು ಬಂಧಿಸಿದ್ದೇವೆ ಎಂದರು. ಆರೋಪಿ ಮಾರುತಿ ಶ್ರೀಕಾಂತ್ ಸುತಾರ ಇವನು ಕಾಟಗಾಳಿ ಗ್ರಾಮದಲ್ಲಿಯ ತನ್ನ ಮನೆಯಲ್ಲಿ ಅಕ್ರಮವಾಗಿ 2024ರಿಂದ ಈವರೆಗೆ ಕಂಟ್ರಿ ಬಂದೂಕುಗಳನ್ನು ತಯಾರಿಸಿ ಜನರಿಗೆ ಮಾರಾಟ ಮಾಡುತ್ತಿರುವ ಮಾಹಿತಿ ಸಂಗ್ರಹಿಸಿ ದಾಳಿ ಮಾಡಲಾಗಿತ್ತು. ಸಿದ್ರಾಮ ಅಜ್ಜಪ್ಪ ಹಸರೆ ಖಾನಾಪೂರ ಪೊಲೀಸ್ ಠಾಣೆಯಲ್ಲಿ ಮೇ 11ರಂದು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದರು.

ಆರೋಪಿ ಮಾರುತಿ ಶ್ರೀಕಾಂತ್ ಸುತಾರನನ್ನು ಬಂಧಿಸಿ ಆತನಿಂದ ತಯಾರಿ ಸ್ಥಿತಿಯಲ್ಲಿದ್ದ ಒಂದು ಕಂಟ್ರಿ ಬಂದೂಕು ಹಾಗೂ ಈ ಆರೋಪಿತನಿಂದ ಕಂಟ್ರಿ ಬಂದೂಕುಗಳನ್ನು ಖರೀದಿಸಿದ ಕಾಟಗಾಳಿ ಗ್ರಾಮದ ಸೋಮನಾಥ ಪಲ್ಲಾದ ಚೌಗುಲೆ, ಸಂತೋಷ ಶಿವಾಜಿ ನಾಯಕ, ಮಾರುತಿ ಯಲ್ಲಪ್ಪ ಗುಡದ್ಯಾಗೋಳ, ಬಾಳು ಭರಮಾಣಿ ನಾಯಕ ಮತ್ತು ಲಕ್ಷಣ ಬಾಲಪ್ಪ ಗುಜನಾಳ, ಬಸವರಾಜ ಗಂಗಪ್ಪ ಸಾಲೋಟಗಿ, ಬಸವಂತ ಭರಮಾಣಿ ಯರಮಾಳಕರ, ಲಕ್ಷ್ಯಲ ಈಶ್ವರ ಗುರವ ಇವರ ಕಡೆಯಿಂದ ತಲಾ ಒಂದರಂತೆ 8 ಕಂಟ್ರಿ ಬಂದೂಕುಗಳನ್ನು ಜಪ್ತ ಮಾಡಲಾಗಿದೆ.

ಹೆಚ್ಚುವರಿ ಎಸ್.ಪಿ ಮಾರ್ಗದರ್ಶನ ಮತ್ತು ಡಿಎಸ್‌ಪಿ ಬೈಲಹೊಂಗಲ ಇವರ ನೇತೃತ್ವದಲ್ಲಿ ಎಲ್.ಎಚ್ ಗೌಂಡಿ, ಪಿ.ಐ.ಖಾನಾಪೂರ, ಠಾಣಾಧಿಕಾರಿ, ಸಿಬ್ಬಂದಿಗಳೊಂದಿಗೆ ತನಿಖೆ ಕೈಕೊಂಡು ಆರೋಪಿತರಿಗೆ, ಕಂಟ್ರಿ ಬಂದೂಕುಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ಶ್ಲಾಘಿಸಿದರು.

ಗೊಂದಲದಲ್ಲಿ ಡಿಕೆಶಿ ಇನ್ನಿಂಗ್ಸ್: ಸಂಸದ ಬೊಮ್ಮಾಯಿ

• **ಬೆಂಗಳೂರು:** ಡಿ.ಕೆ. ಶಿವಕುಮಾರ್ ಗೊಂದಲದ ವಾತಾವರಣದಲ್ಲಿ ತಮ್ಮ ಇನ್ನಿಂಗ್ಸ್ ಆರಂಭಿಸುತ್ತಿದ್ದಾರೆ. ರಾಜ್ಯದ ಜನತೆ ಈಗಾಗಲೇ ಈ ಸರ್ಕಾರದ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ. ಅವರಿಗೆ ಅವಕಾಶ ಬಂದಾಗ ಈ ಸರ್ಕಾರವನ್ನು ಕಿತ್ತೊಗೆಯಲಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನಲ್ಲಿನ ನಾಯಕತ್ವ ಬದಲಾವಣೆ ರಾಜ್ಯದ ಆಡಳಿತದಲ್ಲಿ ಯಾವುದೇ ಪರಿಣಾಮ ಬೀರುವುದಿಲ್ಲ ಇದು ಕಾಂಗ್ರೆಸ್ ದುರಾಡಳಿತದ ಮುಂದುವರೆದ ಭಾಗ. ರಾಜ್ಯದ ಆರ್ಥಿಕತೆಯ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಹಾನಿ ಮಾಡಲಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯ ಆಗಿದ್ದು, ವ್ಯವಸ್ಥೆಯನ್ನು ಸುಧಾರಿಸಲು ಡಿ.ಕೆ. ಶಿವಕುಮಾರ್ ಅವರಿಗೆ ಸಮಯ ಸಿಗುತ್ತದೆಯೊ ಇಲ್ಲವೊ ಗೊತ್ತಿಲ್ಲ ಎಂದರು.

ಸಂಪುಟ ರಚನೆಯ ಕಸರತ್ತಿನಲ್ಲಿ ಆಂತರಿಕ ಭಿನ್ನಮತ ಹೊರಬರುತ್ತಿದೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಮಾಡದಿರುವುದರಿಂದ ಒಬಿಸಿ, ಎಸ್ಸಿ-ಎಸ್ಟಿ ಸಮುದಾಯದವರು ಅಸಮಾಧಾನಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಡಿ.ಕೆ. ಶಿವಕುಮಾರ್ ಗೊಂದಲದ ವಾತಾವರಣದಲ್ಲಿ ತಮ್ಮ ಇನ್ನಿಂಗ್ಸ್ ಆರಂಭಿಸುತ್ತಿದ್ದಾರೆ. ಕರ್ನಾಟಕದ ಜನತೆ ಈಗಾಗಲೇ ಈ ಸರ್ಕಾರದ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ ಎಂದರು. ಹೊಸ ಸಂಪುಟ ಸೇರಲು ಪ್ರಥಮ ಬಾರಿ ಆಯ್ಕೆಯಾದವರಿಂದ ಹಿಡಿದು ಐದಾರು ಬಾರಿ ಆಯ್ಕೆಯಾದವರೂ ಲಾಬಿ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿದ್ದ ಸಚಿವರು ಸ್ಥಾನ ಬಿಟ್ಟು ಕೊಡಲು ಸಿದ್ಧರಿಲ್ಲ ಎಂದರು.

ಬಿರುಗಾಳಿ ಮಳೆಗೆ ನೆಲಕ್ಕುರುಳಿದ ಮರಗಳು

• **ಚಿಕ್ಕಮಗಳೂರು:** ಶುಕ್ರವಾರ ತಡರಾತ್ರಿ ಸುರಿದ ಭಾರೀ ಬಿರುಗಾಳಿ ಮಳೆಯಿಂದಾಗಿ ನಗರದ ವಿವಿಧೆಡೆ ಸರಣಿ ಆಸ್ತಿ ಪಾಸ್ತಿಗೆ ಸಾಕಷ್ಟು ಹಾನಿ ಸಂಭವಿಸಿದೆ. ರಾತ್ರಿ 12.45 ರ ಸುಮಾರಿಗೆ ಬಿರುಗಾಳಿ, ಗುಡುಗು, ಸಿಡಿಲಿನೊಂದಿಗೆ ಮಳೆಯ ಆರ್ಭಟ ಆರಂಭವಾಯಿತು. ಸುಮಾರು ಒಂದೂವರೆ ಗಂಟೆ ಕಾಲ ಗಾಳಿ, ಮಳೆಯ ಅಬ್ಬರ ಮುಂದುವರಿದ ಪರಿಣಾಮ 20 ಹೆಚ್ಚು ವಿದ್ಯುತ್ ಕಂಬಗಳು, ಹತ್ತಾರು ಮರಗಳು ಬುಡಮೇಲಾದವು. ಹೈಟೆನ್ಶನ್ ವಿದ್ಯುತ್ ಲೈನ್‌ಗಳ ಮೇಲೆ ಭಾರೀ ಗಾತ್ರದ ಮರಗಳು ಉರುಳಿಬಿದ್ದ ಪರಿಣಾಮ ಒತ್ತಡ ತಡೆದು ಕೊಳ್ಳಲಾಗದೆ ಸಾಲು ಸಾಲಾಗಿ ವಿದ್ಯುತ್ ಕಂಬಗಳು ಉರುಳಿ ಬೀಳುವಂತಾಯಿತು. ಕ್ಲಬ್ ಆವರಣದಲ್ಲಿ ನಾಲ್ಕೈದು ಮರಗಳು ಉರುಳಿಬಿದ್ದಿದ್ದು, ಈ ಪೈಕಿ ಒಂದು ಬೃಹತ್ ಮರ ಕಾಂಪೌಡ್ ಪಕ್ಕದ ರಸ್ತೆ ಬದಿ ಹಾದು ಹೋಗಿದ್ದ ವಿದ್ಯುತ್ ಲೈನ್ ಮೇಲೆ ಬಿದ್ದ ಪರಿಣಾಮ 8 ವಿದ್ಯುತ್ ಕಂಬಗಳು, ಬೇಲೂರು ರಸ್ತೆಯಲ್ಲಿ 4 ಮರಗಳು ವಿದ್ಯುತ್‌ಲೈನ್ ಮೇಲೆ ಬಿದ್ದು ಕಂಬಗಳಿಗೆ ಹಾನಿ ಸಂಭವಿಸಿದೆ.

ಬುಧವಾರ ಡಿಕೆಶಿ ಪ್ರಮಾಣವಚನ

ಪುಟ ೧➡ ಡಿಕೆಶಿ ಅವರ ಸಂಘಟನಾ ಶಕ್ತಿ ಮತ್ತು ಪಕ್ಷಕ್ಕೆ ಅವರು ನೀಡಿದ ಕೊಡುಗೆ ಪರಿಗಣಿಸಿ ಎಐಸಿಸಿ ನಾಯಕತ್ವ ಅವರ ಹೆಸರನ್ನು ಸೂಚಿಸಿತ್ತು. ಶನಿವಾರ ನಡೆದ ಸಭೆಯಲ್ಲಿ ಸಿದ್ದರಾಮಯ್ಯ ಅವರು ಈ ಹೆಸರನ್ನು ಅಧಿಕೃತವಾಗಿ ಮಂಡಿಸುವ ಮೂಲಕ ಅಧಿಕಾರ ಹಸ್ತಾಂತರ ಪ್ರಕ್ರಿಯೆಗೆ ಚಾಲನೆ ನೀಡಿದರು. ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ಶಾಸಕರಿಗೆ ಮತ್ತು ಹಿರಿಯ ನಾಯಕ ಸಿದ್ದರಾಮಯ್ಯ ಅವರಿಗೆ ಡಿ.ಕೆ. ಶಿವಕುಮಾರ್ ಅವರು ಈ ಸಂದರ್ಭದಲ್ಲಿ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಿದರು.

ಆಪರೇಷನ್ ಸಿಂದೂರ್ 2.0ಗೆ ಸಿದ್ಧ

ಪುಟ ೧➡ **ಯುದ್ಧ ಭೂಮಿ ಪಾರದರ್ಶಕ:** ನಾವು ಕಳೆದ ಕೆಲವು ವರ್ಷಗಳಲ್ಲಿ 24/7ನ್ನು ನೋಡಿದ್ದೇವೆ. ಯುದ್ಧಭೂಮಿಯು ಎಷ್ಟು ಪಾರದರ್ಶಕವಾಗಿದೆಯೆಂದರೆ ಪ್ರತಿ ಚಲನೆಯೂ ಇನ್ನೊಂದು ಬದಿಗೆ ತಿಳಿದಿದೆ. ಆದ್ದರಿಂದ, ನಮ್ಮ ನಿಯೋಜನೆಯ ವಿಷಯದಲ್ಲಿ, ನಮ್ಮ ಉದ್ಯೋಗದ ವಿಷಯದಲ್ಲಿ ಮತ್ತು ನಮ್ಮ ಪಡೆಗಳನ್ನು ಮತ್ತು ಗಡಿ ಪ್ರದೇಶಗಳಲ್ಲಿನ ನಾಗರಿಕರನ್ನು ರಕ್ಷಿಸಲು ಆಗತ್ಯವಿರುವ ರಕ್ಷಣೆಯ ವಿಷಯದಲ್ಲಿ ನಾವು ಬಹಳ ಜಾಗರೂಕರಾಗಿರಬೇಕು ಎಂದು ಹೇಳಿದರು.

ಶೇ.96.5 ಮನೆಗಳಿಗೆ ಶುದ್ಧ ನೀರು

• ಪುಟ ೧➡ ಇದು ನಗರ ಪ್ರದೇಶದಲ್ಲಿ ಶೇ.18.2 ಆಗಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಶೇ.19.1ರಷ್ಟಾಗಿದೆ. 2021ರ ಸಮೀಕ್ಷೆಯಲ್ಲಿದು ಶೇ.14ರಷ್ಟು ಮಾತ್ರ ಇತ್ತು.

ಗೃಹ ಹಿಂಸೆ ಶೇ.22ಕ್ಕೆ ಇಳಿಕೆ: ಮಹಿಳೆಯರಲ್ಲಿ ಬೊಜ್ಜಿನ ಸಮಸ್ಯೆ 2019-21ಕ್ಕೆ ಹೋಲಿಸಿದರೆ ಶೇ.7ರಷ್ಟು ಹೆಚ್ಚಿರುವ ಅಂಶ ವ್ಯಕ್ತವಾಗಿದೆ. ಇದೇ ವೇಳೆ ಕೌಟುಂಬಿಕ ಹಿಂಸೆ ಪ್ರಕರಣಗಳು ಶೇ.29.2ರಿಂದ ಶೇ.22.3ಕ್ಕೆ ಇಳಿಕೆಯಾಗಿದೆ. ಬಾಲ್ಯ ವಿವಾಹ ಪ್ರಮಾಣ ಕೂಡ ಶೇ.23.3ರಿಂದ ಶೇ.20.1ಕ್ಕೆ ಇಳಿಕೆಯಾಗಿದ್ದು, ಉದ್ಯೋಗಸ್ಥ ಮಹಿಳೆಯರ ಪ್ರಮಾಣ ಶೇ.25.4ರಿಂದ ಶೇ.30.8ಕ್ಕೆ ಗಣನೀಯವಾಗಿ ಏರಿಕೆಯಾಗಿರುವುದು ಕಂಡುಬಂದಿದೆ.

ದೇಶದ 715 ಜಿಲ್ಲೆಗಳಲ್ಲಿನ ಸುಮಾರು 6.79 ಲಕ್ಷ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಲಾಗಿದ್ದು, ಜನಸಂಖ್ಯೆ, ಆರೋಗ್ಯ, ಪೌಷ್ಟಿಕತೆ ಮತ್ತು ಕುಟುಂಬ ಕಲ್ಯಾಣದ ಅಂಶಗಳನ್ನು ಈ ಸಮೀಕ್ಷೆ ಹೊರಹಾಕಿದೆ.

ಸಿಸೇರಿಯನ್ ಹೆರಿಗೆ ತೀವ್ರ ಹೆಚ್ಚಳ: ಈ ನಡುವೆ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆಗಳು ದಾಖಲೆಯ ಶೇ.54.1ಕ್ಕೇರಿದ್ದರೆ, ಮೊದಲ ಆರು ತಿಂಗಳ ಕಾಲ ಪ್ರತ್ಯೇಕವಾಗಿ ಹಾಲುಣಿಸುವ ಪ್ರಮಾಣ ಶೇ.63.7ರಿಂದ ಶೇ.55.8ಕ್ಕೆ ಇಳಿದಿದೆ. ಆದರೆ ಮಾತ್ರೆ, ಕಾಂಡೋಮ್, ಸಂತಾನಹರಣದಂತಹ ಆಧುನಿಕ ಕುಟುಂಬ ಯೋಜನಾ ವಿಧಾನಗಳನ್ನು ಬಳಸುವವರ ಪ್ರಮಾಣ ಶೇ.56.4ರಿಂದ ಶೇ.52.7ಕ್ಕೆ ಇಳಿದಿದೆ.

2021ರ ಸಮೀಕ್ಷೆಯಲ್ಲಿ ಪೌಷ್ಟಿಕತೆ ಕೊರತೆಯ ಮಕ್ಕಳಲ್ಲಿ ಬೆಳವಣಿಗೆ ಕುಂಠಿತ ಪ್ರಮಾಣ ಶೇ.35.5ರಷ್ಟಿತ್ತು. ಅದೀಗ ಶೇ.29.3ಕ್ಕಿಳಿದಿದೆ. ಮಕ್ಕಳಲ್ಲಿ ಎತ್ತರದ ಪ್ರಮಾಣ ಶೇ.6.2ಕ್ಕೆ ಸುಧಾರಣೆಯಾಗಿದ್ದು, ಇದೊಂದು ಧನಾತ್ಮಕ ಬೆಳವಣಿಗೆ ಎನಿಸಿದೆ. 6ರಿಂದ 2ವರ್ಷ ನಡುವಣ ಮಕ್ಕಳಿಗೆ ಸೂಕ್ತ ಮತ್ತು ಸಮತೋಲಿತ ಪೌಷ್ಟಿಕಾಂಶ ಲಭ್ಯತೆಯು ಶೇ.15.3ರಷ್ಟು ಮಾತ್ರ ಇದ್ದು, ಶೇ.85ರಷ್ಟು ಮಂದಿಗೆ ಇನ್ನೂ ಅಗತ್ಯ ಪೌಷ್ಟಿಕಾಂಶಯುಕ್ತ ಆಹಾರ ಲಭಿಸುತ್ತಿಲ್ಲ ಎಂಬುದು ವ್ಯಕ್ತವಾಗಿದೆ.

ಕೌಟುಂಬಿಕ ಹಿಂಸೆ ಬಿಹಾರದಲ್ಲಿ ಅಧಿಕ: ಬಾಲ್ಯ ವಿವಾಹ ಪ್ರಮಾಣ ಕೇರಳದಲ್ಲಿ ಶೇ.2.9ರಷ್ಟು ಕನಿಷ್ಠ ಪ್ರಮಾಣದಲ್ಲಿದ್ದರೆ, ಇದು ಪಶ್ಚಿಮ ಬಂಗಾಳದಲ್ಲಿ ಶೇ.36.4 ಮತ್ತು ಬಿಹಾರದಲ್ಲಿ ಶೇ.34.6ರಷ್ಟು ಗರಿಷ್ಠ ಪ್ರಮಾಣದಲ್ಲಿದೆ. ಕೌಟುಂಬಿಕ ಹಿಂಸೆಯ ಪ್ರಕರಣಗಳು ಹಿಮಾಚಲ ಪ್ರದೇಶದಲ್ಲಿ ಕನಿಷ್ಠ ಪ್ರಮಾಣ(ಶೇ.4.3)ದಲ್ಲಿದ್ದರೆ, ಬಿಹಾರದಲ್ಲಿ ಗರಿಷ್ಠ (ಶೇ.36.1)ಪ್ರಮಾಣದಲ್ಲಿದೆ. ಅಚ್ಚರಿ ಎಂದರೆ ಕೇರಳದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಾಗಿದ್ದರೂ, ಇದೀಗ ಕೌಟುಂಬಿಕ ಹಿಂಸೆಯ ಪ್ರಮಾಣ ಕೂಡ ಶೇ.9.8 (2019-21)ರಿಂದ ಶೇ.17.7ಕ್ಕೆ ತೀವ್ರವಾಗಿ ಏರಿರುವ ಆತಂಕಕಾರಿ ಅಂಶವೂ ಸಮೀಕ್ಷೆಯಿಂದ ವ್ಯಕ್ತವಾಗಿದೆ.

ಬೊಜ್ಜಿನ ಸಮಸ್ಯೆ ಹೆಚ್ಚಳ: ಆಂಧ್ರಪ್ರದೇಶ(ಶೇ.48), ಸಿಕ್ಕಿಂ(ಶೇ.48), ಕೇರಳದ(ಶೇ.46.7) ಮಹಿಳೆಯ ರಲ್ಲಿ ಬೊಜ್ಜಿನ ಸಮಸ್ಯೆ ತೀವ್ರವಾಗಿರುವುದು ಕಂಡು ಬಂದಿದೆ. ಈ ಸಮಸ್ಯೆ ಮೇಘಾಲಯ(ಶೇ.13.8), ಜಾರ್ಖಂಡ್‌ನಲ್ಲಿ(ಶೇ.16.9) ಅತಿ ಕಡಿಮೆ ಪ್ರಮಾಣದಲ್ಲಿದೆ.

ಜಾಗತಿಕವಾಗಿ 84 ಕೋಟಿ ಮಹಿಳೆಯರು ಪತಿ ಅಥವಾ ಗೆಳೆಯನಿಂದ ಲೈಂಗಿಕ ದೌರ್ಜನ್ಯಕ್ಕೆ ಈಡಾಗುತ್ತಿದ್ದರೆ, ಭಾರತದಲ್ಲಿ ಶೇ.30ರಷ್ಟು ಮಂದಿ ವೈವಾಹಿಕ ಬದುಕಿನಲ್ಲಿ ಮಾನಸಿಕ, ಆರ್ಥಿಕ ಮತ್ತು ಲೈಂಗಿಕ ಹಿಂಸೆ ಎದುರಿಸುತ್ತಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ವರದಿ ಹೇಳಿದೆ. ಆದಾಗ್ಯೂ 2000 ಇಸವಿಯ ಬಳಿಕ ಇದೀಗ ಪರಿಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಕಂಡುಬಂದಿದೆ. ಜಾಗತಿಕ ಮಟ್ಟದಲ್ಲಿ 15-49 ವಯಸ್ಸಿನ ಮಹಿಳೆಯರ ಪೈಕಿ ಶೇ.8.4ರಷ್ಟು ಮಂದಿ ಗಂಡನಲ್ಲದ ಜತೆಗಾರನಿಂದ ಲೈಂಗಿಕ ಹಿಂಸೆಗೀಡಾಗುತ್ತಿದ್ದಾರೆ. ಭಾರತದಲ್ಲಿ ಇದು ಶೇ.4ರಷ್ಟಿದೆ.

ನಿವೃತ್ತ ನ್ಯಾ.ಪಿ.ಎನ್. ದೇಸಾಯಿ ಮಾನವ ಹಕ್ಕು ಆಯೋಗ ಅಧ್ಯಕ್ಷ

• **ಬೆಂಗಳೂರು:** ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವ ಮೊದಲು ಸಿದ್ದರಾಮಯ್ಯ ಅವರು ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.



ಈ ನೇಮಕ ರಾಜ್ಯ ರಾಜಕೀಯದಲ್ಲಿ ಪಕ್ಷಪಾತದ ಹೊಸ ಆರೋಪಗಳಿಗೆ ಕಾರಣವಾಗಿದೆ. ಮೇ 28 ರಂದು ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವ ಕೆಲವೇ ದಿನಗಳ ಮೊದಲು, ಮೇ 21 ರ ಸುಮಾರಿಗೆ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರನ್ನು ನೇಮಕ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿತ್ತು.

ಮುಖ್ಯಮಂತ್ರಿಗಳ ಪತ್ನಿ ಪಾರ್ವತಿ ಸಿದ್ದರಾಮಯ್ಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಪಡೆದ ನಿವೇಶನ ಸಂಬಂಧ, ಭೂ ಮಂಜೂರಾತಿ ಪ್ರಕರಣದ ತನಿಖೆ ನಡೆಸಿದ ಏಕಸದಸ್ಯ ನ್ಯಾಯಾಂಗ ಆಯೋಗದ ನೇತೃತ್ವವನ್ನು ನ್ಯಾಯಮೂರ್ತಿ ದೇಸಾಯಿ ವಹಿಸಿದ್ದರು, ಈ ಮುಡಾದಿಂದ ಪರ್ಯಾಯ ನಿವೇಶನಗಳ ಹಂಚಿಕೆ ಕಾನೂನುಬಾಹಿರವಲ್ಲ ಎಂದು ತೀರ್ಮಾನಿಸಿ ನ್ಯಾಯಮೂರ್ತಿ ದೇಸಾಯಿ ಆಯೋಗವು ಸಿದ್ದರಾಮಯ್ಯ ಮತ್ತು ಅವರ ಕುಟುಂಬಕ್ಕೆ ಕ್ಲೀನ್ ಚಿಟ್ ನೀಡಿತು. ಈ ವರದಿಯನ್ನು ಸೆಪ್ಟೆಂಬರ್ 2025 ರಲ್ಲಿ ರಾಜ್ಯ ಸಚಿವ ಸಂಪುಟ ಅಂಗೀಕರಿಸಿತು.

ಮೂರಿನಕಟ್ಟೆ ವಿಚಾರದಲ್ಲಿ ಸರ್ಕಾರ ಮೌನ ಪ್ರಶ್ನಿಸಿದ ಕೋಟ

ಕುಂದಾಪುರ: ಸಮಾನತೆಯನ್ನು ನೋಡಬೇಕಾದುದು ಸರಕಾರದ ಮತ್ತು ಸಂವಿಧಾನದ ಜವಾಬ್ದಾರಿ. ದುರದೃಷ್ಟಕ್ಕೆ ಇಡೀ ಕಾಂಗ್ರೆಸ್ ಸರಕಾರ ಹಿಂದುಗಳ ಬದುಕಿನ ಹಕ್ಕಿನ ಪ್ರಶ್ನೆ ಬಂದಾಗ ನಿರ್ಲಕ್ಷ್ಯ ವಹಿಸುವುದು, ನಿರ್ಲಿಪ್ತತೆ ಮಾಡುವುದು ನಡೆಯುತ್ತಿದೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.



ಹೆಮ್ಮಾಡಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಟ್ಕಳ ಪ್ರಕರಣದಲ್ಲಿ ತಕ್ಷಣ ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಂಡು, ನಿಮ್ಮ ಜೊತೆ ನಾವಿದ್ದೇವೆ ಎಂದು ವಿಶ್ವಾಸ ಮೂಡಿಸಿದ್ದರೆ ಇಂತಹ ಗೊಂದಲಗಳು ಆಗಿರಲು ಸಾಧ್ಯವಿರಲಿಲ್ಲ. ಹಿಂದುಗಳೆಲ್ಲ ಒಟ್ಟಾಗಿ ಬೀದಿಗೆ ಬಂದು ನಮ್ಮ ಬದುಕಿನ ಹಕ್ಕನ್ನು ರಕ್ಷಿಸಿ ಕೊಡಿ ಎಂದು ಸರಕಾರಕ್ಕೆ ಮನವಿ ಮಾಡಿರುವುದು ನೋವಿನ ಸಂಗತಿ. ಈ ಸಂಕಟದ ಸಮಯದಲ್ಲಿ ಎಲ್ಲಾ ಹಿಂದುಗಳ ನೋವಿನ ಪರವಾಗಿ ನಿಲ್ಲಬೇಕಾದ ಜವಾಬ್ದಾರಿ ಇದೆ. ನಾವೆಲ್ಲ ಹಿಂದುಗಳ ಪರವಾಗಿ ನಿಲ್ಲುತ್ತೇವೆ. ಸರಕಾರ ಏನು ಮಾಡುತ್ತದೆಯೋ ಮಾಡಿಕೊಳ್ಳಲಿ ಎಂದು ಅವರು ಸವಾಲು ಹಾಕಿದರು. ಹಿಂದುಗಳಿಗೆ ಅನ್ಯಾಯ ಆದರೆ ಯಾರನ್ನು ಏನೂ ಮಾಡದೆ ಇರುವ ಪರಂಪರೆ ಈ ಸರಕಾರದಲ್ಲಿ ಬೆಳೆದಿರುವ ಹಿನ್ನಲೆಯಲ್ಲಿ ಸಹಜವಾಗಿ ಸಮಾಜದಲ್ಲಿ ಗೊಂದಲ ಸೃಷ್ಟಿಯಾಗುತ್ತಿದ್ದು, ಭಟ್ಕಳದಲ್ಲಿ ಒಂದು ಸಮುದಾಯವರು ಬಂದು ಹಿಂದುಗಳ ಪೂಜಾ ಸ್ಥಳವಾದ ಮೂರಿನಕಟ್ಟೆಯನ್ನು ಒಡೆದು ಹೋದಾಗ, ಸರಕಾರ ನಿರ್ಲಿಪ್ತವಾದರೆ ಅನಿವಾರ್ಯವಾಗಿ ಹಿಂದು ಸಮಾಜ ಸಿಡಿದೆಳುವ ಪರಿಸ್ಥಿತಿ ಇದೆ. ಇಡೀ ರಾಜ್ಯದಲ್ಲಿ ಇದೇ ವಾತಾವರಣ ಇದೆ. ನೀವು ಹಿಂದುಗಳಿಗೆ ಏನು ಮಾಡಿದರೂ ಆಗುತ್ತದೆ, ಎಷ್ಟೇ ಅಪಮಾನ ಮಾಡಿದರೂ ಆಗುತ್ತದೆ ಎಂಬ ಪರಂಪರೆಯನ್ನು ಸರಕಾರ ಇಟ್ಟುಕೊಂಡಾಗ ಮತ್ತು ಹಿಂದುಗಳಿಗೆ ಅನ್ಯಾಯವಾದರೆ ಹಿಂದುಗಳ ಮೇಲೆಯೇ ಕೇಸು ಮಾಡುತ್ತೇವೆ ಎಂದು ದಬ್ಬಾಳಿಕೆ ಮಾಡಿದಾಗ, ಕೊನೆಯಲ್ಲಿ ಸಹನೆಯ ಕಟ್ಟೆ ಒಡೆದಿರುವ ಸಣ್ಣ ಉದಾಹರಣೆ ಭಟ್ಕಳದಲ್ಲಿ ನಡೆದಿದೆ ಎಂದರು.

ಶಾಸಕರ ಬೆಂಬಲ



ವಿಧಾನಸಭೆಯ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾದ ಡಿ.ಕೆ. ಶಿವಕುಮಾರ್ ಅವರಿಗೆ ಶಾಸಕರು ಕೈ ಎತ್ತುವ ಮೂಲಕ ಬೆಂಬಲಿಸಿದರು.

ಸಿಜೆಪಿ ವಿಚಾರಕ್ಕೆ ಸುನೀಲ್ ಅಂಬೇಕರ್ ಪ್ರತಿಕ್ರಿಯೆ
ಎಲ್ಲ ದನಿಗಳಿಗೂ ಇಲ್ಲಿ ಸ್ಥಾನವುಂಟು

ನಾಗ್ಪುರ: ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ಉದಯದ ಕುರಿತು ಪ್ರತಿಕ್ರಿಯಿಸಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನೀಲ್ ಅಂಬೇಕರ್, ಭಾರತೀಯ ಪ್ರಜಾಪ್ರಭುತ್ವವು ಎಲ್ಲ ಧ್ವನಿಗಳು ಹಾಗೂ ಭಾವನೆಗಳಿಗೆ ಅವಕಾಶ ಕಲ್ಪಿಸುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದ್ದಾರೆ.

- ಎಲ್ಲ ಧ್ವನಿಗಳು ಮತ್ತು ಭಾವನೆಗಳಿಗೆ ಭಾರತೀಯ ಪ್ರಜಾಪ್ರಭುತ್ವದಲ್ಲಿ ಅವಕಾಶ: ಆರ್‌ಎಸ್‌ಎಸ್
- ಜೆನ್ ಝೀ ಪೀಳಿಗೆಗೆ ದೇಶದ ಮೇಲೆ ಅಪಾರ ವಿಶ್ವಾಸವಿದೆ
- ಹೊಸ ರಾಜಕೀಯ ಅಭಿವ್ಯಕ್ತಿಗಳು ಪ್ರಜಾಪ್ರಭುತ್ವದ ಸಹಜ ಪ್ರಕ್ರಿಯೆಯ ಭಾಗ
- ಚುನಾವಣೆ, ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣ ವ್ಯವಸ್ಥೆ ಮುಕ್ತವಾಗಿದೆ

ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬಲವಾಗಿದ್ದು, ಚುನಾವಣೆಗಳು ಪಾರದರ್ಶಕವಾಗಿ ನಡೆಯುತ್ತವೆ. ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳೂ ಮುಕ್ತವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಅಂಬೇಕರ್ ಅವರು ಅಭಿಪ್ರಾಯಪಟ್ಟರು.

ಜನರ ಅಭಿಪ್ರಾಯಗಳು, ಅಸಮಾಧಾನಗಳು ಅಥವಾ ಹೊಸ ರೀತಿಯ ರಾಜಕೀಯ ಅಭಿವ್ಯಕ್ತಿಗಳು ಪ್ರಜಾಪ್ರಭುತ್ವದ ಸಹಜ ಪ್ರಕ್ರಿಯೆಯ ಭಾಗವೇ ಆಗಿವೆ. ದೇಶದ ಯುವಜನತೆ, ವಿಶೇಷವಾಗಿ ಜೆನ್ ಝೀ ಪೀಳಿಗೆ, ಭಾರತದ ಮೇಲೆ ಅಪಾರ ನಂಬಿಕೆ ಹೊಂದಿದ್ದು, ಸಂವಿಧಾನಾತ್ಮಕ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುತ್ತಿದೆ ಎಂದು ಅವರು ತಿಳಿಸಿದರು. ಕಾಕ್ರೋಚ್ ಜನತಾ ಪಾರ್ಟಿ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿರುವ ಬೆನ್ನಲ್ಲೇ ಅಂಬೇಕರ್ ಈ ಪ್ರತಿಕ್ರಿಯೆ ನೀಡಿದ್ದಾರೆ. ಈ ಬೆಳವಣಿಗೆಯನ್ನು ಅತಿಯಾಗಿ ಪರಿಗಣಿಸುವ ಅಗತ್ಯವಿಲ್ಲ ಎಂದು ಅವರು ಸೂಚಿಸಿದ್ದು, ಪ್ರಜಾಪ್ರಭುತ್ವದಲ್ಲಿ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗುವುದು ಸಹಜ ಎಂದು ಹೇಳಿದ್ದಾರೆ.

ಕಿರುಸುದ್ದಿ

ಲಿಂಗಾಯತ ಸಮುದಾಯಕ್ಕೆ ಡಿಸಿಎಂ ಸ್ಥಾನ ನೀಡಿ: ಪಾಟೀಲ್

ಬೆಂಗಳೂರು : ವೀರೇಂದ್ರ ಪಾಟೀಲ್ ಆದಮೇಲೆ ನಮ್ಮ ಸಮುದಾಯಕ್ಕೆ ಉತ್ತಮ ಸ್ಥಾನಮಾನ ಕಾಂಗ್ರೆಸ್‌ನಲ್ಲಿ ಸಿಕ್ಕಿಲ್ಲ. ಹೀಗಾಗಿ ಈ ಬಾರಿ ವೀರಶೈವ/ಲಿಂಗಾಯತ ಸಮುದಾಯದವರಿಗೆ ಉಪ ಮುಖ್ಯಮಂತ್ರಿ ಸ್ಥಾನ ಕೊಡುವಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕೈಗಾರಿಕಾ ಮತ್ತು ವಾಣಿಜ್ಯ ಘಟಕದ ರಾಜ್ಯಾಧ್ಯಕ್ಷ ವಿಜಯಕುಮಾರ್ ಪಾಟೀಲ್ ಒತ್ತಾಯಿಸಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಸಚಿವ ಸಂಪುಟದಲ್ಲಿ ವೀರಶೈವ ಲಿಂಗಾಯತ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ಹಾಗೂ ಸಮುದಾಯದ ಹಿರಿಯ ನಾಯಕರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿದರು. ವೀರಶೈವ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ ವೆಂಕಟರೆಡ್ಡಿ ಮಾತನಾಡಿ, ಲಿಂಗಾಯತ ಪ್ರಬಲ ಸಮುದಾಯಕ್ಕೆ ಈಗಿನ ಪರಿಸ್ಥಿತಿಯಲ್ಲಿ ಸಿಎಂ ಕೊಡೋಕೆ ಸಾಧ್ಯವಿಲ್ಲ. ಆದರಿಂದ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಹೇಳಿದರು.

ಈಜಲು ಹೋದ ಮೂವರು ಬಾಲಕರು ನೀರು ಪಾಲು

ಧಾರವಾಡ: ಕೆರೆಗೆ ಈಜಲು ಹೋಗಿದ್ದ ಮೂವರು ಬಾಲಕರು ಈಜು ಬಾರದೆ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ತಾಲೂಕಿನ ಸಿಂಗನಳ್ಳಿ ಗ್ರಾಮದಲ್ಲಿ ಶನಿವಾರ ನಡೆದಿದೆ. ಗ್ರಾಮದ ನಿವಾಸಿಗಳಾದ ಅನ್ವರ್ ಇಬ್ರಾಹಿಂ ವಟ್ನಾಳ(13), ಸುಭಾನಿ ಇಸಾಕ್ ಬಾಗಜಿಕೊಪ್ಪ(12) ಹಾಗೂ ಮೆಹಬೂಬ್ ದಾದಾಫಿರ್ ವಡ್ನಾಳ್ (15) ಮೃತ ಬಾಲಕರು. ಗ್ರಾಮದ ಕರೆಮ್ಮನಕೆರೆಗೆ ಮಧ್ಯಾಹ್ನ ಈಜಲು ಹೋದ ಬಾಲಕರು, ನೀರಿನ ಆಳ ತಿಳಿಯದೆ ಒಬ್ಬರನ್ನೊಬ್ಬರು ರಕ್ಷಿಸಲು ಹೋಗಿ ನೀರಲ್ಲಿ ಮುಳುಗಿದ್ದಾರೆ. ಬಾಲಕರು ಮನೆಗೆ ಬಾರದ ಹಿನ್ನಲೆ ಆತಂಕಗೊಂಡ ಪಾಲಕರು ಶೋಧ ನಡೆಸಿದಾಗ ಘಟನೆ ಬೆಳಕಿಗೆ ಬಂದಿದೆ. ಕೆರೆ ದಂಡೆಯಲ್ಲಿ ಮೃತ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ವಿಷಯ ತಿಳಿದು ಸ್ಥಳಕ್ಕೆ ದೌಡಾಯಿಸಿದ ಗರಗ ಠಾಣೆಯ ಪೊಲೀಸರು, ಪರಿಶೀಲನೆ ನಡೆಸಿದ್ದು, ಗ್ರಾಮಸ್ಥರ ನೆರವಿನಿಂದ ಶವಗಳನ್ನು ಹೊರ ತೆಗೆಯಲಾಗಿದೆ. ಈ ಕುರಿತು ಗರಗ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಹೆಣ್ಣು ಶವಗಳ ವಿಡಿಯೋ ಚಿತ್ರೀಕರಣ: ಸೆರೆ

ಬೀದರ್: ಬ್ರಿಮ್ಸ್ ಜಿಲ್ಲಾಸ್ಪತ್ರೆಯಲ್ಲಿ ಬೆಚ್ಚಿ ಬೀಳಿಸುವ ಘಟನೆ ಬೆಳಕಿಗೆ ಬಂದಿದ್ದು, ಶವಾಗಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಟೆಂಡರ್‌ನೊಬ್ಬ ಪೋಸ್ಟ್ ಮಾರ್ಟ್‌ಮ್ ವೇಳೆ ಮಹಿಳಾ ಮೃತದೇಹಗಳ ಬೆತ್ತಲೆ ಚಿತ್ರಗಳನ್ನು ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದ ಆರೋಪದ ಮೇಲೆ ಬಂಧಿಸಲಾಗಿದೆ.ಆರೋಪಿ ಮುನೀರ್ ಅಹ್ಮದ್ ಹಲವು ವರ್ಷಗಳಿಂದ ಆಸ್ಪತ್ರೆಯ ಶವಾಗಾರ ವಿಭಾಗದಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದಾನೆ. ಪೋಸ್ಟ್‌ಮಾರ್ಟ್‌ಮ್ ಪ್ರಕ್ರಿಯೆ ನಡೆಯುವ ವೇಳೆ ಮಹಿಳಾ ಶವಗಳ ಫೋಟೋಗಳನ್ನು ರಹಸ್ಯವಾಗಿ ತೆಗೆದು ಸಂಗ್ರಹಿಸಿಡುತ್ತಿದ್ದನೆಂಬ ವಿಚಾರ ತಿಳಿದು ಆಸ್ಪತ್ರೆ ಸಿಬ್ಬಂದಿ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಾಹಿತಿಯ ಪ್ರಕಾರ, ಆರೋಪಿಯ ಮೊಬೈಲ್ ಫೋನ್ ಪರಿಶೀಲಿಸಿದಾಗ ಹಲವು ಮಹಿಳಾ ಮೃತದೇಹಗಳ ಬೆತ್ತಲೆ ಚಿತ್ರಗಳು ಪತ್ತೆಯಾಗಿವೆ. ಇದರಿಂದ ಆತ ಹಲವು ವರ್ಷಗಳಿಂದ ಇದೇ ರೀತಿಯ ವಿಕೃತ ಕೃತ್ಯ ಎಸಗುತ್ತಿದ್ದಾನೆಯೇ ಎಂಬ ಅನುಮಾನ ಮೂಡಿದ್ದು, ಪೊಲೀಸರು ಈ ನಿಟ್ಟಿನಲ್ಲಿ ತನಿಖೆ ನಡೆಸುತ್ತಿದ್ದಾರೆ.

ರಾಜ್ಯಪಾಲರಿಂದ ಸರ್ಕಾರ ರಚಿಸುವಂತೆ ಶಿವಕುಮಾರ್‌ಗೆ ಆಹ್ವಾನ | ರಾಜಭವನದ ಗಾಜಿನ ಮನೆಯಲ್ಲಿ ಕಾರ್ಯಕ್ರಮ
ಡಿಕೆಶಿಗೆ ಗೋಧೂಳಿ ಮುಹೂರ್ತ ನಿಗದಿ

ಬೆಂಗಳೂರು: ಜೂ. 3ರ ಸಂಜೆ ರಾಜಭವನದ ಗಾಜಿನ ಮನೆಯಲ್ಲಿ ಪ್ರಮಾಣ ವಚನ ಕಾರ್ಯಕ್ರಮ ನಡೆಯಲಿರುವ ಹಿನ್ನೆಲೆಯಲ್ಲಿ ಡಿಪಿಎಆರ್ ಕಾರ್ಯದರ್ಶಿ ಕೆ.ಜಿ. ಜಗದೀಶ್ ಅವರು ಗಾಜಿನ ಮನೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದರು. ಈ ನಡುವೆ ರಾಜ್ಯಪಾಲರು ಕೂಡಾ ಸರ್ಕಾರ ರಚಿಸುವಂತೆ ಶಿವಕುಮಾರ್ ಅವರಿಗೆ ಆಹ್ವಾನ ನೀಡಿದ್ದಾರೆ.

ನೂತನ ಮುಖ್ಯಮಂತ್ರಿಯಾಗಿ ಆಗಿ ಡಿ.ಕೆ. ಶಿವಕುಮಾರ್ ಪದಗ್ರಹಣ ಮಾಡಲು ಬುಧವಾರ ದಿನ ನಿಗದಿಯಾಗಿದೆ. ತೈಲ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಸರಳವಾಗಿ ಪ್ರಮಾಣ ವಚನ ಸ್ವೀಕರಿಸಲು ನಿರ್ಧರಿಸಿದ್ದಾರೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಲೋಕಭವನದ ಗಾಜಿನ ಮನೆಯಲ್ಲಿ ಸಂಜೆ ಸಮಾರಂಭ ನಡೆಯಲಿದೆ. ಲಕ್ಷಾಂತರ ಕಾರ್ಯಕರ್ತರಿಗೆ ಬಸ್ ವ್ಯವಸ್ಥೆ ಮಾಡುವ ಯೋಜನೆ ಕೈಬಿಡಲಾಗಿದ್ದು, ಸಿಎಂ ಆದ ಬಳಿಕ ಶಿವಕುಮಾರ್ ಅವರೇ ಸ್ವತಃ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಜನರಿಗೆ ಧನ್ಯವಾದ ಅರ್ಪಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಶಿವಕುಮಾರ್ ನಿವಾಸದ ಮುಂದೆ ಶಾಸಕರ ದಂಡು: ಶಾಸಕಾಂಗ ಸಭೆಗೂ ಮುನ್ನ ಬೆಂಗಳೂರಿನ ಸದಾಶಿವನಗರದ ಡಿ.ಕೆ.ಶಿವಕುಮಾರ್ ನಿವಾಸಕ್ಕೆ ಮಾಜಿ ಸಚಿವರು, ಸಚಿವಾಕಾಂಕ್ಷಿಗಳು ಹಾಗೂ ಉನ್ನತ ಅಧಿಕಾರಿಗಳು ದಂಡು ದಂಡಾಗಿ ಆಗಮಿಸುತ್ತಿದ್ದಾರೆ. ಪ್ರಮುಖ ನಾಯಕರು ಸದಾಶಿವನಗರದ ನಿವಾಸಕ್ಕೆ ಭೇಟಿ ನೀಡಿ ಡಿ.ಕೆ.ಶಿವಕುಮಾರ್ ಜೊತೆ ಮಹತ್ವದ ಮಾತುಕತೆ ನಡೆಸುತ್ತಿದ್ದಾರೆ. ಹೊಸ ಸರ್ಕಾರದಲ್ಲಿ ಸಚಿವ ಸ್ಥಾನ ಗಿಟ್ಟಿಸಿಕೊಳ್ಳಲು ಸಚಿವಾಕಾಂಕ್ಷಿಗಳ ಕಸರತ್ತು ಜೋರಾಗಿದೆ.

ಸಿದ್ದರಾಮಯ್ಯ ನಿವಾಸಕ್ಕೆ ಶಾಸಕರು, ನಾಯಕರ ಭೇಟಿ: ಇತ್ತ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕಾವೇರಿ ನಿವಾಸಕ್ಕೆ ಕಾಂಗ್ರೆಸ್ ಶಾಸಕರು ಮತ್ತು ಪ್ರಮುಖ ನಾಯಕರು ಭೇಟಿ ನೀಡಿದರು. ಮಾಜಿ ಸಚಿವರಾದ ಕೆ.ಜೆ. ಜಾರ್ಜ್, ಎಂ.ಬಿ.ಪಾಟೀಲ್, ಈಶ್ವರ್ ಖಂಡ್ರೆ, ಶಾಸಕರಾದ ಎ.ಎಸ್. ಪೊನ್ನಣ್ಣ ಪುಟ್ಟರಂಗಶೆಟ್ಟಿ ಅವರು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.



"ಕನ್ನಡಿಗರ ಜೀವನದಲ್ಲಿ ಬದಲಾವಣೆ ತರಲು ಕಾಂಗ್ರೆಸ್ ಸರ್ಕಾರ ನಡೆಸುತ್ತಿರುವ ಈ ಪಯಣದಲ್ಲಿ ಸಿದ್ದರಾಮಯ್ಯ ಅವರ ನಿರಂತರ ಪಾಲ್ಗೊಳ್ಳುವಿಕೆಯನ್ನು ಪಕ್ಷವು ಸದಾ ಬಯಸುತ್ತದೆ.
■ ಡಿ.ಕೆ.ಶಿವಕುಮಾರ್, ನಿಯೋಜಿತ ಸಿಎಂ

"ಮುಖ್ಯಮಂತ್ರಿ ಸ್ಥಾನದಿಂದ ಪದತ್ಯಾಗ ಮಾಡಿದ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಪರವಾಗಿ ಧನ್ಯವಾದಗಳು.



2013-2018 ಮತ್ತು 2023-2026 ರವರೆಗೆ ಮುಖ್ಯಮಂತ್ರಿಯಾಗಿ ಹಾಗೂ ಎರಡು ಅವಧಿಗಳಲ್ಲಿ ವಿರೋಧ ಪಕ್ಷದ ನಾಯಕನಾಗಿ ಸಲ್ಲಿಸಿದ ಸೇವೆ ಅನನ್ಯ.
■ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಸಿದ್ದರಾಮಯ್ಯ ಅವರಿಗೆ ಧನ್ಯವಾದ

ನೂತನ ನಾಯಕನಾಗಿ ಆಯ್ಕೆಯಾದ ನಂತರ ಡಿ.ಕೆ. ಶಿವಕುಮಾರ್ ಅವರು ಸಿದ್ದರಾಮಯ್ಯ ಅವರ ಆಡಳಿತ ಮತ್ತು ನಾಯಕತ್ವವನ್ನು ಶ್ಲಾಘಿಸಿ ಧನ್ಯವಾದ ನಿರ್ಣಯ ಮಂಡಿಸಿದರು. ಇದನ್ನು ಎಲ್ಲಾ ಶಾಸಕರು ತುಂಬು ಹೃದಯದಿಂದ ಅನುಮೋದಿಸಿದರು.

ರಾಜ್ಯಪಾಲರ ಜೊತೆ ಭೇಟಿಯಾಗಿ ಮಾತುಕತೆ ನಡೆಸಿದ ಡಿಕೆಶಿ: ಶಾಸಕಾಂಗ ಸಭೆಗೂ ಮುನ್ನ ಲೋಕಭವನದಲ್ಲಿ ಡಿ.ಕೆ.ಶಿವಕುಮಾರ್ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರನ್ನು ಭೇಟಿಯಾಗಿ ಅನೌಪಚಾರಿಕ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಪ್ರಮಾಣ ವಚನ ಸ್ವೀಕಾರದ ತಾತ್ಕಾಲಿಕ ವೇಳಾಪಟ್ಟಿ ಹಾಗೂ ರಾಜ್ಯಪಾಲರ ಲಭ್ಯತೆ ಕುರಿತು ಚರ್ಚಿಸಿದರು.

ಒಮ್ಮತದಿಂದ ಡಿಕೆಶಿ ಆಯ್ಕೆ

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.ಕೆ ಶಿವಕುಮಾರ್ ಅವರ ಹೆಸರನ್ನು ಪ್ರಸ್ತಾಪಿಸಿದ್ದು, ಸರ್ವಾನುಮತದಿಂದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ ಶಿವಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಪ್ರಕಟಿಸಿದರು.



ವಿಧಾನಸೌಧದಲ್ಲಿ ಶನಿವಾರ ಸಂಜೆ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಅವರು, ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಡಿ.ಕೆ ಶಿವಕುಮಾರ್ ಅವರ ಹೆಸರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಸೂಚಿಸಿತು. ಸಿದ್ದರಾಮಯ್ಯ ಅವರ ಪ್ರಸ್ತಾವನೆಗೆ ಕಾಂಗ್ರೆಸ್ ಶಾಸಕಾಂಗ ಸಭೆಯು ಸರ್ವಾನುಮತದಿಂದ ಒಪ್ಪಿಕೊಂಡಿತು. ಡಾ.ಜಿ.ಪರಮೇಶ್ವರ ಅವರು ಈ ಪ್ರಸ್ತಾವನೆಯನ್ನು ಅನುಮೋದಿಸಿದರು ಎಂದು ಮಾಹಿತಿ ನೀಡಿದರು.

ಈ ಅಧಿಕಾರ ಹಸ್ತಾಂತರದಿಂದ ಕಾಂಗ್ರೆಸ್ ಪಕ್ಷಕ್ಕೆ ಸಂಕಷ್ಟ ಎದುರಾಗಲಿದೆ ಎಂದು ಅನೇಕರು ನಿರೀಕ್ಷಿಸಿದ್ದರು. ಆದರೆ ನಮ್ಮದು ಕುಟುಂಬವಿದ್ದಂತೆ. ಎಲ್ಲರೂ ಸಿದ್ದರಾಮಯ್ಯ ಅವರ ನಡೆ ಹೇಗಿರಲಿದೆ ಎಂದು ಕೇಳುತ್ತಿದ್ದರು. ಆದರೆ ಸಿದ್ದರಾಮಯ್ಯ ಅವರು ನನ್ನ ಹೃದಯದಲ್ಲಿ ಕೇವಲ ಕಾಂಗ್ರೆಸ್ ಪಕ್ಷವಿದೆ. ಕಾಂಗ್ರೆಸ್ ಹೈಕಮಾಂಡ್ ನಿರ್ಧಾರವನ್ನು ಪಾಲಿಸುತ್ತೇನೆ ಎಂದು ಉತ್ತರ ನೀಡಿದ್ದರು. ಸಿದ್ದರಾಮಯ್ಯ ಅವರು ತಮ್ಮ ನಡೆ ಮೂಲಕ ಸಾಬೀತಪಡಿಸಿದರು. ಇದು ಕಾಂಗ್ರೆಸ್ ಒಂದು ಕುಟುಂಬ ಎಂಬುದಕ್ಕೆ ಸಾಕ್ಷಿ ಎಂದು ಬಣ್ಣಿಸಿದರು.

ಮತ್ತೆ 2028ರಲ್ಲಿ ಅಧಿಕಾರಕ್ಕೆ

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿಗಳಾಗಿ ಸಿದ್ದರಾಮಯ್ಯ ಅವರ 8 ವರ್ಷಗಳ ಅತ್ಯುತ್ತಮ ಸೇವೆಯನ್ನು ಶ್ಲಾಘಿಸಲಾಗಿದೆ. ಈ ನಿರ್ಣಯವನ್ನು ಸ್ವತಃ ಡಿ.ಕೆ ಶಿವಕುಮಾರ್ ಅವರು ಮಂಡಿಸಿದರು. ಇದು ಕಾಂಗ್ರೆಸ್ ಪಕ್ಷಕ್ಕೆ ಹೆಮ್ಮೆಯ ಕ್ಷಣ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಹಾಗೂ ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರ ಮಾರ್ಗದರ್ಶನದಂತೆ ಈ ಅಧಿಕಾರ ಹಸ್ತಾಂತರ ಮಾಡಲಾಗಿದೆ. ಸಿದ್ದರಾಮಯ್ಯ ಅವರ ಬೆಂಬಲದೊಂದಿಗೆ ಡಿ.ಕೆ. ಶಿವಕುಮಾರ್ ಅವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ 2028ರಲ್ಲಿ ಅಧಿಕಾರಕ್ಕೆ ಬರಲಿದೆ ಎಂದರು.

ಭಾರತ್ ನೆಟ್ ಉದ್ಯಮಿ ಯೋಜನೆ ಜಾರಿ: ತ್ರಿಪಾಟಿ

ಹುಬ್ಬಳ್ಳಿ: ಬಿಎಸ್‌ಎನ್‌ಎಲ್ ವತಿಯಿಂದ ಗ್ರಾಮೀಣ ಭಾಗದಲ್ಲಿ ಡಿಜಿಟಲ್ ಸಂಪರ್ಕ ಹೆಚ್ಚಿಸಲು ತಿದ್ದುಪಡಿ ಮಾಡಿದ ಭಾರತ್ ನೆಟ್ ಉದ್ಯಮಿ (ಬಿಎನ್‌ಯು) ಯೋಜನೆಯನ್ನು ಜಾರಿಗೆ ತರಲಾಗಿದ್ದು, ಜನರು ಇದರ ಪ್ರಯೋಜನ ಪಡೆಯಬಹುದು ಎಂದು ಬಿಎಸ್‌ಎನ್‌ಎಲ್ ಹಿರಿಯ ಪ್ರಧಾನ ವ್ಯವಸ್ಥಾಪಕ ಧನಂಜಯ್ ಕುಮಾರ್ ತ್ರಿಪಾಟಿ ಹೇಳಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫ್ರಾಂಚೈಸಿ ಮೂಲಕ ಈ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ. 1.02 ಲಕ್ಷ ನೀಡಿ ಫ್ರಾಂಚೈಸಿ ಪಡೆಯಬಹುದು. ಫ್ರಾಂಚೈಸಿಯೊಂದಿಗೆ ಮೂರು ವರ್ಷಗಳ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಪ್ರತಿ ಬ್ರಾಡ್ ಬ್ಯಾಂಡ್ ಸಂಪರ್ಕಕ್ಕೆ ಅವರಿಗೆ 3,200ರಿಂದ 6,400 ನೀಡಲಾಗುತ್ತದೆ. ನಂತರ ಆದಾಯದಲ್ಲಿ ಶೇ 50ರಷ್ಟನ್ನು ಫ್ರಾಂಚೈಸಿಗೆ ಹಂಚಿಕೆ ಮಾಡಲಾಗುತ್ತದೆ ಎಂದರು.

ಸಮಗ್ರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಉದ್ದೇಶವನ್ನು ಈ ಯೋಜನೆ ಹೊಂದಿದೆ. 2022ರಲ್ಲಿ ಈ ಯೋಜನೆ ಆರಂಭವಾಗಿದ್ದು, ಇತ್ತೀಚೆಗೆ ಇದಕ್ಕೆ ತಿದ್ದುಪಡಿ ತರಲಾಗಿದೆ.



ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ 502 ಗ್ರಾಮ ಪಂಚಾಯಿತಿಗಳಿದ್ದು, ಅವುಗಳಲ್ಲಿ ಈಗಾಗಲೇ 160 ಗ್ರಾಮ ಪಂಚಾಯಿತಿಗಳಲ್ಲಿ ಫ್ರಾಂಚೈಸಿಗಳಿವೆ. ಬಹುತೇಕ ಕಡೆ ಜನರು ಫ್ರಾಂಚೈಸಿ ಪಡೆಯಲು ಮುಂದೆ ಬರುತ್ತಿಲ್ಲ ಎಂದು ತಿಳಿಸಿದರು.

ಬ್ರಾಡ್‌ಬ್ಯಾಂಡ್ ಸಂಪರ್ಕಕ್ಕೆ 12 ಯೋಜನೆಗಳಿವೆ. ಗ್ರಾಹಕರು ತಾವು ಆಯ್ಕೆ ಮಾಡಿಕೊಂಡ ಯೋಜನೆಗೆ ಮಾಸಿಕ ಬಿಲ್ ಮಾತ್ರ ಪಾವತಿಸಬೇಕು. ಹೆಚ್ಚುವರಿ ಯಾವುದೇ ಶುಲ್ಕ ಇರುವುದಿಲ್ಲ ಎಂದು ಹೇಳಿದರು.

ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ 370 ಟವರ್‌ಗಳಿವೆ. 4ಜಿ ನೆಟ್‌ವರ್ಕ್ ಸಮರ್ಪಕವಾಗಿ ನೀಡುವ ಉದ್ದೇಶದಿಂದ ಈ ಜಿಲ್ಲೆಗಳಲ್ಲಿ ಒಟ್ಟು 21 ಟವರ್‌ಗಳನ್ನು ಹೊಸದಾಗಿ ಅಳವಡಿಸಲಾಗಿದೆ ಎಂದು ತಿಳಿಸಿದರು.

ಪಡಿತರ ಶೇ. 50 ಜನರಿಗೆ ಸಿಗುತ್ತಿಲ್ಲ

ಬೆಂಗಳೂರು: ಗ್ಯಾರಂಟಿ ಫಲಾನುಭವಿಯ ಹೆಸರು ಏಕಾಏಕಿ ತೆಗೆದುಹಾಕುವುದು ಮತ್ತು ಕಿರುಕುಳ ಕೊಡುವುದು ಎಷ್ಟು ಸರಿ ಎಂದು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಆಕ್ಷೇಪಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶನಿವಾರ ಸುದ್ದಿ ಗೋಷ್ಠಿ ನಡೆಸಿದ ಅವರು, ಗೃಹಲಕ್ಷ್ಮಿ ಎಲ್ಲರಿಗೂ ಕೊಡುವುದಾಗಿ ಹೇಳಿದ್ದರು. ಗೃಹಜ್ಯೋತಿ ಕೊಡಿ ಎಂದು ಜನರು ಕಾಂಗ್ರೆಸ್ಸಿನವರನ್ನು ಕೇಳಿದ್ದಾರಾ? ಕಾಂಗ್ರೆಸ್ ದುಡ್ಡಿನಿಂದ ಕೊಡುತ್ತಿದ್ದಾರಾ? ಸರ್ಕಾರದ, ಜನರ ತೆರಿಗೆ ದುಡ್ಡಿನಿಂದ ಕೊಡುತ್ತಿದ್ದಾರೆ. ಇವರಿಗೆ ಮತ ಬೇಕಿತ್ತು. ಆಗ ಎಲ್ಲರಿಗೂ ಕೊಡುವುದಾಗಿ ಹೇಳಿ ಈಗ ಬರೆ ಎಳೆಯುವುದು ಸರಿಯೇ ಎಂದು ಪ್ರಶ್ನಿಸಿದರು. ಪಡಿತರ ಶೇ. 50 ಜನರಿಗೆ ಸಿಗುತ್ತಿಲ್ಲ. ಕೇವಲ ಸರತಿ ಸಾಲಿನಲ್ಲಿ ಕಾಯುವಂತಾಗಿದೆ. ಬಡವರಿಗೆ ಕಿರುಕುಳ ಕೊಡುವ ಸರ್ಕಾರ ಇದಾಗಿದೆ. ರೇಷನ್ ಇಲ್ಲ; ಕಾಯುವುದೇ ಗ್ಯಾರಂಟಿ ಎಂದು ಆಕ್ಷೇಪಿಸಿದರು.

ಕಾಂಗ್ರೆಸ್ ಆಡಳಿತದಲ್ಲಿ ಬೆಂಗಳೂರಿನ ಜನರು ಶಾಪಗ್ರಸ್ತರಾಗಿದ್ದಾರೆ. ನಗರವನ್ನು ಕಾಂಗ್ರೆಸ್ ಕಡೆಗಣಿಸಿದೆ. ಒಂದುವರೆ ಕೋಟಿ ಜನರಿದ್ದಾರೆ. 20ರಿಂದ 30 ಲಕ್ಷ ಜನರು ಬರುತ್ತಾರೆ. ಅವರು ಬೆಂಗಳೂರು ನಗರಕ್ಕೆ ಬರಲು ಹೆದರಬೇಕೇ? ಜಾಗೃತಿ ಕಾರ್ಯ ನಮ್ಮ ಕೆಲಸ ಎಂದು ತಿಳಿಸಿದರು. ಸರ್ಕಾರ ರೀ ಬೂಟ್ ಆಗುತ್ತಿದೆ. ಮೂರು ವರ್ಷ ಕಣ್ಣೀರಲ್ಲೇ ತೊಳೆದಿದ್ದಾರೆ. ಅಭಿವೃದ್ಧಿ ಶೂನ್ಯತೆ ಸೇರಿ ಭ್ರಷ್ಟಾಚಾರ, ಅವ್ಯವಸ್ಥೆ, ಕೆಟ್ಟ ಆಡಳಿತ ನೀಡಿದ್ದಾರೆ. ಮೂರು ವರ್ಷದ ಆಡಳಿತ ನೋಡಿಯೇ ಜನರು ಸುಸ್ತಾಗಿದ್ದಾರೆ ಎಂದು ಟೀಕಿಸಿದರು.

ವೆಂಕಟರಮಣಪ್ಪನವರ ಅಂತ್ಯಕ್ರಿಯೆ



ಪಾವಗಡ: ಶುಕ್ರವಾರ ನಿಧನರಾದ ಮಾಜಿ ಸಚಿವ ವೆಂಕಟರಮಣಪ್ಪನವರ ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವದೊಂದಿಗೆ ಶನಿವಾರ ಹುಟ್ಟೂರು ಹನುಮಂತನಹಳ್ಳಿಯಲ್ಲಿ ನೆರವೇರಿಸಲಾಯಿತು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಸಚಿವ ವೆಂಕಟರಮಣಪ್ಪ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಹೃದಯಾಘಾತದಿಂದ ಮೃತಪಟ್ಟಿದ್ದರು. ವೆಂಕಟರಮಣಪ್ಪ ಅವರು 2008ರ ಅವಧಿಯಲ್ಲಿ ರೇಷ್ಮೆ ಮತ್ತು ಸಣ್ಣ ಕೈಗಾರಿಕಾ ಸಚಿವರಾಗಿ, 2018ರಲ್ಲಿ ಕಾರ್ಮಿಕ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.


ಅಂತಿಮ ದರ್ಶನ: ಹನುಮಂತನಹಳ್ಳಿಯಲ್ಲಿ ಇರುವ ತೋಟದ ಮನೆಯಲ್ಲಿ ಮಾಜಿ ಸಚಿವ ವೆಂಕಟರಮಣಪ್ಪ ಅವರ ಪಾರ್ಥೀವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕಿಡಲಾಗಿತ್ತು. ಹಂಗಾಮಿ ಸಿಎಂ ಸಿದ್ದರಾಮಯ್ಯಸೇರಿದಂತೆ ಸಚಿವರಾದ ಕೆ.ಜೆ. ಜಾರ್ಜ್, ಜಮೀರ್ ಅಹಮ್ಮದ್, ಶಾಸಕರಾದ ಕೆ.ಎನ್.ರಾಜಣ್ಣ, ಯತೀಂದ್ರಸಿದ್ದರಾಮಯ್ಯ, ರಾಜೇಂದ್ರ ರಾಜಣ್ಣ, ಪರಿಟಾಲ ಸುನೀತಮ್ಮ, ಕಲ್ಯಾಣದುರ್ಗ ಶಾಸಕ ಅಮಲಿನೇನಿ ಸುರೇಂದ್ರಬಾಬು, ಮಾಜಿ ಸಂಸದರಾದ ಮುದ್ದುಹನುಮೇಗೌಡ, ಜನಾರ್ದನಸ್ವಾಮಿ, ಮುಖಂಡರಾದ ಗೂಳಿಹಟ್ಟಿಶೇಖರ್, ರಘುವೀರಾರೆಡ್ಡಿ, ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ, ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಸೇರಿದಂತೆ ಸುಮಾರು 19ಕ್ಕೂ ಹೆಚ್ಚು ವಿವಿಧ ಮಠಗಳ ಸ್ವಾಮೀಜಿಗಳು ಆಗಮಿಸಿ, ಅಂತಿಮ ದರ್ಶನ ಪಡೆದು ಮಂತ್ರೋಚ್ಚಾರಣೆಯೊಂದಿಗೆ ಆತ್ಮಕ್ಕೆ ಶಾಂತಿ ಕೋರಿದರು.

ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬದ್ಧ: ಸಂಸದ ಯದುವೀರ್ ಭರವಸೆ
ಮಡಿಕೇರಿಯ ಅರಮನೆ ಸಂರಕ್ಷಿತ ಸ್ಮಾರಕ

ಮೈಸೂರು: ಐತಿಹಾಸಿಕ ಮಡಿಕೇರಿ ಅರಮನೆ ಸಂರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಬೆಂಬಲ ದೊರೆತಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು, ಮಡಿಕೇರಿ ಅರಮನೆಯನ್ನು ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ತಾಣಗಳು ಹಾಗೂ ಅವಶೇಷಗಳ ಕಾಯ್ದೆ, 1958ರ ಅಡಿಯಲ್ಲಿ ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ ಎಂದು ಅಧಿಕೃತವಾಗಿ ತಿಳಿಸಿದ್ದಾರೆ ಎಂದರು.

ತಮ್ಮ ಪತ್ರದಲ್ಲಿ ಸಚಿವರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮಡಿಕೇರಿ ಅರಮನೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ ಎಂದು ತಿಳಿಸಿದ್ದಾರೆ. ಇದರ ಭಾಗವಾಗಿ, ಪ್ರವಾಸಿಗರ ಅನುಭವವನ್ನು ಉತ್ತಮಗೊಳಿಸುವ ಹಾಗೂ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಡಿಜಿಟಲ್ ಪ್ರದರ್ಶನಗಳನ್ನೊಳಗೊಂಡ ಆಧುನಿಕ ತಾಣ ವಸ್ತುಸಂಗ್ರಹಾಲಯ ಸ್ಥಾಪಿಸುವ ಪ್ರಸ್ತಾವನೆಯೂ ಪರಿಶೀಲನೆಯಲ್ಲಿದೆ. ಇದು ಕೊಡಗಿನ ಸಮೃದ್ಧ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪರಿಣಾಮಕಾರಿಯಾಗಿ ಪರಿಚಯಿಸುವ ಮಹತ್ವದ ಹೆಜ್ಜೆಯಾಗಲಿದೆ ಎಂದು ಹೇಳಿದ್ದಾರೆ.



ಈ ಬೆಳವಣಿಗೆಗೆ ಕಾರಣವಾದುದು, 2025ರ ಮಾರ್ಚ್ 18ರಂದು ಸಂಸತ್ ಸದಸ್ಯತ ಯದುವೀರ್ ಒಡೆಯರ್ ಅವರು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದ ವಿವರವಾದ ಮನವಿ. ಆ ಮನವಿಯಲ್ಲಿ ಅವರು ಮಡಿಕೇರಿ ಅರಮನೆಗೆ ಸಂರಕ್ಷಿತ ಸ್ಮಾರಕ ಸ್ಥಾನಮಾನ ನೀಡುವುದು ಹಾಗೂ ಅಲ್ಲಿ ವಸ್ತುಸಂಗ್ರಹಾಲಯ ಸ್ಥಾಪಿಸುವ ಕುರಿತು ಬಲವಾಗಿ ಆಗ್ರಹಿಸಿದ್ದರು.

ಮಡಿಕೇರಿ ಅರಮನೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಮನಗಂಡು, ಯದುವೀರ್ ಒಡೆಯರ್ ಅವರು ಈ ವಿಷಯವನ್ನು ಕೇಂದ್ರ ಸರ್ಕಾರ ಹಾಗೂ ಎಎಸ್‌ಐ ಅಧಿಕಾರಿಗಳೊಂದಿಗೆ ನಿರಂತರವಾಗಿ ಪ್ರಸ್ತಾಪಿಸುತ್ತಾ ಬಂದಿದ್ದರು.

ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ

ಈ ಕುರಿತು ಪ್ರತಿಕ್ರಿಯಿಸಿದ ಸಂಸದ ಯದುವೀರ್ ಒಡೆಯರ್, ಮಡಿಕೇರಿ ಅರಮನೆಯ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಬಹುಕಾಲದ ಬೇಡಿಕೆ ಇದೀಗ ಸಾಕಾರಗೊಳ್ಳುವ ಹಂತ ತಲುಪಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಕೊಡಗಿನ ವೈಭವಯುತ ಇತಿಹಾಸವನ್ನು ಪ್ರತಿಬಿಂಬಿಸುವ ಪ್ರಮುಖ ಪರಂಪರೆ ಮತ್ತು ಪ್ರವಾಸೋದ್ಯಮ ತಾಣವಾಗಿ ಮಡಿಕೇರಿ ಅರಮನೆಯನ್ನು ಅಭಿವೃದ್ಧಿಪಡಿಸುವುದರ ಜತೆಗೆ, ಭವಿಷ್ಯದ ಪೀಳಿಗೆಗಳಿಗೆ ಶೈಕ್ಷಣಿಕ ಮತ್ತು ಪ್ರವಾಸೋದ್ಯಮ ಅವಕಾಶಗಳನ್ನು ಸೃಷ್ಟಿಸಲು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಈ ಬೆಳವಣಿಗೆ ಕರ್ನಾಟಕದ ಪ್ರಮುಖ ಐತಿಹಾಸಿಕ ಪರಂಪರೆ ತಾಣಗಳಲ್ಲಿ ಒಂದಾದ ಮಡಿಕೇರಿ ಅರಮನೆಯ ಸಂರಕ್ಷಣೆಯತ್ತ ಮಹತ್ವದ ಹೆಜ್ಜೆಯಾಗಿದೆ.

12 ಆರೋಪಿಗಳ ವಿರುದ್ಧ ಪ್ರಕರಣ ದಾಖಲು

ವಿಜಯಪುರ: ಭೀಮಾತೀರದಲ್ಲಿ ನಡೆದ ಭೀಕರ ಹತ್ಯೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಚಡಚಣ ಪೊಲೀಸ್ ಠಾಣೆಯಲ್ಲಿ 12 ಜನ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಗೋವಿಂದಪುರದ ಕಲ್ಲನಗೌಡ ಈಶ್ವರಗೌಡ ಪಾಟೀಲ, ಅಪ್ಪುಗೌಡ ಲಗಮನಗೌಡ ಉರ್ಫ್ ಲಕ್ಕನಗೌಡ ಪಾಟೀಲ, ಈಶ್ವರಪ್ಪ ಲಗಮನಗೌಡ ಪಾಟೀಲ, ಪ್ರಕಾಶ ಬಸವರಾಜ ಮಾಸ್ತರ್ ಉರ್ಫ್ ಪಾಟೀಲ, ಪ್ರಶಾಂತ ಉರ್ಫ್ ಪರುಗೌಡ ಬಸವರಾಜ ಮಾಸ್ತರ್ ಉರ್ಫ್ ಪಾಟೀಲ, ಸಿದ್ದರಾಮ ಕಲ್ಲನಗೌಡ ಪಾಟೀಲ, ಲಾಯಪ್ಪ ನೇನಪ್ಪ ಬಿರಾದಾರ, ಚಿದಾನಂದಗೌಡ ನಾಮದೇವ ಕೋಳಿ ಉರ್ಫ್ ಟಕ್ಕಲಕಿ, ಮಾಸಿದ್ದ ಶ್ರೀಮಂತ ಬಿರಾದಾರ, ಶ್ರೀಮಂತ ಶಂಕರಪ್ಪ ಬಿರಾದಾರ, ಶಂಕರಪ್ಪ ಮಾದೇವ ಅರಕೇರಿ, ಅಪ್ಪಾಸಾಹೇಬ ಶಂಕರ ಭೋವಿ ಆರೋಪಿಗಳಾಗಿದ್ದಾರೆ.

ಇಲ್ಲಿನ ಚೈತನ್ಯಕುಮಾರ ದುಂಡಪ್ಪ ನಿರಾಳೆ ಎಂಬುವರ ನೀಡಿದ ದೂರಿನ ಅನ್ವಯ ಪ್ರಕರಣದ ದಾಖಲಿಸಲಾಗಿದೆ.

ಶುಕ್ರವಾರ ತಡರಾತ್ರಿಯೇ ಘಟನಾ ಸ್ಥಳಕ್ಕೆ ಉತ್ತರ ವಲಯದ ಐಜಿಪಿ ಸಂದೀಪ ಪಾಟೀಲ ಹಾಗೂ ಎಸ್‌ಪಿ ಲಕ್ಷ್ಮಣ ನಿಂಬರಗಿ ಭೇಟಿ ನೀಡಿ, ಪರಿಶೀಲಿಸಿದರು. ಜಮೀನಿನಲ್ಲಿ ಎಂಟು ಜನರು ಕೆಲಸ ಮಾಡುವಾಗ ಏಕಾಏಕಿ ಬೈಕ್‌ಗಳಲ್ಲಿ 28 ಜನರು ಆಗಮಿಸಿ ಮಚ್ಚು ಹಾಗೂ ಆಯುಧದಿಂದ ಹಲ್ಲೆಗೈದು ಕೊಲೆ ಮಾಡಿದ್ದಾರೆ. ಇದರಲ್ಲಿ ಆರು ಜನರು ಸ್ಥಳದಲ್ಲೇ ಅಸುನೀಗಿದ್ದಾರೆ. ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ತನಿಖೆಗೆ ತಂಡ ರಚಿಸಲಾಗಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು ಎಂದರು.

ಭೀಕರ ಹತ್ಯೆಗೆ ಪ್ರೇಮ ಪ್ರಕರಣದ ನಂಟು!

ವಿಜಯಪುರ: ಶಾಂತವಾಗಿದ್ದ ಭೀಮಾತೀರದಲ್ಲಿ ಮತ್ತೆ ರಕ್ತದೋಕುಳಿ ಹರಿದು, 6 ಜನರು ಭೀಕರ ಹತ್ಯೆಯಾಗಿರುವ ಘಟನೆ ಹಿಂದೆ ಕೇವಲ ಜಮೀನಿನ ವ್ಯಾಜ್ಯವಷ್ಟೇ ಅಲ್ಲ, ಪ್ರೇಮ ಪ್ರಕರಣವೂ ಕಾರಣವೆನ್ನುವುದು ದುರಂತದ ಸಂಗತಿ.

ಜಿಲ್ಲೆಯ ಚಡಚಣ ತಾಲೂಕಿನ ಗೋವಿಂದಪುರದಲ್ಲಿ ಶುಕ್ರವಾರ ಒಂದೇ ಕುಟುಂಬ 5 ಜನ ಸೇರಿ 6 ಜನರು ಬರ್ಬರ ಹತ್ಯೆಯಾಗಿರುವ ಘಟನೆ ಜಿಲ್ಲೆಯನ್ನೆ ಬೆಚ್ಚಿ ಬೀಳಿಸುವಂತಾಗಿದೆ.

ಇಲ್ಲಿನ ಜಮೀನಿನಲ್ಲೇ ಒಂದೇ ಕುಟುಂಬದ ಐವರು ಸೇರಿದಂತೆ ಆರು ಜನರನ್ನು ಅತ್ಯಂತ ಕ್ರೂರವಾಗಿ ಕೊಚ್ಚಿ ಕೊಲೆ ಮಾಡಲಾಗಿದೆ. ಮೇಲ್ನೋಟಕ್ಕೆ ಇದು ಜಮೀನು ವಿವಾದದಂತೆ ಕಂಡರೂ, ಈ ರಕ್ತಪಾತದ ಹಿಂದೆ 2015ರ ಹಳೆಯ ಪ್ರೇಮ ಪ್ರಕರಣ, ಕಿಡ್ನ್ಯಾಪ್ ಮತ್ತು ಕೊಲೆಯ ದ್ವೇಷದ ಘಟನೆ ಬಯಲಾಗಿದೆ.

ಈ ದ್ವೇಷ, ಹಗೆತನಕ್ಕೆ ಚಡಚಣ ಪಟ್ಟಣದ ದುಂಡಪ್ಪ ನಿರಾಳೆ (65), ಶಿವಪುತ್ರ ನಿರಾಳೆ (58), ಚಂದ್ರಕಾಂತ ನಿರಾಳೆ (55), ರಾಹುಲ್ ನಿರಾಳೆ (25), ಸಮರ್ಥ ನಿರಾಳೆ (23) ಹಾಗೂ ಇವರ ಜೊತೆಗಿದ್ದ ಶಬ್ಬೀರ್ ಅತ್ತಾರ (45) ಬಲಿಯಾದ ದುರ್ದೈವಿಗಳಾಗಿದ್ದು, ಇನ್ನು ಗಾಯಗೊಂಡ ಅರವಿಂದ ಕಟಗೆ, ಸಂದೀಪ ಮಾನೆ ಎಂಬವರನ್ನು ನಗರದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.



ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ಯಾವ ದೇಶವನ್ನು ತ್ಯಾಗ ಮಾಡಬೇಕು?

▸ಚಾಡಿಕೋರ ಮತ್ತು ಜಿಪುಣನಾದ ರಾಜನಿದ್ದ ದೇಶವನ್ನು.

ಒಂದು ದೇಶ ಸುಭಿಕ್ಷವಾಗಿದ್ದರೆ ಆ ದೇಶದಲ್ಲಿ ವಾಸಮಾಡುವ ಜನರು ಕೂಡ ಸಂತೋಷದಿಂದ ಇರುತ್ತಾರೆ. ಇದಕ್ಕೆ ಮುಖ್ಯವಾದ ಕಾರಣ ಆ ವ್ಯವಸ್ಥೆ. ಆ ವ್ಯವಸ್ಥೆಗೆ ಒಬ್ಬ ಮುಖ್ಯಸ್ಥ ಎಂಬುವವನು ಇರುತ್ತಾನೆ. ಸುವ್ಯವಸ್ಥಿತವಾಗಿ ನಡೆಸಲು ಬೇಕಾದ ಎಲ್ಲ ರೀತಿಯ ಅನುಕೂಲತೆಗಳು ಇರುತ್ತವೆ. ಹೀಗಿದ್ದಾಗ ಆ ದೇಶದಲ್ಲಿ ವಾಸ ಮಾಡಬೇಕು. ಆದರೆ ಇಲ್ಲಿ ಕೇಳುವ ಪ್ರಶ್ನೆ ಇದಕ್ಕೆ ವಿಪರೀತವಾಗಿತ್ತು. ಇಂತಹ ವ್ಯವಸ್ಥೆಯನ್ನು ಹಾಳುಮಾಡುವ ವ್ಯಕ್ತಿ ಇದ್ದರೆ, ಅಂತಹ ದೇಶದಲ್ಲಿ ವಾಸಮಾಡಬಾರದು ಎಂಬುದಾಗಿ ಹೇಳುತ್ತದೆ. ಅಂದರೆ ಒಬ್ಬ ಚಾಡಿಕೋರ ಅಥವಾ ಜಿಪುಣನಾದ ವ್ಯಕ್ತಿ ಈ ವ್ಯವಸ್ಥೆಯ ಮಧ್ಯದಲ್ಲಿದ್ದರೆ, ಆಗ ಆ ವ್ಯವಸ್ಥೆಯು ಹಾಳಾಗುತ್ತದೆ. ದೇಶ ಎಷ್ಟು ಸುಭಿಕ್ಷವಾಗಿದ್ದರೂ ಅದು ಮುಂದೆ ಯಾವುದೋ ಕಾಲದಲ್ಲಿ ದುರ್ಭಿಕ್ಷೆಗೆ ಈಡಾಗುತ್ತದೆ. ಹಾಗಾಗಿ ಇಂಥವನು ಇರುವ ದೇಶದಲ್ಲಿ ಇರಬಾರದು; ಅದನ್ನು ತೊರೆಯಬೇಕು ಎಂಬುದಾಗಿ ಈ ಪ್ರಶ್ನೋತ್ತರ ಸಾರುತ್ತದೆ.

ಹಾಗಾದರೆ ಚಾಡಿಕೋರ ಮತ್ತು ಜಿಪುಣ ಎಂದರೇನು? ಇವರಿಂದ ವ್ಯವಸ್ಥೆ ಹೇಗೆ ಹಾಳಾಗುತ್ತದೆ? ಚಾಡಿಕೋರನು ಒಬ್ಬರ ಮಾತನ್ನು ಇನ್ನೊಬ್ಬರಿಗೆ ಹೇಳುತ್ತಾನೆ ಮತ್ತು ಹೀಗೇ ಮಾಡುವುದರ ಮೂಲಕ ಜಗಳ ತಂದು ಇಡುತ್ತಾನೆ. ಆಗ ಅವರಿಬ್ಬರ ಮಧ್ಯದಲ್ಲಿರುವ ಬಾಂಧವ್ಯ ಕೆಡುತ್ತದೆ. ಈ ಚಾಡಿಕೋರನಿಗೆ ಕದ್ದು ಕೇಳುವ ಹಾಗು ಸುಳ್ಳನ್ನು ಸೃಷ್ಟಿಸಿ ಹೇಳುವ ಸ್ವಭಾವವಿರುತ್ತದೆ. ಹೇಳುವ ವಿಷಯಕ್ಕೆ ಸ್ವಲ್ಪ ಖಾರ ಮಸಾಲೆ ಹಾಕಿ ಕೇಳುವವರಿಗೆ ತನ್ನ ಬಗ್ಗೆ ವಿಶೇಷವಾದ ಇನ್ನಷ್ಟು ಕಾಳಜಿ, ಪ್ರೀತಿ ಬರಲಿ ಎಂಬ ರೀತಿಯಲ್ಲಿ ಅವನ ಮಾತುಕತೆಗಳು ಇರುತ್ತವೆ. ಇದರ ಬಗ್ಗೆ ಒಂದು ಸುಭಾಷಿತ ಹೇಗಿದೆ "ಪರೋಕ್ಷಂ ಗುಣಹಂತಾರಂ ಪ್ರತ್ಯಕ್ಷಂ ಪ್ರಿಯವಾದಿನಮ್। ವರ್ಜಯೇತ್ ತಾದೃಶಂ ಮಿತ್ರಂ ವಿಷಕುಂಭಂ ಪಯೋಮುಖಮ್॥" ಒಳ್ಳೆಯದು ಆಗದಂತೆ ವ್ಯವಸ್ಥೆಯ ಹಿಂದುಗಡೆ ಕೆಲಸ ಮಾಡುತ್ತಾನೆ; ಎದುರುಗಡೆ ಪ್ರಿಯವಾಗಿ ಮಾತನಾಡುತ್ತಾನೆ. ಅಂದರೆ 'ಹಾಲಿನ ಮುಖವುಳ್ಳ ಗಡಿಗೆಯಂತೆ' ಈ ವ್ಯಕ್ತಿಯನ್ನು ಹೋಲಿಸಿ ಹೇಳಿದ್ದುಂಟು.

ಇನ್ನೊಬ್ಬ ವ್ಯಕ್ತಿ ಜಿಪುಣ. ಹಣ ಎಷ್ಟೇ ಇದ್ದರೂ ತನಗಾಗಲಿ ಅಥವಾ ಬೇರೆಯವರಿಗಾಗಲಿ ಒಂದು ಕಾಸನ್ನು ತನ್ನಿಂದ ಬಿಚ್ಚಲು ಇಷ್ಟಪಡುವುದಿಲ್ಲ. ಅಂದರೆ ಒಂದಷ್ಟನ್ನು ಕೂಡಿಟ್ಟುಕೊಂಡೇ ಖುಷಿಪಡುವಂತಹ ಸ್ವಭಾವ ಈತನದ್ದು. ಇದರಿಂದ ಹಣವನ್ನು ಹೇಗೆ ಸದ್ವಿನಿಯೋಗ ಮಾಡಬೇಕು ಎಂಬ ಬಗ್ಗೆ ಇವನಿಗೆ ಸ್ವಲ್ಪವೂ ಆಸಕ್ತಿಯೂ ಇಲ್ಲ. ಹೀಗಾಗಿ ವ್ಯವಸ್ಥೆಯಲ್ಲಿ ಈ ಬಗೆಯ ವ್ಯಕ್ತಿ ಇದ್ದರೆ ವ್ಯವಸ್ಥೆಗೆ ಬೇಕಾದ ಯಾವ ಹಣವೂ ಅಥವಾ ಪದಾರ್ಥವೂ ಅಲ್ಲಿ ಬಳಕೆಯಾಗುವುದಿಲ್ಲ. ಆದ್ದರಿಂದ ಜಿಪುಣ ಮತ್ತು ಚಾಡಿಕೋರ ಎಂಬ ಎರಡು ವಿಧವಾದ ವ್ಯಕ್ತಿಗಳು ಇದ್ದಲ್ಲಿ ಆ ದೇಶ ಹಾಳಾದಂತೇ ಎಂಬ ಅರ್ಥ. ಹಾಗಾಗಿ ಅಲ್ಲಿ ವಾಸವಾಗಿದ್ದರೂ ಸುಭಿಕ್ಷ ಇರುವುದಿಲ್ಲ. ಅದನ್ನು ತ್ಯಾಗ ಮಾಡಿ ಬೇರೆ ಕಡೆಗೆ ವಾಸ ಮಾಡುವುದು ಒಳ್ಳೆಯದು ಎಂಬ ಅಭಿಪ್ರಾಯವನ್ನು ಈ ಉತ್ತರ ನೀಡುತ್ತದೆ.



ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಉತ್ತರದತ್ತ ಅರ್ಜುನ: ಭಗದತ್ತನಿತ್ತ ಸಂಗರ

ಧನಪತಿಯಾದ ಕುಬೇರನ ದಿಕ್ಕೆಂದು ಪ್ರಸಿದ್ಧವಾದದ್ದು ಉತ್ತರದಿಕ್ಕು. ಅರ್ಜುನನು ಆ ದಿಕ್ಕನ್ನು, ಹಾಗೆಯೇ ಭೀಮಸೇನನು ಪೂರ್ವದಿಕ್ಕನ್ನು, ಜಯಿಸಿದನು. ಸಹದೇವನು ದಕ್ಷಿಣವನ್ನು ಮತ್ತು ಅಸ್ತ್ರಜ್ಞನಾದ ನಕುಲನು ಪಶ್ಚಿಮದಿಕ್ಕನ್ನು ಜಯಿಸಿದನು. ಇತ್ತ ಧರ್ಮರಾಜನಾದ ಯುಧಿಷ್ಠಿರನು ಮಾತ್ರ ಖಾಂಡವಪ್ರಸ್ಥದ ಮಧ್ಯದಲ್ಲಿಯೇ ಇದ್ದುಕೊಂಡು, ಮಿತ್ರರಿಂದ ಸುತ್ತುವರಿಯಲ್ಪಟ್ಟವನಾಗಿ, ಉತ್ತಮವಾದ ರಾಜಲಕ್ಷ್ಮಿಯಿಂದ ಕಂಗೊಳಿಸಿದನು. ಹಾಗೆಂದು ಸಂಕ್ಷೇಪವಾಗಿ ಹೇಳಿದರೇನು ಬಂತು? ವಿಸ್ತೃತವಾಗಿಯೂ ಹೇಳಬೇಕಲ್ಲವೇ?

ಮೊದಲು ಕುಲಿಂದ ದೇಶದ ಅರಸರನ್ನು ಅರ್ಜುನನು ಮೊಟ್ಟಮೊದಲು ಜಯಿಸಿದನು. ಅದಕ್ಕಾಗಿ ತೀವ್ರವಾದ ಶ್ರಮವೇನೂ ಆತನಿಗೆ ಬೇಕಾಗಲಿಲ್ಲ. ಅವರೊಂದಿಗೆ ಆನರ್ತ, ಕಾಲಕೂಟ ಎಂಬ ರಾಜ್ಯಗಳನ್ನು ಗೆದ್ದನು. ಬಳಿಕ ಸುಮಂಡಲನೆಂಬ ರಾಜನನ್ನು ಗೆದ್ದನು. ಆಮೇಲೆ ಶಾಕಲದ್ವೀಪ ಹಾಗೂ ಸಪ್ತದ್ವೀಪಗಳ ಅರಸರೊಂದಿಗೆ ತುಮುಲವಾದ ಯುದ್ಧವೇ ಆಯಿತು. ಅಲ್ಲೆಲ್ಲಾ ಉತ್ತಮ ಧನುರ್ಧಾರಿಗಳೇ ಇದ್ದರು. ಅವರನ್ನು ಸೋಲಿಸಿದ ಬಳಿಗೆ ಪ್ರಾಗ್ಜ್ಯೋತಿಷಪುರದತ್ತ ಧಾವಿಸಿದನು. ಅಲ್ಲಿನ ರಾಜ ಭಗದತ್ತ. ಆತನಿಗೆ ಕಿರಾತರ ಹಾಗೂ ಚೀನದೇಶದವರ ಸಹಕಾರವಿತ್ತು. ಸಾಗರ ಹಾಗೂ ಅದರ ಬಳಿಯ ಅನೂಪ(ಜೌಗು ಪ್ರದೇಶ)ಗಳ ಮಂದಿಯ ಸಹಕಾರವೂ ಇತ್ತು. ಎಂಟು ದಿನಗಳ ಯುದ್ಧವದು. ಅಷ್ಟು ದಿನ ಸೆಣಸಿದ ಭಗದತ್ತನು ನಗುತ್ತಾ ದಣಿವರಿಯದ ಅರ್ಜುನನಿಗೆ ಹೇಳಿದನು: ಮಹಾಬಾಹೋ ಅರ್ಜುನ, ಸಂಗ್ರಾಮಕ್ಕೆ ಶೋಭೆ ನಿನ್ನ ಪರಾಕ್ರಮ. ಇಂದ್ರಪುತ್ರನೆನಿಸಿದ ನಿನಗೆ ಇದು ಒಪ್ಪುತ್ತದೆ ಬಿಡು! ನಾನು ಸಹ ಇಂದ್ರನ ಮಿತ್ರನೇ. ರಣದಲ್ಲಿ ಶಕ್ರನಿಗೆ ಏನೂ ಕಡಿಮೆಯಿಲ್ಲದವನು. ಆದರೂ ನಿನ್ನ ಮುಂದೆ ನಾ ನಿಲ್ಲಲಾರೆ. ಪಾಂಡುಪುತ್ರನೇ, ನಿನಗೇನು ಬೇಕು ಹೇಳು, ನಿನಗಾಗಿ ನಾನೇನನ್ನು ಮಾಡಲಿ ವತ್ಸನೇ? ನೀನೇನನ್ನು ಹೇಳುವೆಯೋ ಅದನ್ನು ಮಾಡುವೆ ಎಂದನು.

ಆಗ ಅರ್ಜುನನು ಹೇಳಿದನು, ಕುರುವಂಶದ ಅರಸರಲ್ಲಿ ಶ್ರೇಷ್ಠನಾದವನು ಧರ್ಮರಾಜನಾದ ಯುಧಿಷ್ಠಿರ. ಆತನು ಧರ್ಮಜ್ಞ, ಸತ್ಯಸಂಧ. ಆತನು ದೊಡ್ಡಯಜ್ಞವನ್ನು ಮಾಡಿ ವಿಪುಲವಾದ ದಕ್ಷಿಣೆಯನ್ನು ಕೊಡಲಿರುವನು. ಆತನು ಚಕ್ರವರ್ತಿಯಾಗಬೇಕೆಂಬುದು ನನ್ನ ಬಯಕೆ. ಆತನಿಗೆ ನೀನು ಕರವನ್ನೀಯಬೇಕೆಂಬುದೇ ನನ್ನ ಅಪೇಕ್ಷೆ. ನೀನು ನನ್ನ ತಂದೆಯ ಸಖ. ನನ್ನ ವಿಷಯದಲ್ಲೂ ಪ್ರೀತಿಯುಳ್ಳವನು. ಆದ್ದರಿಂದ ನಾನು ನಿನಗೆ ಅಪ್ಪಣೆ ಮಾಡಲಾರೆ. ಆದುದರಿಂದ ಪ್ರೀತಿಪೂರ್ವಕವಾಗಿಯೇ ಕರವನ್ನು ಕೊಡೋಣವಾಗಲಿ ಎಂದನು. ಅದಕ್ಕೆ ಭಗದತ್ತನು, ಕುಂತಿಪುತ್ರನೇ ನನಗೆ ನೀನೆಂತೊ ಅಂತೆಯೇ ಯುಧಿಷ್ಠಿರನೂ. ಅದೆಲ್ಲವನ್ನೂ ಮಾಡುತ್ತೇನೆ, ಹೇಳು ಎಂದನು. ಆತನು ಹಾಗೆ ಹೇಳಲು ಅರ್ಜುನನು, ಇಷ್ಟರಿಂದಲೇ ನನಗೆಲ್ಲವನ್ನೂ ನೀ ಮಾಡಿದಂತೆ. ನನಗೆ ಅನುಮತಿಯನ್ನು ಕೊಡು, ನಾನಿನ್ನು ಹೊರಡಬೇಕು ಎಂದನು.

ಹೀಗೆ ಅವನನ್ನು ಜಯಿಸಿ ಅರ್ಜುನನು ಉತ್ತರದಿಕ್ಕಿನಲ್ಲಿ ಮತ್ತೂ ಮುಂದುವರೆದನು. ಅಂತರ್ಗಿರಿ, ಬಹಿರ್ಗಿರಿ, ಉಪಗಿರಿ ಎಂಬ ಭೂಪ್ರದೇಶಗಳನ್ನು ಜಯಿಸಿದನು. ಅಲ್ಲಿದ್ದ ಪರ್ವತಗಳನ್ನೂ, ಪರ್ವತವಾಸಿಗಳನ್ನೂ ತನಗೆ ಅಧೀನರನ್ನಾಗಿ ಮಾಡಿಕೊಂಡು ಅವರಿಂದ ಮಾಡಬೇಕಾದ ವಸೂಲಿಯನ್ನು ಮಾಡಿದನು. ಹಾಗೆ ಮಾಡಿಯೂ ಅವರನ್ನು ಪ್ರಸನ್ನಗೊಳಿಸಿ, ಅವರೆಲ್ಲರೊಂದಿಗೆ ಮುಂದಿನ ರಾಜ್ಯವಾದ ಉಲೂಕದ ರಾಜನಾದ ಬೃಹಂತನ ಮೇಲೇರಿಹೋದನು. ಆತನು ಹೋಗುವಾಗ ಮೃದಂಗದ ನಾದವೇನು, ರಥನೇಮಿಯ ನಾದವೇನು, ಗಜಗಳ ಗದ್ದಲಗಳೇನು! ಇವೆಲ್ಲವುಗಳಿಂದ ಭೂಮಿಯೇ ನಡುಗಿತು.

ಹೀಗೊಂದು ಮಸಾಲೆಪುರಿ ಆರ್ಡರ್ ಪ್ರಕರಣವು

ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com



ನಿಮ್ಮಂತೆಯೇ ನಾನೂ 'ಒಂದು ಪ್ಲೇಟ್ ಮಸಾಲಾ ಪುರಿ' ಎಂದೆ ಅಷ್ಟೆ.

'ಸ್ವೀಟಾ, ಖಾರಾನಾ?'

'ಖಾರ ಇರಲಿ.'

'ಮೆಣಸಿನ ಖಾರವೋ, ಮೆಣಸಿನಕಾಯಿಯ ಖಾರವೋ?'

'ಮೆಣಸಿನಕಾಯಿಯದು.'

'ಹಸಿಮೆಣಸಿನಕಾಯಿಯದೋ, ಒಣಮೆಣಸಿನಕಾಯಿಯದೋ?'

ಒಂದು ಬದಲಾವಣೆ ಇರಲೆಂದು 'ಒಣಮೆಣಸಿನಕಾಯಿಯದು' ಎಂದೆ.

'ಗುಂಟೂರಿನದೋ, ಬ್ಯಾಡಗಿಯದೋ?'

'ಬ್ಯಾಡಗಿ.'

'ತೊಟ್ಟು ಬಿಡಿಸಿರುವುದೋ, ತೊಟ್ಟು ಇರುವುದೋ?'

'ಏನು ವ್ಯತ್ಯಾಸ?'

'ತೊಟ್ಟಿನ ಸಮೇತ ಇದ್ದರೆ ತಿನ್ನುವಾಗ ಗಂಟಲಿನಲ್ಲಿ ಸಿಕ್ಕಿಕೊಳ್ಳಬಹುದು.'

'ತೊಟ್ಟಿಲ್ಲದ್ದು.'

'ಜಜ್ಜಿದ್ದೋ, ಹೆಚ್ಚಿದ್ದೋ?'

'ಏನು ವ್ಯತ್ಯಾಸ?'

'ಹೆಚ್ಚಿದ್ದು ಹೆಚ್ಚಾದರೆ ಪಕ್ಕ ಇಡಬಹುದು. ಜಜ್ಜಿದ್ದು ತಿಂದೇ ಅನುಭವಿಸಬೇಕಾದದ್ದು.'

'ಹೆಚ್ಚಿದ್ದು.'

'ಹೆಚ್ಚಿದ್ದನ್ನು ಹುರಿದು ಕೊಡಲೋ, ಹಸಿಯಾಗಿ ಕೊಡಲೋ?'

ನನಗೆ ಆ ಮಾಣಿಯನ್ನು ಹುರಿದುಬಿಡುವಷ್ಟು ಕೋಪ ಉಕ್ಕಿತು. 'ಸ್ವಂತ ತೀರ್ಮಾನ ತೆಗೆದುಕೊಳ್ಳಲು ಆಗದೇನು?' ಎಂದು ಗುಡುಗಿದೆ.

'ನಮ್ಮಿಷ್ಟದಂತೆ ಕೊಡಲು ಇದು ರೋಡ್ ಸೈಡ್ ಚ್ಯಾಟ್ ಸ್ಟಾಲ್ ಅಲ್ಲ ಸಾರ್. ಫೈವ್ ಸ್ಟಾರ್ ಹೊಟೇಲ್' ಎಂದು ಎದೆಯುಬ್ಬಿಸಿದ. ಅವನು ತೊಟ್ಟಿದ್ದ ಸೂಟ್ ನನ್ನ ಮದುವೆಯ ಸೂಟ್‌ಗಿಂತ ಸುಪೀರಿಯರ್ ಕ್ವಾಲಿಟಿಯದಾಗಿತ್ತು. ಅವನ ಅಂಗಿಯ ಬಿಳುಪು ನಿರ್ಮಾ ಜಾಹೀರಾತಿನಿಂದ ಎತ್ತಿ ತಂದಂತಿತ್ತು. ಬಂದ ಗಿರಾಕಿಗಳೆಡೆಗೆ ಅವನು ಹರಿಸುತ್ತಿದ್ದ ನೋಟವು ಮೈಲಿಗೆಯನ್ನು ಕಂಡ ಮಡಿವಂತರ ನೋಟದಷ್ಟೇ ತೀವ್ರವಾಗಿತ್ತು.

'ಒಣಮೆಣಸಿನ ಬಾಬ್ತೇ ಬೇಡ. ಹಸಿಮೆಣಸಿನಕಾಯಿ ಹಾಕು' ಎಂದೆ.

'ಚಿಕ್ಕಬಳ್ಳಾಪುರದ್ದೋ, ವಿಯಟ್ನಾಂದೋ?'

ವಿಯಟ್ನಾಂ ಮೆಣಸಿನಕಾಯಿಯನ್ನು ಒಮ್ಮೆ ಆರಿಸಿಕೊಂಡಿದ್ದೆ. ಒಂದು ಪಾವು ರವೆಯ ಉಪ್ಪಿಟ್ಟಿಗೆ ಹದಿನೈದು ಮೆಣಸಿನಕಾಯಿಗಳೆಂದು ಬಾಲ್ಯದಲ್ಲಿ ನನ್ನ ಅಮ್ಮ ಹೇಳಿಕೊಟ್ಟಿದ್ದುದನ್ನು ಅನ್ವಯಿಸಿದ್ದೆ. ಕರುನಾಡಿನ ಮಾಮೂಲಿ 'ಅಹಿಂಸಾವಾದಿ' ಅಲ್ಪಖಾರಿಯ ಲೆಕ್ಕದಲ್ಲಿ ವಿಯಟ್ನಾಮಿಯನ್ನು ಹಾಕಿದ್ದು ತಪ್ಪಾಯಿತೆಂದು ಮೊದಲ ತುತ್ತಿನಲ್ಲೇ ತಿಳಿಯಿತು. ಆ ಖಾರದ ಉಗ್ರತೆಗೆ 'ಕಿವಿ ಮೂಗುಗಳಿಂದ ಹೊಗೆ ಹೊರಟಿತು' ಎಂದು ಕಂಡ ಮೂಲಗಳು ತಿಳಿಸಿದವು. ವಿದೇಶದಲ್ಲಿ ಅಷ್ಟು ಮೆಣಸಿನಕಾಯಿಗಳನ್ನು ಬಳಸಿ ಅಡುಗೆ ಮಾಡಿ, ಹಾಗೆ ದೇಹದಿಂದ ಹೊಗೆ ಹೊರಟರೆ ಫೈರ್ ಅಲಾರ್ಮ್ ಮೊಳಗುವುದೋ ಏನೋ.

'ಸ್ವದೇಶಿ ಮೆಣಸಿನಕಾಯಿಗೆ ಜೈ. ಸ್ಥಳೀಯ ರೈತರಿಗೆ ಜಯವಾಗಲಿ' ಎಂದೆ. ಮಿರುಗುಸೂಟಿನವ ಸಮ್ಮತಿಸೂಚಕ ತಲೆಯಾಡಿಸಿ, 'ಉದ್ದದ್ದೋ, ಗಿಡ್ಡದ್ದೋ?' ಎಂದ.

'ಉದ್ದ ಮೆಣಸಿನಕಾಯಿಯನ್ನು ಸಕ್ಕರೆಯ ಬದಲಿಗೆ ಬಳಸಬಹುದು ಎನಿಸುತ್ತದೆ' ಎಂದಿದ್ದ ನನ್ನ ಆಂಧ್ರದ ಗೆಳೆಯ. ಚೋಟುದ್ದ ಮೆಣಸಿನಕಾಯಿಯ ಖಾರದ ಮುಂದೆ ಉದ್ದ ಮೆಣಸಿನಕಾಯಿಯದು ವೈಭವ್ ಸೂರ್ಯವಂಶಿಯ ಬ್ಯಾಟಿಂಗಿನ ಮುಂದೆ ಮಹಮದ್ ಸಿರಾಜನ ಬ್ಯಾಟಿಂಗಿನಷ್ಟೇ ಸಪ್ಪೆ.

'ಚೋಟ್ಟೆಣ್ಸಿನ್ಕಾಯಿ' ಎಂದೆ.

'ಗುಡ್ ಚಾಯ್ಸ್' ಎಂದ ನಿರ್ಮಾಂಗಿ, 'ಹೆಚ್ಚಿದ್ದೋ, ಚಚ್ಚಿದ್ದೋ?'

ನನಗೆ ಅವನ ಪ್ರಶ್ನೆಯ ವಿಧ ಇಷ್ಟವಾಯಿತು. ಬೇರೆಯವರಾದರೆ 'ಕಟ್ ಮಾಡಿದ್ದೋ, smash ಮಾಡಿದ್ದೋ?' ಎನ್ನುತ್ತಿದ್ದರು. ಬಡಪಾಯಿಗಳಿಗೆ Mash ಮತ್ತು Smash ಪದಗಳ ಅರ್ಥವ್ಯತ್ಯಾಸವೂ ತಿಳಿದಿರುವುದಿಲ್ಲ. 'ಆಲೂಗಡ್ಡೆಯನ್ನು smash ಮಾಡಿ' ಎನ್ನುವ ಟಿವಿ ರಸಪ್ರವೀಣೆಯರ ನುಡಿಯನ್ನು ಕೇಳಿದಾಗಲೆಲ್ಲ ಆಲೂಗಡ್ಡೆಯನ್ನು ತೆಗೆದುಕೊಂಡು ಅವರ ತಲೆಯ ಮೇಲೆಯೇ ಅಪ್ಪಳಿಸಬೇಕೆನಿಸಿದೆ. ಮ್ಯಾಷ್ ಮಾಡುವುದು ಎಂದರೆ ಗೆಡ್ಡೆಗಳನ್ನು ಒತ್ತಿ, ಹಿಸುಕಿ ಪೇಸ್ಟ್ ಮಟ್ಟಕ್ಕೆ ಮಾಡಿಕೊಳ್ಳುವುದು, ಸ್ಮ್ಯಾಷ್ ಮಾಡುವುದು ಎಂದರೆ ಭಾರವಾದ ವಸ್ತುವಿನಿಂದ ಜಜ್ಜಿ ಪುಡಿಪುಡಿ ಮಾಡುವುದು ಎಂದು ಈ ಮೊದ್ದುಗಿಣಿಗಳಿಗೆ ಅರ್ಥ ಮಾಡಿಸುವುದೂ ಕಷ್ಟವೇ.

'ಮಸಾಲೆಪುರಿಗೆ ಹಸಿರು ಬಟಾಣಿಯೋ, ಬಿಳಿ ಬಟಾಣಿಯೋ?'

ಬಿಳಿ ಬಟಾಣಿ ಎಂದರೆ ಕಾಬೂಲ್ ಕಡಲೆ ಅಥವಾ ಚೆನ್ನಾ. ಚೆನ್ನಾ ನನ್ನ ನಾಲಿಗೆಗೆ ಚೆನ್ನ ಎನಿಸಿಲ್ಲ. 'ಹಸಿರು ಕಡಲೆ' ಎಂದೆ.

'ಪೌಡರ್ ಕಟ್ಟಿದ ಹಸಿರು ಬಟಾಣಿಯೋ, ಸಹಜವಾಗಿ ಹಸಿರಾಗಿರುವುದೋ?'

'ಫೈವ್ ಸ್ಟಾರ್ ಹೊಟೇಲಿನಲ್ಲಿ ಒಣಗಿದ ಬಟಾಣಿಗೆ ಬಣ್ಣ ಕಟ್ಟಿ ಬಳಸುವರೇನು? ನಿಮ್ಮಲ್ಲೂ ಕಲಬೆರಕೆಯೆ?'

'ಇಲ್ಲ. ಆಪ್ಷನ್ ಕೊಟ್ಟೆನಷ್ಟೆ. ಪೌಡರ್ ಕಟ್ಟಿದ್ದನ್ನು ನೀವು ಕೇಳಿದ್ದಿದ್ದರೆ 'ವಿ ಆರ್ ಸಾರಿ ಸರ್. ವಿ ಡು ನಾಟ್ ಪ್ರೊವೈಡ್ ಸಚ್ ಲೋ ಕ್ವಾಲಿಟಿ ಸ್ಟಫ್' ಎನ್ನುತ್ತಿದ್ದೆ. ನಿಮ್ಮ ಆಯ್ಕೆ ಸೂಕ್ತವಾಗಿದೆ. ಅಭಿನಂದನೆಗಳು. ಬಟಾಣಿ ಪೂರ್ಣವಾಗಿ ಬೇಯಲೋ, ಅರ್ಧ ಬೇಯಲೋ?'

'ಹಾಫ್ ಬೇಕ್ಡ್' ಎಂದೆ. ಪೂರ್ಣವಾಗಿ ಬೆಂದರೆ ಸತ್ವಹೀನವಾಗುವುದೆಂಬ ಅಭಿಪ್ರಾಯವು ವೈರಲ್ ಆಗಿದೆಯಲ್ಲ!

'ಮೆಣಸಿನಕಾಯಿ ಆಯಿತು, ಬಟಾಣಿ ಆಯಿತು. ಈರುಳ್ಳಿ ಬೇಕೋ ಅಥವಾ ಜೈನ್ ಮಸಾಲೆಪುರಿಯೋ?'

ಈರುಳ್ಳಿಯನ್ನು ಹೆಚ್ಚುವಾಗ ಕಂಡಾಗ ನನಗೆ ಕಣ್ಣಲ್ಲಿ ನೀರು; ಅದರ ರುಚಿಯನ್ನು ನೆನೆದಾಗ ನಾಲಿಗೆಯಲ್ಲಿ ನೀರು. ಈರುಳ್ಳಿಯ ಮಧ್ಯಭಾಗದ 'ಫಾಟ್ ಸೆಕ್ಷನ್' ನನಗೆ ಬಹಳ ಇಷ್ಟ. ಆ ಫಾಟು ಕಣ್ಣಲ್ಲಿ ನೀರು ಬರಿಸುವಷ್ಟಿದ್ದರೆ ಮತ್ತೂ ಇಷ್ಟ.

'ಸೆಮಿ ಜೈನ್. ಬೆಳ್ಳುಳ್ಳಿ ಬೇಡ, ಈರುಳ್ಳಿ ಇರಲಿ.'

'ನಾವು ಬಳಸುವ ಪೇಸ್ಟಿನಲ್ಲಿ ಬೆಳ್ಳುಳ್ಳಿ ಇರತ್ತೆ.'

'ಪೇಸ್ಟ್ ಬಳಸುವುದನ್ನು ಹೇಳಬೇಡಿ. ತಿಳಿಯದೆ ಮಾಡಿದ ಪಾಪ ಪಾಪವಲ್ಲ' ಎಂದೆ.

'ಬೆಳ್ಳುಳ್ಳಿ ತಿನ್ನುವುದು ಪಾಪವೇನು?'

'ತಿಂದವರು ಬಾಯಿ ಬಿಟ್ಟಾಗ ಅವರಿಂದ ಹೊರಡುವ ಬಾಯ್ವಾಸನೆಗೆ ಹತ್ತಿರ ಸುಳಿದವರನ್ನು ಕಂಡು 'ಅಯ್ಯೋ ಪಾಪ!' ಎನಿಸುವುದಲ್ಲ, ಆ ವಿಧದಲ್ಲಿ ಪಾಪ!'

'ಈರುಳ್ಳಿಯ ವಾಸನೆ ಶ್ರೀಗಂಧದಂತಿರುವುದೇ? ಓಹ್! ಕ್ಷಮಿಸಿ. ಮಾಣಿಗಳು ಗಿರಾಕಿಗಳೊಡನೆ ವಾದ ಮಾಡುವಂತಿಲ್ಲ. ಮ್ಯಾನೇಜರ್‌ಗೆ ಹೇಳಬೇಡಿ ಪ್ಲೀಸ್!' ಗೋಗರೆದ ಗರಿಸೂಟಿನವ. ಮಾಣಿಯಾದರೇನು, ಸಾಫ್ಟ್‌ವೇರಿಯಾದರೇನು, ಜಾಬ್ ಇನ್‌ಸೆಕ್ಯುರಿಟಿ ಜಾತ್ಯತೀತ, ಉದ್ಯೋಗಾತೀತ.

'ಈರುಳ್ಳಿ ಯಾವುದಿರಲಿ? ಬಿಳಿಯದೋ, ಕೆಂಪಾದುದೋ?'

'ಬಿಳಿ ಈರುಳ್ಳಿ?'

'ಹೂಂ. ಫಾರಿನ್ ಪ್ರಾಡಕ್ಟ್.'

ನೆನಪಾಯಿತು. ಮೆಲ್ಬೋರ್ನಿನ ತರಕಾರಿ ಅಂಗಡಿಯಲ್ಲಿ ಬಿಳಿ, ಅರೆಬಿಳಿ, ಒರಟುಕೆಂಪು, ನುಣುಪುಕೆಂಪು ವಿಧದ ಈರುಳ್ಳಿಗಳನ್ನು ಕಂಡಿದ್ದೆ. ನಮ್ಮ ಕರ್ನಾಟಕದ ಈರುಳ್ಳಿಗಳ ರುಚಿಯ ಮುಂದೆ ಆ ನಾಲ್ಕನ್ನೂ ನಿವಾಳಿಸಿ ಎಸೆಯಬೇಕಾಗಿತ್ತು.

'ನಮ್ಮದೇ, ಅಸಲಿ ಕರ್ನಾಟಕದ್ದೇ, ಈರುಳ್ಳಿಯನ್ನು ಬಳಸಿರಿ. ರೆಡ್ ಈಸ್ ಬ್ಯೂಟಿಫುಲ್' ಎಂದೆ.

'ವೆರಿ ಟ್ರೂ ಸರ್' ಎಂದ ಅವನು ಹೊಟೇಲ್ ಲೇಬರ್ ಯೂನಿಯನ್ನಿನ ಸದಸ್ಯನೆಂದು ನಂತರ ತಿಳಿಯಿತು. ಕಮ್ಯುನಿಷ್ಟರಿಗೆ ಕೆಂಪು ಪ್ರಿಯವೇ.

'ಈರುಳ್ಳಿ ದೊಡ್ಡ ಗಾತ್ರದ್ದೋ, ಬಳ್ಳಾರಿ ಈರುಳ್ಳಿಯೋ?'

'ಹೆಚ್ಚಿ ಕೊಡುವಿರಲ್ಲ, ತರಿದ ಈರುಳ್ಳಿಯ ಒರಿಜಿನಲ್ ಗಾತ್ರ ಯಾವುದಿದ್ದರೂ ಒಂದೇ!'

'ಫೈವ್ ಸ್ಟಾರ್ ಹೊಟೇಲ್ಸ್ ಆರ್ ಸ್ಪೆಸಿಫಿಕ್ ಸರ್. ಪ್ರತಿಯೊಂದನ್ನೂ ವಿವರಿಸಿ, ಅರ್ಥಗೊಳಿಸಿಯೇ ಆರ್ಡರ್ ಪಡೆಯಬೇಕೆಂದು ಆರ್ಡರ್ ಆಗಿದೆ.'

'ಬಳ್ಳಾರಿ ಬೇಡ. ಮಾಮೂಲಿ ಸೈಜಿನದು.'

'ನಿಮಗೆ ಮಸಾಲೆಪುರಿಯನ್ನು ಕೊಡುವುದಕ್ಕೆ ಮುಂಚೆಯೂ ಒಂದು ಪ್ಲೇಟಿನಲ್ಲಿ ಈರುಳ್ಳಿ, ಸೌತೆಕಾಯಿಗಳನ್ನು ಕೊಡುತ್ತೇವೆ. ಅದು ನಮ್ಮ ಹೊಟೇಲಿನ ಪದ್ಧತಿ. ಆ ಈರುಳ್ಳಿಯನ್ನು ಶಂಖದಂತೆ ಹೆಚ್ಚಬೇಕೋ, ಚಕ್ರದಂತೆ ಹೆಚ್ಚಬೇಕೋ?'

'ಏನು ವ್ಯತ್ಯಾಸ?'

'ನೀವು ಪ್ರಗತಿಶೀಲರಾದರೆ ಚಕ್ರವನ್ನು ಆಯ್ಕೆ ಮಾಡಿ. ಯಾರು ಏನೇ ಮಾಡಿದರೂ ವಿರೋಧ ವ್ಯಕ್ತಪಡಿಸುವ ವ್ಯಕ್ತಿತ್ವದವರಾದರೆ ಶಂಖ ಹೊಡೆದುಕೊಳ್ಳುವುದನ್ನು ಪ್ರತಿಪಾದಿಸಲು ಶಂಖವನ್ನು ಆಯ್ಕೆ ಮಾಡಿ.'

ಮಿರುಗುಬೂಟಿನವ ಹೀಗೆಯೇ ಕೊತ್ತಂಬರಿ (ನಾಟಿಯೋ, ಫಾರಮ್ನೋ), ಉಪ್ಪು (ರಾಕ್ ಸಾಲ್ಟೋ, ಸೀ ಸಾಲ್ಟೋ; ಕಲ್ಲುಪ್ಪೋ, ಪುಡಿಯುಪ್ಪೋ), ಹುಳಿ (ನಿಂಬೆಯದೋ, ಹುಣಿಸೆಯದೋ; ಗಜನಿಂಬೆಯದೋ, ಪುಟ್ಟನಿಂಬೆಯದೋ) ಮೊದಲಾದ ವಿವರಗಳನ್ನು ಪಡೆಯುವ ಹೊತ್ತಿಗೆ ನನಗೆ ಸಾಕುಸಾಕಾಗಿತ್ತು.

ಕಡೆಗೂ ಆರ್ಡರ್ ಪಡೆದ ಮಾಣಿ 'ಷೆಫ್ಸ್ ಪ್ಯಾಲೇಸ್'ನತ್ತ ನಡೆದ. ರುಚಿರುಚಿಯಾದ ಮಸಾಲೆಪುರಿಯ ಕನಸು ಕಾಣುತ್ತಾ ನಾನು ಮೆತ್ತನೆಯ ಸೀಟಿಗೆ ಒರಗಿದೆ.

ಅರ್ಧಗಂಟೆಯ ನಂತರ ಮಾಣಿ ಅನೇಕ ಪುಟ್ಟ ಪ್ಲೇಟುಗಳನ್ನು ದೊಡ್ಡ ತಟ್ಟೆಯಲ್ಲಿ ಹಿಡಿದು ತಂದ. ಚೋಟ್ಟೆಣ್ಸಿನ್ಕಾಯಿ, ಪುಟ್ಟನಿಂಬೆ, ನಾಟಿ ಕೊತ್ತಂಬರಿ, ಬೆಂದ ಬಟಾಣಿ ಮೊದಲಾದ ಐಟಂಗಳನ್ನು ಹೊತ್ತ ಪ್ಲೇಟುಗಳು ನನ್ನ ಮೇಜಿನಷ್ಟು ಉದ್ದಗಲಕ್ಕೂ ಹರಡಿ ಕುಳಿತವು.

'ನಿಮಗೆ ಬೇಕಾದ ಪ್ರಮಾಣದಲ್ಲಿ ಮಿಕ್ಸ್ ಮಾಡಿಕೊಳ್ಳಿ ಸಾರ್. ಹ್ಯಾಪಿ ಈಟಿಂಗ್' ಎನ್ನುತ್ತಾ ಮರೆಯಾದ ಮಾಣಿ. ◆

ನಾಯಿಗೊಂದು ಕಾಲ, ಜಿರಳೆಗೊಂದು ಕಾಲ

ವರ್ತಮಾನಕ್ಕಿಂತ ಹಳೆಯ ಇತಿಹಾಸ ತೆಗೆದು ಅದರ ಬಗ್ಗೆ ಹುಚ್ಚರಂತೆ ಪ್ರಶ್ನಿಸುವುದು, ನಮ್ಮವರ ಬಗ್ಗೆಯೇ ನಮಗೆ ನಕಾರಾತ್ಮಕತೆ ಭಾವನೆ ಮೂಡಿಸುವುದು ಹಲವರ ಉದ್ದೇಶ.

▸ ಪೃಥ್ವಿರಾಜ್ ಕುಲಕರ್ಣಿ



ಖ್ಯಾತ ಕವಿ ವಿಲಿಯಂ ಶೇಕ್ಸ್‌ಪಿಯರ್ ತನ್ನ ಹ್ಯಾಮ್ಲೆಟ್ ನಾಟಕದಲ್ಲಿ 'Every dog has its day' ಎಂಬ ಹೇಳಿಕೆಯಿಟ್ಟ. ನಂದೂ ಒಂದು ಸಮಯ ಬರುತ್ತೆ ಎಂಬ ಆತ್ಮವಿಶ್ವಾಸದಲ್ಲಿದ್ದ ಜನರ ಹೃದಯಕ್ಕೆ ಈ ಹೇಳಿಕೆ ಗಾಢವಾಗಿ ಅಂಟಿಕೊಂಡಿತು. ಜಗತ್ತಿನ ಯಾವುದೇ ಪ್ರಾಣಿಯಾಗಿರಲಿ, ಅದರದ್ದೂ ಒಂದು ಸಮಯ ಬರುತ್ತೆ. ಆಗ ಅದೂ ಮಿಂಚುತ್ತೆ ಎಂಬುದು ಇದರ ಅರ್ಥ. ಭಾರತದಲ್ಲಿ ಆಧುನಿಕ ಸಿನಿಮಾ ಬರಹಗಾರರು ಇದೇ ಹೇಳಿಕೆಯನ್ನು ಬದಲಾಯಿಸಿ 'ಹರ್ ಕುತ್ತೆ ಕಾ ದಿನ್ ಆತಾ ಹೆ' ಎಂಬ ಡೈಲಾಗ್ ಚಾಲ್ತಿಗೆ ತಂದರು. ಈಗಲೂ ನಾವು ನಮ್ಮ ಜೀವನದಲ್ಲಿ ಯಾರಾದರೂ ಅಪಮಾನ ಮಾಡಿದರೆ, ಅವರಿಗೆ 'ನಂದೂ ಸಮಯ ಬರುತ್ತೆ ಆಗಲೇ ಉತ್ತರಿಸುತ್ತೇನೆ' ಎಂದು ಹೇಳಿ ಬರುವ ವಾಡಿಕೆ ಇಟ್ಟುಕೊಂಡಿದ್ದೇವೆ.

ದೇಶದ ರಾಜಕಾರಣ ನೋಡಿದರೆ, ಇದೇ ಹೇಳಿಕೆ ನೆನಪಿಗೆ ಬರುತ್ತದೆ. ಎಲ್ಲರಿಗೂ ಒಂದು ಕಾಲವೆಂಬಂತೆ ಇಲ್ಲದ ಜನರ ಕಾಲ ಕೂಡಿ ಬರುತ್ತಿದೆ. ಒಂದು ಕಾಲದಲ್ಲಿ ರಾಜಕೀಯ ವಿಶ್ಲೇಷಣೆಗಾಗಿ ಜನರು ಖ್ಯಾತ ಪತ್ರಕರ್ತರ ಅಂಕಣಗಳಿಗಾಗಿ ಕಾಯುತ್ತಿದ್ದರು. ಆದರೆ ದುರದೃಷ್ಟವಶಾತ್ ಈಗಂತೂ ವಿದೇಶಿ ಯೂಟ್ಯೂಬರ್‌ಗಳು ಸೇರಿದಂತೆ ಖಾಲಿ ಕೂತ ಜನರಿಂದ ರಾಜಕೀಯ ವಿಶ್ಲೇಷಣೆ ಕೇಳುವ ಪರಿಸ್ಥಿತಿ ಭಾರತಕ್ಕೆ ಬಂದಿದೆ.

ಆಮ್ ಆದ್ಮಿ ಪಕ್ಷದಲ್ಲಿದ್ದು ವಿಫಲಗೊಂಡ ಅಭಿಜಿತ್ ದಿಪ್ಕೆ ಎಂಬ ಯುವಕ ದೇಶದಲ್ಲಿ ಸಂಚಲನ ಹುಟ್ಟುಹಾಕಿದ್ದು, ಜಿರಳೆ ಪಕ್ಷವೆಂಬ ನಾಟಕ ಕಂಪನಿ ಶುರು ಮಾಡಿದ್ದಾರೆ. ಪಕ್ಷ ಬಂದಿದ್ದೇ ತಡ ಸಾಮಾಜಿಕ ಜಾಲತಾಣದಲ್ಲಿ ಟ್ರೆಂಡಿಂಗ್. ಮಿಲಿಯನ್‌ಗಟ್ಟಲೇ ಹಿಂಬಾಲಕರು!

ವಾಸ್ತವವಾಗಿ ಸಾಮಾಜಿಕ ಜಾಲತಾಣದಿಂದ ಸಿಗುವ ಹಣದಿಂದ ಜೀವನ ನಡೆಸುವ ಜನರ ಸಂಖ್ಯೆ ನಮ್ಮ ದೇಶದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಈ ಹೆಚ್ಚಾಗುತ್ತಿರುವ ಸಂಖ್ಯೆ ಜಾಲತಾಣ ಮಾರುಕಟ್ಟೆಯಲ್ಲಿ ಬಾರೀ ಸ್ಪರ್ಧೆ ಹುಟ್ಟುಹಾಕುತ್ತಿದೆ. ಕಾಳಸಂತೆಯಂತೆ ಜಾಲತಾಣ ಮಾರುಕಟ್ಟೆಯಲ್ಲಿ ಎದ್ದು ಬರುವುದು ಸುಲಭದ ಕೆಲಸವೇನಲ್ಲ. ಅಲ್ಲಿ ಎದ್ದು ಬಂದರೆ ಸಾಕು ಬಂದವನಿಗೆ ಕಿಸೆ ತುಂಬ ದುಡ್ಡು, ಕಂಟೆಂಟ್ ತುಂಬ ಜಾಹೀರಾತುಗಳು ಸಿಗುತ್ತವೆ. ಕೆರಿಯರ್ ವಿಚಾರಕ್ಕೆ ಬಂದರೆ ಜೆನ್-ಝಿಗಳ ಜಾಲತಾಣ ಪ್ರೀತಿ ಅವರಿಗೆ ಜೀವನಕ್ಕೆ ಬೇಕಾದಷ್ಟು ದುಡ್ಡು ನೀಡುತ್ತದೆ. ಯೂಟ್ಯೂಬ್‌ನಂತಹ ಮಾಧ್ಯಮಗಳು ಗೋಲ್ಡನ್ ಪ್ಲೇಟ್, ಸಿಲ್ವರ್ ಪ್ಲೇಟ್ ಮತ್ತು ಡೈಮಂಡ್ ಪ್ಲೇಟ್ ಎಂಬ ದೊಡ್ಡ ಗೌರವಗಳನ್ನೂ ನೀಡುತ್ತವೆ. ಜಾಲತಾಣ ನೀಡುವ ಹತ್ತಾರು ಸೌಲಭ್ಯಗಳು ಇನ್‌ಫ್ಲುಯೆನ್ಸರ್‌ಗಳ ರಂಗೇರಿಸಿವೆ. ಪರಿಣಾಮ ನಮ್ಮ ದೇಶದ ಯುವಕರಿಗೆ ಇನ್‌ಫ್ಲುಯೆನ್ಸರ್ ಆಗುವ ಮದವೇರಿದೆ. ಯಾವ ಮಟ್ಟದಲ್ಲೆಂದರೆ ಸ್ವಂತ ದೇಶ, ಸ್ವಂತ ಧರ್ಮ ವಿರುದ್ಧ ಮಾತನಾಡುವಷ್ಟು, ಸುಳ್ಳುಗಳನ್ನು ಬೊಗಳುವಷ್ಟು, ಮತ್ತೊಬ್ಬರ ಪ್ರಯತ್ನಗಳಿಗೆ ಹೆಸರಿಡುವಷ್ಟು ಮತ್ತು ತಪ್ಪೆಂದು ಗೊತ್ತಿದ್ದರೂ ಮಾತನಾಡಿ ಬಳಿಕ ಕ್ಷಮೆ ಕೇಳುವಷ್ಟು!

ಜಿರಳೆ ಪಕ್ಷದಿಂದ ಆಗುತ್ತಿರುವ ಪಿತೂರಿಯೂ ಇದೆ. ಜಿರಳೆ ಪಕ್ಷ ಯಾವುದೋ ಹೋರಾಟಕ್ಕಾಗಿ ಹುಟ್ಟಿದ ಸಂಘಟನೆಯಲ್ಲ. ಅಥವಾ ಯುವಕರ ಏಳಿಗೆಗಾಗಿ ಹುಟ್ಟಿರುವ ಸಂಘಟನೆಯೂ ಅಲ್ಲ. ಬಾಯಿ ಚಟಕ್ಕೆ ಮಾತನಾಡಿ, ಜನರ ಗಮನ ಸೆಳೆಯಲು ಮಾಡಲಾಗಿರುವ ಒಂದು ಪ್ರಯೋಗ. ಒಬ್ಬ ವ್ಯಕ್ತಿ ಬಂದು ನಮ್ಮ ದೇಶದ ವ್ಯವಸ್ಥೆ ಬಗ್ಗೆ ಮಾತನಾಡುತ್ತಾನೆಂದರೆ ನಮ್ಮ ಜನರು ಸುಮ್ಮನೆ ಕೇಳುವುದಿಲ್ಲ. ಇಂತವರು ಮನೆಗೊಬ್ಬರು ಇರುತ್ತಾರೆ, ಜನರ ಚಿತ್ತ ಕದಿಯಬೇಕಾದಲ್ಲಿ ಒಂದೆರಡು ವಿವಾದಗಳನ್ನು ಮೈಗೆತ್ತಿಕೊಳ್ಳಬೇಕಾಗುತ್ತದೆ. ಒಂದಿಷ್ಟು ಕೇಸುಗಳನ್ನೂ ಜಡಿಸಿಕೊಳ್ಳಬೇಕಾಗುತ್ತದೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಸನಾತನ ಧರ್ಮದ ವಿರುದ್ಧ ಹೋಗುವವರಿಗೆ ಮತ್ತು ಪ್ರಧಾನಿ ಮೋದಿ ವಿರುದ್ಧ ಮಾತನಾಡಿಬಿಟ್ಟರೆ ಅವರಿಗೆ ಎಲ್ಲಿಲ್ಲದ ಜನಪ್ರಿಯತೆ ಸಿಗುತ್ತದೆ. ಇದರ ಲಾಭ ಪಡೆಯಲು ಅದೊಂದು ಪಕ್ಷ ಯಶಸ್ವಿಯಾಗಿದ್ದು ಸುಳ್ಳೇನಲ್ಲ.

ಈ ಹಿಂದಿನಿಂದ ಇಂಥದ್ದೇ ವ್ಯಾಪಾರವೊಂದನ್ನು ಜರ್ಮನಿಯ ಧ್ರುವ್ ರಾಥಿ ಎಂಬ ಮೂರ್ಖ ಯೂಟ್ಯೂಬರ್ ಒಬ್ಬ ಮಾಡುತ್ತಿದ್ದಾನೆ. ಭಾರತ ಸರ್ಕಾರದ ವಿರುದ್ಧ ವಿಡಿಯೋಗಳನ್ನು ಮಾಡುವುದು, ಹಿಂದು ಧರ್ಮದ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುವುದು, ಸೆಕ್ಯುಲರಿಸಂ ಹೆಸರಿನಲ್ಲಿ ಧರ್ಮಗಳ ನಡುವೆ ಜಗಳ ಹಚ್ಚುವುದು, ಭಾರತದ ಇತಿಹಾಸದ ಬಗ್ಗೆ ದೂರದ ಜರ್ಮನಿಯಲ್ಲಿ ಕೂತು ಪ್ರಶ್ನೆಗಳನ್ನು ಕೇಳುವುದು ಈತನ ವ್ಯಾಪಾರದ ಮೂಲ. ಬೇಕಂತಲೆ ವಿವಾದ ಜಾಡಿಸಿಕೊಂಡು ಜನರ ಬಾಯಲ್ಲಿದ್ದು ದುಡ್ಡು ಮಾಡಿಕೊಳ್ಳುವುದು ಈತನ ಮಾರ್ಕೆಟಿಂಗ್ ಸ್ಟ್ರಾಟರ್ಜಿ. ಅದೇ ಸ್ಟ್ರಾಟರ್ಜಿ ಅಭಿಷೇಕ್ ಬ್ಯಾನರ್ಜಿ ಎಂಬಾತ ಬಳಸಿ ಯಶಸ್ವಿಯಾದ.

ನಮ್ಮ ದೇಶದಲ್ಲಿ ಏನಾದರೂ ಒಂದು ಘಟನೆ ನಡೆದರೆ ಸಾಕು, ಅದು ಇಲ್ಲಿನ ಜೆನ್-ಝಿಗಳಿಗೆ ಕಿವಿಗೆ ಮುಟ್ಟಿ ಅದರ ಬಗ್ಗೆ ಅಭಿಪ್ರಾಯಗಳು ಹುಟ್ಟುವ ಮೊದಲೇ ಈತ ಅದರ ಮೇಲೆ ಇಲ್ಲದ್ದನ್ನೆಲ್ಲ ಸೇರಿಸಿ ವಿಡಿಯೋ ಮಾಡುತ್ತಾನೆ. ವರ್ತಮಾನದ ಬಗ್ಗೆ ಮಾತನಾಡುವುದಕ್ಕಿಂತ ಹಳೆಯ ಇತಿಹಾಸ ತೆಗೆದು ಅದರ ಬಗ್ಗೆ ಹುಚ್ಚರ ಹಾಗೆ ಪ್ರಶ್ನೆ ಕೇಳುವುದು, ನಮ್ಮವರ ಬಗ್ಗೆಯೇ ನಮಗೆ ನಕಾರಾತ್ಮಕತೆ ಭಾವನೆ ಮೂಡುವಂತೆ ಮಾಡುವುದು ಇದರ ಉದ್ದೇಶ. ಇದಕ್ಕಿಂತ ಮೊದಲು ಅಭಿಷೇಕ್ ಬ್ಯಾನರ್ಜಿ ಎಂಬ ಯೂಟ್ಯೂಬರ್ ಕೂಡ ಇದೇ ಕೆಲಸ ಮಾಡುತ್ತಿದ್ದ. ಈಗಲೂ ದೇಶದ ಕಾರ್ಯತಂತ್ರದ ಬಗ್ಗೆ ಪ್ರಶ್ನೆ ಮಾಡುವುದು ಇವರಿಬ್ಬರ ಕೆಲಸ.

ನಮ್ಮ ದೇಶದಲ್ಲಿ ರಾಜಕೀಯ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಬಾಯಿಗೆ ಬಂದಂತೆ ಮಾತನಾಡುತ್ತವೆ. ರಾಜಕೀಯದಲ್ಲಿದ್ದವರು ಒಬ್ಬರಿಗೊಬ್ಬರ ವಿರುದ್ಧ ಮಾತನಾಡಿ ಕಾಲೆಳೆಯುತ್ತಾರೆ. ನಮ್ಮ ದೇಶದ ವಿಚಾರ ನಮ್ಮ ದೇಶದವರಿಗೆ ಬಿಟ್ಟದ್ದು, ವಿದೇಶಿ ಯೂಟ್ಯೂಬರ್‌ಗಳಿಗ್ಯಾಕೆ ಈ ಉಸಾಬರಿ? ಕಾಕ್ರೋಚ್ ಜನತಾ ಪಾರ್ಟಿ ಕೂಡ ಇದರ ಭಾಗ. ಜೆನ್-ಝಿಗಳಿಗೆ ಒಂದು ವಿಷಯದ ಬಗ್ಗೆ ತಿಳಿದುಕೊಂಡು ಅದರ ಬಗ್ಗೆ ಅಭಿಪ್ರಾಯ ಹುಟ್ಟಿಸಲು ಸಮಯವಿಲ್ಲ. ಒಂದು ವಿಷಯದ ಕುರಿತಂತೆ ತಿಳಿದುಕೊಳ್ಳಬೇಕೆಂಬ ಕುತೂಹಲ ಮೂಡಿದರೆ, ಅವರು ನೇರವಾಗಿ ಧ್ರುವ್ ರಾಥಿ ಅಂಥವರ ವಿಡಿಯೋ ಮೊರೆ ಹೋಗುತ್ತಾರೆ. ಜೆನ್-ಝಿಗಳಿಗೆ ರಾಜಕೀಯದಲ್ಲಿ ಆಸಕ್ತಿಯೂ ಕಡಿಮೆ. ನೇರವಾಗಿ ಮಾಧ್ಯಮೇತರ ವರದಿ ನೋಡುವದಕ್ಕಿಂತಲೂ ಅವರು, ಇಂಥಾ ಯೂಟ್ಯೂಬರ್‌ಗಳ ಮೊರೆ ಹೋಗುತ್ತಾರೆ. ಅದಕ್ಕೆ ಧ್ರುವ್ ರಾಥಿ, ಅಭಿಷೇಕ್ ಬ್ಯಾನರ್ಜಿ ಅಂಥವರಿಗೊಂದು ಕಾಲವಿತ್ತು.

ಈಗ ಜಿರಳೆ ಕಾಲ. ಈ ಹಿಂದೆ ನ್ಯಾಯಾಧೀಶರು ನುಡಿದ ಜಿರಳೆ ಎಂಬ ಹೇಳಿಕೆಯ ಲಾಭ ಪಡೆದ ಅಭಿಜಿತ್ ದಿಪ್ಕೆ ಎಂಬ ವ್ಯಕ್ತಿ ಕೂಡ ಅದನ್ನೇ ಮಾಡಿದ್ದು. ಮೊದಲಿಗೆ ಖಾತೆಯೊಂದನ್ನು ತೆರೆದ ಅಭಿಜಿತ್ ಕೇಂದ್ರ ಸರ್ಕಾರದ ವಿರುದ್ಧ ಮಾತನಾಡತೊಡಗಿದ. ಇಪ್ಪತ್ತೆಂಟು ಆಶ್ವಾಸನೆ ಕೊಟ್ಟ. ನಂತರ ಇತ್ತೀಚಿನ ವಿಡಿಯೋ ಒಂದರಲ್ಲಿ ಬಿಜೆಪಿಯನ್ನು ಅನ್‌ಫಾಲೋ ಮಾಡಲು ಹೇಳಿದ್ದಾನೆ. ದೇಶದಲ್ಲಿ ಯುವಕರ ನೌಕರಿಗಾಗಿ ಹೋರಾಟಗಳು ಆಗಬೇಕಿದೆ. ಆದರೆ ಅದು ಯಾರಿಂದ ಮತ್ತು ಹೇಗೆ ಆಗಬೇಕೆಂಬ ವಿಚಾರ ಇಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಯುವಕರ ನೌಕರಿ ಬಗ್ಗೆ ಮಾತುಗಳು ನಡೆದಿದ್ದವು. ದೇಶದಲ್ಲಿ ನಿರುದ್ಯೋಗ ಹೆಚ್ಚಾಗುತ್ತಿದೆ, ಯುವಕರಿಗೆ ನೌಕರಿಯೇ ಇಲ್ಲ ಎಂಬ ಮಾತು ವಿರೋಧ ಪಕ್ಷಗಳು ಹೇಳುತ್ತಾ ಬಂದವು. ಆದರೆ, ಈ ವಿಚಾರದ ಪಕ್ಕಾ ಲಾಭ ಪಡೆದವರೆ ಅಭಿಜಿತ್. ಆದರೆ ಇದು ಸಾಮಾಜಿಕ ಹೋರಾಟವೇ ಅಥವಾ ಸಾಮಾಜಿಕ ಜಾಲತಾಣ ಹೋರಾಟವೇ?

ವಾಸ್ತವವಾಗಿ ಜೆನ್-ಝಿಗಳು ಯಾವುದನ್ನೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಎಲ್ಲದರಲ್ಲೂ ಹಾಸ್ಯ ಹುಡುಕಲು ಯತ್ನಿಸುತ್ತಾರೆ. ಪ್ರಧಾನಿ ಮೋದಿ ಯಾವ ದೇಶಕ್ಕೆ ಹೋದರು, ಯಾವ ಒಪ್ಪಂದ ಮಾಡಿಕೊಂಡರು ಎಂಬ ವಿಚಾರ ಜಾಲತಾಣ ಪ್ರಿಯರಿಗೆ ಗೊತ್ತಿರುವುದೇ ಇಲ್ಲ. ಅವರಿಗೆ ಗೊತ್ತಿರುವುದು ಕೇವಲ ಮೆಲೋನಿ ಅವರೊಂದಿಗೆ ಮಾತನಾಡುವುದು, ಮೆಲೋಡಿ ಚಾಕಲೇಟ್ ಕೊಟ್ಟಿದ್ದು. ಇವೆಲ್ಲಾ ವಿಚಾರಗಳನ್ನು ಮೀಮ್, ಕಂಟೆಂಟ್ ಮತ್ತು ರೀಲ್ಸ್ ಮಾಡಲು ಬಳಸುತ್ತಾರೆ ಹೊರತು, ಈ ವಿಚಾರವನ್ನೂ ಜೆನ್-ಝಿಗಳು ಅಕ್ಷರಶಃ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಕಾಕ್ರೋಚ್ ಜನತಾ ಪಾರ್ಟಿ ವಿಚಾರದಲ್ಲೂ ಅದೇ ಆಗಿರಬಹುದು. ಕಂಟೆಂಟ್ ಹುಡುಕಾಟದಲ್ಲಿದ್ದವರೇ ಇದರ ಪ್ರಚಾರ ಮಾಡಿದ್ದು. ಮೀಮ್ ಪೇಜ್‌ಗಳೇ ಇದರ ಹವಾ ಮಾಡಿದ್ದು. ಕಾಕ್ರೋಚ್ ಎಂಬ ಹೆಸರು ವಿಭಿನ್ನವಾಗಿದ್ದು ಹಾಸ್ಯದ ಭಾಗವಾಗಿ ತೆಗೆದುಕೊಂಡಿರಬಹುದು. ಈ ನಡುವೆ ಇನ್ನೊಂದು ದೊಡ್ಡ ಕಾಕತಾಳಿಯಂದರೆ ಪಾಕಿಸ್ತಾನಿ ಹಿಂಬಾಲಕರು ಇರುವುದು. ಯೂಟ್ಯೂಬರ್ ಧ್ರುವ್ ರಾಥಿಗೂ ಅಲ್ಲಿಯವರೇ ಹಿಂಬಾಲಕರಿದ್ದಾರೆಂಬ ಆರೋಪಗಳಿದ್ದವು. ಆಪರೇಷನ್ ಸಿಂದೂರ ಸಮಯದಲ್ಲಿ ಭಾರತೀಯ ಯೂಟ್ಯೂಬರ್‌ಗಳನ್ನು ಬ್ಯಾನ್ ಮಾಡಿದ್ದ ಪಾಕ್, ರಾಥಿ ಚಾನಲ್ ಮಾತ್ರ ಹಾಗೇ ಬಿಟ್ಟಿತ್ತು. ಈಗಲೂ ಜಿರಳೆ ಪಕ್ಷಕ್ಕೆ ಪಾಕಿಸ್ತಾನ ಬೆಂಬಲ ಹೆಚ್ಚು ಎಂಬ ಆರೋಪವಿದೆ.

ಆಗೊಂದು ಕಾಲ, ಅದು ಧ್ರುವ್ ರಾಥಿಯದ್ದು. ಮುಂದೆ ಬಂದಂತೆ ಇಂಥಾ ಹತ್ತಾರು ಯೂಟ್ಯೂಬರ್‌ಗಳು ಬಂದರು. ಈಗ ಜಿರಳೆ ಪಕ್ಷ, ಇಂತಹ ಪಕ್ಷಗಳೂ ಬರುತ್ತವೆ. ಒಂದು ವೇಳೆ 'ಹರ್ ಕುತ್ತ ಕಾ ದಿನ್ ಆತಾ ಹೆ' ಎಂಬ ಹೇಳಿಕೆ ಬರೆದವರು ಏನಾದರೂ ಈಗ ಬರೆದಿದ್ದರೆ, 'ನಾಯಿಗೊಂದು ಕಾಲ, ಜಿರಳೆಗೊಂದು ಕಾಲ' ಎಂದು ಬರೆಯುತ್ತಿದ್ದರೇನೋ? ◆

ರೂಬಿಯೋ ಭೇಟಿಯ ತಪ್ಪು ಸಂದೇಶಗಳು

▸ ಅರವಿಂದ ಶೆಣೈ

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋ ಭಾರತಕ್ಕೆ ಭೇಟಿ ನೀಡಿದ ಸಮಯ, ಸಂದರ್ಭ ನೋಡುವಾಗ ಅದರ ಹಿಂದಿನ ಉದ್ದೇಶ ಎಲ್ಲರಿಗೂ ಅರ್ಥವಾಗುವಂತದ್ದೆ. ಕಳೆದ ಒಂದೂವರೆ ವರ್ಷಗಳಿಂದ ಭಾರತ ಮತ್ತು ಅಮೆರಿಕಗಳ ಮಧ್ಯೆ ಹದಗೆಟ್ಟಿರುವ ಸಂಬಂಧವನ್ನು ಮತ್ತೆ ಸರಿದಾರಿಗೆ ತರಲೆತ್ನಿಸುವ ಸಲುವಾಗಿ ಬಂದಿದ್ದರೆಂಬುದು ಒಂದು ವಿಷಯವಾದರೆ, ಅದರ ಜತೆಗೇ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾಕ್ಕೆ ನೀಡಿದ ಭೇಟಿಯು ಅವರು ಅಪೇಕ್ಷಿಸಿದ ಫಲಿತಾಂಶ ನೀಡದ ಹಿನ್ನೆಲೆಯಲ್ಲಿ ಭಾರತವನ್ನು ಮತ್ತೆ ಓಲೈಸುವ ಪ್ರಯತ್ನವಾಗಿ ಬಂದಿದ್ದರೆಂಬುದು ಮತ್ತೊಂದು ವಿಷಯ. ಚೀನಾವು ಟ್ರಂಪ್ ಭೇಟಿಯ ವೇಳೆ ತಾನೇ ಬಲಿಷ್ಠ ಸ್ಥಾನದಲ್ಲಿದ್ದುಕೊಂಡು ವರ್ತಿಸಿತೇ ವಿನಹ ಅಮೆರಿಕದ ನಿಯಮಗಳಿಗೆ ಸೊಪ್ಪು ಹಾಕಲಿಲ್ಲ. ಉಳಿದೆಲ್ಲ ವಿಶ್ವ ನಾಯಕರ ಜತೆ ತಾನೇ ಮೇಲೆಂಬಂತೆ ವರ್ತಿಸುವ ಟ್ರಂಪ್ ಹಮ್ಮಿಗೆ ಕ್ಸಿ ಜಿನ್‌ಪಿಂಗ್ ಭೇಟಿಯಲ್ಲಿ ದೊಡ್ಡ ಪೆಟ್ಟು ಬಿತ್ತು ಎನ್ನುವುದೂ ಎಲ್ಲರಿಗೆ ತಿಳಿದಿದೆ. ಚೀನಾದಿಂದ ವ್ಯೂಹಾತ್ಮಕ ಹಿನ್ನಡೆ ಅನುಭವಿಸಿದಾಗಲೆಲ್ಲಾ ಅಮೆರಿಕವು ಭಾರತದತ್ತ ನೋಡುತ್ತದೆ ಎಂಬುದು ಈ ಮೊದಲೂ ಹಲವು ಬಾರಿ ಸಾಬೀತಾಗಿದೆ. ಇಂಡೋ-ಪೆಸಿಫಿಕ್ ವಲಯದ ವ್ಯೂಹಾತ್ಮಕ ರಣತಂತ್ರದಲ್ಲಿ ಸರ್ವಾಧಿಕಾರಿ ಚೀನಾದ ವಿರುದ್ಧ ಪ್ರಜಾತಾಂತ್ರಿಕ ರಾಷ್ಟ್ರವಾದ ಭಾರತವನ್ನು ಬಳಸಿಕೊಳ್ಳಬಹುದು ಎಂಬುದು ಅಮೆರಿಕ ಲಾಗಾಯ್ತಿನಿಂದ ಪಾಲಿಸಿಕೊಂಡು ಬಂದ ಧೋರಣೆ.

ಅಮೆರಿಕದ ಆಡಳಿತದ ಪಡಸಾಲೆಯಲ್ಲಿ ಕೂಡಾ ಭಾರತದೊಂದಿಗಿನ ಸಂಬಂಧ ಹದಗೆಡುತ್ತಿರುವ ಬಗ್ಗೆ ಆತಂಕವಿದೆ. ಟ್ರಂಪ್‌ರ ಅವಿವೇಕದ ತೆರಿಗೆ ಸಮರ, ಪಾಕಿಸ್ತಾನದ ಜತೆಗಿನ ಗೊಂದಲದ ನೀತಿ ಭಾರತದೊಂದಿಗಿನ ಸಂಬಂಧ ಕೆಡಲು ಕಾರಣವಾಗಿದೆ ಎಂದು ಅಧಿಕಾರಿಗಳಿಗೆ ಗೊತ್ತು. ಭಾರತದ ಜತೆ ಸಂಬಂಧ ಸುಧಾರಣೆಗೆ ದಶಕಗಳಿಂದ ನಡೆಸಿದ ಪ್ರಯತ್ನಗಳು ಈಗ ಒಮ್ಮೆಗೆ ವ್ಯರ್ಥವಾಗುತ್ತಿರುವುದು ಅವರ ನಿದ್ದೆ ಕೆಡಿಸಿದೆ. ಭಾರತವು ಅಮೆರಿಕಕ್ಕೆ ಕೇವಲ ಪಾಲುದಾರ ರಾಷ್ಟ್ರವಲ್ಲ, ಆದಕ್ಕಿಂತಲೂ ಮುಖ್ಯವಾಗಿ ಚೀನಾಕ್ಕೆ ಪ್ರತಿರೋಧ ಒಡ್ಡಬಲ್ಲ ಏಷ್ಯಾದ ಪ್ರಮುಖ ಶಕ್ತಿ ಎಂಬುದಾಗಿ ಅಮೆರಿಕದ ಆಡಳಿತಗಾರರು ಭಾವಿಸಿದ್ದಾರೆ. ಹಾಗಾಗಿ ರೂಬಿಯೋ ಭಾರತಕ್ಕೆ ಭೇಟಿ ನೀಡಿದ್ದು ಕೇವಲ ರಾಜತಾಂತ್ರಿಕ ಸಂದೇಶವಾಹಕರಾಗಿ ಮಾತ್ರವಲ್ಲ. ಅವರು ಭಾರತ-ಅಮೆರಿಕ ನಡುವಿನ ಸಂಬಂಧವನ್ನು ದುರಸ್ತಿ ಮಾಡುವ ಹೊಣೆ ಹೊತ್ತೂ ಬಂದಿದ್ದರು. ಆದರೆ ರಾಜತಾಂತ್ರಿಕತೆ ಎಂಬುದು ಕೇವಲ ಅಧಿಕೃತ ಮಾತುಕತೆಗಳು ಮತ್ತು ಜಂಟಿ ಹೇಳಿಕೆಗಳಿಂದ ಮಾತ್ರವೇ ನಿರ್ಣಯಿಸಲ್ಪಡುವುದಿಲ್ಲ. ಸಂಬಂಧಿತ ವ್ಯಕ್ತಿಗಳ ವರ್ತನೆ, ಅವರು ತೋರುವ ಕೆಲವು ಸಂಕೇತಗಳು, ಅವರು ತಮ್ಮ ಚರ್ಯೆದಿಂದ ರವಾನಿಸುವ ಸಂದೇಶಗಳೂ ಮಹತ್ವದ ಪಾತ್ರ ವಹಿಸುತ್ತವೆ.

ರೂಬಿಯೋ ಸೋತದ್ದು ಇಲ್ಲಿಯೆ. ಅವರು ಭಾರತ ಪ್ರವಾಸವನ್ನು ಆರಂಭಿಸಲು ಕೊಲ್ಕತ್ತಾದ ಮದರ್ ಥೆರೆಸಾ ಅವರ 'ಮಿಷನರೀಸ್ ಆಫ್ ಚಾರಿಟಿ'ಯನ್ನು ಆಯ್ದುಕೊಂಡುದೇ ವ್ಯತಿರಿಕ್ತ ಸಂದೇಶ ರವಾನಿಸಿತು. ಕ್ರೈಸ್ತ ಮತಾವಲಂಬಿಯಾದ ರೂಬಿಯೋ ಮೊತ್ತಮೊದಲಾಗಿ ಕ್ರೈಸ್ತ ಧಾರ್ಮಿಕ ಕೇಂದ್ರಕ್ಕೆ ಭೇಟಿ ನೀಡುವುದು ತಪ್ಪಲ್ಲವಾದರೂ ಅವರು ಮಿಷನರಿಸ್ ಆಫ್ ಚಾರೀಟಿಸ್ ಅನ್ನು ಆಯ್ದುಕೊಂಡುದು ಭಾರತದಲ್ಲಿ ತಪ್ಪು ಸಂದೇಶ ನೀಡುವ ಸಾಧ್ಯತೆ ಇದೆ. ಮಿಷನರಿಸ್ ಆಫ್ ಚಾರೀಟಿಸ್ ವಿವಾದಾಸ್ಪದ ಸಂಸ್ಥೆ. ಮತಾಂತರ ಪ್ರಕ್ರಿಯೆಯಲ್ಲಿ ತೊಡಗಿರುವ ಕುರಿತು ರಾದ್ಧಾಂತವೆದ್ದಿದೆ. ಮತಾಂತರಕ್ಕಾಗಿ ವಿದೇಶಿ ನೆರವು ಪಡೆಯುತ್ತಿರುವ ಕುರಿತಂತೆ ಈ ಸಂಸ್ಥೆಯ ವಿರುದ್ಧ ವಿದೇಶೀ ಕೊಡುಗೆ ನಿಯಂತ್ರಣ ಕಾಯ್ದೆಯಡಿ (ಎಫ್‌ಸಿಆರ್‌ಎ) ಕ್ರಮ ತೆಗೆದುಕೊಳ್ಳಲಾಗಿದೆ ಹಾಗೂ ಅದರ ಪರವಾನಿಗೆಯನ್ನು 2021ರಲ್ಲಿ ರದ್ದುಪಡಿಸಲಾಗಿದೆ.

ಭಾರತವೀಗ ಬದಲಾಗಿದೆ ಎಂಬ ಸತ್ಯವನ್ನು ಅರಿತುಕೊಳ್ಳಲು ಅಮೆರಿಕವು ವಿಫಲವಾಗಿದೆಯೆನಿಸುತ್ತದೆ. 1980-90ರ ದಶಕದಲ್ಲಿ ಮದರ್ ಥೆರೆಸಾ ಅವರನ್ನು ವಿಸ್ಮಯದಿಂದ ಆರಾಧಿಸುತ್ತಿದ್ದುದು ನಿಜವಾದರೂ ಈಗ ಅಂತಹ ಭಾವ ಉಳಿದಿಲ್ಲ. ಸಾಮಾಜಿಕ ಜಾಲತಾಣದ ಈ ಕಾಲದಲ್ಲಿ ಮತ್ತು ಮಾಹಿತಿಯುಗದಲ್ಲಿ ಥೆರೆಸಾ ಅವರ ಕಾರ್ಯಗಳೂ ಪರಾಮರ್ಶೆಗೆ ಒಡ್ಡಲ್ಪಟ್ಟಿವೆ. ತಮ್ಮ ಕಾಲದ ಕೆಲವು ಕುಖ್ಯಾತ ಸರ್ವಾಧಿಕಾರಿಗಳೊಡನೆ ಆಕೆ ಹೊಂದಿದ್ದ ನಿಕಟ ಸಂಪರ್ಕ, ಮರಣೋನ್ಮುಖರಾದವರನ್ನು ಕೂಡಾ ಮತಾಂತರಗೊಳಿಸಲು ತೋರುತ್ತಿದ್ದ ಉತ್ಸುಕತೆ ಈಗ ಟೀಕೆಗೆ ಗುರಿಯಾಗುತ್ತಿವೆ. ಕ್ಯಾಥೊಲಿಕ್ ಆಗಿದ್ದ ಆಸ್ಟ್ರೇಲಿಯಾದ ಖ್ಯಾತ ಲೇಖಕಿ ಜರ್ಮೈನ್ ಗ್ರೀರ್ ಕೂಡಾ ಥೆರೆಸಾ ಅವರ ಕೆಲವು ನಿಲುವುಗಳನ್ನು ಟೀಕಿಸಿ ಬರೆದಿದ್ದಾರೆ. ಇಂತಿರುವಾಗ ರೂಬಿಯೋ ಅವರು ತಮ್ಮ ಭಾರತ ಭೇಟಿಯನ್ನು ಮಿಷನರೀಸ್ ಆಫ್ ಚಾರಿಟಿ ಮೂಲಕ ಆರಂಭಿಸಿ ತಪ್ಪು ನಡೆ ಪ್ರದರ್ಶಿಸಿದ್ದಾರೆ. ಭಾರತಕ್ಕೀಗ ಮಿಷನರಿಗಳ, ಅವರ ಮತಾಂತರದ ಅಗತ್ಯವಿಲ್ಲ. ಕೊಲ್ಕತಾ ಕೂಡಾ ಈಗ ಮಿಷನರಿಗಳನ್ನು ಆದರದ ಭಾವದಿಂದ ನೋಡುವುದಿಲ್ಲ. ಪಶ್ಚಿಮ ಬಂಗಾಳ ಕೂಡ ಈಗ ಬದಲಾಗಿದೆ.

ಅಮೆರಿಕದ ಸಮಸ್ಯೆಯೇನೆಂದರೆ ಅದು ಈಗಲೂ ಭಾರತವನ್ನು ತನ್ನ ದಶಕಗಳ ಹಿಂದಿನ ಕನ್ನಡಕದ ಮೂಲಕವೇ ನೋಡುತ್ತಿದೆ. ಅಮೆರಿಕದ ಆಡಳಿತದ ಒಂದು ವರ್ಗವು ಈಗಲೂ ಭಾರತ ವಿರೋಧಿ ಮಾನಸಿಕತೆಯನ್ನೆ ಹೊಂದಿದೆ. ಹಾಗಾಗಿಯೇ ಆಗಾಗ ಅಲ್ಲಿಂದ ಭಾರತ ವಿರೋಧಿ ಹೇಳಿಕೆಗಳು, ಭಾರತವನ್ನು ಅವಹೇಳನ ಮಾಡುವ ಮಾತುಗಳು ಹೊರಬೀಳುತ್ತಿರುತ್ತದೆ.

ಭಾರತದೊಡನೆ ಅಮೆರಿಕವು ಉತ್ತಮ ಸಂಬಂಧ ಬೆಳೆಸಲು ಬಯಸುವುದಾದರೆ, ತನ್ನ ಮುಖಂಡರು ಭಾರತಕ್ಕೆ ಭೇಟಿ ನೀಡುವಾಗ ಇಲ್ಲಿನ ಜನರ ಭಾವನೆಗೆ ಘಾಸಿಯಾಗದಂತೆ ವರ್ತಿಸುವಂತೆ ಸಲಹೆ ಸೂಚನೆಗಳನ್ನು ನೀಡುವುದೂ ಆಗತ್ಯವಾಗಿದೆ. ಅಮೆರಿಕನ್ ಮುಖಂಡರ ಭೇಟಿಯೇ ಪರಮ ಪಾವನ ಎಂದು ಭಾರತೀಯರು ಭಾವಿಸುವ ಕಾಲ ಸರಿದುಹೋಗಿದೆ. ಅಮೆರಿಕನ್ನರೂ ಈಗ ಭಾರತೀಯರ ಪರಾಮರ್ಶೆಗೆ ಒಳಪಡುತ್ತಿದ್ದಾರೆ. ◆

ಮಧ್ಯಪ್ರಾಚ್ಯ ಬಿಕ್ಕಟ್ಟಿನ ಪಾಠ ಉಲ್ಲೇಖಿಸಿದ ತ್ರಿಪಾಠಿ

ಸಾಗರ ಭದ್ರತೆಗೆ ನೌಕಾ ಥಿಯೇಟರ್ ಕಮಾಂಡ್

» ಆರ್ಥಿಕತೆ, ಇಂಧನ ಸುರಕ್ಷತೆಗೆ ಸಮುದ್ರ ಮಾರ್ಗಗಳ ರಕ್ಷಣೆ ಅನಿವಾರ್ಯ: ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ

ಹೊಸದಿಲ್ಲಿ: ದೇಶದ ಸಾಗರ ಭದ್ರತೆ, ಆರ್ಥಿಕ ಸ್ಥಿರತೆ ಹಾಗೂ ಇಂಧನ ಸುರಕ್ಷತೆಯನ್ನು ಮತ್ತಷ್ಟು ಬಲಪಡಿಸಲು ಸೇನೆಯ ಮೂರು ಅಂಗಗಳು ಹಾಗೂ ಕರಾವಳಿ ಭದ್ರತಾ ಪಡೆಯ ಸಾಮರ್ಥ್ಯಗಳನ್ನು ಒಗ್ಗೂಡಿಸುವ ಪ್ರತ್ಯೇಕ ನೌಕಾ ಥಿಯೇಟರ್ ಕಮಾಂಡ್ ರಚನೆ ಅಗತ್ಯ ಎಂದು ಭಾರತೀಯ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಪ್ರತಿಪಾದಿಸಿದ್ದಾರೆ.

ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿದ ಅವರು, ಥಿಯೇಟರೈಸೇಶನ್ ಕೇವಲ ಆಡಳಿತಾತ್ಮಕ ಪುನರ್‌ರಚನೆಯಾಗಿರದೆ, ರಾಷ್ಟ್ರೀಯ ಸೇನಾ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ವೃದ್ಧಿಸುವ ಉದ್ದೇಶದಿಂದ ರೂಪುಗೊಳ್ಳಬೇಕು ಎಂದು ಹೇಳಿದ್ದಾರೆ.



ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಂಡಿರುವ ಸಂಘರ್ಷದ ಹಿನ್ನೆಲೆಯಲ್ಲಿ ಸಾಗರ ಭದ್ರತೆ, ಇಂಧನ ಪೂರೈಕೆ ಮತ್ತು ಆರ್ಥಿಕ ಸ್ಥಿರತೆ ಪರಸ್ಪರ ನೇರವಾಗಿ ಸಂಬಂಧ ಹೊಂದಿವೆ ಎಂಬುದು ಮತ್ತೊಮ್ಮೆ ಸ್ಪಷ್ಟವಾಗಿದೆ ಎಂದು ಅವರು ಹೇಳಿದರು. ಸಾಗರ ಮಾರ್ಗಗಳು, ಇಂಧನ ಸಾಗಣೆ ಹಾಗೂ ಲಾಜಿಸ್ಟಿಕ್ಸ್ ವ್ಯವಸ್ಥೆಯಲ್ಲಿ ಉಂಟಾಗುವ ಅಡಚಣೆಗಳು ವಿಮಾ ವೆಚ್ಚ, ಸಾಗಣೆ ಮಾದರಿ ಹಾಗೂ ಪ್ರಾದೇಶಿಕ ಕಾರ್ಯತಂತ್ರದ ಸಮತೋಲನದ ಮೇಲೆ ತಕ್ಷಣದ ಪರಿಣಾಮ ಬೀರುತ್ತವೆ ಎಂದು ವಿವರಿಸಿದರು.

ಇದೇ ವೇಳೆ, ರಷ್ಯಾ-ಉಕ್ರೇನ್ ಯುದ್ಧ ಹಾಗೂ ಪಶ್ಚಿಮ ಏಷ್ಯಾ ಬಿಕ್ಕಟ್ಟುಗಳು ಜಾಗತಿಕ ಭದ್ರತೆಯ ಪರಸ್ಪರ ಅವಲಂಬನೆಯನ್ನು ನೆನಪಿಸುತ್ತಿವೆ. ಸಂಘರ್ಷದಿಂದ ಭೌಗೋಳಿಕವಾಗಿ ದೂರದಲ್ಲಿರುವುದು ಅದರ ಪರಿಣಾಮಗಳಿಂದ ದೂರವಿರುವುದಲ್ಲ ಎಂಬುದನ್ನು ಈ ಬೆಳವಣಿಗೆಗಳು ತೋರಿಸಿವೆ ಎಂದು ಅವರು ಅಭಿಪ್ರಾಯಪಟ್ಟರು.

ಯುದ್ಧದ ಸ್ವರೂಪದಲ್ಲಿ ಮಹತ್ತರ ಬದಲಾವಣೆಗಳಾಗುತ್ತಿದ್ದು, ಸಮುದ್ರದ ತಳದಿಂದ ಬಾಹ್ಯಾಕಾಶದವರೆಗೆ ಯುದ್ಧರಂಗ ವಿಸ್ತರಿಸಿದೆ. ಸೈಬರ್, ಮಾಹಿತಿ, ವಿದ್ಯುತ್ಕಾಂತೀಯ ಹಾಗೂ ಜ್ಞಾನಾತ್ಮಕ ಕ್ಷೇತ್ರಗಳೂ ಸಮಾನವಾಗಿ ಮಹತ್ವ ಪಡೆದಿವೆ. ವೇಗ, ವ್ಯಾಪ್ತಿ ಮತ್ತು ಏಕಕಾಲಿಕ ಕಾರ್ಯಾಚರಣೆಗಳು ಆಧುನಿಕ ಯುದ್ಧಗಳ ಪ್ರಮುಖ ಲಕ್ಷಣಗಳಾಗಿವೆ ಎಂದು ತ್ರಿಪಾಠಿ ಹೇಳಿದರು.

ಕೃತಕ ಬುದ್ಧಿಮತ್ತೆ(ಎಐ), ಕ್ವಾಂಟಮ್ ತಂತ್ರಜ್ಞಾನ ಹಾಗೂ ಸ್ವಾಯತ್ತ ವ್ಯವಸ್ಥೆಗಳನ್ನು ಭಾರತೀಯ ನೌಕಾಪಡೆ ವೇಗವಾಗಿ ಅಳವಡಿಸಿಕೊಳ್ಳುತ್ತಿದೆ. ಭವಿಷ್ಯದ ನೌಕಾಪಡೆ ಕೇವಲ ಯುದ್ಧನೌಕೆಗಳ ಮೇಲೆ ಅವಲಂಬಿತವಾಗಿರದೆ, ಮಾನವರಹಿತ ಹಾಗೂ ಉನ್ನತ ಸಾಮರ್ಥ್ಯದ ವೇದಿಕೆಗಳ ಸಮನ್ವಯದ ಮೂಲಕ ಪರಿಣಾಮಕಾರಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿರಲಿದೆ ಎಂದು ಅವರು ತಿಳಿಸಿದರು.

ಆಪರೇಷನ್ ಸಿಂಧೂರ್ ವೇಳೆ ಭಾರತೀಯ ನೌಕಾಪಡೆಯು ತೋರಿದ ಸಿದ್ಧತೆ ಮತ್ತು ಕಾರ್ಯತಂತ್ರದ ಸಾಮರ್ಥ್ಯವನ್ನು ಉಲ್ಲೇಖಿಸಿದ ಅವರು, ವಾಹಕ ಯುದ್ಧ ಸಮೂಹ ಹಾಗೂ ಉತ್ತರ ಅರಬ್ಬೀ ಸಮುದ್ರದಲ್ಲಿನ ಮುಂಚೂಣಿ ನಿಯೋಜನೆಯು ಪಾಕಿಸ್ತಾನ ನೌಕಾಪಡೆಯನ್ನು ಬಂದರುಗಳ ಸುತ್ತಮುತ್ತಲೇ ಸೀಮಿತಗೊಳಿಸಿತು ಎಂದು ಹೇಳಿದರು. ಈ ಕಾರ್ಯಾಚರಣೆಯಲ್ಲಿ ಮೂರು ಸೇನಾ ಪಡೆಗಳ ನಡುವಿನ ಸಮನ್ವಯವು ಜಂಟಿ ಕಾರ್ಯಾಚರಣೆಯ ಮಹತ್ವವನ್ನು ಮತ್ತಷ್ಟು ಸಾಬೀತುಪಡಿಸಿದೆ ಎಂದರು.

ಭಾರತದ ಸಾಗರ ಹಿತಾಸಕ್ತಿಗಳ ರಕ್ಷಣೆ ಹಾಗೂ ಮುಕ್ತ, ಸುರಕ್ಷಿತ ಮತ್ತು ಸಮಗ್ರ ಇಂಡೋ-ಪೆಸಿಫಿಕ್ ಪ್ರದೇಶದ ನಿರ್ಮಾಣವೇ ಭಾರತದ ಗುರಿಯಾಗಿದೆ ಎಂದು ಸ್ಪಷ್ಟಪಡಿಸಿದರು.

ತಿರುವಾಂಕೂರು ರಾಜಮನೆತನದಿಂದ ಸ್ಪಷ್ಟನೆ

ದೇಗುಲದ ಚಿನ್ನ ನಾಪತ್ತೆಯಾಗಿಲ್ಲ

ತಿರುವನಂತಪುರಂ: ಕೇರಳದ ಪ್ರಸಿದ್ಧ ಶ್ರೀ ಪದ್ಮನಾಭಸ್ವಾಮಿ ದೇವಾಲಯದಿಂದ ಅಮೂಲ್ಯ ವಸ್ತುಗಳು ನಾಪತ್ತೆಯಾಗಿವೆ ಎಂಬ ಆರೋಪಗಳನ್ನು ತಿರುವಾಂಕೂರು ರಾಜಮನೆತನ ತಳ್ಳಿಹಾಕಿದೆ.

ತಿರುವಾಂಕೂರು ರಾಜಮನೆತನದ ಮಾಜಿ ಸದಸ್ಯ ಆದಿತ್ಯ ವರ್ಮಾ ಅವರು, ನಾಪತ್ತೆಯಾಗಿವೆ ಎಂದು ಹೇಳಲಾಗಿರುವ ಎಲ್ಲ ಅಮೂಲ್ಯ ವಸ್ತುಗಳೂ ದೇವಾಲಯದ ಮುಖ್ಯ ದೇವರಾದ ಅನಂತ ಪದ್ಮನಾಭಸ್ವಾಮಿಯ ಸನ್ನಿಧಿಯಲ್ಲೇ ಸುರಕ್ಷಿತವಾಗಿವೆ ಎಂದು ಸ್ಪಷ್ಟಪಡಿಸಿದರು.

ದೇವಾಲಯದ ಅಮೂಲ್ಯ ವಸ್ತುಗಳು ಕಣ್ಮರೆಯಾಗಿವೆ ಎಂಬ ಪೊಲೀಸ್ ವರದಿಯ ವಿಶ್ವಾಸಾರ್ಹತೆಯನ್ನೂ ಅವರು ಪ್ರಶ್ನಿಸಿದರು. ದೇವಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರು, ಆಡಳಿತ ಸಮಿತಿಯ ಅಧ್ಯಕ್ಷರಾಗಿರುವ ಜಿಲ್ಲಾ ನ್ಯಾಯಾಧೀಶರು ಹಾಗೂ ಇತರೆ ಸದಸ್ಯರಿಗೆ ಯಾವುದೇ ವಸ್ತು ನಾಪತ್ತೆಯಾಗಿರುವ ಮಾಹಿತಿ ಇಲ್ಲದಿರುವಾಗ ಏಕಪಕ್ಷೀಯ ಪೊಲೀಸ್ ವರದಿ ಹೇಗೆ ಸಿದ್ಧವಾಯಿತು ಎಂಬುದು ಆಶ್ಚರ್ಯಕರ ಎಂದು ಅವರು ಹೇಳಿದರು.ಈ ಕುರಿತು ವೈಯಕ್ತಿಕವಾಗಿ ಪರಿಶೀಲನೆ ನಡೆಸಲಾಗಿದ್ದು, ನಾಪತ್ತೆಯಾಗಿವೆ ಎಂದು ಹೇಳಲಾಗಿದ್ದ ವಸ್ತುಗಳು ತಮ್ಮ ಎಂದಿನ ಸ್ಥಳದಲ್ಲೇ ಇವೆ ಎಂಬುದು ದೃಢಪಟ್ಟಿದೆ ಎಂದು ಆದಿತ್ಯ ವರ್ಮಾ ತಿಳಿಸಿದರು. ಈ ಪ್ರಕರಣದ ಸತ್ಯಾಸತ್ಯತೆ ತಿಳಿದುಕೊಳ್ಳಲು ರಾಜ್ಯ ಪೊಲೀಸ್ ಮಹಾನಿರ್ದೇಶಕ, ಮುಖ್ಯಮಂತ್ರಿ, ಗೃಹ ಸಚಿವ ಹಾಗೂ ದೇವಸ್ವಂ ಸಚಿವರಿಗೆ ಪತ್ರ ಬರೆಯಲಾಗುವುದು ಎಂದರು.



ರಕ್ಷಣಾ ಸ್ವಾವಲಂಬನೆ

ಭಾರತದ ದೇಶೀಯ ರಕ್ಷಣಾ ಉತ್ಪಾದನಾ ವಲಯದಲ್ಲಿ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪನೆಯಾಗಿದೆ. ಪುಣೆ ಮೂಲದ ಖಾಸಗಿ ರಕ್ಷಣಾ ಸಂಸ್ಥೆ ನಿಬೆ ಲಿಮಿಟೆಡ್ ಅಭಿವೃದ್ಧಿಪಡಿಸಿರುವ 'ಸೂರ್ಯಾಸ್ತ್ರ ಯೂನಿವರ್ಸಲ್ ರಾಕೆಟ್ ಲಾಂಚರ್' ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗಗಳು ಯಶಸ್ವಿಯಾಗಿ ಪೂರ್ಣಗೊಂಡಿವೆ. ಒಡಿಶಾದ ಚಂಡೀಪುರದಲ್ಲಿರುವ ಇಂಟರಿಮ್ ಟೆಸ್ಟ್ ರೇಂಜ್‌ನಲ್ಲಿ(ಐಟಿಆರ್) ಇತ್ತೀಚೆಗೆ ಸರಣಿ ಪ್ರಯೋಗಗಳನ್ನು ನಡೆಸಲಾಗಿದ್ದು, ಮಿಷನ್ ಉದ್ದೇಶಗಳನ್ನು ಅತ್ಯಂತ ನಿಖರವಾಗಿ ಸಾಧಿಸಲಾಗಿದೆ. ಈ ಹೊಸ ತಂತ್ರಜ್ಞಾನವು ಸಾಂಪ್ರದಾಯಿಕ ಫಿರಂಗಿ ಪಡೆ ಮತ್ತು ಬೃಹತ್ ಬ್ಯಾಲಿಸ್ಟಿಕ್ ಕ್ಷಿಪಣಿಗಳ ನಡುವಿನ ಅಂತರವನ್ನು ಕಡಿಮೆ ಮಾಡಲಿದ್ದು, ಭಾರತೀಯ ಸೇನೆಗೆ ಯುದ್ಧಭೂಮಿಯಲ್ಲಿ ಹೊಸ ಶಕ್ತಿ ನೀಡಲಿದೆ. ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

ಸುದ್ದಿ ಸಮಗ್ರ

ಏನಿದು ಸೂರ್ಯಾಸ್ತ್ರ ರಾಕೆಟ್ ವ್ಯವಸ್ಥೆ

ಸೂರ್ಯಾಸ್ತ್ರ ಎಂಬುದು ಭಾರತದ ಮೊದಲ ದೇಶೀಯ ಯೂನಿವರ್ಸಲ್ ಮಲ್ಟಿ-ಕ್ಯಾಲಿಬರ್ ರಾಕೆಟ್ ಲಾಂಚರ್ ವ್ಯವಸ್ಥೆಯಾಗಿದೆ.

ಅಭಿವೃದ್ಧಿ: ಇದನ್ನು ಪುಣೆಯ ನಿಬೆ ಲಿಮಿಟೆಡ್ ಸಂಸ್ಥೆಯು ಇಸ್ರೇಲ್‌ನ ಎಲ್ಬಿಟ್ ಸಿಸ್ಟಮ್ಸ್ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದೆ.

ಉದ್ದೇಶ: ಶತ್ರು ಪ್ರದೇಶದ ಆಳದಲ್ಲಿರುವ ಕಮಾಂಡ್ ಸೆಂಟರ್‌ಗಳು, ರಾಡಾರ್ ಕೇಂದ್ರಗಳು ಮತ್ತು ಶಸ್ತ್ರಾಸ್ತ್ರ ಸರಬರಾಜು ಮಾರ್ಗಗಳನ್ನು ನಿಖರವಾಗಿ ಧ್ವಂಸಗೊಳಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ.

ತಂತ್ರಜ್ಞಾನ: ಇಸ್ರೇಲ್‌ನ ನಿಖರ ಮತ್ತು ಸಾರ್ವತ್ರಿಕ ಉಡಾವಣಾ ವ್ಯವಸ್ಥೆ ತಂತ್ರಜ್ಞಾನವನ್ನು ಆಧರಿಸಿ ಇದನ್ನು ಸಿದ್ಧಪಡಿಸಲಾಗಿದ್ದು, ಇನ್ಮುಂದೆ ಸಂಪೂರ್ಣವಾಗಿ ಭಾರತದಲ್ಲೇ ಉತ್ಪಾದನೆಯಾಗಲಿದೆ.

ರಕ್ಷಣಾ ವಲಯದಲ್ಲಿ ಖಾಸಗಿ ರಂಗದ ಕ್ರಾಂತಿ

ಕಳೆದ ಒಂದು ದಶಕದಲ್ಲಿ ಭಾರತದ ರಕ್ಷಣಾ ವಲಯದಲ್ಲಿ ಖಾಸಗಿ ರಂಗದ ಪಾತ್ರ ಶೇ.25 ರಿಂದ 30ರಷ್ಟಕ್ಕೆ ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಶೇ.50ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ರಾಜನಾಥ್ ಸಿಂಗ್ ತಿಳಿಸಿದರು.

300
ಕಿಮೀ ಗುರಿ, ನಿಖರ ದಾಳಿ: ಭಾರತದ ಸೇನಾ ಬಲ ಹೆಚ್ಚಿಸಿದ
ಸೂರ್ಯಾಸ್ತ್ರ



ಹೊಸ ತಂತ್ರಜ್ಞಾನಗಳ ಅನಾವರಣ

ಸೂರ್ಯಾಸ್ತ್ರ ಪರೀಕ್ಷೆಯೊಂದಿಗೆ ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಟಿಎನ್‌ಟಿ ಪ್ಲಾಂಟ್ ತಂತ್ರಜ್ಞಾನ, ಆರ್‌ಡಿಎಕ್ಸ್ ಪ್ಲಾಂಟ್ ತಂತ್ರಜ್ಞಾನ ಮತ್ತು ನವೀಕರಿಸಬಹುದಾದ ಜೈವಿಕ ಇಂಧನ ಸಂಕುಚಿತ ಬಯೋಗ್ಯಾಸ್ ಪ್ಲಾಂಟ್ ಅನ್ನು ಉದ್ಘಾಟಿಸಲಾಯಿತು. ಹಾಗೆಯೇ ಉಪಗ್ರಹ ಜೋಡಣೆ ತಂತ್ರಜ್ಞಾನಕ್ಕಾಗಿ ನಿಬೆ ಗ್ರೂಪ್ ಮತ್ತು ಬ್ಲಾಕ್ ಸ್ಕೈ ಸಂಸ್ಥೆಗಳ ನಡುವೆ ಒಪ್ಪಂದ ಏರ್ಪಟ್ಟಿದೆ. ಈ ಹೊಸ ಪ್ರಯತ್ನಗಳು ಸ್ಥಳೀಯ ಸಣ್ಣ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಉದ್ಯೋಗಾವಕಾಶ ಸೃಷ್ಟಿಸಲಿದ್ದು, ಯುವಕರಿಗೆ ಅತ್ಯಾಧುನಿಕ ತಂತ್ರಜ್ಞಾನದ ಕೌಶಲಗಳನ್ನು ಒದಗಿಸಲಿವೆ.

ಪಿನಾಕಾ ಸಾಮರ್ಥ್ಯ ಮೀರಿದ ಸೂರ್ಯಾಸ್ತ್ರ

ದೀರ್ಘ ವ್ಯಾಪ್ತಿ ಅಂದರೆ 300 ಕಿಮೀ ದೂರವರೆಗೂ ಶತ್ರುಗಳ ವಿರುದ್ಧ ನಿಖರ ದಾಳಿ ನಡೆಸಲು ಸಮರ್ಥವಾಗಿ ಸೂರ್ಯಾಸ್ತ್ರ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. ಮೊಬೈಲ್ ಉಡಾವಕಗಳು, ಬ್ಯಾಟರಿ ಕಮಾಂಡ್ ಪೋಸ್ಟ್‌ಗಳು, ಲೋಡರ್ ವಾಹನಗಳಿಂದ ಸಜ್ಜಿತ ಸೂರ್ಯಾಸ್ತ್ರವನ್ನು, ಪ್ರಸಕ್ತ ಅಸ್ತಿತ್ವದಲ್ಲಿರೋ ಪಿನಾಕಾ ಮಲ್ಟಿ ಬ್ಯಾರಲ್ ರಾಕೆಟ್ ಉಡಾವಕದ ದಾಳಿ ಸಾಮರ್ಥ್ಯವನ್ನೂ ಮೀರಿದ ಟಾರ್ಗೆಟ್‌ಗಳ ವಿರುದ್ಧವೂ ದಾಳಿ ನಡೆಸಲು ಅಭಿವೃದ್ಧಿಪಡಿಸಲಾಗಿದೆ.

ಪ್ರಮುಖ ವೈಶಿಷ್ಟ್ಯ

- » ಅತ್ಯಂತ ವೇಗವಾಗಿ ಚಲಿಸುವ 6★6 ಟಾಟಾ ಟ್ರಕ್ ಮೇಲೆ ಈ ಸೂರ್ಯಾಸ್ತ್ರ ಲಾಂಚರ್ ಅನ್ನು ಅಳವಡಿಸಲಾಗಿದ್ದು, ಆಧುನಿಕ ಯುದ್ಧತಂತ್ರಗಳಿಗೆ ಪೂರಕವಾಗಿ ವಿನ್ಯಾಸಗೊಳಿಸಲಾಗಿದೆ.
- » ಮಲ್ಟಿ-ಕ್ಯಾಲಿಬರ್ ಮಾಡ್ಯುಲರ್ ಪಾಡ್ಸ್: ಒಂದೇ ರೀತಿಯ ರಾಕೆಟ್ ಉಡಾವಣೆಗಷ್ಟೇ ಸೀಮಿತವಾಗದೆ, ಬೇರೆ ಬೇರೆ ಗಾತ್ರದ ರಾಕೆಟ್‌ಗಳನ್ನು ಒಂದೇ ಲಾಂಚರ್ ಬಳಸಿ ಉಡಾಯಿಸಬಹುದು.
- » 122 ಎಂಎಂ ರಾಕೆಟ್: ಹತ್ತಿರದ ಗುರಿಗಳ ಮೇಲೆ ದಾಳಿ ಮಾಡಲು.
- » 306 ಎಂಎಂ ಎಕ್ಸ್‌ಟ್ರಾ ಕ್ಷಿಪಣಿ: 150 ಕಿ.ಮೀ ದೂರದ ಗುರಿಗಳಿಗೆ
- » 370 ಎಂಎಂ ಪ್ರೆಡೇಟರ್ ಹಾಕ್ ಕ್ಷಿಪಣಿ: 300 ಕಿ.ಮೀ ದೂರದ ಗುರಿಗಳಿಗೆ.
- » ಸ್ಕೈಸ್ಟ್ರೈಕರ್ ಲೋಯಿಟರಿಂಗ್ ಮ್ಯೂನಿಷನ್: ಇದನ್ನು ಆತ್ಮಹತ್ಯಾ ಡ್ರೋನ್' (ಸುಸೈಡ್ ಡ್ರೋನ್) ಎಂದೂ ಕರೆಯಲಾಗುತ್ತಿದ್ದು, 100 ಕಿಮೀ ದೂರ ಕ್ರಮಿಸಿ ಶತ್ರುಗಳ ಮೇಲೆ ದಾಳಿ ಮಾಡಬಲ್ಲದು.
- » ಶೂಟ್ ಆ್ಯಂಡ್ ಸ್ಕೂಟ್: ರಾಕೆಟ್ ಉಡಾಯಿಸಿದ ತಕ್ಷಣ ಶತ್ರುಗಳ ರಡಾರ್‌ಗಳು ನಮ್ಮನ್ನು ಪತ್ತೆ ಹಚ್ಚುವ ಮುನ್ನವೇ ಲಾಂಚರ್ ವಾಹನವು ಅಲ್ಲಿಂದ ಸುರಕ್ಷಿತವಾಗಿ ಬೇರೆಡೆಗೆ ಚಲಿಸುವ ತಂತ್ರಜ್ಞಾನ ಹೊಂದಿದೆ.
- » ಸುಧಾರಿತ ನ್ಯಾವಿಗೇಷನ್: ಇದು ಜಿಪಿಎಸ್, ಇನರ್ಶಿಯಲ್ ನ್ಯಾವಿಗೇಷನ್ ಹಾಗೂ ಡಿಜಿಟಲ್ ಬ್ಯಾಲಿಸ್ಟಿಕ್ ಕಂಪ್ಯೂಟೇಶನ್ ವ್ಯವಸ್ಥೆಗಳನ್ನು ಒಳಗೊಂಡಿದೆ.

ಅತ್ಯಂತ ನಿಖರ ದಾಳಿ

ಚಂಡೀಪುರದಲ್ಲಿ ನಡೆದ ಪರೀಕ್ಷೆಗಳ ವೇಳೆ ಸೂರ್ಯಾಸ್ತ್ರ ವ್ಯವಸ್ಥೆಯ ಎರಡು ಮಾದರಿಗಳನ್ನು ಪರೀಕ್ಷಿಸಲಾಯಿತು. ಇವುಗಳ 'ಸರ್ಕ್ಯುಲರ್ ಎರರ್ ಪ್ರೋಬಬಲ್'(ಸಿಇಪಿ- ಗುರಿಯಿಂದ ತಪ್ಪಿಹೋಗುವ ಗರಿಷ್ಠ ಅಂತರ) ಜಾಗತಿಕ ಮಟ್ಟದಲ್ಲೇ ಅತ್ಯುತ್ತಮವಾಗಿದೆ:

- » 150 ಕಿ.ಮೀ ದೂರದ ಮಾದರಿ: ಇದರ ಸಿಇಪಿ ಕೇವಲ 1.5 ಮೀಟರ್ ಆಗಿತ್ತು.
- » 300 ಕಿ.ಮೀ ದೂರದ ಮಾದರಿ: ಇದರ ಸಿಇಪಿ ಕೇವಲ 2 ಮೀಟರ್ ಆಗಿತ್ತು.

ಆಧುನಿಕ ಯುದ್ಧ ನಿರ್ಧರಿಸುವ ತಂತ್ರಜ್ಞಾನ

ರಕ್ಷಣಾ ಸಚಿವ ರಾಜನಾಥ್ ಸಿಂಗ್, ಆಧುನಿಕ ಯುದ್ಧಗಳು ಕೇವಲ ಸೈನಿಕರ ಸಂಖ್ಯೆಯ ಮೇಲೆ ನಿರ್ಧಾರವಾಗುವುದಿಲ್ಲ, ಬದಲಿಗೆ ಆಟೊಮೇಷನ್ ಮತ್ತು ನಿಖರ ಆಯುಧಗಳ ತಂತ್ರಜ್ಞಾನದ ಮೇಲೆ ನಿರ್ಧಾರವಾಗುತ್ತವೆ ಎಂದಿದ್ದಾರೆ. ರಷ್ಯಾ-ಉಕ್ರೇನ್ ಸಂಘರ್ಷ ಹಾಗೂ ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಗಳೇ ಇದಕ್ಕೆ ಸಾಕ್ಷಿ ಎಂದಿರುವ ಅವರು, ಭಾರತವು ಈ ಹಿಂದೆಯೇ ಆಪರೇಷನ್ ಸಿಂದೂರ್ ಮೂಲಕ ಇಂತಹ ತಂತ್ರಜ್ಞಾನ ಆಧಾರಿತ ಯುದ್ಧ ಸಾಮರ್ಥ್ಯವನ್ನು ಪ್ರದರ್ಶಿಸಿದೆ ಎಂದು ನೆನಪಿಸಿಕೊಂಡರು.

ಕಿರುಸುದ್ದಿ

ಉ.ಪ್ರದೇಶದಲ್ಲಿ ಭಾರೀ ಮಳೆಗೆ 28 ಜನ ಸಾವು

ಲಖನೌ: ಕಳೆದೆರಡು ದಿನಗಳಿಂದ ಉತ್ತರ ಪ್ರದೇಶದ ಕೆಲ ಭಾಗಗಳಲ್ಲಿ ಬಿರುಗಾಳಿ ಸಹಿತ ಭಾರೀ ಮಳೆ ಸುರಿದಿದ್ದು, 28 ಮಂದಿ ಮೃತಪಟ್ಟಿದ್ದಾರೆ. ಜನಜೀವನ ಅಸ್ತವ್ಯಸ್ತಗೊಂಡಿದ್ದು, ನೂರಾರು ಮರಗಳು ನೆಲಕ್ಕುರುಳಿದೆ. 12ಕ್ಕೂ ಹೆಚ್ಚು ಮನೆಗಳು ಕುಸಿದಿದೆ. ಇದರಿಂದಾಗಿ ಮನೆಯೊಳಗಿದ್ದ ಹಲವರು ಜೀವ ಕಳೆದುಕೊಂಡಿದ್ದಾರೆ. ಬೆಳೆ ಹಾನಿ ಅಂದಾಜು ಮಾಡಲು ಮತ್ತು ರೈತರು, ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ನೀಡುವಂತೆ ಡಿಸಿಎಗಳಿಗೆ ಸಿಎಂ ಯೋಗಿ ಆದಿತ್ಯನಾಥ್ ನಿರ್ದೇಶಿಸಿದ್ದಾರೆ.

ಅಭಿಷೇಕ್ ಮೇಲೆ ಚಪ್ಪಲಿ, ಕಲ್ಲು ತೂರಿ ಪ್ರತಿಭಟನೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಸೋನಾಪುರದಲ್ಲಿ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಮೇಲೆ ಸ್ಥಳೀಯರು ಕಲ್ಲು, ಮೊಟ್ಟೆ ಮತ್ತು ಚಪ್ಪಲಿಗಳನ್ನು ಎಸೆದು ಪ್ರತಿಭಟನೆ ನಡೆಸಿದ್ದಾರೆ. ಚುನಾವಣೋತ್ತರ ಹಿಂಸಾಚಾರ ಪೀಡಿತರ ಕುಟುಂಬಗಳನ್ನು ಭೇಟಿ ಮಾಡಲು ತೆರಳಿದ್ದ ವೇಳೆ ಈ ಘಟನೆ ನಡೆದಿದೆ. ಬಿಜೆಪಿ ಕಾರ್ಯಕರ್ತರು ತನ್ನನ್ನು ಕೊಲ್ಲಲು ಯತ್ನಿಸಿದ್ದಾರೆ ಎಂದು ಅಭಿಷೇಕ್ ಆರೋಪಿಸಿದರೆ, ಸ್ಥಳೀಯರ ಆಕ್ರೋಶದ ಪರಿಣಾಮ ಇದಾಗಿದೆ ಎಂದು ಬಿಜೆಪಿ ಹೇಳಿದೆ.

ಪಂಜಾಬ್ ಸ್ಥಳೀಯ ಕದನ; ಬಲ ವೃದ್ಧಿಸಿಕೊಂಡ ಬಿಜೆಪಿ


ಚಂಡೀಗಢ: ಪಂಜಾಬ್‌ನಲ್ಲಿ ನಡೆದ ಸ್ಥಳೀಯ ನಗರಾಡಳಿತ ಚುನಾವಣೆಗಳಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ಸ್ವಂತ ನೆಲೆಯಲ್ಲಿ ಪ್ರಬಲ ಪಕ್ಷವಾಗಿ ಗುರುತಿಸಿಕೊಂಡಿದೆ. 2021ರ ಚುನಾವಣೆಯಲ್ಲಿ ಕೇವಲ 20 ವಾರ್ಡ್‌ಗಳನ್ನು ಗೆದ್ದಿದ್ದ ಬಿಜೆಪಿ ಈ ಬಾರಿ ಯಾವುದೇ ಪಕ್ಷದ ಮೈತ್ರಿಯಿಲ್ಲದೆಯೇ 170 ಸ್ಥಾನಗಳನ್ನು ಗೆದ್ದು, ಪಂಜಾಬ್‌ನಲ್ಲೂ ದೃಢವಾದ ಹೆಜ್ಜೆ ಗುರುತುಗಳನ್ನು ಮೂಡಿಸಿದೆ.

"ಪಂಜಾಬ್‌ನ ಕ್ಯಾಲಿಫೋರ್ನಿಯಾ" ಎಂದೇ ಖ್ಯಾತಿ ಪಡೆದ ಅಬೋಹಾರ್ ನಗರಪಾಲಿಕೆ ಚುನಾವಣೆಯಲ್ಲಿ ಬಿಜೆಪಿ 50 ಸ್ಥಾನಗಳ ಪೈಕಿ 28 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿದೆ. ಈ ಮೂಲಕ ಅಬೋಹಾರ್‌ನಲ್ಲಿ ಮೊದಲ ಬಿಜೆಪಿ ಮೇಯರ್ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದಾರೆ. 2027ರ ಪಂಜಾಬ್ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ತನ್ನ ಬಲವನ್ನು ದೃಢವಾಗಿ ಹೆಚ್ಚಿಸಿಕೊಳ್ಳುತ್ತಿರುವುದನ್ನು ಇದು ತೋರಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ. ಇಲ್ಲಿ ಆಳುವ ಆಪ್ 20 ಸ್ಥಾನಗಳನ್ನು ಪಡೆದರೆ, ಕಾಂಗ್ರೆಸ್ ಕೇವಲ 1 ಸ್ಥಾನ ಪಡೆದಿದ್ದು, ಪಕ್ಷೇತರರೊಬ್ಬರು ಗೆದ್ದಿದ್ದಾರೆ.

ಮೇ 26ರಂದು ಪಂಜಾಬ್‌ನ ಒಟ್ಟು 8 ಮಹಾನಗರ ಪಾಲಿಕೆ, 75 ಮುನ್ಸಿಪಲ್ ಕೌನ್ಸಿಲ್, 20 ನಗರ ಪಂಚಾಯತ್‌ಗಳಿಗೆ ಚುನಾವಣೆ ನಡೆದಿತ್ತು. ಆಳುವ ಆಪ್ ಆಪ್ 954 ಸ್ಥಾನಗಳನ್ನು ಪಡೆದು ಮೇಲುಗೈ ಸಾಧಿಸಿದೆ. ಕಾಂಗ್ರೆಸ್ 390, ಸ್ವತಂತ್ರರು 251, ಅಕಾಲಿದಳ 191, ಬಿಜೆಪಿ 170 ಹಾಗೂ ಬಿಎಸ್‌ಪಿ 7 ಸ್ಥಾನಗಳನ್ನು ಗಳಿಸಿವೆ.

ಗಡಿ ಜಿಲ್ಲೆಗಳ ಜನಸಂಖ್ಯೆ ಬದಲು ದೇಶಕ್ಕೆ ಸವಾಲು

ಹೊಸದಿಲ್ಲಿ: ಗಡಿ ಜಿಲ್ಲೆಗಳಲ್ಲಿನ ಜನಸಂಖ್ಯೆ ಬದಲಾವಣೆ ದೇಶದ ಮುಂದಿರುವ ಅತ್ಯಂತ ಗಂಭೀರ ಸವಾಲು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಈ ಬೆಳವಣಿಗೆಗಳ ಬಗ್ಗೆ ಕಟ್ಟುನಿಟ್ಟಾದ ಮೇಲ್ವಿಚಾರಣೆ ಮತ್ತು ವರದಿ ಮಾಡಲು ಕರೆ ನೀಡಿದ್ದಾರೆ. ಭಾರತ-ಪಾಕಿಸ್ತಾನ ಗಡಿಯಲ್ಲಿರುವ ಗುಜರಾತಿನ ಕಚ್ ಜಿಲ್ಲೆಯ ಭುಜ್‌ನಲ್ಲಿ ನಡೆದ ಭದ್ರತಾ ಪರಿಶೀಲನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶಾ, ಅಸ್ತಿತ್ವದಲ್ಲಿರುವ ನುಸುಳುಕೋರರನ್ನು ಗುರುತಿಸಲು ಮತ್ತು ಡ್ರೋನ್, ಮಾದಕ ದ್ರವ್ಯಕ್ಕೆ ಸಂಬಂಧಿಸಿದ ಬೆದರಿಕೆಗಳ ಜಾಡು ಪತ್ತೆ ಗಡಿ ಜಿಲ್ಲೆಗಳ ಆಡಳಿತಗಳು ಎಸ್‌ಒಪಿ ರೂಪಿಸಬೇಕು ಎಂದರು. ಅಂತಾರಾಷ್ಟ್ರೀಯ ಗಡಿಯ 15 ಕಿಮೀ ವ್ಯಾಪ್ತಿಯೊಳಗೆ ಅತಿಕ್ರಮಣದ ಬಗ್ಗೆ ಶೂನ್ಯ ಸಹಿಷ್ಣುತೆಯ ವಿಧಾನವನ್ನು ಅಳವಡಿಸಿಕೊಳ್ಳುವ ಮತ್ತು ಗಡಿ ಪ್ರದೇಶಗಳಲ್ಲಿನ ತೀವ್ರಗಾಮಿತ್ವದ ಕೇಂದ್ರಗಳ ಮೇಲೆ ನಿಗಾ ವಹಿಸುವ ಅಗತ್ಯವನ್ನು ಒತ್ತಿ ಹೇಳಿದರು. ಗಡಿ ಜಿಲ್ಲೆಗಳಲ್ಲಿನ ಜನಸಂಖ್ಯಾ ಬದಲಾವಣೆಗಳು ಅತ್ಯಂತ ಗಂಭೀರವಾದ ಸವಾಲನ್ನು ಒಡ್ಡುತ್ತವೆ. ಜಿಲ್ಲಾಧಿಕಾರಿಗಳು ಅಂತಹ ಬೆಳವಣಿಗೆಗಳ ಕಟ್ಟುನಿಟ್ಟಾದ ಮೇಲ್ವಿಚಾರಣೆ ಮತ್ತು ನಿಯಮಿತ ವರದಿಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಶಾ ಸೂಚಿಸಿದ್ದಾರೆ. ಈಗಾಗಲೇ ಅಕ್ರಮ ವಲಸೆ ಮತ್ತು ಇತರ ಅಸ್ವಾಭಾವಿಕ ಕಾರಣಗಳಿಂದಾಗಿ ಭಾರತದಾದ್ಯಂತ ಜನಸಂಖ್ಯಾ ಬದಲಾವಣೆಗಳನ್ನು ನಿರ್ಣಯಿಸಲು ಹಾಗೂ ಈ ಸಮಸ್ಯೆಯನ್ನು ಎದುರಿಸಲು ಕ್ರಮಗಳನ್ನು ಸೂಚಿಸಲು ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ.



ಮಲಪ್ಪುರಂ ಸ್ಫೋಟಕ ವಶ ಪ್ರಕರಣ: ಎನ್‌ಐಎ ದಾಳಿ

ಕಣ್ಣೂರು: ಮಲಪ್ಪುರಂ ಜಿಲ್ಲೆಯ ತಿರುರಂಗಡಿ ಬಳಿಯ ಚೆಮ್ಮಾಡ್‌ನಿಂದ ಮೂರು ತಿಂಗಳ ಹಿಂದೆ ಭಾರೀ ಪ್ರಮಾಣದಲ್ಲಿ ವಶಪಡಿಸಿಕೊಳ್ಳಲಾದ ಸ್ಫೋಟಕಗಳಿಗೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಕಾಸರಗೋಡು, ಕಣ್ಣೂರು, ಕೋಯಿಕ್ಕೋಡು, ಮಲಪ್ಪುರಂ ಸೇರಿದಂತೆ ಉತ್ತರ ಕೇರಳದ ಹಲವೆಡೆಗಳಲ್ಲಿ ಶನಿವಾರ ದಾಳಿ ನಡೆಸಿದೆ. ಪ್ರಕರಣದಲ್ಲಿ ನಂಟು ಹೊಂದಿರುವ ಆರೋಪಿಗಳ ನಿವಾಸಗಳು, ಉದ್ಯಮ ಕೇಂದ್ರಗಳು, ಸಂಸ್ಥೆಗಳು ಸೇರಿದಂತೆ ಹಲವೆಡೆಗಳಲ್ಲಿ ಶನಿವಾರ ನಸುಕಿನಲ್ಲಿ ಎನ್‌ಐಎ ವ್ಯಾಪಕ ದಾಳಿ-ಶೋಧ ಕಾರ್ಯಾಚರಣೆ ನಡೆಸಿತು. ಮಲಪ್ಪುರಂ ಜಿಲ್ಲೆಯ ತಿರುರಂಗಡಿ ಮತ್ತು ವಂಡೂರ್, ಕೋಯಿಕ್ಕೋಡು ಜಿಲ್ಲೆಯ ಎರಂಜಿಮಾವು, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳ ಅನೇಕ ಕಡೆಗಳಲ್ಲಿ ದಾಳಿ ನಡೆದಿದೆ. ಘಟನೆಗೆ ಸಂಬಂಧಿಸಿ ಸ್ಫೋಟಕ ವಸ್ತುಗಳ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆಯ ಮುಂದುವರಿದ ಭಾಗವಾಗಿ ಈ ಕಾರ್ಯಾಚರಣೆ ನಡೆಸಿದ್ದೇವೆ. ಆರೋಪಿಗಳ ಒಡೆತನದ ಸಂಸ್ಥೆಗಳಲ್ಲದೆ, ಶಂಕಿತ ವ್ಯಕ್ತಿಗಳ ಸಂಸ್ಥೆಗಳಲ್ಲೂ ತಪಾಸಣೆ ನಡೆಸಲಾಗುತ್ತಿದೆ ಎಂದು ಎನ್‌ಐಎ ಕೇರಳ ಘಟಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಳೆದ ಫೆಬ್ರವರಿಯಲ್ಲಿ ಪೊಲೀಸರು ಚೆಮ್ಮಾಡ್‌ನಲ್ಲಿ ಲಾರಿಯೊಂದರಿಂದ ಭಾರೀ ಪ್ರಮಾಣದ ಸ್ಫೋಟಕಗಳನ್ನು ವಶಪಡಿಸಿಕೊಂಡಿದ್ದರು. ಇದರಲ್ಲಿ 10,500ಕ್ಕೂ ಅಧಿಕ ಜಿಲೆಟಿನ್ ಕಡ್ಡಿಗಳು, ಡಿಟೋನೇಟರ್‌ಗಳು, ತಂತಿಗಳು ಸೇರಿವೆ. ಈ ಸಂಬಂಧಿಸಿ ಲಾರಿ ಮಾಲೀಕತ್ವ ಹೊಂದಿರುವ ಮಹಿಳೆಯೊಬ್ಬಳನ್ನು ವಶಕ್ಕೆ ತೆಗೆದುಕೊಂಡು ತನಿಖೆ ನಡೆಸಲಾಗುತ್ತಿದೆ.

ನಾಳೆ ಮ್ಯಾನ್ಮಾರ್ ಅಧ್ಯಕ್ಷ ಯು ಜತೆ ಮೋದಿ ಮಾತುಕತೆ

ಹೊಸದಿಲ್ಲಿ: ಮ್ಯಾನ್ಮಾರ್ ಅಧ್ಯಕ್ಷ ಯು ಮಿನ್ ಆಂಗ್ ಹ್ಲೈಂಗ್ ಅವರು ಶನಿವಾರ ಬೋಧ್ ಗಯಾದಲ್ಲಿರುವ ಮಹಾಬೋಧಿ ದೇವಾಲಯಕ್ಕೆ ಭೇಟಿ ನೀಡುವ ಮೂಲಕ ತಮ್ಮ ಐದು ದಿನಗಳ ಭಾರತ ಭೇಟಿಯನ್ನು ಪ್ರಾರಂಭಿಸಿದ್ದಾರೆ. ಈಶಾನ್ಯ ರಾಜ್ಯಗಳಾದ ಮಣಿಪುರ ಮತ್ತು ನಾಗಾಲ್ಯಾಂಡ್ ಸೇರಿದಂತೆ ಭಾರತದೊಂದಿಗೆ ಮ್ಯಾನ್ಮಾರ್ 1,640 ಕಿಮೀ ಗಡಿಯನ್ನು ಹಂಚಿಕೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಮ್ಯಾನ್ಮಾರ್ ಅಧ್ಯಕ್ಷ ಹ್ಲೈಂಗ್ ಜೂ.1ರಂದು ಮಾತುಕತೆ ನಡೆಸಲಿದ್ದಾರೆ. ಉಭಯ ದೇಶಗಳ ನಡುವಿನ ಐತಿಹಾಸಿಕ ಮತ್ತು ನಾಗರಿಕ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ಕುರಿತು ಅಧ್ಯಕ್ಷ ಹ್ಲೈಂಗ್ ಅವರು ಪ್ರಧಾನಿ ಮೋದಿ ಜತೆ ಚರ್ಚಿಸಲಿದ್ದಾರೆ. ಅವರು ವ್ಯಾಪಾರ ವೇದಿಕೆಯಲ್ಲೂ ಭಾಗವಹಿಸಲಿದ್ದಾರೆ ಎಂದು ಎಂಇಎ ಹೇಳಿದೆ. ದಿಲ್ಲಿಯಲ್ಲಿ ಮಾತುಕತೆ ಬಳಿಕ ಹ್ಲೈಂಗ್ ಅವರು ಉದ್ಯಮದ ನಾಯಕರೊಂದಿಗಿನ ಸಭೆ, ವ್ಯಾಪಾರ ಸಂವಾದ ಮತ್ತು ಬೃಹತ್ ಉದ್ಯಮ ಮತ್ತು ಹೂಡಿಕೆ ಅವಕಾಶಗಳ ಮೇಲೆ ಕೇಂದ್ರೀಕರಿಸಿದ ತಾಣಗಳಿಗೆ ಭೇಟಿ ನೀಡಲು ಜೂ.2ರಂದು ಮುಂಬೈಗೆ ಪ್ರಯಾಣಿಸುತ್ತಾರೆ.

ವಾಷಿಂಗ್ಟನ್‌ನಲ್ಲಿ ಲಾಬಿ ಮಾಡಲು ಸಂಸ್ಥೆ ನೇಮಕ | ತಿಂಗಳಿಗೆ 50 ಸಾವಿರ ಡಾಲರ್ ಪಾವತಿ

ವರ್ಚಸ್ಸು ಹೆಚ್ಚಿಸಿಕೊಳ್ಳಲು ಉಗ್ರ ಪಾಕಿಸ್ತಾನದ ಕಸರತ್ತು

ವಾಷಿಂಗ್ಟನ್: ಉಗ್ರ ಪೋಷಕರ ದೇಶ, ಭಿಕಾರಿ ದೇಶವೆಂಬ ಪಟ್ಟ ಕಳಚಿಕೊಳ್ಳಲು ಮುಂದಾಗಿರುವ ಪಾಕಿಸ್ತಾನ, ಅಮೆರಿಕದಲ್ಲಿ ಲಾಬಿ ನಡೆಸುವ ಸಲುವಾಗಿಯೇ ಸಂಸ್ಥೆಯೊಂದನ್ನು ನೇಮಕ ಮಾಡಿದೆ.

ಮಾಜಿ ರಿಪಬ್ಲಿಕನ್ ಸಂಸದ ಟಾಮ್ ಗ್ರೇವ್ಸ್ ನೇತೃತ್ವದ ಎರ್ವಿನ್ ಗ್ರೇವ್ಸ್ ಸ್ಟ್ರಾಟೆಜಿ ಗ್ರೂಪ್ ಎಂಬ ಲಾಬಿಯಿಂಗ್ ಸಂಸ್ಥೆಯನ್ನು ಪಾಕಿಸ್ತಾನ ಸರ್ಕಾರ ನೇಮಿಸಿಕೊಂಡಿದ್ದು, ಈ ಸಂಬಂಧ ಎರಡು ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಈ ಸಂಸ್ಥೆಗೆ ಮಾಸಿಕ 50 ಸಾವಿರ ಡಾಲರ್ ನೀಡಲಿದೆಯಂತೆ.

ಅಮೆರಿಕ ನ್ಯಾಯಾಂಗ ಇಲಾಖೆಗೆ ಸಲ್ಲಿಸಲಾದ ದಾಖಲೆಗಳ ಪ್ರಕಾರ, ವಾಷಿಂಗ್ಟನ್‌ನಲ್ಲಿರುವ ಪಾಕಿಸ್ತಾನ ರಾಯಭಾರ ಕಚೇರಿ ಈ ಒಪ್ಪಂದ ಮಾಡಿಕೊಂಡಿದ್ದು, ಅಮೆರಿಕ ಕಾಂಗ್ರೆಸ್, ಆಡಳಿತ ವಿಭಾಗ, ನೀತಿ ಸಂಶೋಧನಾ ಸಂಸ್ಥೆಗಳು ಹಾಗೂ ಕೈಗಾರಿಕಾ ವಲಯಗಳಲ್ಲಿ ಪಾಕಿಸ್ತಾನದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಜವಾಬ್ದಾರಿಯನ್ನು ಸಂಸ್ಥೆಗೆ ನೀಡಲಾಗಿದೆ.

ಇತ್ತೀಚಿನ ತಿಂಗಳುಗಳಲ್ಲಿ ಅಮೆರಿಕ-ಇರಾನ್ ಸಂಘರ್ಷ ಶಮನಕ್ಕೆ ಪಾಕಿಸ್ತಾನ ಮಧ್ಯಸ್ಥಿಕೆಯ ಪ್ರಯತ್ನಗಳನ್ನು ನಡೆಸಿದ್ದರೆ, ಪ್ರಧಾನಿ ಶೆಹಬಾಜ್ ಷರೀಫ್ ಹಾಗೂ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ವಾಷಿಂಗ್ಟನ್ ಭೇಟಿ ನೀಡಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾಗಿದ್ದರು. ಈ ಬೆಳವಣಿಗೆಗಳ ನಂತರ ಅಮೆರಿಕದಲ್ಲಿ ತನ್ನ ಸ್ಥಾನಮಾನವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಪಾಕಿಸ್ತಾನ ಈ ಕ್ರಮ ಕೈಗೊಂಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಆದರೆ, ಮತ್ತೊಂದೆಡೆ 2026ರ ಮಾರ್ಚ್‌ನಲ್ಲಿ ಪ್ರಕಟವಾದ ಅಮೆರಿಕ ಕಾಂಗ್ರೆಸ್ ವರದಿ ಪಾಕಿಸ್ತಾನದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿತ್ತು. ಹಲವು ಉಗ್ರ ಸಂಘಟನೆಗಳು ಇನ್ನೂ ಪಾಕಿಸ್ತಾನದಲ್ಲಿ ಸಕ್ರಿಯವಾಗಿದ್ದು, ಅವುಗಳನ್ನು ನಿಯಂತ್ರಿಸುವಲ್ಲಿ ಸರ್ಕಾರದ ಪ್ರಯತ್ನಗಳು ನಿರೀಕ್ಷಿತ ಯಶಸ್ಸು ಕಾಣಲಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಲಾಬಿ ಸಂಸ್ಥೆ ಜವಾಬ್ದಾರಿ?

- ಅಮೆರಿಕ ಕಾಂಗ್ರೆಸ್ ಹಾಗೂ ಆಡಳಿತ ವಿಭಾಗದೊಂದಿಗೆ ಸಂಪರ್ಕ ಸಾಧಿಸುವುದು
- ಪಾಕಿಸ್ತಾನದ ವಿರುದ್ಧ ಪರಿಣಾಮ ಬೀರುವ ನೀತಿ ಮತ್ತು ಶಾಸನಾತ್ಮಕ ಕ್ರಮಗಳ ಮೇಲೆ ನಿಗಾ ಇಡುವುದು
- ಮಾನವ ಹಕ್ಕುಗಳು, ನಿರ್ಬಂಧಗಳು ಹಾಗೂ ಭದ್ರತಾ ನೆರವಿಗೆ ಸಂಬಂಧಿಸಿದ ಬೆಳವಣಿಗೆಗಳ ವಿಶ್ಲೇಷಣೆ
- ನೀತಿ ತಜ್ಞರು, ಚಿಂತಕರ ವೇದಿಕೆಗಳು ಹಾಗೂ ಶೈಕ್ಷಣಿಕ ವಲಯಗಳಲ್ಲಿ ಪಾಕಿಸ್ತಾನದ ಪರ ಅಭಿಪ್ರಾಯ ನಿರ್ಮಾಣ

ಕಾಂಗ್ರೆಸ್ ಸದಸ್ಯರೊಂದಿಗೆ ನೇರ ಸಂಪರ್ಕಕ್ಕೆ ಒತ್ತು: ಒಪ್ಪಂದದ ಪ್ರಕಾರ, ಅಮೆರಿಕ ಕಾಂಗ್ರೆಸ್ ಸದಸ್ಯರು, ಅವರ ಸಿಬ್ಬಂದಿ ಹಾಗೂ ಪ್ರಮುಖ ಸರ್ಕಾರಿ ಇಲಾಖೆಗಳ ಅಧಿಕಾರಿಗಳೊಂದಿಗೆ ಪಾಕಿಸ್ತಾನಿ ಪ್ರತಿನಿಧಿಗಳ ಸಭೆಗಳನ್ನು ಆಯೋಜಿಸಲಾಗುತ್ತದೆ. ಜತೆಗೆ ಪಾಕಿಸ್ತಾನಕ್ಕೆ ಅಮೆರಿಕ ಶಾಸಕರ ಭೇಟಿಗಳನ್ನು ಸಂಯೋಜಿಸುವುದು, ಭೇಟಿಗೂ ಮುನ್ನ ಮಾಹಿತಿ ನೀಡುವುದು ಹಾಗೂ ರಾಯಭಾರ ಕಚೇರಿಯಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳಲ್ಲಿ ಅವರ ಭಾಗವಹಿಸುವಿಕೆಯನ್ನು ಖಚಿತಪಡಿಸುವ ಕೆಲಸವೂ ಸಂಸ್ಥೆಯದ್ದಾಗಿರುತ್ತದೆ.

ನಾನ್ ನ್ಯಾಟೋ ಸ್ಥಾನಮಾನವಂತೆ: ಅಮೆರಿಕ ನೀಡಿರುವ ಮೇಜರ್ ನಾನ್-ನ್ಯಾಟೋ ಅಲೈ ಸ್ಥಾನಮಾನ ಪಾಕಿಸ್ತಾನಕ್ಕೆ ಕಾರ್ಯತಂತ್ರದ ದೃಷ್ಟಿಯಿಂದ ಮಹತ್ವದ್ದಾಗಿದೆ. ಈ ಸ್ಥಾನಮಾನಕ್ಕೆ ಧಕ್ಕೆಯಾಗುವ ಯಾವುದೇ ಕಾಂಗ್ರೆಸ್ ಅಥವಾ ಆಡಳಿತಾತ್ಮಕ ಕ್ರಮಗಳ ವಿರುದ್ಧ ರಾಜತಾಂತ್ರಿಕ ಮಟ್ಟದಲ್ಲಿ ಸ್ಪಂದಿಸುವುದು ಹಾಗೂ ಪಾಕಿಸ್ತಾನದ ಪರವಾಗಿ ವಾದ ಮಂಡಿಸುವುದು ಲಾಬಿಯಿಂಗ್ ಸಂಸ್ಥೆಯ ಪ್ರಮುಖ ಕಾರ್ಯಗಳಲ್ಲಿ ಒಂದಾಗಿದೆ.

ಇಂದು ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ 301ನೇ ಜಯಂತಿ

ವಿವಿಧೆಡೆ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮ

ಇಂದೋರ್/ಪುಣೆ: 18ನೇ ಶತಮಾನದಲ್ಲಿ ತಮ್ಮ ಸಮರ್ಥ ಆಡಳಿತ ಮತ್ತು ನ್ಯಾಯಪ್ರಿಯತೆಯಿಂದ ಪ್ರಜೆಗಳ ಮನದಲ್ಲಿ ಅಚಲ ಸ್ಥಾನ ಗಳಿಸಿದ ರಾಜಮಾತೆ ಪುಣ್ಯಶ್ಲೋಕ ಅಹಲ್ಯಾಬಾಯಿ ಹೋಳ್ಕರ್ ಅವರ 301ನೇ ಜಯಂತಿಯನ್ನು ದೇಶಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತಿದೆ. 1725 ಮೇ 31ರಂದು ಅಹಲ್ಯಾಬಾಯಿ ಅವರು ಜನಿಸಿದ್ದಾರೆ. ಈ ಹಿನ್ನೆಲೆ ಶನಿವಾರದಿಂದಲೇ ಅವರ ಜನ್ಮಸ್ಥಳವಾದ ಚೌಂಡಿ(ಅಹಲ್ಯಾನಗರ) ಸೇರಿದಂತೆ ಇಂದೋರ್, ಪುಣೆ ಹಾಗೂ ಮಹಾರಾಷ್ಟ್ರದಾದ್ಯಂತ ವಿವಿಧ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನುಆಯೋಜಿಸಲಾಗುತ್ತಿದೆ. ಅಹಲ್ಯಾಬಾಯಿ ಅವರ ಜನ್ಮಸ್ಥಳವಾದ ಅಹಮದ್‌ನಗರ ಜಿಲ್ಲೆಯ ಚೌಂಡಿಯಲ್ಲಿ ಶನಿವಾರ ಭಕ್ತರು ಮತ್ತು ರಾಜಕೀಯ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಗೌರವ ಸಲ್ಲಿಸಿದ್ದಾರೆ.

ಇನ್ನು ಹೋಳ್ಕರ್ ಸಂಸ್ಥಾನದ ರಾಜಧಾನಿಯಾಗಿದ್ದ ಇಂದೋರ್‌ನ ರಾಜವಾಡಾ ಪ್ರದೇಶದಲ್ಲಿ ಭವ್ಯವಾದ ದೇವಿ ಅಹಲ್ಯಾ ಜಯಂತಿ ಪರ್ವ ಆಚರಿಸಲಾಗುತ್ತಿದ್ದು, ಶನಿವಾರ ಸಂಜೆ ಸಾಂಪ್ರದಾಯಿಕ ಪಾಲ್ಕಿ ಉತ್ಸವ ಮತ್ತು ಭವ್ಯ ಶೋಭಾಯಾತ್ರೆ ನಡೆದಿದೆ.

ಮೋದಿ, ಫಡ್ನವೀಸ್ ನಮನ: ಪ್ರಧಾನಿ ನರೇಂದ್ರ ಮೋದಿ, ಮಹಾರಾಷ್ಟ್ರದ ಮುಖ್ಯಮಂತ್ರಿ ಫಡ್ನವೀಸ್ ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಸಾಮಾಜಿಕ ಮಾಧ್ಯಮಗಳ ಮೂಲಕ ಲೋಕಮಾತೆ ಪುಣ್ಯಶ್ಲೋಕ ಅಹಲ್ಯಾಬಾಯಿ ಹೋಳ್ಕರ್ ಅವರಿಗೆ ವಿನಮ್ರ ನಮನ ಸಲ್ಲಿಸಿದ್ದಾರೆ.



ಶ್ರೇಷ್ಠ ಆಡಳಿತಗಾರ್ತಿ

ಪುಣ್ಯಶ್ಲೋಕ ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ ಅವರು ಭಾರತದ ಹಾಗೂ ವಿಶೇಷವಾಗಿ ಮರಾಠಾ ಸಾಮ್ರಾಜ್ಯದ ಇತಿಹಾಸದಲ್ಲಿನ ಅತ್ಯಂತ ಶ್ರೇಷ್ಠ, ದೂರದೃಷ್ಟಿಯುಳ್ಳ ಮತ್ತು ದಕ್ಷ ಆಡಳಿತಗಾರ್ತಿಯರಲ್ಲಿ ಒಬ್ಬರಾಗಿದ್ದರು. ಅವರು ಮಧ್ಯ ಭಾರತದ ಮಾಳ್ವಾ ಪ್ರದೇಶವನ್ನು ಸುಮಾರು 30 ವರ್ಷ ಅತ್ಯಂತ ಸಮರ್ಥವಾಗಿ ಆಳಿದರು. ಜನರು ಅವರಿಗೆ ಗೌರವದಿಂದ ಲೋಕಮಾತೆ ಮತ್ತು ದೇವಿ ಎಂಬ ಬಿರುದುಗಳನ್ನು ನೀಡಿದ್ದರು

ಕೆಲ್ಟ್ರಾನ್ ಕೋರ್ಸ್‌ಗಳಿಗೆ ಶುಲ್ಕ ವಿನಾಯಿತಿ

ಕಾಸರಗೋಡು: ಕೇರಳ ಸರಕಾರಿ ಸಂಸ್ಥೆಯಾದ ಕೆಲ್ಟ್ರಾನ್‌ನ ಕೋಟ್ಟಾಯಂ ಜ್ಞಾನ ಕೇಂದ್ರವು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ, ಆರ್‌ಎಆರ್, ವಿಆರ್ ಮತ್ತು ಎಂಆರ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ, ಎಆರ್, ವಿಆರ್ ಮತ್ತು ಎಂಆರ್‌ನಲ್ಲಿ ಪೋಸ್ಟ್ ಡಿಪ್ಲೊಮಾ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ನಲ್ಲಿ ಡಿಪ್ಲೊಮಾ, ಎಆರ್, ವಿಆರ್ ಮತ್ತು ಎಂಆರ್ ಕೋರ್ಸ್‌ಗಳಿಗೆ ಶೇ. 10ರಷ್ಟು ಶುಲ್ಕ ವಿನಾಯಿತಿ ಇದೆ. ಕಾಸರಗೋಡು ಜಿಲ್ಲೆಯ ನಿವಾಸಿಗಳು ಹೆಚ್ಚಿನ ವಿವರಗಳಿಗೆ 6282841772, 8590118698, 0481 2304031 ಕರೆ ಮಾಡಬಹುದು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು
ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕೊಟ್ಟಾರ, ಮಂಗಳೂರು
ಟೆಂಡರ್ ಅಧಿಸೂಚನೆ ಸಂಖ್ಯೆ:ದ.ಕ.ಜಿ.ಪ/ಮಂ/ಟೆಂಡರ್–10/ಎಇ–1/2026–27/474
ದಿನಾಂಕ: 30–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2025–26ನೇ ಸಾಲಿನ ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಲೆಕ್ಕ ಶೀರ್ಷಿಕೆಯಡಿ ಮಂಜೂರಾದ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವರ್ಷನ್–2 ಮುಖಾಂತರ ಟೆಂಡರ್‌ನ್ನು ಕರೆಯಲಾಗಿದ್ದು ಟೆಂಡರ್ ಸಲ್ಲಿಸುವ ದಿನಾಂಕವನ್ನು ಈ ಕೆಳಕಂಡಂತಿದೆ.

ಕಾಮಗಾರಿ ಹೆಸರು: (1) ಉಳ್ಳಾಲ ಕೋಟೆಕಾರು ವಾ.ಸಂ.08 ರ ಕಾಚಾರು ಸೇತುವೆ ಬಳಿ ಮಳೆನೀರು ಹರಿಯುವ ಪೋರಂಬೋಕು ತೋಡಿನ ತಡೆಗೋಡೆ ಪುನರ್ ನಿರ್ಮಾಣ. RDPR/2026-27/OW/WORK_INDENT26311/CALL-3, ಟೆಂಡರಿಗಿಟ್ಟ ಮೊತ್ತ: ರೂ. 62.87 ಲಕ್ಷ

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 08–06–2026 ಅಪರಾಹ್ನ 4.00 ಗಂಟೆಯವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09–06–2026 ಅಪರಾಹ್ನ 4.30 ಗಂಟೆಗೆ (3) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಅಂತರ್‌ಜಾಲ https://kppp.karnataka.gov.in ನಲ್ಲಿ, ಕಛೇರಿ ದೂರವಾಣಿ ಸಂಖ್ಯೆ: 0824–2451281 ಪಡೆಯಬಹುದಾಗಿದೆ.

DIPR/DK/KSMCA/291/ 26-27 Dt. 30.05.2026

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235042, ಇ–ಮೇಲ್: bgkeezpe@yahoo.com
ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿಜಿಕೆ/ಪಿಬಿ–2,3/ಟೆಂಡರ್/2026–27/603
ದಿನಾಂಕ : 29–05–2026

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಏಕ & ದ್ವಿ-ಲಕೋಟೆ) ಕೆ.ಡಬ್ಲ್ಯೂ. 1, 2 & 3 ಬಿಡ್ ಡಾಕ್ಯುಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಸನ್ 2025–26 ನೇ ಸಾಲಿನ ವಿವಿಧ ಲೆಕ್ಕ ಶಿರ್ಷಿಕೆಗಳಡಿ ಮಂಜೂರಾದ ಅನುದಾನದ ಅಡಿಯಲ್ಲಿ ಆಯ್ಕೆಯಾದ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ, ಜಮಖಂಡಿ, ಬೀಳಗಿ, ಬಾದಾಮಿ ಹಾಗೂ ತೇರದಾಳ ವಿಧಾನಸಭಾ ಮತ ಕ್ಷೇತ್ರದ ಗ್ರಾಮೀಣ ರಸ್ತೆ, ಸೇತುವೆ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ. – 2 & 3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 –2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಏಕ & ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಇಂಡೆಂಟ್ ನಂ. : 25537, 25526, 25550, 25592, 25546, 25547, 22142/ಕರೆ–3, 26671, 22143/ಕರೆ–2, 22172/ಕರೆ–2, ಪ್ರವರ್ಗ–2 (ಎ) ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ : 25588, 25541, ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ : 25532, 25551, 25549, 18795/ಕರೆ–2, ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ : 25525, 25548.

ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ. 10.00 ದಿಂದ 60.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

1) ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 18–06–2026 ರ ಸಂಜೆ 5.30 ಗಂಟೆವರೆಗೆ. 2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 20–06–2026 ರ ಬೆಳಿಗ್ಗೆ 11.00 ಗಂಟೆಯ ನಂತರ. 3) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : ತಾಂತ್ರಿಕ ಬಿಡ್ ಅನುಮೋದನೆ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ : https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/69/ಮಣಿಪಾಲ್/2026–27

ಜಲ ಸಂಪನ್ಮೂಲ ಇಲಾಖೆ
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ)
ಬೇಲೂರ ಕೈಗಾರಿಕಾ ವಸಾಹತು, ಧಾರವಾಡ– 580011.ದೂರವಾಣಿ: 0836–2486889
ಮೊ: 9448386889 ಮಿಂಚಂಚೆ: walmiengtrg@gmail.com www.walmidharwad.karnataka.gov.in
ಕ್ರಸಂ. ವಾಲ್ಮಿ/ತಾಂ.ಶಾ/ಮಾನವ ಸಂಪನ್ಮೂಲ/ಟೆಂಡರ್/2026–27/331
ದಿನಾಂಕ: 30–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ನಿರ್ದೇಶಕರು, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ಬೇಲೂರು ಕೈಗಾರಿಕಾ ವಸಾಹತು, ಧಾರವಾಡ–580011 ಕಚೇರಿ ಅಡಿಯಲ್ಲಿ ವಿವಿಧ ಮಾನವ ಸಂಪನ್ಮೂಲ ಸರಬರಾಜು ಮಾಡಲು ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ ಶೇಕಡವಾರು ಟೆಂಡರನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಆಹ್ವಾನಿಸಲಾಗಿದೆ.

Sl. No.	Name of Work	Amount put to Tender excluding GST in Lakhs	EMD Rs.
1	Providing Manpower Services at WALMI, Campus, Dharwad for the period of one year during 2026-27	60.98	1,44,000/-
2	Providing Housekeeping and training support staff Services at WALMI, Campus, Dharwad for the period of one year during 2026-27	62.95	1,49,000/-
3	Providing Agriculture and Related Works Labor Services at WALMI, Campus, Dharwad for the period of one year during 2026-27	28.77	68,000/-
4	Providing Security Services at WALMI Campus, Dharwad for the period of one year during 2026-27	50.24	1,19,000/-

ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ನಿಗದಿತ ಇ.ಎಮ್.ಡಿ ಶುಲ್ಕದೊಂದಿಗೆ https://kppp.karnataka.gov.in ಪೋರ್ಟಲ್‌ನಲ್ಲಿ, ಅರ್ಜಿಯನ್ನು ದಿನಾಂಕ: 02–06–2026, ರಿಂದ ಡೌನ್‌ಲೋಡ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 17–06–2026 ರಂದು ಸಂಜೆ 4.00 ಗಂಟೆಯ ವರೆಗೆ ಬಿಡ್ ತೆರೆಯುವ ದಿನಾಂಕ: 18–06–2026 ರ ಸಂಜೆ 4.30 ಗಂಟೆಯ ನಂತರ ಮಾಡಲಾಗುವುದು. ಟೆಂಡರ್‌ಗೆ ಸಂಬಂದಪಟ್ಟಂತೆ ಇ.ಎಂ.ಡಿ. ಮೊತ್ತ, ಟೆಂಡರ್ ಷರತ್ತುಗಳು ಹಾಗೂ ಇನ್ನಿತರೆ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ https://kppp.karnataka.gov.in ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಹಾಗೂ ಈ ಕಚೇರಿ ದೂರವಾಣಿ ಸಂಖ್ಯೆ 0836–2486680 ಸಂಪರ್ಕಿಸಬಹುದು. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ನಿರ್ದೇಶಕರು,
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ,
ವಾಲ್ಮಿ, ಧಾರವಾಡ– 580011

ಡಿಐಪಿಆರ್/ಧಾರವಾಡ/246/ಮಣಿಪಾಲ್/2026–27

ಪಟ್ಟಣ ಪಂಚಾಯತ ಕಾರ್ಯಾಲಯ ಶೇಡಬಾಳ
ಸಂಖ್ಯೆ:ಪಪಂಶೇ/ಲೋ.ಶಾ/ಇಪ್ರೋ–14/2026–27 ದಿನಾಂಕ: 01–06–2026

ಇ–ಪ್ರೋಕ್ಯುರಮೆಂಟ ಟೆಂಡರ ಪ್ರಕಟಣೆ

ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತ ಶೇಡಬಾಳ ಇವರಿಂದ ರೂ. 146.00 ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿಯಲ್ಲಿ ಅಭಿವೃದ್ಧಿ ಮಾಡುವ 01 ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ವಿವರವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಆನ್‌ಲೈನ ವೆಬ್‌ಸೈಟ್ (https://www.kppp.karnataka.gov.in) ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು. 1. ಟೆಂಡರ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ 11–06–2026 5.00 ಘಂಟೆವರೆಗೆ. 2. ಟೆಂಡರಿನ ಮೊದಲನೆ ಸಭೆಯ (Pre-bid meeting) ದಿನಾಂಕ: 12–06–2026 11.00 ಘಂಟೆ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ, ಕಚೇರಿಯಲ್ಲಿ. 3. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 18–06–2026 ಅಪರಾಹ್ನ 4.00 ಘಂಟೆವರೆಗೆ. 4. ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 20–06–2026 11.00 ಘಂಟೆ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ, ಕಚೇರಿಯಲ್ಲಿ. 5. ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 23–06–2026 11.00 ಘಂಟೆ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ, ಕಚೇರಿಯಲ್ಲಿ.

ಸಹಿ/–(ಶ್ರೀ ಕೆ. ಕೆ. ಗಾವಡೆ) ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ
ಸಹಿ/–ಶ್ರೀ. ಉತ್ಕರ್ಷ ಭರತೇಶ ಪಾಟೀಲ ಅಧ್ಯಕ್ಷರು ಪಟ್ಟಣ ಪಂಚಾಯತ ಶೇಡಬಾಳ

DIPR/BGM/RO-NO-345/KSMCA/2025-26

ಕರ್ನಾಟಕ ಸರಕಾರ
ಗದಗ–ಬೆಟಗೇರಿ ನಗರಸಭೆ ಕಾರ್ಯಾಲಯ 582101
ಜಿಲ್ಲಾ: ಗದಗ ರಾಜ್ಯ: ಕರ್ನಾಟಕ
ದೂರವಾಣಿ: 08372–259932 ಇ–ಮೇಲ್: ka.gadag.betageri.cmc@gmail.com
ನಂ.ಗಬೆನಸ/ತಾಂ.ವಿ/ನಗರಸಭೆ ನಿಧಿ/ವಹಿ/ಟೆಂಡರ್/2026–27 ದಿನಾಂಕ: 29–05–2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999–2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಗದಗ–ಬೆಟಗೇರಿ ನಗರಸಭೆಯಯ ಸನ್ 2026–27ನೇ ಸಾಲಿನ ನಗರಸಭೆ ಅನುದಾನದಲ್ಲಿ ಒಟ್ಟು 04 ಕಾಮಗಾರಿಯ ಅಂದಾಜು ಮೊತ್ತ ರೂ. 44.99 ಲಕ್ಷಗಳಿಗೆ ಇಂಡೆಂಟ್ ನಂ: 1) DMA/2025-26/OW/WORK_INDENT-51795, 3) DMA/2025-26/MT/WORK_ INDENT-51797, 4) DMA/2025-26/BD/WORK_INDENT-51796, ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ–ಸಂಗ್ರಹಣಾ ವೇದಿಕೆಯಡಿ, http://kppp.karnataka.gov.in ರಲ್ಲಿ ಸಂಪರ್ಕಿಸಿ ಮಾಹಿತಿ ಪಡೆದು ಟೆಂಡರ್ ಸಲ್ಲಿಸಬಹುದಾಗಿದೆ.

ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ ನಲ್ಲಿ ಪಡೆದು ಸಂಬಂಧಿಸಿದ ಇಎಮ್‌ಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗದಿಪಡಿಸಿದ ದಿನಾಂಕಗಳಂದು ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	11-06-2026 Upto 16.00 hours
ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	12-06-2026 Upto 16.30 hours

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು. ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–
ಪೌರಾಯುಕ್ತರು
ಗದಗ–ಬೆಟಗೇರಿ ನಗರಸಭೆ

ವಾ.ಸಾ.ಇ./ಗದಗ/95/ದೇಶಪಾಂಡೆಪಬ್ಲಿಸಿಟಿ/2026–27

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಗ್ರಾ.ಕು.ನೀ.&ನೈ. ವಿಭಾಗ,
ಪಂಚಾಯತ್ ಭವನ, 3ನೇ ಮಹಡಿ, ರಾಮನಗರ ವಿಭಾಗ,
ಬೆಂಗಳೂರು ದಕ್ಷಿಣ ಜಿಲ್ಲೆ – 562 159,
ಇಮೇಲ್ : eerdwsdrmgr2017@gmail.com
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 02/ಕಾ.ಅ./ಗ್ರಾ.ಕು.ನೀ.&ನೈ.ವಿ./ರಾ/ಸ.ಇಂ./1&3. ಜೆಇ/ಜೆಜೆಎಂ/364/2026–27 ದಿನಾಂಕ : 30–05–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜೆಜೆಎಂ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ, ಕನಕಪುರ ಮತ್ತು ಚನ್ನಪಟ್ಟಣ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 97.55 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 1,95,100/–, 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 09.01 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 11,300/–, 3) ಕಾಲಾವಧಿ : 06 ತಿಂಗಳು, 4) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ : 15–06–2026 ರ ಸಂಜೆ 5.30 ಗಂಟೆಯವರೆಗೆ, 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17–06–2026 ರ ಬೆಳಿಗ್ಗೆ 11.00 ಗಂಟೆಯ ನಂತರ, 6) ಆರ್ಥಿಕ ಬಿಡ್ ತೆರೆಯುವ ದಿನಾಂಕ : 19–06–2026 ರ ಬೆಳಿಗ್ಗೆ 11.00 ಗಂಟೆಯ ನಂತರ.

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದು ಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ / ವೆಬ್‌ಸೈಟ್ : https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ,
ರಾಮನಗರ ವಿಭಾಗ, ಬೆಂಗಳೂರು ದಕ್ಷಿಣ ಜಿಲ್ಲೆ.

ಡಿಐಪಿಆರ್/ ರಾಮನಗರ/72/ಮಣಿಪಾಲ್/2026–27

ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಸೊಸೈಟಿ, ತುಮಕೂರು
ಜಿಲ್ಲಾ ಯೋಜನಾ ನಿರ್ವಹಣಾ ಘಟಕ,
ಎನ್.ಆರ್.ಹೆಚ್.ಎಂ. ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ ಆವರಣ,
ತುಮಕೂರು, ಇ–ಮೇಲ್ : dpmotumkur@gmail.com, dhotumkur@gmail.com
ಸಂಖ್ಯೆ : ಡಿ.ಪಿ.ಎಂ.ಯು./ಎನ್.ಹೆಚ್.ಎಂ./05/2010–11
ದಿನಾಂಕ : 29–05–2026

ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲೆಯ ಎಲ್ಲಾ Non 24X7 PHC, UPHC, 4X7 PHC, CHC, MCH, FRU, DH, NAMMA Clinic, TB, Centre & SC-AAM ಗಳ ಜೈವಿಕ ವೈದ್ಯಕೀಯ ತ್ಯಾಜ್ಯ ಕೆ.ಎಸ್.ಪಿ.ಸಿ.ಬಿ. ನಿಯಮದನ್ವಯ ನಿರ್ವಹಣೆ ಮಾಡಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಈ ಕೆಳಗಿನಂತಿದೆ.

ವಿವರ : 1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ ದಿನಾಂಕ : 26–05–2026, 2) ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 12–06–2026 ರ ಸಂಜೆ 4.00 ಗಂಟೆಗೆ, 3) ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : 15–06–2026 ರ ಬೆಳಿಗ್ಗೆ 11.00 ಗಂಟೆಗೆ, 4) ಟೆಂಡರ್ ತೆರೆಯುವ ಸ್ಥಳ ಮತ್ತು ಪ್ರಾಧಿಕಾರ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು, 5) ಜೈವಿಕ ವೈದ್ಯಕೀಯ ತ್ಯಾಜ್ಯ ಕೆ.ಎಸ್.ಪಿ.ಸಿ.ಬಿ. ನಿಯಮದನ್ವಯ ನಿರ್ವಹಣೆ ಟೆಂಡರ್ ಮೊತ್ತ ಮತ್ತು ಇ.ಎಂ.ಡಿ. ಮೊತ್ತ : ರೂ. 84,68,400/–, ಇ.ಎಂ.ಡಿ. ಮೊತ್ತ : ರೂ. 2,12,000/– ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ನಮೂದಿಸುವುದು.

ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ತುಮಕೂರು ಇಲ್ಲಿ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ. ಮೊಬೈಲ್ ಸಂಖ್ಯೆ : 94498 43123.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.

ಡಿಐಪಿಆರ್/ತುಮಕೂರು/20/ಮಣಿಪಾಲ್/2026–27

ಪುತ್ತೂರು ಮಾರುಕಟ್ಟೆ ಧಾರಣೆ
30-05-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	415 - 450
ಚೋಲ್ ಅಡಿಕೆ	510 - 535
ಡಬಲ್ ಚೋಲ್	510 - 535
ಹೊಸ ಪಟೋರ	340 - 390
ಹಳೆ ಪಟೋರ	360 - 390
ಹೊಸ ಉಳ್ಳಿ	140 - 290
ಹಳೆ ಉಳ್ಳಿ	130 - 290
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	255 - 285
ಹಳೆ ಕರಿಗೋಟು	255 - 285
ಹಸಿ ಕೊಕ್ಕೋ	70 - 105
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 680

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	251.50
ಆರ್‌ಎಸ್‌ಎಸ್ 2	211.00
ಸ್ಕ್ರಾಪ್ 1	144.00
ಸ್ಕ್ರಾಪ್ 2	140.00

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ನಗರಾಭಿವೃದ್ಧಿ ಕೋಶ, ದ.ಕ ಜಿಲ್ಲೆ, ಮಂಗಳೂರು
ದೂರವಾಣಿ ಸಂ: 0824–2220593, Email : dudc_dkd@yahoo.co.in
ಮುನ್(1)/ಸಿ.ಆರ್/01/2026/ಸಿ.ನಂ:1250457/2026–27 ದಿನಾಂಕ: 30.05.2026

ಟೆಂಡರ್ ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿಯ ಯೋಜನಾ ನಿರ್ದೇಶಕರು/ಕಾರ್ಯಪಾಲಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ದಕ್ಷಿಣ ಕನ್ನಡ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಸಾರ್ವಜನಿಕ ಕಛೇರಿ ಕೆಲಸ ಕಾರ್ಯಗಳಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆಗೆ ವಾಹನ (ಕಾರು) ಗಳನ್ನು ಚಾಲಕ ಹಾಗೂ ಇಂಧನ ಮತ್ತು ನಿರ್ವಹಣಾ ವೆಚ್ಚ ಒಳಗೊಂಡಂತೆ (ವಾಹನದ ವಿವರ Ertiga/Etios/SWIFT DEZIRE (Fully Loaded) (A.C) 2024 ನೇ ಸಾಲಿನ ಹಾಗೂ ನಂತರದ ವಾಹನದ ಅವಶ್ಯತೆ ಇರುವುದರಿಂದ, ನೋಂದಾಣಿತ ಟ್ರಾವೆಲ್ಸ್ ಏಜೆನ್ಸಿದಾರರಿಂದ ಕನಿಷ್ಠ ಒಂದು ವರ್ಷದ ಅವಧಿಗೆ ಮಾಹೆಯಾನ ಬಾಡಿಗೆ ಆಧಾರದಲ್ಲಿ ಸೇವೆ ನೀಡಲು ಈ ಕೆಳಕಂಡಂತೆ KPP Protral ನಲ್ಲಿ ಟೆಂಡರ್ ಕರೆಯಲಾಗಿದೆ.

ಕ್ರ ಸಂ	ಟೆಂಡರ್ ವಿವರ	ಇ.ಎಂ.ಡಿ (ರೂ ಗಳಲ್ಲಿ)
1.	ಯೋಜನಾ ನಿರ್ದೇಶಕರಿಗೆ 2024 ನೇ ಸಾಲಿನ ಹಾಗೂ ನಂತರದ Preferably Ertiga/Etios/ Swift Desire, fully Loaded, YELLOW BOARD (Fully Loaded) ಏರ್ ಕಂಡೀಷನರ್ (A.C) 1 ವಾಹನವನ್ನು ಸರಬರಾಜು ಮಾಡುವುದು. (DMA/2026-27/SE7968)	12,000/-
2.	ಕಾರ್ಯಪಾಲಕ ಅಭಿಯಂತರರಿಗೆ 2024 ನೇ ಸಾಲಿನ ಹಾಗೂ ನಂತರದ Preferably Ertiga/ Etios/Swift Desire, fully Loaded, YELLOW BOARD (Fully Loaded) ಏರ್ ಕಂಡೀಷನರ್ (A.C) 1 ವಾಹನವನ್ನು ಸರಬರಾಜು ಮಾಡುವುದು. (DMA/2026-27/SE7966)	12,000/-
3.	ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ 2024 ನೇ ಸಾಲಿನ ಹಾಗೂ ನಂತರದ Preferably Ertiga/Etios/Swift Desire, fully Loaded, YELLOW BOARD (Fully Loaded ಏರ್ ಕಂಡೀಷನರ್ (A.C) 2 ವಾಹನಗಳನ್ನು ಸರಬರಾಜು ಮಾಡುವುದು (DMA/2026-27/SE7967)	24,000/-

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15.06.2026 ರಂದು ಸಂಜೆ: 5.30 ಕ್ಕೆ, ಟೆಂಡರ್ ತೆರೆಯುವ ದಿನಾಂಕ: 17.06.2026 ರಂದು ಬೆಳಿಗ್ಗೆ: 10.30 ಗಂಟೆಗೆ, ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ kppp.karnataka.gov.in portal ಅನ್ನು ವೀಕ್ಷಿಸಬಹುದು.

ಸಹಿ/–, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

DIPR/DK/KSMCA/295/26-27 dt.30.05.2026

ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ–573201.
Email:commn_hassan@yahoo.com ದೂರವಾಣಿ: 08172–268276, 263033 web: http:// www.hassancity.mrc.gov.in ಸಹಾಯವಾಣಿ: 233702 ಫ್ಯಾಕ್ಸ್: 234792
ನಂ:ಮನಪಾಹಾ/ಮಿ.ಶಾ/ಸಿಆರ್/02/2026–27 ದಿನಾಂಕ:–30–05–2026

:: ಹರಾಜು ಪ್ರಕಟಣೆ ::

ಈ ಮೂಲಕ ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಿನಾಂಕ: 01–06–2026 ರಿಂದ ದಿನಾಂಕ:15–06–2026 ರ ವರೆಗಿನ ಅವಧಿಯಲ್ಲಿ ಈ ಕೆಳಕಂಡ ವಿವಿದ ಬಾಬುಗಳ ಸುಂಕ ವಸೂಲಿ ಹಕ್ಕುಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ವಿಲೇವಾರಿ ಮಾಡಲು ಹರಾಜು ಇಸ್ತಿಯಾರ್ ಹೊರಡಿಸಲಾಗಿದೆ. (http:/kppp.karnataka4.gov.in) ಸದರಿ ಬಾಬುಗಳ ಸುಂಕ ವಸೂಲಿ ಹಕ್ಕನ್ನು ಪಡೆಯುವ ಆಸಕ್ತರು/ಏಜೆನ್ಸಿಯವರು ದಿನಾಂಕ:15–06–2026 ರಂದು ಸಂಜೆ 5 ಗಂಟೆಯೊಳಗಾಗಿ ಠೇವಣಿ ಮೊತ್ತವನ್ನು ಪಾವತಿಸಿ ಆನ್‌ಲೈನ್ ಮೂಲಕ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕಂದಾಯಾಧಿಕಾರಿಯನ್ನು ಸಂಪರ್ಕಿಸುವುದು. ಕ್ರ.ಸಂ. ಬಾಬುಗಳ ವಿವರ 1)ಪ್ರತಿ ಮಂಗಳವಾರ ಗೊರೂರು ರಸ್ತೆಯ ಬದಿ ಸಂತೆ ಸಾಲಗಾಮೆ ರಸ್ತೆ ಕ್ರೀಡಾಂಗಣದ ಹತ್ತಿರ ಎನ್.ಸಿ.ಸಿ. ಕಛೇರಿ ಮುಂಭಾಗ ನಡೆಯುವ ಸಂತೆ, ಕೇಂದ್ರ ಅರಣ್ಯ ಇಲಾಖೆ ಹತ್ತಿರ ನಡೆಯುವ ಸಂತೆ ಸುಂಕ ವಸೂಲಿ ಮಾಡುವ ಹಕ್ಕು. ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಯ ಕಟ್ಟಿನ ಕೆರೆ ಮಾರುಕಟ್ಟೆ ಹಾಗೂ ರಸ್ತೆ ಬದಿ ಮಾರಾಟ ಮಾಡುವ ತರಕಾರಿಗಳಿಗೆ ಸುಂಕ ವಸೂಲಿ ಮಾಡುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ.2,00,000.00 ಅಖೈರು ಬಿಡ್ ಹೊಂದಲು ಕನಿಷ್ಠ ಬಿಡ್ ಮೊತ್ತ ರೂ.65,00,000.00 ಮೇಲ್ಪಟ್ಟು ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ Live Bidding time 15-06-2026 ನೇ ಶುಕ್ರವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.00 ರ ಗಂಟೆ ವರೆಗೆ 2)ಗೊರೂರು ರಸ್ತೆ ಎಡಭಾಗದಲ್ಲಿ ನಿರ್ಮಿಸಿರುವ (ಕಸಾಯಿ ಖಾನೆಯಲ್ಲಿ) ಕುರಿ ಮಾಂಸ ಮಾರಾಟ ಮಾಡುವ ಹಕ್ಕು, ಖಸಾಯಿ ಖಾನೆಯಲ್ಲಿ ಬೀಳುವ ಗೊಬ್ಬರವನ್ನು ತೆಗೆದುಕೊಂಡು ಹೋಗುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ. 1,00,000.00 ಅಖೈರು ಬಿಡ್ ಹೊಂದಲು ಕನಿಷ್ಠ ಬಿಡ್ ಮೊತ್ತ ರೂ. 2,00,000.00 ಮೇಲ್ಪಟ್ಟು ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ 3)ಮಹಾನಗರ ಪಾಲಿಕೆ ಜಾಗದ ಮಳಿಗೆಗಳಲ್ಲಿ ಮೀನು ಮಾರಾಟ ಮಾಡುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ. 50,000.00 ಅಖೈರು ಬಿಡ್ ಹೊಂದಲು ಕನಿಷ್ಠ ಬಿಡ್ ಮೊತ್ತ ರೂ. 1,00,000.00 ಮೇಲ್ಪಟ್ಟು ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ 4)ಹಾಸನ ಮಹಾನಗರ ಪಾಲಿಕೆಯ ಮುಖ್ಯ ರಸ್ತೆಗಳಾದ ಸಹ್ಯಾದ್ರಿ ರಸ್ತೆಯ ಫುಡ್ ಕೋರ್ಟ್, ಎಂ.ಜಿ.ರಸ್ತೆಯ ಫುಡ್ ಕೋರ್ಟ್ ಹಾಗೂ ಪೃಥ್ವಿ ಥಿಯೇಟರ್ ಹತ್ತಿರ ಇರುವ ಫುಡ್ ಕೋರ್ಟ್ ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ.1,00,000.00 ಅಖೈರು ಬಿಡ್ ಹೊಂದಲು ಕನಿಷ್ಠ ಬಿಡ್ ಮೊತ್ತ ರೂ.13,00,000.00 ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ ಷರತ್ತುಗಳು: 1.ಹರಾಜಿನಲ್ಲಿ ಭಾಗವಹಿಸುವವರು ಕಾಲಂ ನಂ 3 ರಲ್ಲಿ ಸೂಚಿಸಿರುವಂತೆ ಐಟಂವಾರು ಠೇವಣಿ ಮೊತ್ತವನ್ನು ಆನ್‌ಲೈನ್ ಮೂಲಕ ಕಡ್ಡಾಯವಾಗಿ ಪಾವತಿಸಬೇಕು. 2.ಹರಾಜು ಅಖೈರಾದ ಕೂಡಲೇ ಅಖೈರು ಸವಾಲುದಾರರು ಹರಾಜಿನ ಬಾಕಿ ಮೊತ್ತವನ್ನು ಹರಾಜು ಆದ ಸ್ಥಳದಲ್ಲಿಯೇ ಪೂರ್ಣ ಮೊತ್ತವನ್ನು ಜಿ.ಎಸ್.ಟಿ. ಮೊತ್ತದೊಂದಿಗೆ ಪಾವತಿ ಮಾಡಿ ರಸೀದಿ ಪಡೆಯತಕ್ಕದ್ದು. 3.ಹರಾಜು ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಹರಾಜನ್ನು ರದ್ದುಪಡಿಸುವ ಅಧಿಕಾರ ಮಹಾನಗರ ಪಾಲಿಕೆ ಆಯುಕ್ತರಿಗೆ ಇರುತ್ತದೆ. 4.ಹರಾಜು ಖಾಯಂ ಆಯಿತೆಂದು ವಿಷಯವನ್ನು ಅಖೈರು ಸವಾಲುದಾರರಿಗೆ ಬರವಣಿಗೆ ಮೂಲಕ ತಿಳಿಯಪಡಿಸಿದ ಕೂಡಲೇ ಸವಾಲುದಾರರನ್ನು ಗುತ್ತಿಗೆದಾರನೆಂದು (ಕಂಟ್ರಾಕ್ಟರ್) ಕರೆಯಲ್ಪಡುತ್ತಾನೆ. ಈ ರೀತಿ ಬರವಣಿಗೆ ಮೂಲಕ ಅವರ ಸವಾಲನ್ನು ಅಂಗೀಕರಿಸುವುದಾಗಿ ತಿಳಿಸಿದ ನಂತರ ಹರಾಜು ಇಸ್ತಿಯಾರ್‌ನಲ್ಲಿ ವಿಧಿಸಿರುವ ಷರತ್ತಿನಂತೆ ತಾನು ಮತ್ತು ತನ್ನ ವಾರಸುದಾರರು ಬದ್ಧರಾಗಿರುತ್ತೇನೆಂತಲು ಮತ್ತು ಕೆಳಗೆ ನಮೂದಿಸಿರುವ ಆಗಿಂದ್ದಾಗ್ಗೆ ಮಹಾನಗರ ಪಾಲಿಕೆ ಕಛೇರಿಯಿಂದ ಕೊಡಬಹುದಾದ ಆದೇಶಗಳಿಗೆ ಬದ್ದರಾಗಿರುತ್ತಾರೆಂದು ಛಾಪಾ ಕಾಗದಲ್ಲಿ ಸ್ಟ್ಯಾಂಪ್ ಕಾಯ್ದೆ(ಸ್ಟ್ಯಾಂಪ್ ರೂಲ್ಸ್) ಅನುಸರಿಸಿ ಬರೆದ ಸ್ವಂತ ಖರ್ಚಿನಿಂದ ರಿಜಿಸ್ಟರ್ ಮಾಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲು ಆಗುವ ನಷ್ಟವನ್ನು ಮೊದಲನೇ ಹರಾಜುದಾರರು ಕಟ್ಟಿಕೊಡಬೇಕಾಗುತ್ತದೆ. 5.ಗುತ್ತಿಗೆದಾರು (ಕಂಟ್ರಾಕ್ಟರ್) ಯಾವುದೇ ಕಾರಣದಿಂದಲೂ ಒಳಗುತ್ತಿಗೆ ಮಾಡಕೂಡದು, ಈ ರೀತಿ ಮಾಡಿದ್ದು ಕಂಡುಬಂದಲ್ಲಿ ಸದರಿ ಗುತ್ತಿಗೆಯನ್ನು ತಪ್ಪಿಸಿ ಠೇವಣಿಯ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಕೂಡಲೇ ಅವರ ಹಕ್ಕನ್ನು ರದ್ದುಪಡಿಸಿ ಮಹಾನಗರ ಪಾಲಿಕೆ ಸ್ವಾದೀನಪಡಿಸಿಕೊಳ್ಳಲಾಗುವುದು. ಮತ್ತು ಗುತ್ತಿಗೆವಾಯಿದೆಯವರಿಗೆ ಆಗಬಹುದಾದ ನಷ್ಟಕ್ಕೆ ಅವರನ್ನೇ ಗುರಿಪಡಿಸಿ ಅವರಿಂದ ವಸೂಲಿ ಮಾಡಲಾಗುವುದು 6.ಫುಡ್‌ಕೋರ್ಟ್‌ನಿಂದ ಬರುವಂತಹ ತ್ಯಾಜ್ಯವನ್ನು ಹಸಿಕಸ – ಒಣಕಸಗಳನ್ನಾಗಿ ಬೇರ್ಪಡಿಸಿ ಪ್ರತ್ಯೇಕ ಆಟೋ ಟಿಪ್ಪರ್‌ನಲ್ಲಿ ವಿಲೇವಾರಿ ಮಾಡುವುದು ಹಾಗೂ ಸ್ವಚ್ಛತೆ ಕಾಪಾಡುವುದು ಟೆಂಡರ್‌ದಾರರ ಜವಾಬ್ದಾರಿಯಾಗಿರುತ್ತದೆ. 7.ಗುತ್ತಿಗೆದಾರರಿಂದ ಬರಬೇಕಾದ ಮೊಬಲಗು ಮಹಾನಗರ ಪಾಲಿಕೆ ಇಸ್ತಿಹಾರ್ ಚಾಪ್ಟರ್ 12 ರಲ್ಲಿ ದತ್ತವಾಗಿರುವ ಮೇರೆಗೆ ವಸೂಲಿ ಮಾಡುವುದಕ್ಕು ಮಹಾನಗರ ಪಾಲಿಕೆಗೆ ಅಧಿಕಾರವಿರುತ್ತದೆ. 8.ಗುತ್ತಿಗೆದಾರರಿಂದ ಬರಬೇಕಾದ ಮೊಬಲಗು ಪುರಸಭಾ ಕಾಯ್ದೆ 1964ರ ಅನುಸೂಚಿ 10 ಮತ್ತು 11 ರ ಪ್ರಕರಣ 142 ಮತ್ತು 143ರಂತೆ ದತ್ತವಾಗಿರುವ ಮೇರೆಗೆ ವಸೂಲಿ ಮಾಡುವುದಕ್ಕು ಮಹಾನಗರ ಪಾಲಿಕೆಗೆ ಅಧಿಕಾರವಿರುತ್ತದೆ. 9.ಗುತ್ತಿಗೆದಾರನಾಗಲಿ, ಆತನ ನೌಕರನಾಗಲಿ ಹರಾಜು ಇಸ್ತಿಹಾರ್ ಷರತ್ತು ಅಥವಾ ಹುಕುಂ ಉಲ್ಲಂಘಿಸಿದಲ್ಲಿ ಆತನ ಗುತ್ತಿಗೆ ತಪ್ಪಿಸಿ ಸೂಕ್ತ ರೀತಿ ವಿಲೇವಾರಿ ಮಾಡಲು ಆಯುಕ್ತರಿಗೆ ಅಧಿಕಾರವಿರುತ್ತದೆ. 10.ಚಾಲ್ತಿ ಸಾಲಿನಲ್ಲಿ ಹಿಂದಿನ ಸಾಲಿನಲ್ಲಿ ಸುಸ್ತಿದಾರರಾಗಿರುವ ಗುತ್ತಿಗೆದಾರರು (ಕಂಟ್ರಾಕ್ಟರ್) ತಮ್ಮ ಖಾತೆಯನ್ನು ಬೇಬಾಕಿ ಮಾಡದ ಹೊರತು ಹರಾಜಿನಲ್ಲಿ ಸವಾಲು ಮಾಡಲು ಅಧಿಕಾರವಿರುವುದಿಲ್ಲ. 11.ಗುತ್ತಿಗೆದಾರರು ಆಗಿದ್ದಾಂಗೆ ಮಹಾನಗರ ಪಾಲಿಕೆ ಕಛೇರಿಯಿಂದ ಕೊಡತಕ್ಕ ಹುಕುಂಗಳಿಗೆ ಬದ್ದರಾಗಿರತಕ್ಕದ್ದು. 12.ಬಿಡ್‌ದಾರರು ಯಾವ ಕಾರಣದಿಂದಲೂ ಖಿಸ್ತು ಮೊಬಲಗನ್ನು ರೆಮೀಷನ್ ಮಾಡುವುದಾಗಲೀ ಪರಿಹಾರ ದ್ರವ್ಯವನ್ನು ಕೇಳಲು ಅವಕಾಶವಿರುವುದಿಲ್ಲ. 13.ಬಿಡ್‌ದಾರರು ಸರ್ಕಾರದಿಂದ ಮುಂದೆ ಬರುವ ಕಾನೂನು ಪ್ರಕಾರ ನಡೆದುಕೊಳ್ಳುವುದಕ್ಕು ಸಂದರ್ಭಾನುಸಾರ ಮಹಾನಗರ ಪಾಲಿಕೆಯವರು ಮಾಡಬಹುದಾದ ಬದಲಾವಣೆಗೆ ಒಳಪಟ್ಟಿರತಕ್ಕದ್ದು. 14.ಬಿಡ್‌ದಾರರು ತಾನು ವಸೂಲು ಮಾಡುವ ಬಗ್ಗೆ ಲೆಕ್ಕವನ್ನು ಇಡುವುದಲ್ಲದೇ, ತನಿಖೆಗೆ ಬಂದಾಗ ಅಧಿಕಾರಿಗಳು ಅಪೇಕ್ಷಿಸಿದಲ್ಲಿ ಹಾಜರುಪಡಿಸಬೇಕು. 15.ಕಂಟ್ರಾಕ್ಟರ್‌ದಾರರು ಪ್ರತಿ ಬಾಬಿಗೂ ಮಹಾನಗರ ಪಾಲಿಕೆಯಿಂದ ನಿಗದಿಪಡಿಸಿರುವ ಧರದಂತೆ ಅಚ್ಚಾದ ರಶೀದಿಯನ್ನು ಪಾರ್ಟಿಗೆ ಕೊಡಬೇಕು ಹಾಗೂ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಹಣವನ್ನು ವಸೂಲಿ ಮಾಡತಕ್ಕದ್ದಲ್ಲ. 16.ಷೆಡ್ಯೂಲ್ ದರದ ವಿಚಾರದಲ್ಲಿ ಏನಾದರೂ ತಕರಾರು ಬಂದರೆ ಮಹಾನಗರ ಪಾಲಿಕೆಯಿಂದ ಅಧಿಕಾರ ಹೊಂದಿರುವವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. 17.ಒಂದು ಅಂಗಡಿಯಲ್ಲಿರತಕ್ಕ ವಿವಿಧ ಸಾಮಾನುಗಳನ್ನು ಬೇರೆ ಬೇರೆಯೆಂದು ಪರಿಗಣಿಸದೆ ಒಂದು ಅಂಗಡಿಯನ್ನು ಮಾಡಬೇಕು. ಷರಾ:– ಇಸ್ತಿಹಾರ್ ಒಳಗೊಂಡ ಷರತ್ತುಗಳಿಗೆ ಬದಲಾವಣೆ ಮಾಡಲು ಹರಾಜು ವೇಳೆಯಲ್ಲಿ ಅವಶ್ಯಕತೆ ಕಂಡು ಬಂದಲ್ಲಿ ನಿಭಂದನೆಗಳನ್ನು ಸೇರಿಸಲು ಆಡಳಿತಾಧಿಕಾರಿಗಳು/ಆಯುಕ್ತರಿಗೆ ಅಧಿಕಾರ ಇರುತ್ತದೆ.

ವಾಸಾಸಂಇ/ಹಿಸನಿ/ಹಾಸನ/177/ಕೆಎಸ್‌ಎಂಸಿಎ/2026–27

ಸಹಿ/–ಆಯುಕ್ತರು, ಹಾಸನ ಮಹಾನಗರ ಪಾಲಿಕೆ, ಹಾಸನ.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-755) ಡ್ರಾ ಮೇ 30ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KU 144057 (PALAKKAD)

Consolation Prize Rs.5,000/-
KN 144057 KO 144057 KP 144057 KR 144057
KS 144057 KT 144057 KV 144057 KW 144057
KX 144057 KY 144057 KZ 144057

2nd Prize Rs.25,00,000/- [25 Lakhs]
KZ 918886 (PATTAMBI)

3rd Prize Rs.10,00,000/- [10 Lakhs]
KP 362272 (KOTTAYAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0696 0920 1209 1618 2054 2466 2803 4690 5697 5816 6025 6163 6352 6463 6527 6877 7448 8429 9532

5th Prize Rs.2,000/-
1976 3696 4102 7184 8266 8906

6th Prize Rs.1,000/-
0278 0564 1857 2082 2705 3266 3379 4216 4574 4820 5053 5195 5390 5428 5457 5648 6209 6728 7362 8713 8960 8961 9105 9357 9369

7th Prize Rs.500/-
0045 0052 0358 0465 0481 0525 0532 0664 0735 0782 0912 0923 1001 1035 1149 1498 1591 1652 1671 1825 2069 2474 2520 2599 2667 2711 3032 3124 3492 3671 3885 3911 4008 4464 4657 4808 4831 4868 4903 4930 4984 5276 5324 5332 5398 5667 5769 5821 6445 6618 6799 6851 7119 7121 7381 7695 7753 8040 8136 8189 8377 8479 8500 8627 8684 8740 9048 9072 9261 9470 9542 9609 9661 9686 9720 9956

8th Prize Rs.200/-
0105 0121 0211 0255 0306 0447 0509 0549 0703 0775 0956 1102 1105 1253 1356 1360 1519 1525 1547 1582 2176 2463 2480 2544 2887 2932 2978 3044 3086 3159 3221 3310 3329 3332 3350 3520 3766 4015 4044 4374 4466 4614 4685 4853 4981 5231 5439 5461 5466 5561 5631 5666 5704 5750 5855 5860 6201 6345 6621 6868 6936 6942 6969 7135 7404 7561 7580 7703 7785 7942 8310 8426 8430 8532 8540 8606 8651 8723 8931 9086 9350 9409 9452 9511 9589 9594 9657 9706 9805 9873 9900 9961

9th Prize Rs.100/-
0018 0048 0138 0154 0311 0341 0352 0506 0507 0531 0615 0628 0671 0770 0843 0852 1005 1039 1163 1301 1410 1416 1437 1455 1489 1533 1560 1587 1630 1659 1752 1765 1775 1791 1804 1915 1987 2062 2114 2407 2485 2600 2668 2702 2785 2825 2889 2948 2991 3029 3116 3123 3137 3186 3326 3346 3347 3414 3422 3455 3597 3768 3832 3909 3996 4014 4046 4184 4240 4345 4495 4604 4666 4699 4729 4745 4876 4967 4983 5005 5073 5310 5351 5377 5417 5582 5700 5754 5763 5772 5905 5944 6074 6095 6110 6180 6309 6472 6537 6592 6834 6861 6882 6954 6959 6997 7004 7104 7147 7556 7694 7763 7776 7793 7824 7863 7899 8070 8077 8091 8097 8270 8271 8296 8357 8509 8694 8778 8845 8898 8917 9040 9051 9103 9197 9254 9259 9299 9365 9485 9611 9762 9828 9984

ಮಡಿಕೇರಿ ಅರಮನೆಗೆ ಕೇಂದ್ರ ಸರ್ಕಾರದಿಂದ ಅಭಿವೃದ್ಧಿ ಭಾಗ್ಯ: ಸಂಸದ ಯದುವೀರ್

ಮಡಿಕೇರಿ: ಮಡಿಕೇರಿ ಕೋಟೆ ಆವರಣದಲ್ಲಿರುವ ಐತಿಹಾಸಿಕ ಅರಮನೆಯ ಸಂರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಬೆಂಬಲ ವ್ಯಕ್ತಪಡಿಸಿದೆ.

ಕೊಡಗಿನ ಶ್ರೀಮಂತ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸದಸ್ಯರಾಗಿರುವ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು 2025ರ ಮಾರ್ಚ್ 18ರಂದು ಕೇಂದ್ರದ ಸಂಸ್ಕೃತಿ ಸಚಿವಾಲಯಕ್ಕೆ ವಿವರವಾದ ಮನವಿ ಸಲ್ಲಿಸಿದ್ದರು.

ಆ ಮನವಿಯಲ್ಲಿ ಅವರು ಮಡಿಕೇರಿ ಅರಮನೆಗೆ ಸಂರಕ್ಷಿತ ಸ್ಮಾರಕ ಸ್ಥಾನಮಾನ ನೀಡುವುದು ಹಾಗೂ ಅಲ್ಲಿ ವಸ್ತುಸಂಗ್ರಹಾಲಯ ಸ್ಥಾಪಿಸುವ ಕುರಿತು ಬಲವಾಗಿ ಆಗ್ರಹಿಸಿದ್ದರು.

ಮಡಿಕೇರಿ ಅರಮನೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಮನಗಂಡು, ಯದುವೀರ್ ಒಡೆಯರ್ ಅವರು ಈ ವಿಷಯವನ್ನು ಕೇಂದ್ರ ಸರ್ಕಾರ ಹಾಗೂ ಎಎಸ್ಐ ಅಧಿಕಾರಿಗಳೊಂದಿಗೆ ನಿರಂತರವಾಗಿ ಪ್ರಸ್ತಾಪಿಸುತ್ತಾ ಬಂದಿದ್ದರು. ಅವರ ಪ್ರಯತ್ನಗಳ ಫಲವಾಗಿ, ಎಎಸ್ಐನ ಹಿರಿಯ ಅಧಿಕಾರಿಗಳು ಜಿಲ್ಲಾಡಳಿತದ ಸಹಯೋಗದಲ್ಲಿ ಈಗಾಗಲೇ ಸ್ಥಳ ಪರಿಶೀಲನೆ ನಡೆಸಿದ್ದು, ಸಂಸತ್ ಸದಸ್ಯರು ನೀಡಿದ ಸಲಹೆಗಳನ್ನು ಭವಿಷ್ಯದ ಅಭಿವೃದ್ಧಿ



ಯೋಜನೆಗಳಲ್ಲಿ ಪರಿಗಣಿಸಲಾಗಿದೆ

ಈ ಸಂಬಂಧ ಸಂಸದರಿಗೆ ಪತ್ರ ಬರೆದಿರುವ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರಾದ ಗಜೇಂದ್ರ ಸಿಂಗ್ ಶೇಖಾವತ್ ಅವರು, ಮಡಿಕೇರಿ ಅರಮನೆಯನ್ನು ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ತಾಣಗಳು ಹಾಗೂ ಅವಶೇಷಗಳ ಕಾಯ್ದೆ, 1958ರ ಅಡಿಯಲ್ಲಿ ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ ಎಂದು ಅಧಿಕೃತವಾಗಿ ತಿಳಿಸಿದ್ದಾರೆ.

ಪರಿಶೀಲನೆ

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮಡಿಕೇರಿ ಅರಮನೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ. ಇದರ ಭಾಗವಾಗಿ, ಪ್ರವಾಸಿಗರ ಅನುಭವವನ್ನು ಉತ್ತಮಗೊಳಿಸುವ ಹಾಗೂ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಡಿಜಿಟಲ್ ಪ್ರದರ್ಶನಗಳನ್ನೊಳಗೊಂಡ ಆಧುನಿಕ ತಾಣ ವಸ್ತುಸಂಗ್ರಹಾಲಯ ಸ್ಥಾಪಿಸುವ ಪ್ರಸ್ತಾವನೆಯೂ ಪರಿಶೀಲನೆಯಲ್ಲಿದೆ. ಇದು ಕೊಡಗಿನ ಸಮೃದ್ಧ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪರಿಣಾಮಕಾರಿಯಾಗಿ ಪರಿಚಯಿಸುವ ಮಹತ್ವದ ಹೆಜ್ಜೆಯಾಗಲಿದೆ ಎಂದು ಸಚಿವರು ವಿವರಿಸಿದ್ದಾರೆ.

ಸಂಸದರ ಸಾಧನೆ

ಈ ಬೆಳವಣಿಗೆ ಕರ್ನಾಟಕದ ಪ್ರಮುಖ ಐತಿಹಾಸಿಕ ಪರಂಪರೆ ತಾಣಗಳಲ್ಲಿ ಒಂದಾದ ಮಡಿಕೇರಿ ಅರಮನೆಯ ಸಂರಕ್ಷಣೆಯತ್ತ ಮಹತ್ವದ ಹೆಜ್ಜೆಯಾಗಿದ್ದು, ಪ್ರದೇಶದ ಸಾಂಸ್ಕೃತಿಕ ಆಸ್ತಿಗಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಗಮನ ಹಾಗೂ ಅನುದಾನ ತರಲು ಸಂಸತ್ ಸದಸ್ಯ ಯದುವೀರ್ ಒಡೆಯರ್ ಅವರು ನಡೆಸುತ್ತಿರುವ ನಿರಂತರ ಪ್ರಯತ್ನಗಳಿಗೆ ಸಾಕ್ಷಿಯಾಗಿದೆ.



> ಮಡಿಕೇರಿ ಅರಮನೆಯ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಬಹುಕಾಲದ ಬೇಡಿಕೆ ಇದೀಗ ಸಾಕಾರಗೊಳ್ಳುವ ಹಂತ ತಲುಪಿರುವುದು ಸಂತೋಷದ ವಿಷಯ. ಕೊಡಗಿನ ವೈಭವಯುತ ಇತಿಹಾಸವನ್ನು ಪ್ರತಿಬಿಂಬಿಸುವ ಪ್ರಮುಖ ಪರಂಪರೆ ಮತ್ತು ಪ್ರವಾಸೋದ್ಯಮ ತಾಣವಾಗಿ ಮಡಿಕೇರಿ ಅರಮನೆಯನ್ನು ಅಭಿವೃದ್ಧಿಪಡಿಸುವುದರ ಜೊತೆಗೆ, ಭವಿಷ್ಯದ ಪೀಳಿಗೆಗಳಿಗೆ ಶೈಕ್ಷಣಿಕ ಮತ್ತು ಪ್ರವಾಸೋದ್ಯಮ ಅವಕಾಶಗಳನ್ನು ಸೃಷ್ಟಿಸಲು ತಾನು ಬದ್ಧ
> ■ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್

ಅಂಬಿಕಾ ಶಿಕ್ಷಣ ಸಂಸ್ಥೆಗಳಲ್ಲಿ ಪ್ರೇರಣಾದಾಯಿ ಉಪನ್ಯಾಸ
ಸಂಸ್ಕಾರದ ಬೆಳಕನ್ನು ಅಂತರಂಗದಲ್ಲಿ ತುಂಬಿಕೊಳ್ಳಬೇಕು

ಪುತ್ತೂರು: ಅಂತರಂಗದ ಕೊಳಕನ್ನು ಹೊರ ತೆಗೆದಾಗ ಅತ್ಯುತ್ತಮ ವಿಚಾರಧಾರೆಗಳು ನಮ್ಮೊಳಗೆ ತುಂಬಿಕೊಳ್ಳಲು ಸಾಧ್ಯ. ಸಂಸ್ಕಾರದ ಬೆಳಕನ್ನು ಒಡಮೂಡಿಸಿಕೊಂಡಾಗ ಮಾತ್ರ ನಮ್ಮೆದುರಿನ ದಾರಿ ಸ್ಪಷ್ಟವಾಗುತ್ತಾ ಸಾಗುತ್ತದೆ. ಈ ಹಿನ್ನೆಲೆಯಲ್ಲಿ ವಿದ್ಯಾಸಂಸ್ಥೆಯಲ್ಲಿ ಪಠ್ಯದೊಂದಿಗೆ ಸಿಗುವ ಇತರ ವಿಚಾರಗಳನ್ನು ಕಡೆಗಣಿಸದೆ ಆದ್ಯತೆಯ ಮೇರೆಗೆ ಸ್ವೀಕರಿಸಬೇಕು ಎಂದು ಪ್ರೇರಣಾದಾಯಿ ಮಾತುಗಾರ ಡಾ. ರಾಹುಲ್ ದೇವರಾಜ್ ಹೇಳಿದರು.

ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ಬಪ್ಪಳಿಗೆಯ ಶ್ರೀ ಶಂಕರ ಸಭಾಭವನದಲ್ಲಿ ಶನಿವಾರ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಪದವಿ ಮಾತ್ರ ಸಾಕಾಗದು

ಇಂದಿನ ಜಗತ್ತು ಕೌಶಲ್ಯವನ್ನು ಬೇಡುತ್ತದೆ. ಹಾಗಾಗಿ ಕೇವಲ ಪದವಿಗಳನ್ನು ಹೊಂದಿದ ಮಾತ್ರಕ್ಕೆ ಔದ್ಯೋಗಿಕ ಬದುಕು




ಸಿದ್ಧವಾಗಲಾರದು. ಹಾಗಾಗಿ ಪ್ರತಿದಿನವೂ ನಮ್ಮೊಳಗೆ ಕೌಶಲ್ಯವನ್ನು ತುಂಬಿಕೊಳ್ಳುವವ ಬಗೆಗೆ ಆಲೋಚಿಸಬೇಕು. ಪ್ರಯತ್ನಿಸುತ್ತಾ ಸಾಗಿದರೆ ದುಸ್ತರವಾದದ್ದು ಯಾವುದೂ ಇರಲಾರದು. ನಿರಂತರ ಪ್ರಯತ್ನವೇ ಯಶಸ್ಸಿನ ಗುಟ್ಟು. ನಾವು ಬಲಹೀನರಾದಷ್ಟೂ ಸಮಾಜ ನಮ್ಮನ್ನು ಪೀಡಿಸುತ್ತದೆ. ಹಾಗಾಗಿ ಬಲಶಾಲಿಗಳಾಗಿ ಬದುಕಬೇಕು, ಆದರೆ ಆ ಬಲ ಮತ್ತೊಬ್ಬರನ್ನು ಶೋಷಿಸುವುದಕ್ಕೆ ಬಳಕೆಯಾಗಬಾರದು ಎಂದು ಅಭಿಪ್ರಾಯಪಟ್ಟರು.

ರಾಷ್ಟ್ರಪ್ರೇಮಿಗಳಾಗಿ

ಅಧ್ಯಕ್ಷತೆ ವಹಿಸಿದ್ದ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ಮಾತನಾಡಿ, ಬಲಿ ಕೊಡುವ ಸಂದರ್ಭದಲ್ಲಿ ಕುರಿ, ಕೋಣಗಳನ್ನೇ ಆಯ್ಕೆ ಮಾಡಲಾಗುತ್ತದೆ. ಯಾವ ನಂಬಿಕೆಯೂ ಹುಲಿ-ಸಿಂಹದ ಬಲಿಯನ್ನು ಬಯಸುವುದಿಲ್ಲ. ಹಾಗಾಗಿ ಧೈರ್ಯಶಾಲಿಗಳಾಗಿ ಬದುಕಬೇಕು ಮತ್ತು ರಾಷ್ಟ್ರಪ್ರೇಮಿಗಳಾಗಿರಬೇಕು ಎಂದು ಹೇಳಿದರು.

ವಿದ್ಯಾರ್ಥಿನಿಯರಾದ ಶ್ರೀವಿಭಾ, ಮಂದಿರಾ ಕಜೆ ಹಾಗೂ ಆದ್ಯಾ ಪ್ರಾರ್ಥಿಸಿದರು. ವಿದ್ಯಾರ್ಥಿನಿ ಶ್ರಾವಣಿ ಸ್ವಾಗತಿಸಿ, ವಿದ್ಯಾರ್ಥಿನಿ ವರ್ಷಲಕ್ಷ್ಮೀ ವಂದಿಸಿದರು. ವಿದ್ಯಾರ್ಥಿನಿ ವೈಷ್ಣವಿ ಪೈ ಕಾರ್ಯಕ್ರಮ ನಿರ್ವಹಿಸಿದರು.

ಮಂಗಳೂರು ವಿವಿಯಲ್ಲಿ 'ನಾನು ಕಾರಂತ' ನಾಟಕ ಪ್ರದರ್ಶನ
ಭಾರತವನ್ನು ಪ್ರಭಾವಿಸಿದ ಲೇಖಕ



ಕೊಣಾಜೆ: ಕಾರಂತರು ನಮ್ಮ ಅಳತೆಗೆ ನಿಲುಕುವವರಲ್ಲ. ಭಾರತೀಯ ಲೇಖಕ. ಅವರ ಬರಹದ ವ್ಯಾಪ್ತಿ, ಸತ್ವ, ಚಿಂತನೆಗಳ ಮೂಲಕ ಭಾರತವನ್ನು ಪ್ರಭಾವಿಸಿದ ಓರ್ವ ಮಹಾನ್ ಲೇಖಕ ಎಂದು ಪ್ರೊ.ಕೆ ಚಿನ್ನಪ್ಪ ಗೌಡ ಹೇಳಿದರು.

ಅವರು ಮಂಗಳೂರು ವಿವಿಯ ಡಾ.ಕೆ.ಶಿವರಾಮ ಕಾರಂತ ಅಧ್ಯಯನ ಪೀಠದ ವತಿಯಿಂದ ನೆಹರು ಚಿಂತನ ಕೇಂದ್ರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಮಂಗಳೂರು ವಿವಿಯ ಮಂಗಳಾ ಸಭಾಂಗಣದಲ್ಲಿ ಶುಕ್ರವಾರ ನಡೆದ 'ನಾನು ಕಾರಂತ' ನಾಟಕ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳೇ ಕಲಾವಿದರಾಗಿದ್ದುಕೊಂಡು ಕಾರಂತರರನ್ನೇ ವಸ್ತು ವಿಷಯವನ್ನಾಗಿಸಿಕೊಂಡು ಪ್ರಸ್ತುತಗೊಳ್ಳುತ್ತಿರುವುದು ಮೊದಲನೆಯ ನಾಟಕ ಯಶಸ್ವಿಯಾಗಿ ನಡೆಯಲಿ ಎಂದು ಹಾರೈಸಿದರು.

ಮಂಗಳೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ ಅವರು ಉದ್ಘಾಟನೆ ನೆರವೇರಿಸಿ ಮಾತನಾಡಿ, ನಾಟಕ, ಜಾನಪದ ಕಲೆಗಳು ತಂತ್ರಜ್ಞಾನದ ನಾಗಾಲೋಟದಲ್ಲಿ ಮೂಲೆಗೆ ಸಲ್ಲುತ್ತಿರುವ ಈ ಕಾಲದಲ್ಲಿ ನಾನು ಕಾರಂತ ನಾಟಕ ಪ್ರದರ್ಶನಗೊಳ್ಳುತ್ತಿರುವುದು ಪ್ರಶಂಸನೀಯ ಎಂದು ಹೇಳಿದರು.

ವೇದಿಕೆಯಲ್ಲಿ ನಾನು ಕಾರಂತ ನಾಟಕ ರಚನೆಕಾರರಾದ ರಾಜಶ್ರೀ ಟಿ. ರೈ ಪೆರ್ಲ, ನಾಟಕ ನಿರ್ದೇಶಕ ಜಗನ್ ಪವಾರ್ ಮೊದಲಾದವರು ಉಪಸ್ಥಿತರಿದ್ದರು. ಡಾ.ಕೆ.ಶಿವರಾಮ ಕಾರಂತ ಅಧ್ಯಯನ ಪೀಠದ ನಿರ್ದೇಶಕ ಪ್ರೊ.ನಾಗಪ್ಪ ಗೌಡ ಸ್ವಾಗತಿಸಿದರು. ನೆಹರು ಚಿಂತನ ಕೇಂದ್ರದ ನಿರ್ದೇಶಕ ಪ್ರೊ.ಪ್ರಶಾಂತ್ ನಾಯ್ಕ್ ವಂದಿಸಿದರು. ಡಾ.ಯಶು ಕುಮಾರ್ ಕಾರ್ಯಕ್ರಮ ನಿರೂಪಿಸಿದರು.


ನಾನು ಕಾರಂತ ನಾಟಕದಲ್ಲಿ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮವಾಗಿ ಪಾತ್ರ ನಿರ್ವಹಿಸಿದರು.



ಶ್ವೇತಪತ್ರ ರಚನೆಗೆ ಸಂಬಂಧಿಸಿ ತಿರುವನಂತಪುರದಲ್ಲಿ ಶನಿವಾರ ಜರಗಿದ ವಿವಿಧ ಇಲಾಖೆಗಳ ಉನ್ನತ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿ ವಿ.ಡಿ.ಸತೀಶನ್ ಮಾತನಾಡಿದರು.

ತೀವ್ರ ಜ್ವರ ಬಾಧಿಸಿ ರಬ್ಬರ್ ಟ್ಯಾಪಿಂಗ್ ಕಾರ್ಮಿಕ ಮೃತ್ಯು

ಪೆರ್ಲ: ತೀವ್ರ ಜ್ವರ ಬಾಧಿಸಿ ರಬ್ಬರ್ ಟ್ಯಾಪಿಂಗ್ ಕಾರ್ಮಿಕನೋರ್ವ ಪುತ್ತೂರಿನ ಆಸ್ಪತ್ರೆಯೊಂದರಲ್ಲಿ ಸಾವಿಗೀಡಾದ ಬಗ್ಗೆ ವರದಿಯಾಗಿದೆ. ಮೃತಪಟ್ಟವರನ್ನು ಖಂಡಿಗೆ ಸಮೀಪದ ಅಬ್ಬಿಕಟ್ಟೆಯ ದಾಮೋದರ ನಾಯ್ಕ್ (42) ಎಂದು ಗುರುತಿಸಲಾಗಿದೆ. ರಬ್ಬರ್ ಟ್ಯಾಪಿಂಗ್ ಕೆಲಸ ನಿರ್ವಹಿಸುತ್ತಿದ್ದ ದಾಮೋದರರಿಗೆ ಪದೇ ಪದೇ ಜ್ವರ ಬರುತ್ತಿದ್ದು ಉಕ್ಕಿನಡ್ಕದ ಕಾಸರಗೋಡು ಮೆಡಿಕಲ್ ಕಾಲೇಜಿಗೆ ತೆರಳಿದಾಗ ಜ್ವರ ಉಲ್ಬಣಗೊಂಡಿದ್ದು



ಇಲಿ ಜ್ವರ ಬಾಧಿಸಿರಬೇಕೆಂದು ಸಂಶಯ ವ್ಯಕ್ತಪಡಿಸಲಾಗಿತ್ತು. ಬಳಿಕ ಅವರನ್ನು ಪುತ್ತೂರಿನ ಆಸ್ಪತ್ರೆಯೊಂದರಲ್ಲಿ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವುದಾಗಿ ತಿಳಿದು ಬಂದಿದೆ. ಅವರು ಸಿಪಿಎಂ ಪಕ್ಷದ ಖಂಡಿಗೆ ಬ್ರಾಂಚ್ ಸದಸ್ಯರಾಗಿದ್ದರು. ಮೃತರು ಪತ್ನಿ ಜಯಲಕ್ಷ್ಮಿ, ಪುತ್ರಿ ಚೈತ್ರಾ, ತಾಯಿ ರತ್ನಾ ಅವರನ್ನು ಅಗಲಿದ್ದಾರೆ. ಅವರ ನಿಧನಕ್ಕೆ ಸಿಪಿಎಂ ಖಂಡಿಗೆ ಬ್ರಾಂಚ್ ಹಾಗೂ ಎಣ್ಮಕಜೆ ಲೋಕಲ್ ಸಮಿತಿ ಸಂತಾಪ ವ್ಯಕ್ತಪಡಿಸಿದೆ.

ಕೊರಗರ ಅಭಿವೃದ್ಧಿ ಸಮಿತಿ ಸಭೆಯಲ್ಲಿ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚೆ

ಮಂಗಳೂರು: ಕೊರಗ ಸಮುದಾಯದವರು ಮನೆ, ನಿವೇಶನಗಳಿಗಾಗಿ ಅರ್ಜಿ ಸಲ್ಲಿಸಿದಾಗ ಅಧಿಕಾರಿಗಳು ವಿವಿಧ ಕಾರಣ ನೀಡಿ ವಿಳಂಬ ಮಾಡುವುದು ಸರಿಯಲ್ಲ. ಸಮುದಾಯದಲ್ಲಿ ಇರುವುದೇ ಬೆರಳೆಣಿಕೆಯಷ್ಟು ಮಂದಿ ಮಾತ್ರ. ನಮ್ಮ ಪರಿಸ್ಥಿತಿ ಏನು ಎನ್ನುವುದು ಈಗಾಗಲೇ ಸರಕಾರಕ್ಕೆ ತಿಳಿದಿದೆ. ಹಾಗಿದ್ದರೂ ನಿರ್ಲಕ್ಷ್ಯ ಯಾಕೆ ಎಂದು ಕೊರಗ ಸಮುದಾಯದ ಮುಖಂಡರು ಪ್ರಶ್ನಿಸಿದ್ದಾರೆ.

ನಗರದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಮಂಗಳೂರು - ಉಳ್ಳಾಲ ತಾಲೂಕು ಕೊರಗರ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಈ ಆಗ್ರಹ ವ್ಯಕ್ತವಾಯಿತು.

ಜಿಲ್ಲಾ ಕೊರಗರ ಸಂಘದ ಅಧ್ಯಕ್ಷ ಸುಂದರ ಬೆಳುವಾಯಿ ಮಾತನಾಡಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿ ಕಾದಿರಿಸಲಾದ ಭೂಮಿಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಬೇಕು. ಕೆಲವು ಕಡೆಗಳಲ್ಲಿ ಸಾಗುವಳಿ ಚೀಟಿ ಕೊಟ್ಟರೂ, ಸರ್ವೆ ಮಾಡಿ ಗಡಿ ಗುರುತು ಮಾಡಿಲ್ಲ. ಐಟಿಡಿಪಿ ಹೆಸರಿನಲ್ಲಿ ಕಾದಿರಿಸಿರುವ ಭೂಮಿಯನ್ನಾದರೂ ಮಂಜೂರು ಮಾಡಿ ಎಂದರು ಆಗ್ರಹಿಸಿದರು. ನಮಗೆ ಮಂಜೂರು ಮಾಡಿದ ಭೂಮಿ ಆದು, ನಮ್ಮ ಅನಂತರ ಸರಕಾರಕ್ಕೆ ಸೇರುತ್ತದೆ. ಮಾರಾಟ ಮಾಡಲು ಅಧಿಕಾರ ವಿರುವುದಿಲ್ಲ. ವಿಳಂಬ ನೀತಿಯಿಂದಾಗಿ ಸಮುದಾಯವೇ ಪೂರ್ತಿ ಕಣ್ಮರೆಯಾಗಲಿದೆ ಎಂದರು.

ಉತ್ತರಿಸಿದ ತಹಶೀಲ್ದಾರ್ ರಮೇಶ್ ಬಾಬು, ಜಿಲ್ಲಾಧಿಕಾರಿಯವರ ಸಮಿತಿಯಲ್ಲಿ ಈ ಬಗ್ಗೆ ತೀರ್ಮಾನ ಆಗಬೇಕು ಎಂದರು.

ಕೊಣಾಜೆ ತಿಪ್ಲೆಪದವು ಎಂಬಲ್ಲಿ ಕೊರಗ ಸಮುದಾಯದ ಮಹಿಳೆಯೊಬ್ಬರ ಮನೆ ನಿರ್ಮಾಣದ ಅಗತ್ಯವಿದೆ. ಮನೆಯವರ ಬಳಿ ರೇಷನ್ ಕಾರ್ಡ್ ಇಲ್ಲ. ಓರ್ವ ದುಡಿದು ಐದು ಮಂದಿ ಸಾಕಬೇಕಾದಪರಿಸ್ಥಿತಿ ಇದೆ. ಮಂಜನಾಡಿಯಲ್ಲೂ ಮಹಿಳೆಯೊಬ್ಬರ ಮನೆ ಅರ್ಧದಲ್ಲಿ ಬಾಕಿಯಾಗಿದ್ದು, ಒಂದೂವರೆ ವರ್ಷದಿಂದ ಹಣ ಬಿಡುಗಡೆಯಾಗಿಲ್ಲ. ಇಲಾಖೆಯವರು ಈ ಬಗ್ಗೆ ಗಮನ ಹರಿಸಬೇಕು. ಮುಡಿಪುವಿನಲ್ಲಿಯೂ ಮಹಿಳೆಯೊಬ್ಬರಿಗೆ ಹೊಸ ಮನೆ ಮಂಜೂರಾಗಿ 2 ವರ್ಷವಾದರೂ ಆರ್ಥಿಕ ಸಮಸ್ಯೆಯಿಂದ ಕಟ್ಟಲು ಸಾಧ್ಯವಾಗಿಲ್ಲ. ಸ್ಥಳೀಯಾಡಳಿತ ದಾನಿಗಳ ನೆರವಿನಿಂದ ಮನೆ ಕಟ್ಟಿಸಿ ಕೊಡಬೇಕು ಎಂದು ಮುಖಂಡರು ಆಗ್ರಹಿಸಿದರು.

ಕುಡುಪು ಗ್ರಾಮದಲ್ಲಿ ಕೊರಗರಿಗಾಗಿ ಮೀಸಲಿಟ್ಟಿರುವ ಜಮೀನನ್ನು ಇನ್ನೂ ಹಸ್ತಾಂತರಿಸಿಲ್ಲ. 2018ರಿಂದ ವಿವಿಧ ದಾಖಲೆಗಳನ್ನು ಕೇಳುತ್ತಿದ್ದಾರೆ. ಆದರೆ ಜಮೀನು ಮಾತ್ರ ಗಗನ ಕುಸುಮವಾಗಿದೆ. ಚೇಳ್ಯಾರು ಲೇ ಔಟ್‌ನಲ್ಲೂ ಭೂಮಿ ಸಿಕ್ಕಿಲ್ಲ ಎಂದು ದಲಿತ ಮುಖಂಡರು ಬೇಸರಿಸಿದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ-1/ಟೆಂಡರ- 06/2026-27/965 ದಿನಾಂಕ: 30.05.2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಸಿ-8) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 08-06-2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 09-06-2026 16.30 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 10-06-2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ: 5054-80-190-0-01-132 KRDCL During 2026-27 ವರ್ಕ ಇಂಡೆಂಟ್ (1) PWD/2026-27/SE1375

(ಕೆಸಿ-8) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 91802550121 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ
DIPR/KWR/KSMCA/169/26-27 dt. 30.05.2026

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರವರ ಕಚೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ದೂರವಾಣಿ : 0836- 2747944(ಕ) Fax No.: 0836-2741209 E-mail: eepwddha@gmail.com
ಕ್ರಸಂಃಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,4/2026-27/1004 ದಿನಾಂಕ: 30-05-2026

ಟೆಂಡರ್ ಪ್ರಕಟಣೆ I.F.T - KW - 3 & 4
ಇ-ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ-1, 3 & 4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. **(kppp.karnataka.gov.in)** ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಕನಿಷ್ಠ **ರೂ.12.50** ಲಕ್ಷಗಳಿಂದ ಗರಿಷ್ಠ **ರೂ.200.00** ಲಕ್ಷಗಳ ವರೆಗೆ, **4059-80-051-0-60-132,** ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ, **8443 Deposit construction, 5054-04-337-0-01-154** ಜಿಲ್ಲಾ ರಸ್ತೆಗಳು ಸುಧಾರಣೆ ಅಡಿ, **2059-80-053-4-00-200** ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ಲೆಕ್ಕಶೀರ್ಷಿಕೆ ಅಡಿ ಬರುವ ಕಾಮಗಾರಿಗಳಿಗೆ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಗಿನಂತಿದೆ.

1. Calander of Events: - ಸಾಮಾನ್ಯ :- 1) PWD/2025-26/RD/WORK_INDENT30736/CALL-4, 2) PWD/2025-26/SE1161 (Extension), 3) PWD/2025-26/BD/WORK_INDENT 34990/CALL-2 (Extension) 1) ಪ್ರೀಬಿಡ್/ಆಕ್ಷೇಪಣೆ-ಸಂದೇಹ ದಿನಾಂಕ: 08.06.2026 (ಬೆಳಿಗ್ಗೆ 12:30 ಗಂಟೆಯವರೆಗೆ). 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 09.06.2026 (ಸಾಯಂಕಾಲ 16:00 ಗಂಟೆಯವರೆಗೆ). 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.06.2026 (ಸಾಯಂಕಾಲ 16:30 ಗಂಟೆಯ ನಂತರ). 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.06.2026 (ಸಾಯಂಕಾಲ 16:30 ಗಂಟೆಯ ನಂತರ).

2. Calander of Events: - ಸಾಮಾನ್ಯ :- 1) PWD/2026-27/RD/WORK_INDENT35914.
1) ಪ್ರೀಬಿಡ್/ಆಕ್ಷೇಪಣೆ-ಸಂದೇಹ ದಿನಾಂಕ: 18.06.2026 (ಬೆಳಿಗ್ಗೆ 12:30 ಗಂಟೆಯವರೆಗೆ). 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 19.06.2026 (ಸಾಯಂಕಾಲ 16:00 ಗಂಟೆಯವರೆಗೆ). 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.06.2026 (ಸಾಯಂಕಾಲ 16:30 ಗಂಟೆಯ ನಂತರ). 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 22.06.2026 (ಸಾಯಂಕಾಲ 16:30 ಗಂಟೆಯ ನಂತರ).

ಕಾಮಗಾರಿಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ **http://www.kppp.karnataka.gov.in** ದಲ್ಲಿ ಹಾಗೂ ಲೋಕೊಪಯೋಗಿ ಇಲಾಖೆ ಧಾರವಾಡ ವಿಭಾಗ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಒಂದು ವೇಳೆ ಟೆಂಡರ್ ತೆರೆಯುವ ದಿನಾಂಕದಂದು ರಜಾ ದಿನಗಳು ಬಂದಲ್ಲಿ ಕಚೇರಿಯ ಕೆಲಸದ ದಿನದಂದು ಟೆಂಡರ್ ತೆರೆಯಲಾಗುವುದು.

ಸಹಿ/-
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ವಾ.ಸಾ.ಇ./ಧಾರವಾಡ/247/2026-27/ದೇಶಪಾಂಡೆಪಬ್ಲಿಸಿಟಿ

ನಗರಸಭಾ ಕಾರ್ಯಾಲಯ ರಾಬರ್ಟ್‌ಸನ್‌ಪೇಟೆ
ಕೆ.ಜಿ.ಎಫ್-563122 CITY MUNICIPAL COUNCIL ROBERTSONPET KOLAR GOLD FIELDS - 563122
Website: www.robertsonpetcity.mrcgov.in, E mail: itstaff_ulb_robertsonpet@yahoo.com Phone No:08153-260256
ಸಂಖ್ಯೆ:ನಸರಾ/ತಾಶಾ/ಸ.ಅ/ಇ-ಪ್ರೊಕ್/ಸಿಆರ್/02/2026-27 ದಿನಾಂಕ:26.05.2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ದ್ವಿ-ಲಕೋಟೆ ಪದ್ಧತಿ)

ರಾಬರ್ಟ್‌ಸನ್‌ಪೇಟೆ ನಗರಸಭೆ ವ್ಯಾಪ್ತಿಯಲ್ಲಿ ನಗರಸಭೆ ನಿಧಿ ಮತ್ತು ಮಾನ್ಯ ಮುಖ್ಯ ಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಅನುದಾನದ ಅಡಿಯಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ನೊಂದಾಯಿತ ಗುತ್ತಿಗೆದಾರರುಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ-1999 ನಿಯಮಗಳು 2000) ಅನ್ವಯ ಐಟಂವಾರು ದರಗಳ ದ್ವಿ-ಲಕೋಟೆ ಪದ್ಧತಿ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

sl no	Name of work	estimated cost (Rs.In Lakhs	category
1	DMA/2026-27/OW/WORK_INDENT57582	300.00	OTHERS
2	DMA/2025-26/OW/WORK_INDENT53058/CALL-3	80.5	OTHERS
3	DMA/2025-26/OW/WORK_INDENT53068/CALL-3	50.3	OTHERS
4	DMA/2025-26/OW/WORK_INDENT53071/CALL-3	67.5	OTHERS

ಆಯಾ ಕಾಮಗಾರಿಗಳಿಗೆ ಅನ್ವಯಿಸುವ ಟೆಂಡರ್ ದಾಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ ನಗರಸಭೆ ರಾಬರ್ಟ್‌ಸನ್‌ಪೇಟೆ ರವರನ್ನು ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08153-260256.

ಸಹಿ/- ಡಾ॥ಎಂ.ಆರ್ ರವಿ, ಆಡಳಿತಾಧಿಕಾರಿಗಳು, ನಗರಸಭೆ, ಕೆಜಿಎಫ್, ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ
ಸಹಿ/- ಶ್ರೀಧರ್ ವಿ, ಪೌರಾಯುಕ್ತರು, ನಗರಸಭೆ, ಕೆಜಿಎಫ್
ವಾಸಾಸಂಇ/ ಕೋಲಾರ/ ಆರ್.ಓ.ಸಂಖ್ಯೆ:91/ಕೆಎಸ್‌ಎಂಸಿಎ/ 2026-27

ಪೊಲೀಸ್ ಉಪ ಮಹಾನಿರೀಕ್ಷಕರು, ಈಶಾನ್ಯ ವಲಯ ಕಲಬುರಗಿ
ಜಿಲ್ಲಾ ಪೊಲೀಸ್ ಭವನ, ಜಿ.ಜಿ.ಹೆಚ್. ರೋಡ್, ಕಲಬುರಗಿ. ದೂ.08472-263605, Email: estnergba@ksp.gov.in
ಸಂ. STS/01/ NER/DRONE/2026-27 ದಿನಾಂಕ:29/05/2026.

ಟೆಂಡರ ಪ್ರಕಟಣೆ

ಪೊಲೀಸ್ ಇಲಾಖೆಗೆ ಅವಶ್ಯಕತೆವಿರುವ **SUPPLY AND MAINTENANCE OF UNMANNED AERIAL VEHICLE (DRONE) WITH ACCESSORIES** ಗಳನ್ನು ಅವಶ್ಯಕವಿರುವ ಡ್ರೋಣ್ ಮತ್ತು ಅದರ ಸಾಧನ ಸಾಮಾಗ್ರಿಗಳನ್ನು ಖರೀದಿಸಲು ಅಳವಡಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು **https://kppp.karnataka.gov.in** ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ ಪ್ರಕಟಣೆ ಸಂಖ್ಯೆ ಟೆಂಡರ **No:KSP/2025-26/IND0535/CALL-2.** 2) ಟೆಂಡರ ಪ್ರಕಟಣೆ ದಿನಾಂಕ : 26.05.2026. 3) ಟೆಂಡರಗೆ ಸಂಬಧಿಸಿದ ಯಾವುದೇ ಮಾಹಿತಿಯನ್ನು ಪಡೆಯುವ ಕೊನೆಯ ದಿನಾಂಕ : 01.06.2026 at 17.00 hrs, 4) ಪ್ರಿ-ಬಿಡ್ ಮಿಟಿಂಗ್ ದಿನಾಂಕ : 02.06.2026 at 11.30 hrs, ಸ್ಥಳ ಪೋಲಿಸ್ ಭವನ ಕಲಬುರಗಿ 5) ಆನ್‌ಲೈನ್ ಟೆಂಡರ ಫಾರಂಗಳನ್ನು ಡೌನಲೋಡ್ ಮಾಡಿಕೊಂಡು, ಟೆಂಡರ ಅನ್ನು ಇ-Procurment portal ಮುಖಾಂತರ ಸಲ್ಲಿಸಲು **ಕೊನೆಯ ದಿನಾಂಕ :** 09.06.2026 at 17-30 hrs, 6) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : 11-06-2026 at 11-00 hrs 7) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : 15.06.2026 at 11-00 hrs, 8) ಟೆಂಡರನ ಅಂದಾಜು ಮೊತ್ತ ರೂ. **Rs. 100 Lakhs,** 9 ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ ರೂ. **Rs. 1,50,000/-** 10) ವ್ಯವಹರಿಸ ಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ ಪೋಲೀಸ್ ಉಪ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಕಲಬುರಗಿ **Ph: 08472-263605.**

ಸಹಿ/- ಪೊಲೀಸ್ ಉಪ ಮಹಾನಿರೀಕ್ಷಕರು ಈಶಾನ್ಯ ವಲಯ ಕಲಬುರಗಿ ರವರ ಪರವಾಗಿ
ವಾ.ಸಾ.ಸಂ.ಇ.ಕಲಬುರಗಿ/172/ದೇಶಪಾಂಡೆ ಪಬ್ಲಿಸಿಟಿ/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123
ಸಂ:ಕಾನಿಇ/ಲೋಇ/ಬವಿ/ಟಿ.ಎಸ್-3/ಕೆಕೆಆರ್‌ಡಿಬಿ/2026-27/1084 ದಿನಾಂಕ:25.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಹಾಗೂ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2026-27/RD/WORK_INDENT36171 (General Category)	100.00
2)	PWD/2026-27/RD/WORK_INDENT36085 (General Category)	100.00
3)	PWD/2026-27/RD/WORK_INDENT36082 (General Category)	100.00
4)	PWD/2026-27/BR/WORK_INDENT35848 (General Category)	20.25
5)	PWD/2026-27/BD/WORK_INDENT36378	345.40
6)	PWD/2026-27/RD/WORK_INDENT35843	108.69
7)	PWD/2026-27/BD/WORK_INDENT36126	500.00
8)	PWD/2026-27/BD/WORK_INDENT36098	600.00
9)	PWD/2026-27/RD/WORK_INDENT35911	200.00
10)	PWD/2026-27/RD/WORK_INDENT35912	200.00
11)	PWD/2026-27/RD/WORK_INDENT35913	219.00
12)	PWD/2026-27/RD/WORK_INDENT36135	128.50
13)	PWD/2026-27/RD/WORK_INDENT36136	114.20
14)	PWD/2026-27/RD/WORK_INDENT35910	175.00
15)	PWD/2026-27/RD/WORK_INDENT35909	180.00
16)	PWD/2026-27/RD/WORK_INDENT35908	291.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ-ಬಿಡ್ ಸಭೆ ದಿನಾಂಕ ಮತ್ತು ಸಮಯ : **30.05.2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **02.06.2026 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **08.06.2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **09.06.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/193

ಕಿರುಸುದ್ದಿ

ಉಡುಪಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳ ನಿಯುಕ್ತಿ

ಉಡುಪಿ : ಜಿಲ್ಲಾ ಬಿಜೆಪಿ ಯುವ ಮೋರ್ಚಾದ ನೂತನ ಪದಾಧಿಕಾರಿಗಳನ್ನು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ಅನುಮೋದನೆ ಮೇರೆಗೆ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ ಅವರು ನಿಯುಕ್ತಿಗೊಳಿಸಿ ಪಟ್ಟಿ ಬಿಡುಗಡೆಗೊಳಿಸಿದ್ದಾರೆ.

ಉಪಾಧ್ಯಕ್ಷರುಗಳಾಗಿ : ಪ್ರಸಾದ್ ಬಿಲ್ಲವ, ಸಚಿನ್ ಸುವರ್ಣ ಪಿತ್ರೋಡಿ, ಪೃಥ್ವಿರಾಜ್ ಮಣಿಪಾಲ, ಗಜೇಂದ್ರ ಎಸ್. ಬೇಲೆಮನೆ, ಗುರುರಾಜ್ ಮಾಡ, ಪ್ರಧಾನ ಕಾರ್ಯದರ್ಶಿಗಳಾಗಿ ಅಭಿರಾಜ್ ಸುವರ್ಣ ಕಟಪಾಡಿ, ಪ್ರದೀಪ್ ಕುಂದರ್ ಹೊನ್ನಾಳ, ಕಾರ್ಯದರ್ಶಿಗಳಾಗಿ ಯತೀಶ್ ಶೆಟ್ಟಿ, ಲೋಕೇಶ್ ಕಾಂಚನ್, ನಿತೇಶ್ ಶೆಟ್ಟಿ, ರಾಕೇಶ್ ಅಮೀನ್, ಗೌತಮ್ ಅಗ್ರಹಾರ, ಕೋಶಾಧಿಕಾರಿಗಳಾಗಿ ಪ್ರವೀಣ್ ಸೋಮಯ್ಯ, ಮಾಧ್ಯಮ ಪ್ರಮುಖ್ : ಸಂದೀಪ್ ಕೂರಾಡಿ, ಕಾರ್ಯಕಾರಿಣಿ ಸದಸ್ಯರು : ದರ್ಶಿತ್ ಶೆಟ್ಟಿ, ವಿನೋದ್ ದೇವಾಡಿಗ, ಚೇತನ್ ಪೂಜಾರಿ, ಆದರ್ಶ ಚಕ್ರತೀರ್ಥ, ಮನೀಷ್ ಸುವರ್ಣ, ಗಗನ್ ಶೆಟ್ಟಿ, ಪ್ರಜ್ವಲ್ ಕಾಂಚನ್, ಸಚಿನ್ ಪೆರ್ಡೂರು, ವಿನಿಶ್ ವಿ. ಶೆಟ್ಟಿ, ಅರುಣ್ ಆಚಾರ್ಯ, ಅನಿಲ್ ನೆಂಪು, ಗಣೇಶ್ ಕುಂದರ್, ನಿತೇಶ್ ಶ್ರೀಯಾನ್, ರಾಕೇಶ್ ಜೋಗಿ, ಆದಿತ್ಯ ಆಚಾರ್ಯ, ಪ್ರಿತುಲ್ ಕೆ. ಎಚ್. ಅವರುಗಳನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಶಾಲಾ ಮಕ್ಕಳಿಗೆ ಪುಸ್ತಕ ವಿತರಣೆ

ಕುಂಬಳೆ: ಮೊಗ್ರಾಲ್ ಪುತ್ತೂರು ಸಮೀಪದ ಕಲ್ಲಂಗಡಿ ಬಳ್ಳೂರು ಗಟ್ಟಿ ಸಮಾಜದ ವತಿಯಿಂದ ಶಾಲಾ ಮಕ್ಕಳಿಗೆ 20ನೇ ವರ್ಷದ ಪುಸ್ತಕ ವಿತರಣೆ ಕಾರ್ಯಕ್ರಮವು ಮೇ 31ರಂದು ಸಂಜೆ 4ಗಂಟೆಗೆ ಶ್ರೀ ಸೋಮನಾಥ ಸೇವಾ ಬಳಗದ ಕಾರ್ಯಾಲಯಲದಲ್ಲಿ ಜರಗಲಿದೆ. ಕುಂಬಳೆ ಸೀಮೆಯ ಗಟ್ಟಿ ಸಮಾಜದ ಗುರಿಕ್ಕಾರರು, ಅಧ್ಯಕ್ಷರು, ಶ್ರೀ ಸೋಮನಾಥ ಸೇವಾ ಬಳಗದ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ಮಾತಂಡ ಸುರೇಶ್



ಮಡಿಕೇರಿ: ಮಡಿಕೇರಿಯ ಹಿರಿಯ ಸಮಾಜ ಸೇವಕ ಮಾತಂಡ ಸುರೇಶ್ ಚಂಗಪ್ಪ ಅವರು ಕೆಲ ಕಾಲದ ಅನಾರೋಗ್ಯದ ಬಳಿಕ ಶನಿವಾರ ಬೆಳಗಿನ ಜಾವ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮಡಿಕೇರಿಯ ಕೈಗಾರಿಕಾ ಬಡಾವಣೆಯ ದಿ.ಜಿ.ಗೋಪಾಲಕೃಷ್ಣ ರಸ್ತೆಯಲ್ಲಿ ಕಳೆದ ಮೂರು ದಶಕಕ್ಕೂ ಹೆಚ್ಚು ಕಾಲ ಬಿ.ಎಫ್.ಪಿ. ಹೆಸರಿನ ಬೇಕರಿ ಉತ್ಪನ್ನಗಳ ವಹಿವಾಟು ನಡೆಸುತಿದ್ದ ಸುರೇಶ್ ಚಂಗಪ್ಪ ಅವರು, ರೋಟರಿ ಸೇವಾ ಸಂಸ್ಥೆಯಲ್ಲಿ ಜಿಲ್ಲಾ ಗವರ್ನರ್ ಆಗಿಯೂ ಕಾರ್ಯ ನಿರ್ವಹಿಸಿದ್ದರು. ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷರಾಗಿದ್ದ ಸಂದರ್ಭ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರನ್ನು ಕೊಡವ ಸಮಾಜದ ಶತಮಾನೋತ್ಸವ ಸಮಾರಂಭಕ್ಕೆ ಕರೆಸುವಲ್ಲಿ ಅವರು ಯಶಸ್ವಿಯಾಗಿದ್ದರು. ಸದಾ ಹಸನ್ಮುಖಿಯಾಗಿದ್ದ ಸುರೇಶ್ ಚಂಗಪ್ಪ ವಿವಿಧ ಕ್ಷೇತ್ರದಲ್ಲಿ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡು ಜನಾನುರಾಗಿಯಾಗಿದ್ದರು. ಮೃತರು ಪತ್ನಿ ದಮಯಂತಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಕಮಲಾ ನಾಯ್ಕ್



ಕೈಕಂಬ: ಎಡಪದವಿನ ಪತ್ರಿಕಾ ಮಾರಾಟಗಾರ ಪುರಂದರ ನಾಯ್ಕ್ ಅವರ ತಾಯಿ ಕಮಲ ನಾಯ್ಕ್ ಕೊರ್ಡೇಲ್ (85) ಅಲ್ಪ ಕಾಲದ ನಿನ್ನೆ ರಾತ್ರಿ 3.30ಕ್ಕೆ ಅಲ್ಪ ಕಾಲದ ಅನಾರೋಗ್ಯದಿಂದ ಶನಿವಾರ ಮುಂಜಾನೆ ಸ್ವಗೃಹದಲ್ಲಿ ನಿಧನರಾದರು. ಸ್ಥಳೀಯವಾಗಿ ಪ್ರಸೂತಿ ಕಾರ್ಯ ನಿರ್ವಹಿಸುತ್ತಿದ್ದ ಕಮಲಾ ಅವರು ನಾಲ್ವರು ಗಂಡು ಮತ್ತು ಮೂವರು ಪುತ್ರಿಯರನ್ನು ಹಾಗೂ ಮೊಮ್ಮಕ್ಕಳು, ಬಂಧುಗಳನ್ನು ಅಗಲಿದ್ದಾರೆ.

ಪೂವಪ್ಪ ಗೌಡ



ಉಪ್ಪಿನಂಗಡಿ: ಕಡಬ ತಾಲೂಕಿನ ಕೊಣಾಲು ಗ್ರಾಮದ ಎಣ್ಣೆತ್ತೋಡಿ ನಿವಾಸಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಕಾರ್ಯಕರ್ತ ಪೂವಪ್ಪ ಗೌಡ ಎಣ್ಣೆತ್ತೋಡಿ (66) ಅವರು ಅಲ್ಪಕಾಲದ ಅಸೌಖ್ಯದಿಂದ ಮೇ 29ರಂದು ನಿಧನರಾದರು. ಇವರು ಬಾಲ್ಯದಿಂದಲೇ ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರಾಗಿ ಗುರುತಿಸಿಕೊಂಡಿದ್ದರು. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ನಡೆದ ಕರಸೇವೆಯಲ್ಲಿ ಕರಸೇವಕರಾಗಿ ಅಯೋಧ್ಯೆಗೆ ತೆರಳಿದ್ದರು. ಊರಿನಲ್ಲಿ ಕೃಷಿಯ ಜೊತೆಗೆ ಸಾಮಾಜಿಕವಾಗಿ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಅನಾರೋಗ್ಯದ ಹಿನ್ನೆಲೆಯಲ್ಲಿ ಮೂರು ದಿನದ ಹಿಂದೆ ಪುತ್ತೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರು ಅಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ನಿಧನರಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೃತರ ಮನೆಗೆ ಹಲವು ಗಣ್ಯರು ಭೇಟಿ ನೀಡಿ ಸಂತಾಪ ಸೂಚಿಸಿದ್ದಾರೆ.

ರಾಮಚಂದ್ರ ಆಚಾರ್ಯ



ಹೆಬ್ರಿ: ಇಲ್ಲಿನ ರಾಗಿಹಕ್ಲು ನಿವಾಸಿ ರಾಮಚಂದ್ರ ಆಚಾರ್ಯ (69) ಅವರು ಅಲ್ಪಕಾಲದ ಅನಾರೋಗ್ಯ ದಿಂದ ಶುಕ್ರವಾರ ಮಣಿಪಾಲ ಆಸ್ಪತ್ರೆಯಲ್ಲಿ ನಿಧನರಾದರು. ವೃತ್ತಿಯಲ್ಲಿ ಟೈಲರ್ ಆಗಿದ್ದ ಅವರಿಗೆ ಪತ್ನಿ ನಳಿನಿ, ಪುತ್ರರಾದ ಅಕ್ಷಯ್ ಹಾಗೂ ಅಜಯ್ ಇದ್ದಾರೆ.

ಮೋಹನನ್ ಎಂ.

ಮುಳ್ಳೇರಿಯ: ಕಾರಡ್ಕ ಬಳಿಯ ಅಡ್ಕಂ ನಿವಾಸಿ, ಆಟೋರಿಕ್ಷಾ ಚಾಲಕರಾಗಿದ್ದ ಮೋಹನನ್ ಎಂ. (76) ನಿಧನ ಹೊಂದಿದರು. ಅವರು ಅಸೌಖ್ಯ ಬಾಧಿಸಿ ಚಿಕಿತ್ಸೆ ಪಡೆಯುತ್ತಿದ್ದರು. ಮುಂಬಯಿ, ಬೆಂಗಳೂರು, ಕಾಸರಗೋಡು ಮೊದಲಾದ ಕಡೆಗಳಲ್ಲಿ ಚಾಲಕರಾಗಿ ದುಡಿದಿದ್ದರು. ಮೃತರು ಮಕ್ಕಳಾದ ಸಿ.ಮನೋಜ್, ಸಿ.ಸಿನೋಜ್ ಅವರನ್ನು ಅಗಲಿದ್ದಾರೆ.



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವತಿಯಿಂದ ನಡೆದ ಅಂತರ ಕೆಐಸಿಎಂ ಚರ್ಚಾ ಸ್ಪರ್ಧೆಯಲ್ಲಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಮಡಿಕೇರಿ ತರಬೇತಿ ಸಂಸ್ಥೆಯ ಅಭ್ಯರ್ಥಿಗಳಾದ ಶ್ರೇಯಾ ಪೊನ್ನಪ್ಪ ಬಿ. ಅವರು ರಾಜ್ಯಕ್ಕೆ ಪ್ರಥಮ ಬಹುಮಾನ ಮತ್ತು ಕಾವ್ಯ ಕೆ.ಸಿ. ಅವರು ದ್ವಿತೀಯ ಬಹುಮಾನ ಜೊತೆಗೆ ಪರ್ಯಾಯ ಪಾರಿತೋಷಕ ಪಡೆದಿದ್ದಾರೆ. ತಮ್ಮ ತರಬೇತಿ ಸಂಸ್ಥೆಯ ಅಭ್ಯರ್ಥಿಗಳ ಸಾಧನೆಗೆ ಸಂಸ್ಥೆಯ ಪ್ರಾಂಶುಪಾಲ ಪುಟ್ಟಸ್ವಾಮಿ ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

ಮುಂಗಾರು ಮಳೆಯ ಸವಾಲು ಎದುರಿಸಲು ಕೊಂಕಣ ರೈಲ್ವೆ ಸಜ್ಜು

ಉಡುಪಿ: ಕರಾವಳಿ ಹಾಗೂ ಮಲೆನಾಡಿನ ಭಾಗದಲ್ಲಿ ಮುಂಬರುವ ಮುಂಗಾರು ಮಳೆಯ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಕೊಂಕಣ ರೈಲ್ವೆಯು ಸಂಪೂರ್ಣವಾಗಿ ಸಜ್ಜಾಗುತ್ತಿದ್ದು, ಪ್ರಯಾಣಿಕರ ಸುರಕ್ಷಿತ ಪ್ರಯಾಣಕ್ಕಾಗಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ.

ಸುರಕ್ಷತೆಯ ಹಿತದೃಷ್ಟಿಯಿಂದ ಪ್ರತಿ ವರ್ಷದಂತೆ ಈ ಬಾರಿಯೂ ಮುಂಗಾರು ಅವಧಿಯ ವಿಶೇಷ ರೈಲು ಸಂಚಾರ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದ್ದು, ಇದು ಜೂನ್ 15 ರಿಂದ ಅಧಿಕೃತವಾಗಿ ಜಾರಿಗೆ ಬರಲಿದೆ.

ಕೊಂಕಣ ರೈಲ್ವೆ ಮಾರ್ಗದ ಭೌಗೋಳಿಕ ಪರಿಸ್ಥಿತಿ ಅತ್ಯಂತ ಕಠಿಣವಾಗಿದ್ದು, ಮುಂಗಾರು ಆರಂಭವಾಗುತ್ತಿದ್ದಂತೆ ಸುರಿಯುವ ಭಾರಿ ಮಳೆ, ಹಠಾತ್ ಗುಡ್ಡ ಕುಸಿತ ಹಾಗೂ ಹಳಿಗಳ ಮೇಲೆ ಮಣ್ಣು ಕುಸಿಯುವ ಅಪಾಯಗಳು ರೈಲು ಸಂಚಾರಕ್ಕೆ ಪ್ರತಿವರ್ಷ ದೊಡ್ಡ ಸವಾಲನ್ನು ಸೃಷ್ಟಿಸುತ್ತವೆ. ಈ ಹಿನ್ನೆಲೆಯಲ್ಲಿ ಪ್ರಯಾಣಿಕರ ಜೀವದ ರಕ್ಷಣೆ ಹಾಗೂ ರೈಲುಗಳ ನಿರಂತರ ಮತ್ತು ಸುಗಮ ಸಂಚಾರಕ್ಕೆ ಮೊದಲ ಆದ್ಯತೆ ನೀಡಿರುವ ಕೊಂಕಣ ರೈಲ್ವೆ ಆಡಳಿತ ಮಂಡಳಿಯು ವ್ಯಾಪಕ ಮುಂಗಾರು ಸಿದ್ಧತೆಗಳನ್ನು ಈಗಾಗಲೇ ಪೂರ್ಣಗೊಳಿಸಿದೆ.

ಮಳೆಗಾಲದಲ್ಲಿ ಯಾವುದೇ ದುರಂತಗಳು ಸಂಭವಿಸದಂತೆ ರೈಲ್ವೆ ಮಾರ್ಗದ ವಿವಿಧ ಆಯಕಟ್ಟಿನ ಭಾಗಗಳಲ್ಲಿ ಮೂಲಸೌಕರ್ಯಗಳನ್ನು ಬಲಪಡಿಸಲಾಗಿದೆ. ಗುಡ್ಡ ಕುಸಿಯುವ ಸೂಕ್ಷ್ಮ ವಲಯಗಳಲ್ಲಿ ಭೂಸುರಕ್ಷಾ ತಾಂತ್ರಿಕ ಕ್ರಮಗಳು, ರಿಯಲ್ ಟೈಮ್ ನಿಗಾವ್ಯವಸ್ಥೆ , ಹಳಿಗಳ ಮೇಲೆ ದಿನದ 24 ಗಂಟೆಯೂ ತೀವ್ರ ನಿಗಾ ಇಡುವ ವಿಶೇಷ ಗಸ್ತು ಪಡೆ ಹಾಗೂ ಯಾವುದೇ ತುರ್ತು ಪರಿಸ್ಥಿತಿಯನ್ನು ಎದುರಿಸಲು ತಕ್ಷಣ ಸ್ಪಂದಿಸುವ ಕಂಟ್ರೋಲ್ ರೂಂ ವ್ಯವಸ್ಥೆಗಳನ್ನು ಜಾರಿಗೊಳಿಸಲಾಗಿದೆ. ಹವಾಮಾನ ವೈಪರೀತ್ಯದ ಮುನ್ಸೂಚನೆಯನ್ನು ಕ್ಷಣಕ್ಷಣಕ್ಕೂ ಪಡೆಯಲು ಭಾರತೀಯ ಹವಾಮಾನ ಇಲಾಖೆಯ ಜೊತೆಗೆ ಕೊಂಕಣ ರೈಲ್ವೆಯೂ ನಿಕಟ ಸಮನ್ವಯ ಸಾಧಿಸಿದೆ. ಕೆಲವು ಪ್ರಮುಖ ಮತ್ತು ಅಪಾಯಕಾರಿ ರೈಲು ವಿಭಾಗಗಳಲ್ಲಿ ರೈಲುಗಳ ವೇಗ ನಿಯಂತ್ರಣ ಕೂಡ ಜಾರಿಯಲ್ಲಿರಲಿದೆ.

ಆಳ್ವಾಸ್‌ನ ವಿವಿಧ ಶಿಕ್ಷಣ ಸಂಸ್ಥೆಗಳ 2,627 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ | ಡಾ. ಚಿನ್ನಪ್ಪ ಗೌಡ ಕಿವಿಮಾತು

ಉತ್ತಮ ವ್ಯಕ್ತಿತ್ವವೇ ಶಿಕ್ಷಣದ ನಿಜ ಉದ್ದೇಶ





ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ಶನಿವಾರ ಆಳ್ವಾಸ್ ನುಡಿಸಿರಿ ವೇದಿಕೆಯಲ್ಲಿ ಆಯೋಜಿಸಲಾದ ಪದವಿ ಪ್ರದಾನ ಸಮಾರಂಭದಲ್ಲಿ ಆಳ್ವಾಸ್‌ನ ವಿವಿಧ ಶಿಕ್ಷಣ ಸಂಸ್ಥೆಗಳ 2,627 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಾವೇರಿಯ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಚಿನ್ನಪ್ಪ ಗೌಡ ಪದವೀಧರರನ್ನು ಉದ್ದೇಶಿಸಿ ಮಾತನಾಡಿ, ಶಿಕ್ಷಣದ ನಿಜವಾದ ಉದ್ದೇಶವು ಕೇವಲ ಪದವಿ ಪಡೆಯುವುದಲ್ಲ, ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಾಗಿದೆ. ಪದವಿ ಪ್ರಮಾಣಪತ್ರವು ಕೇವಲ ಒಂದು ಕಾಗದದ ತುಣುಕಾಗಿದ್ದು, ಅದಕ್ಕೆ ನಿಜವಾದ ಮೌಲ್ಯ ದೊರೆಯುವುದು ವ್ಯಕ್ತಿಯ ಜ್ಞಾನ, ಸಾಮರ್ಥ್ಯ, ಪ್ರಾಮಾಣಿಕತೆ ಹಾಗೂ ಜೀವನ ಮೌಲ್ಯಗಳಿಂದ ಮಾತ್ರ ಎಂದು ಅವರು ಅಭಿಪ್ರಾಯಪಟ್ಟರು.

ಆಳ್ವಾಸ್ ವಿಶಿಷ್ಟ ಛಾಪು

ಶಿಕ್ಷಣವು ಕೇವಲ ಶೈಕ್ಷಣಿಕ ಸಾಧನೆಗಳಿಗೆ ಸೀಮಿತವಲ್ಲ. ವಿದ್ಯಾರ್ಥಿಗಳು ಕಲಿಕೆಯ ಅವಧಿಯಲ್ಲಿ ರೂಪಿಸಿಕೊಂಡ ವ್ಯಕ್ತಿತ್ವ, ಜೀವನ ಮೌಲ್ಯಗಳು ಹಾಗೂ ಸಾಮಾಜಿಕ ಬದ್ಧತೆಯೇ ಅವರ ನಿಜವಾದ ಗುರುತು. ಆಳ್ವಾಸ್ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿವೆ. ಆಳ್ವಾಸ್ ನೀಡುವ ಪ್ರತಿಯೊಂದು ಪ್ರಮಾಣಪತ್ರವೂ ಸಂಸ್ಥೆಯ ಪರಂಪರೆ, ಸಂಸ್ಕೃತಿ ಮತ್ತು ಮೌಲ್ಯಗಳು ಅದರ ವಿದ್ಯಾರ್ಥಿಗಳ ಮೂಲಕ ಸಮಾಜದ ಮುಂದೆ ಪ್ರತಿಫಲಿಸುತ್ತವೆ. ಆ ಪರಂಪರೆಯನ್ನು ಮುಂದುವರಿಸುವ ಜವಾಬ್ದಾರಿ ಪ್ರತಿಯೊಬ್ಬ ವಿದ್ಯಾರ್ಥಿಯ ಮೇಲಿದೆ ಎಂದರು. ವಿದ್ಯಾರ್ಥಿಗಳು ತಾವು ಆಳ್ವಾಸ್‌ನ ಉತ್ಪನ್ನಗಳು ಎಂಬ ಹೆಮ್ಮೆಯನ್ನು ಹೊಂದಿರಬೇಕು. ನೀವು ಎಲ್ಲೇ ಹೋದರೂ ಆಳ್ವಾಸ್‌ನ ರಾಯಭಾರಿಗಳಾಗಿದ್ದೀರಿ ಎಂಬುದನ್ನು ಮರೆಯ ಬೇಡಿ ಎಂದು ಅವರು ಕಿವಿಮಾತು ಹೇಳಿದರು.

ಏಕತೆಯಲ್ಲಿ ವೈವಿಧ್ಯತೆ

ಸುಮಾರು 20 ಸಾವಿರ ವಿದ್ಯಾರ್ಥಿಗಳನ್ನು ಒಳಗೊಂಡಿರುವ ಆಳ್ವಾಸ್ ಆವರಣವು ಭಾರತದ ಏಕತೆಯಲ್ಲಿ ವೈವಿಧ್ಯತೆಯ ಪರಿಕಲ್ಪನೆಯನ್ನು ಜೀವಂತವಾಗಿ ಪ್ರತಿಬಿಂಬಿಸುತ್ತದೆ. ದೇಶದ ವಿವಿಧ ಭಾಗಗಳಿಂದ ಆಗಮಿಸುವ ವಿದ್ಯಾರ್ಥಿಗಳ ನಡುವೆ ಬೆಳೆಯುವ ಪರಸ್ಪರ ಅರಿವು, ಸಹಬಾಳ್ವೆ ಮತ್ತು ಸಾಂಸ್ಕೃತಿಕ ವಿನಿಮಯವು ಅವರನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುತ್ತದೆ. ಇಂತಹ ಸಮೃದ್ಧ ಶೈಕ್ಷಣಿಕ ಹಾಗೂ ಸಾಮಾಜಿಕ ವಾತಾವರಣವು ವಿದ್ಯಾರ್ಥಿಗಳನ್ನು ಸಾರ್ವಜನಿಕ ಬದುಕಿನ ಸವಾಲುಗಳನ್ನು ಎದುರಿಸಲು, ಸಮಾಜದ ಅಗತ್ಯಗಳಿಗೆ ಸ್ಪಂದಿಸಲು ಮತ್ತು ರಾಷ್ಟ್ರದ ಅಭಿವೃದ್ಧಿಗೆ ಸಕಾರಾತ್ಮಕ ಕೊಡುಗೆ ನೀಡಲು ಸಜ್ಜುಗೊಳಿಸುತ್ತದೆ ಎಂದು ಅವರು ಹೇಳಿದರು.

> ಶಿಕ್ಷಣದ ನಿಜವಾದ ಉದ್ದೇಶವು ಕೇವಲ ಪದವಿ ಪಡೆಯುವುದಲ್ಲ, ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಾಗಿದೆ. ವಿದ್ಯಾರ್ಥಿಗಳು ಕಲಿಕೆಯ ಅವಧಿಯಲ್ಲಿ ರೂಪಿಸಿಕೊಂಡ ವ್ಯಕ್ತಿತ್ವ, ಜೀವನ ಮೌಲ್ಯಗಳು ಹಾಗೂ ಸಾಮಾಜಿಕ ಬದ್ಧತೆಯೇ ಅವರ ನಿಜವಾದ ಗುರುತು.
> ■ ಡಾ. ಚಿನ್ನಪ್ಪ ಗೌಡ

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಜ್ಞಾನವೊಂದೇ ಸಾಕಾಗುವುದಿಲ್ಲ. ವ್ಯಕ್ತಿತ್ವ ನಿರ್ಮಾಣ, ಶಿಸ್ತು, ಸಾಮಾಜಿಕ ಹೊಣೆಗಾರಿಕೆ ಹಾಗೂ ನಿರಂತರ ಕಲಿಕೆಯ ಮನೋಭಾವ ಯಶಸ್ಸಿನ ಪ್ರಮುಖ ಅಂಶಗಳಾಗಿವೆ ಎಂದರು.

ಪ್ರಶಸ್ತಿ ಪ್ರದಾನ

ಈ ಸಂದರ್ಭದಲ್ಲಿ ಶೈಕ್ಷಣಿಕ ಸಾಧನೆಗಾಗಿ ಡಾ. ಕೇಕೆಸಾನಾ, ಅಂಜನಾ ಎಂ. ಹಾಗೂ ನವರೆನ್ ಸಿಂಗ್ ಅವರಿಗೆ ಪ್ರತಿಷ್ಠಿತ ಡಾ ಪಿ.ಬಿ. ಆಚಾರ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅತ್ಯುತ್ತಮ ಸಾಧನೆಗಾಗಿ ಡಾ. ಗೌತಮಿ ಬಿ. ಅವರಿಗೆ ಸೀತಾರಾಂ ಜಿಂದಾಲ್ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ವಹಿಸಿದ್ದರು.

ಟ್ರಸ್ಟಿ ವಿವೇಕ್ ಆಳ್ವ, ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು, ಅಧ್ಯಾಪಕರು, ಪೋಷಕರು, ಹಳೆ ವಿದ್ಯಾರ್ಥಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು. ಉಪನ್ಯಾಸಕ ರಾಜೇಶ್ ಡಿಸೋಜಾ ಕಾರ್ಯಕ್ರಮ ನಿರೂಪಿಸಿ, ಡಾ ಕುರಿಯನ್ ಸ್ವಾಗತಿಸಿದರು.

ಧರ್ಮಸ್ಥಳದಲ್ಲಿ ಬಿಜೆಪಿಯ ಎರಡು ದಿನಗಳ ಪ್ರಶಿಕ್ಷಣ ವರ್ಗ

ಕಾರ್ಯಕರ್ತರಿಗೆ ವಿವಿಧ ತರಬೇತಿ



ಬೆಳ್ತಂಗಡಿ: ಭಾರತೀಯ ಜನತಾ ಪಾರ್ಟಿ ಕರ್ನಾಟಕ ವತಿಯಿಂದ ಪಂ. ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ – 2026 ಅಂಗವಾಗಿ ಬೆಳ್ತಂಗಡಿ ಮಂಡಲ ಮಟ್ಟದ ಪ್ರಶಿಕ್ಷಣ ವರ್ಗ ಮೇ28 ರಂದು ಸೂರ್ಯಕಮಲ್ ಸಭಾಂಗಣದಲ್ಲಿ ಆರಂಭವಾಯಿತು.

ಕಾರ್ಯಕ್ರಮವನ್ನು ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಉದ್ಘಾಟಿಸಿದರು. ಪ್ರತಾಪ್ ಸಿಂಹ ನಾಯಕ್, ಜಯಂತ್ ಕೋಟ್ಯಾನ್ ಮರೋಡಿ, ಮಂಡಲ ಅಧ್ಯಕ್ಷ ಶ್ರೀನಿವಾಸ್ ರಾವ್ ಧರ್ಮಸ್ಥಳ, ಮಂಡಲ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಎಂ ಪಾರೆಂಕಿ, ಸೀತಾರಾಮ್ ಬೆಳಾಲು, ಹಾಗೂ ಪ್ರಮುಖರು ಉಪಸ್ಥಿತರಿದ್ದರು. ಎರಡು ದಿನಗಳ ಕಾಲ ನಡೆದ ಈ ಪ್ರಶಿಕ್ಷಣ ವರ್ಗದಲ್ಲಿ ಮಂಡಲದ ಪ್ರಮುಖ ಪದಾಧಿಕಾರಿಗಳು, ಶಕ್ತಿ ಕೇಂದ್ರ ಪ್ರಮುಖರು ಮತ್ತು ಬೂತ್ ಅಧ್ಯಕ್ಷರು ಭಾಗವಹಿಸಿದ್ದರು. ಪಕ್ಷದ ಸಿದ್ಧಾಂತ, ಸಂಘಟನಾತ್ಮಕ ವಿಷಯಗಳು, ಚುನಾವಣಾ ನಿರ್ವಹಣೆ ಮತ್ತು ಕೇಂದ್ರ–ರಾಜ್ಯ ಸರ್ಕಾರದ ಸಾಧನೆಗಳ ಬಗ್ಗೆ ಕಾರ್ಯಕರ್ತರಿಗೆ ತರಬೇತಿ ನೀಡಲಾಯಿತು.ಸಭಾಂಗಣವನ್ನು ಕೇಸರಿ ಧ್ವಜಗಳು ಮತ್ತು ಪಂ. ದೀನದಯಾಳ್ ಉಪಾಧ್ಯಾಯ ಅವರ ಭಾವಚಿತ್ರದೊಂದಿಗೆ ಸಿಂಗರಿಸಲಾಗಿತ್ತು. ಭಾಗವಹಿಸಿದ ಎಲ್ಲ ಕಾರ್ಯಕರ್ತರಿಗೆ ಪ್ರಶಿಕ್ಷಣ ಕೈಪಿಡಿ ಮತ್ತು ನೋಟ್ ಬುಕ್ ವಿತರಿಸಲಾಯಿತು. ಬಿಜೆಪಿ ರಾಜ್ಯ ಘಟಕವು 2026ರ ಚುನಾವಣೆ ದೃಷ್ಟಿಯಿಂದ ರಾಜ್ಯದ ಎಲ್ಲ ಮಂಡಲಗಳಲ್ಲಿ ಈ ಪ್ರಶಿಕ್ಷಣ ಮಹಾಭಿಯಾನವನ್ನು ಹಮ್ಮಿಕೊಂಡಿದೆ.

ಪಕ್ಷವನ್ನು ತಳಮಟ್ಟದಿಂದ ಬಲಪಡಿಸುವುದು ಮತ್ತು ಕಾರ್ಯಕರ್ತರನ್ನು ಸೈದ್ಧಾಂತಿಕವಾಗಿ ಸಜ್ಜುಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಶಕ್ತಿ ರೆಸಿಡೆನ್ಶಿಯಲ್ ಶಾಲೆಯಲ್ಲಿ ಹಿರಿಯ ಪ್ರಾಥಮಿಕ ಶಾಲಾ ಪೋಷಕರ ಸಮನ್ವಯ ಕಾರ್ಯಕ್ರಮ



ಮಂಗಳೂರು: ಶಕ್ತಿ ನಗರದ ಶಕ್ತಿ ರೆಸಿಡೆನ್ಶಿಯಲ್ ಶಾಲೆಯಲ್ಲಿ ಶನಿವಾರ 2026–27 ನೇ ಶೈಕ್ಷಣಿಕ ವರ್ಷದ ಹಿರಿಯ ಪ್ರಾಥಮಿಕ ಶಾಲಾ ಪೋಷಕರ ಸಮನ್ವಯ ಕಾರ್ಯಕ್ರಮವು ರೇಷ್ಮಾ ಮೆಮೋರಿಯಲ್ ಆಡಿಟೋರಿಯಂನಲ್ಲಿ ನಡೆಯಿತು. ತಾಯಿ ಭಾರತ ಮಾತೆಗೆ ದೀಪವನ್ನು ಬೆಳಗುವುದರ ಮೂಲಕ ಚಾಲನೆಗೊಂಡ ಈ ಕಾರ್ಯಕ್ರಮಕ್ಕೆ ಹಿರಿಯ ಸಮಾಲೋಚಕರು, ಮಾನಸಿಕ ಆರೋಗ್ಯ ಶಿಕ್ಷಣತಜ್ಞರು, ಸಂಪರ್ಕ ಮತ್ತು ತರಬೇತಿ ತಂತ್ರಜ್ಞರೂ ಆಗಿರುವ ಜೋಯಲ್ ಕೆ. ಟಾಮ್ ಮುಖ್ಯ ಅತಿಥಿಗಳಾಗಿದ್ದು, ಹಲವು ಕಡೆಗಳಿಂದ ಬರುವಂತಹ ಒತ್ತಡಗಳಿಂದ ಮಕ್ಕಳು ಗೊಂದಲಕ್ಕೊಳಗಾಗುತ್ತಾರೆ. ಈ ಎಲ್ಲಾ ಗೊಂದಲಗಳಿಂದ ಮಕ್ಕಳನ್ನು ಹೊರತಂದು ಅವರ ಗುರಿ ಸಾಧನೆಗಾಗಿ ಪೋಷಕರು ಹಾಗೂ ಶಿಕ್ಷಕರ ಪಾತ್ರ ಮಹತ್ತರವಾದದ್ದು. ಮಕ್ಕಳ ಶಿಕ್ಷಣ ಪ್ರಯಾಣ ಮನೆಯಿಂದಲೇ ಪ್ರಾರಂಭವಾಗಬೇಕು ಎಂದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಶಕ್ತಿ ವಿದ್ಯಾ ಸಂಸ್ಥೆಯ ಮುಖ್ಯ ಸಲಹೆಗಾರ ರಮೇಶ್ ಕೆ. ಅವರು, ನಮ್ಮ ನಗರದ ಸುಮಾರು 225 ಸ್ಥಳಗಳಿಂದ ಹಾಗೂ ರಾಜ್ಯದ 31 ಜಿಲ್ಲೆಗಳಿಂದ ವಿದ್ಯಾರ್ಥಿಗಳು ನಮ್ಮ ಸಂಸ್ಥೆಗೆ ವಿದ್ಯಾರ್ಜನೆಗಾಗಿ ಬರುತ್ತಿದ್ದಾರೆ. ನಮ್ಮ ಉದ್ದೇಶ ಭಾರತೀಯ ಸಂಸ್ಕೃತಿ, ಮೌಲ್ಯದ ಜೊತೆಗೆ ಒಳ್ಳೆಯ ಸಂಸ್ಕಾರದ ಶಿಕ್ಷಣ ನೀಡುವುದಾಗಿದೆ. ಬೋಧಮಾಲ ಎನ್ನುವ ಒಂದು ವಿಶೇಷ ಪಠ್ಯಕ್ರಮದ ಮೂಲಕ ನಮ್ಮ ಮಕ್ಕಳಿಗೆ ಭಾರತದ ಪವಿತ್ರ ಸಂಸ್ಕೃತಿ ಸಂಪ್ರದಾಯದ ಪರಿಚಯವನ್ನು ನೀಡಲಾಗುತ್ತದೆ ಎಂದು ಹೇಳಿದರು.

ಶಕ್ತಿ ವಸತಿ ಶಾಲೆಯ ಪ್ರಾಂಶುಪಾಲರಾದ ಡಾ. ಸುರೇಖಾ ಭಟ್ ಮಾತನಾಡಿ, ಮಗು ಒಂದು ದೀಪವಿದ್ದಂತೆ, ಪೋಷಕರು ಹಾಗೂ ಶಿಕ್ಷಕರು ಆ ದೀಪವು ಆರದಂತೆ ಕಾಪಾಡುವ ಹಸ್ತಗಳು ಎಂದರು. ಬಳಿಕ 2026–27 ರ ಸಂಪೂರ್ಣ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಪೋಷಕರಿಗೆ ನೀಡಿದರು.

ಶಕ್ತಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರದೀಪ್‌ಕುಮಾರ್ ಶೆಟ್ಟಿ ಮಾತನಾಡಿ, ವಿದ್ಯಾರ್ಥಿಗಳ ಉತ್ತಮ ಸಾಧನೆಗೆ ಕೇವಲ ಸಂಸ್ಥೆ, ಶಿಕ್ಷಕರು ಮಾತ್ರ ಸಾಕಾಗಲ್ಲ, ಮಗುವಿನ ಅವಿರತ ಪ್ರಯತ್ನ ಹಾಗೂ ಪೋಷಕರ ನಿರಂತರ ಪ್ರೋತ್ಸಾಹ ಅಗತ್ಯ. ಮಕ್ಕಳು ತನ್ನ ಗುರಿಯನ್ನು ಇಟ್ಟುಕೊಳ್ಳುವುದರಲ್ಲಿ ಪೋಷಕರ ಮಾರ್ಗದರ್ಶನ ಅಮೂಲ್ಯವಾದದ್ದು ಎಂದರು.

ಅಧ್ಯಕ್ಷತೆ ವಹಿಸಿದ್ದ ಶಕ್ತಿ ವಿದ್ಯಾ ಸಂಸ್ಥೆಯ ಆಡಳಿತ ಅಧಿಕಾರಿ ಡಾ. ಕೆ ಸಿ ನ್ಯಾಕ್ ಮಾತನಾಡಿ, ಮಕ್ಕಳು ದೇಶದ ಸಂಪತ್ತಾಗಬೇಕು, ಹಾಗೆ ಆಗಬೇಕಾದರೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೋಷಕರು ಹಾಗೂ ಶಿಕ್ಷಕರು ಜೊತೆಯಾಗಿ ಕಾರ್ಯ ಪ್ರವೃತ್ತರಾಗಬೇಕು. ಮಕ್ಕಳ ಲೋಪದೋಷಗಳನ್ನು ಎಳವೆಯಲ್ಲಿಯೇ ಕಿವುಚಿ ಹಾಕಬೇಕು ಎಂದರು.

ಶಕ್ತಿ ರೆಸಿಡೆನ್ಶಿಯಲ್ ಶಾಲೆಯ ಶಿಕ್ಷಕಿ ಚೇತನಾ ತಲಪಾಡಿ ಕಾರ್ಯಕ್ರಮ ನಿರೂಪಿಸಿದರು. ಶಕ್ತಿ ರೆಸಿಡೆನ್ಶಿಯಲ್ ಶಾಲೆಯ ಶಿಕ್ಷಕಿ ನಯನಾ ಸ್ವಾಗತಿಸಿದರು ಹಾಗೂ ಶಕ್ತಿ ವಸತಿ ಶಾಲೆಯ ಶಿಕ್ಷಕಿ ಅಕ್ಷಿತಾ ಶೆಟ್ಟಿ ಧನ್ಯವಾದ ಸಮರ್ಪಿಸಿದರು.

ಮಂಗಳೂರಿನ ಸರಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ

ದುಶ್ಚಟ, ದುರ್ವ್ಯಸನಗಳಿಂದ ಜೀವನ ನಾಶ: ಡಾ. ತಿಮ್ಮಯ್ಯ



ಮಂಗಳೂರು: ತಂಬಾಕು ಸೇವನೆ ಸಹಿತ ಎಲ್ಲ ರೀತಿಯ ಅಪಾಯಕಾರಿ ಹವ್ಯಾಸಗಳನ್ನು ಆರಂಭಿಸುವಾಗ ಯುವಜನತೆ ಎಚ್ಚರವಾಗಿರಬೇಕು. ಅನೇಕ ಬಾರಿ ಯುವಜನತೆ ಇಂತಹ ದುಶ್ಚಟ, ವ್ಯಸನಕ್ಕೆ ಒಳಗಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಾರೆ. ಇದಕ್ಕೆ ಅವಕಾಶ ನೀಡದೆ ಕೆಟ್ಟ ಚಟಗಳಿಂದ ದೂರವಿರಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಚ್.ಆರ್. ತಿಮ್ಮಯ್ಯ ಹೇಳಿದರು.

ಮಂಗಳೂರಿನ ಸರಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶನಿವಾರ ನಡೆದ ವಿಶ್ವ ತಂಬಾಕು ರಹಿತ ದಿನಾಚರಣೆ–2026 ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜವನ್ನು ವ್ಯಸನ ಮುಕ್ತ ಗೊಳಿಸುವಲ್ಲಿ ಮಹಿಳೆಯರ ಪಾತ್ರವೂ ದೊಡ್ಡದಿದೆ. ತಮ್ಮ ಮನೆಯವರು ಸೇರಿದಂತೆ ಸುತ್ತಲಿನ ಜನರಲ್ಲಿ ಜಾಗೃತಿ ಮೂಡಿಸುವ ಶಕ್ತಿ ಮಹಿಳೆಯರಲ್ಲಿದೆ. ಧೂಮಪಾನ ಮಾಡುವವರಷ್ಟೇ ದುಷ್ಪರಿಣಾಮ ಧೂಮಪಾನ ಮಾಡುವ ವೇಳೆ ಅವರ ಬಳಿ ಇರುವವರ ಮೇಲೆಯೂ ಉಂಟಾಗುತದೆ. ಹಾಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಲಾಗಿದೆ. ಈ ಬಗ್ಗೆ ಸಾರ್ವಜನಿಕರು ಜಾಗೃತರಾಗಿರಬೇಕು ಎಂದರು.


ಜಿಲ್ಲಾ ವೆನ್ಲಾಕ್ ಆಸ್ಪತ್ರೆಯ ಅಧೀಕ್ಷಕ ಡಾ. ಶಿವಪ್ರಕಾಶ್ ಡಿ.ಎಸ್. ಮಾತನಾಡಿ, ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಸೇವನೆ ವಿರುದ್ಧ ಜಾಗೃತಿಗೆ ಸಂಬಂಧಿಸಿದ ಕಾನೂನುಗಳು ಕಟ್ಟುನಿಟ್ಟಾಗಿ ಜಾರಿಯಾಗಬೇಕಿದೆ. ತಂಬಾಕು ವಸ್ತುಗಳ ಸೇವನೆಯಲ್ಲಿ ಕೆಲವು ನಗರಗಳಲ್ಲಿ ಯುವತಿಯರ ಸಂಖ್ಯೆ ಕೂಡ ಹೆಚ್ಚುತ್ತಿದೆ ಎಂದು ಹೇಳಿದರು.

> **ಅಧಿಕ ದಂಡ ವಸೂಲಿ**
> ಜಿಲ್ಲಾ ವೆನ್ಲಾಕ್ ಆಸ್ಪತ್ರೆಯನ್ನು ತಂಬಾಕು ಮುಕ್ತ ವಲಯವನ್ನಾಗಿ ಮಾಡಲಾಗುತ್ತಿದ್ದು, ಕಳೆದ ಆರೂವರೆ ತಿಂಗಳುಗಳಲ್ಲಿ 4 ಲಕ್ಷ ರೂ.ಗಳಿಗೂ ಅಧಿಕ ದಂಡ ವಸೂಲಿ ಮಾಡಲಾಗಿದೆ ಎಂದು ವೆನ್ಲಾಕ್ ಆಸ್ಪತ್ರೆಯ ಅಧೀಕ್ಷಕ ಡಾ. ಶಿವಪ್ರಕಾಶ್ ಡಿ.ಎಸ್. ತಿಳಿಸಿದರು.

ಮಂಗಳೂರಿನ ಸರಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರವಾಚಕ ಒ.ಆರ್. ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವಕೀಲ ಗೋಪಾಲಕೃಷ್ಣ ಶೆಟ್ಟಿ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ. ದೀಪಾ ಪ್ರಭು ಕೆ.ಪಿ., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಜ್ಯೋತಿ ಉಳೆಪಾಡಿ, ಮಂಗಳೂರು ತಾಲೂಕು ಪ್ರಭಾರ ಆರೋಗ್ಯಾಧಿಕಾರಿ ಡಾ. ಚಿರಾಗ್, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಂಯೋಜಕ ರಂಜನ್ ಉಪಸ್ಥಿತರಿದ್ದರು.

ಬಂಟ್ವಾಳ ತಾಲೂಕು ಆಸ್ಪತ್ರೆಯ ಹಿರಿಯ ದಂತ ಆರೋಗ್ಯಾಧಿಕಾರಿ ಡಾ. ಆರತಿ ಕುಲಕರ್ಣಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಅಶುರಾ ಭಾನು ಕಾರ್ಯಕ್ರಮ ನಿರ್ವಹಿಸಿದರು. ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಮಾಜ ಕಾರ್ಯಕರ್ತೆ ಶೃತಿ ಸಾಲ್ಯಾನ್ ಪ್ರತಿಜ್ಞಾ ವಿಧಿ ಬೋಧಿಸಿದರು.

ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲೆ ತಂಬಾಕು ನಿಯಂತ್ರಣ ಕೋಶ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಮತ್ತು ಮಂಗಳೂರಿನ ಸರಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಕಿರುಸುದ್ದಿ

ಏಷ್ಯನ್ ಗೇಮ್ಸ್ ಆಯ್ಕೆ: ವಿನೇಶ್‌ಗೆ ಸೋಲು



ಹೊಸದಿಲ್ಲಿ: ಇಲ್ಲಿ ನಡೆದ ಏಷ್ಯನ್ ಗೇಮ್ಸ್ 2026 ಆಯ್ಕೆ ಟ್ರಯಲ್ಸ್‌ನಲ್ಲಿ ಭಾರತದ ಖ್ಯಾತ ಕುಸ್ತಿಪಟು ವಿನೇಶ್ ಫೋಗಟ್ ಅವರ ಅಭಿಯಾನ ಸೆಮಿಫೈನಲ್ ಹಂತದಲ್ಲೇ ಅಂತ್ಯಗೊಂಡಿದೆ. ಮಹಿಳೆಯರ 53 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ ಮೀನಾಕ್ಷಿ ಗೋಯತ್ ವಿರುದ್ಧ 4–6 ಅಂತರದಲ್ಲಿ ಸೋಲು ಅನುಭವಿಸಿದ ವಿನೇಶ್, ಏಷ್ಯನ್ ಗೇಮ್ಸ್ ತಂಡದಲ್ಲಿ ಸ್ಥಾನ ಪಡೆಯುವ ಅವಕಾಶ ಕಳೆದುಕೊಂಡರು.ಎರಡು ಬಾರಿ ವಿಶ್ವ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತೆಯಾಗಿರುವ ವಿನೇಶ್, ಮೊದಲ ಸುತ್ತಿನಲ್ಲಿ ಜ್ಯೋತಿ ಅವರನ್ನು 7–1 ಅಂತರದಲ್ಲಿ ಮಣಿಸಿದ್ದರು. ಬಳಿಕ ನಿಶು ವಿರುದ್ಧದ ಕಠಿಣ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸಮಬಲದ ಹೋರಾಟದ ಬಳಿಕ ಮಾನದಂಡದ ಆಧಾರದ ಮೇಲೆ ಗೆದ್ದು ಸೆಮಿಫೈನಲ್‌ಗೆ ಪ್ರವೇಶಿಸಿದ್ದರು. ಆದರೆ ಮೀನಾಕ್ಷಿ ವಿರುದ್ಧ ಗೆಲುವು ಸಾಧಿಸಲು ವಿಫಲರಾದರು. ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸುವ ವಿಚಾರಕ್ಕೆ ಸಂಬಂಧಿಸಿದಂತೆ ತೀವ್ರ ಗೊಂದಲ ಮಾಡಿಕೊಂಡಿದ್ದ ವಿನೇಶ್ ಶುಕ್ರವಾರವಷ್ಟೇ ಸುಪ್ರೀಂ ಕೋರ್ಟ್‌ನಿಂದ ಅವಕಾಶ ಪಡೆದಿದ್ದರು.

ಹಾಕಿ: ಆಸ್ಟ್ರೇಲಿಯಾ ಸರಣಿ ಡ್ರಾ ಕೊನೆ ಪಂದ್ಯದಲ್ಲಿ ಭಾರತ ಸೋಲು



ಪರ್ಥ್: ಪರ್ಥ್‌ನಲ್ಲಿ ನಡೆದ ನಾಲ್ಕನೇ ಹಾಗೂ ಅಂತಿಮ ಸ್ನೇಹಪೂರ್ಣ ಪಂದ್ಯದಲ್ಲಿ ಭಾರತೀಯ ಮಹಿಳಾ ಹಾಕಿ ತಂಡ 2–3 ಅಂತರದಿಂದ ಆಸ್ಟ್ರೇಲಿಯಾ ವಿರುದ್ಧ ಸೋಲು ಅನುಭವಿಸಿದೆ. ಆದರೆ ನಾಲ್ಕು ಪಂದ್ಯಗಳ ಸರಣಿ 2–2ರಿಂದ ಸಮಬಲದಲ್ಲಿ ಅಂತ್ಯಗೊಂಡಿದ್ದು, ಭಾರತ ಉತ್ತಮ ಪ್ರದರ್ಶನದೊಂದಿಗೆ ಪ್ರವಾಸ ಮುಗಿಸಿದೆ.ಪಂದ್ಯದ ಎರಡನೇ ನಿಮಿಷದಲ್ಲೇ ನವ್ನೀತ್ ಕೌರ್ ಪೆನಾಲ್ಟಿ ಕಾರ್ನರ್ ಅನ್ನು ಗೋಲಾಗಿ ಪರಿವರ್ತಿಸಿ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಬಳಿಕ ಎರಡನೇ ಕ್ವಾರ್ಟರ್‌ನಲ್ಲಿ ದೀಪಿಕಾ ಸೊರೆಂಗ್ 23ನೇ ನಿಮಿಷದಲ್ಲಿ ಮತ್ತೊಂದು ಗೋಲು ಬಾರಿಸಿ ಭಾರತದ ಮುನ್ನಡೆಯನ್ನು 2–0ಕ್ಕೆ ಹೆಚ್ಚಿಸಿದರು. ಮೊದಲಾರ್ಧದ ಅಂತ್ಯಕ್ಕೆ ಭಾರತ ಭದ್ರ ಸ್ಥಿತಿಯಲ್ಲಿತ್ತು. ಆದರೆ ಮೂರನೇ ಕ್ವಾರ್ಟರ್‌ನಲ್ಲಿ ಆಸ್ಟ್ರೇಲಿಯಾ ಭರ್ಜರಿ ಪುನರಾಗಮನ ಮಾಡಿತು. ಅಬ್ಬಿ ವಿಲ್ಸನ್ 42ನೇ ನಿಮಿಷದಲ್ಲಿ ಹಾಗೂ ಒಲಿವಿಯಾ ಡೌನ್ಸ್ 44ನೇ ನಿಮಿಷದಲ್ಲಿ ಗೋಲು ಬಾರಿಸಿ ಪಂದ್ಯವನ್ನು 2–2ರಿಂದ ಸಮಬಲಕ್ಕೆ ತಂದರು. ಪಂದ್ಯ ಡ್ರಾದತ್ತ ಸಾಗುತ್ತಿದ್ದ ವೇಳೆ 58ನೇ ನಿಮಿಷದಲ್ಲಿ ಕೋರ್ಟ್ನಿ ಶೊನೆಲ್ ನಿರ್ಣಾಯಕ ಗೋಲು ದಾಖಲಿಸಿ ಆಸ್ಟ್ರೇಲಿಯಾಗೆ 3–2 ಅಂತರದ ಗೆಲುವು ತಂದುಕೊಟ್ಟರು. ಮೊದಲ ಪಂದ್ಯದಲ್ಲಿ ಸೋತಿದ್ದ ಭಾರತ ನಂತರದ ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿ ಸರಣಿಯಲ್ಲಿ ಮೇಲುಗೈ ತೋರಿಸಿತ್ತು. ಅಂತಿಮ ಪಂದ್ಯದಲ್ಲಿ ಸೋಲು ಕಂಡರೂ, ಸರಣಿಯನ್ನು 2–2ರಿಂದ ಸಮಬಲಗೊಳಿಸುವ ಮೂಲಕ ತಂಡದ ಹೋರಾಟದ ಮನೋಭಾವ, ತಾಂತ್ರಿಕ ಶಿಸ್ತು ಹಾಗೂ ಆಕ್ರಮಣಕಾರಿ ಆಟ ಗಮನ ಸೆಳೆಯಿತು.

ಏಷ್ಯನ್ ಅಂಡರ್-20 ಅಥ್ಲೆಟಿಕ್ಸ್: ಭಾರತಕ್ಕೆ ಮೂರು ಚಿನ್ನ

ಹೊಸದಿಲ್ಲಿ: ಹಾಂಗ್ ಕಾಂಗ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಅಂಡರ್–20 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಅಥ್ಲೀಟ್‌ಗಳು ಪದಕ ಬೇಟೆಯನ್ನು ಮುಂದುವರಿಸಿದ್ದು, ಶನಿವಾರ ಮೂರು ಚಿನ್ನದ ಪದಕಗಳನ್ನು ಗೆದ್ದು ಮಿಂಚಿದ್ದಾರೆ. ಅದರಲ್ಲೂ ಪುರುಷರ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಭಾರತ ಮೊದಲ ಎರಡು ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ. ಶಹ್ನವಾಜ್ 7.84 ಮೀಟರ್ ದೂರ ಜಿಗಿದು ಚಿನ್ನದ ಪದಕ ಗೆದ್ದರೆ, ಮತ್ತೋರ್ವ ಭಾರತೀಯ ಅಥ್ಲೀಟ್ ಜಿತಿನ್ 7.66 ಮೀಟರ್ ಜಿಗಿತದೊಂದಿಗೆ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.ಪುರುಷರ ಹೈಜಂಪ್ ಸ್ಪರ್ಧೆಯಲ್ಲಿ ಬಸಂತ್ 2.20 ಮೀಟರ್ ಎತ್ತರ ದಾಟಿ ಚಿನ್ನದ ಪದಕ ಜಯಿಸಿದರು. ಇದೇ ವೇಳೆ ಪುರುಷರ 3000 ಮೀಟರ್ ಸ್ಟೀಪಲ್‌ಚೇಸ್ ಸ್ಪರ್ಧೆಯಲ್ಲಿ ನಿಖಿಲ್ ಚಂದ್ರಶೇಖರ್ 9 ನಿಮಿಷ 25.44 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಗೆದ್ದು ಭಾರತದ ಪದಕ ಸಂಗ್ರಹ ಹೆಚ್ಚಿಸಿದರು.

ಮತ್ತೆ ಕಪ್ ಗೆಲ್ಲಲಿ ಆರ್‌ಸಿಬಿ

ಸತತ 2ನೇ ಟ್ರೋಫಿಗಾಗಿ ಫೈನಲ್‌ನಲ್ಲಿ ಫೈಟ್ ರಜತ್ ಪಡೆಗೆ ಗುಜರಾತ್ ಸವಾಲು

ಹಮದಾಬಾದ್: ಸಮಸ್ತ ಕ್ರಿಕೆಟ್ ಅಭಿಮಾನಿಗಳಿಗೆ ಈ ಒಂದೇ ಪ್ರಶ್ನೆ. ಸತತ ಎರಡನೇ ಬಾರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಚಾಂಪಿಯನ್ ಪಟ್ಟ ಅಲಂಕರಿಸಲಿದೆಯಾ ಅಥವಾ ಗುಜರಾತ್ ಮೂರು ವರ್ಷದ ಬಳಿಕ ಕಿರೀಟ ಮುಡಿಗೇರಿಸಿಕೊಳ್ಳಲಿದೆಯಾ ಎಂಬ ಕುತೂಹಲ. 73 ಪಂದ್ಯದಲ್ಲಿ ಸಾವಿರಾರು ರನ್ ಹರಿದಿವೆ. ಸಹಸ್ರಾರು ಸಿಕ್ಸರ್‌ಗಳು ಸುರಿದಿವೆ. ಹತ್ತಾರು ಟ್ವಿಸ್ಟ್, ನೂರಾರು ಬೌಂಡರಿಗಳು ಮೂಡಿವೆ. ವಿದೇಶಿ ಕ್ರಿಕೆಟಿಗರ ಅಬ್ಬರದ ಜತೆಗೆ ದೇಶಿ ಕ್ರಿಕೆಟಿಗರ ಮಿಂಚಿನಾಟ. ಹೊಚ್ಚ ಹೊಸ ಕ್ರಿಕೆಟಿಗರ ಮೆರೆದಾಟ. ಬಂದ ಬಾಲ್‌ಗಳನ್ನು ಬೌಂಡರಿಗಟ್ಟುವ ಛಲ ಬ್ಯಾಟರ್‌ಗಳಿಗಾದರೆ, ಮೂರು ಸ್ಟಂಪ್‌ಗಳನ್ನು ಕಿತ್ತುವ ಉತ್ಸಾಹ ಬೌಲರ್‌ಗಳಿಗೆ. ಇದೆಲ್ಲಾ ಆಟ, ಪಾಠ ಮತ್ತು ಮಹಾಕೂಟ ಭಾನುವಾರದಂದು ಅಂತ್ಯಗೊಳ್ಳಲಿದೆ. ಫೈನಲ್‌ಗೇರಿರುವ ಗುಜರಾತ್ ಟೈಟಾನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ತಂಡಗಳು ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಎದುರಾಗಲಿವೆ. ಎರಡೂ ತಂಡಕ್ಕೂ ಎರಡನೇ ಕಪ್‌ನ ಹಂಬಲ. ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮೊದಲ ಕ್ವಾಲಿಫೈಯರ್ ಪಂದ್ಯದಲ್ಲೇ ಗೆಲುವು ಸಾಧಿಸಿ ಫೈನಲ್‌ಗೇರಿದೆ. ಅಲ್ಲಿ ಸೋತಿದ್ದ ಗುಜರಾತ್ ಟೈಟಾನ್ಸ್ ರಾಜಸ್ಥಾನ ವಿರುದ್ಧದ ಕ್ವಾಲಿಫೈಯರ್–2 ಪಂದ್ಯದಲ್ಲಿ ಫೈನಲ್‌ಗೇರಿದೆ.

ಗೆದ್ದವರಿಗೆ ಎರಡನೇ ಕಿರೀಟ

ಕಳೆದ ಕೂಟ ಅಂದರೆ 2025ರಲ್ಲಿ ಬೆಂಗಳೂರು ತಂಡ ಚಾಂಪಿಯನ್ ಪಟ್ಟಕ್ಕೇರಿತು. ತನ್ನ ಟ್ರೋಫಿ ತನ್ನ ಬಳಿಯೇ ಉಳಿಸಿಕೊಳ್ಳಲು ಹೋರಾಡಲಿದೆ. ಇತ್ತ 2022ರಲ್ಲಿ ತನ್ನ ಅಭಿಯಾನ ಶುರು ಮಾಡಿರುವ ಗುಜರಾತ್ ಲಾಂಚ್ ಆದ ವರ್ಷವೇ ಹಾರ್ದಿಕ್ ಪಾಂಡ್ಯ ಅವರ ನೇತೃತ್ವದಲ್ಲಿ ಚಾಂಪಿಯನ್ ಪಟ್ಟಕ್ಕೇರಿತ್ತು. 2023ರಲ್ಲಿ ಫೈನಲ್ ಗೇರಿದ್ದರೂ ಕಪ್ ಗೆದ್ದಿರಲಿಲ್ಲ

ಜಿಟಿ–ಆರ್‌ಸಿಬಿ–ಸಮಬಲದ ಹೋರಾಟ

ಗುಜರಾತ್ ಟೈಟಾನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಸಮಬಲದ ಹೋರಾಟ ನಡೆಸಿವೆ. ಇಲ್ಲಿಯವರೆಗೆ ಇತ್ತಂಡಗಳು 8 ಬಾರಿ ಮುಖಾಮುಖಿಯಾಗಿವೆ. ಅದರಲ್ಲಿ ಆರ್ ಸಿಬಿ, ಗುಜರಾತ್ ಸಮಾನ ಗೆಲುವು ಸಾಧಿಸಿವೆ. ಹೀಗಾಗಿ ಫೈನಲ್ ಪಂದ್ಯದಲ್ಲಿ ಗೆದ್ದವರು ಮುಖಾಮುಖಿಯ ಸಮಬಲ ಮುರಿದು ವಿನ್ನರ್ ಆಗಲಿರುವುದು ವಿಶೇಷ.

ಪಿಚ್ ರಿಪೋರ್ಟ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಮತ್ತು ಬೌಲರ್‌ಗಳು ಸಮಾನ ಪ್ರದರ್ಶನ ನೀಡಿದ್ದಾರೆ. ಗುಜರಾತ್‌ನ ತವರು ಪಿಚ್‌ನಲ್ಲಿ ಪಂದ್ಯ ನಡೆಯಲಿರುವುದು ಅಲ್ಪ ಲಾಭ ಪಡೆಯಬಹುದು. ಸ್ಪಿನ್ನರ್‌ಗಳಿಗೆ ಅಲ್ಪ ಸಹಾಯಕವಾಗಿರಲಿದೆ. ಹೆಚ್ಚಿನ ಬೌನ್ಸ್ ಕೂಡ ಇರಲಿದೆ. ಮಳೆ ಸಾಧ್ಯತೆ ಕಡಿಮೆ.

ಪಂದ್ಯದ ವಿವರ

ಯಾವಾಗ: ಭಾನುವಾರ, ಎಲ್ಲಿ: ಅಹಮದಾಬಾದ್,
ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್,
ಜಿಯೋ ಹಾಟ್‌ಸ್ಟಾರ್

ಒಂದು ವಿಚಿತ್ರ ದಾಖಲೆ

ಗುಜರಾತ್ ಹಾಗೂ ಆರ್‌ಸಿಬಿ ನಡುವೆ ನಡೆದಿರುವ ಎಲ್ಲ 8 ಪಂದ್ಯಗಳಲ್ಲೂ ಚೇಸಿಂಗ್ ಮಾಡಿದ ತಂಡವೇ ಗೆದ್ದಿದೆ. ಯಾವುದೇ ಪಂದ್ಯದಲ್ಲೂ ಡಿಫೆಂಡ್ ಮಾಡುವ ತಂಡ ಗೆದ್ದಿಲ್ಲ. ಇದು ಫೈನಲ್ ಪಂದ್ಯದ ಟಾಸ್ ವೇಳೆ ತಂಡದ ನಾಯಕರುಗಳಿಗೆ ಒತ್ತಡ ಹೇರಲಿದೆ.

ಕೊಹ್ಲಿಯೇ ಕಿಂಗ್

ಗುಜರಾತ್ ವಿರುದ್ಧ ಕೊಹ್ಲಿ
- 460 ರನ್
- ಸರಾಸರಿ 76.66
- 1 ಶತಕ
- ಸ್ಟ್ರೈಕ್ ರೇಟ್ 152+

ಗುಜರಾತ್ ಪರ ಸುದರ್ಶನ್ ಬೆಸ್ಟ್
- ಸುಮಾರು 265 ರನ್
- 2026ರಲ್ಲಿ 58 ಎಸೆತಗಳಲ್ಲಿ ಶತಕ
- ಆರ್‌ಸಿಬಿ ವಿರುದ್ಧ ಹೆಚ್ಚಿನ ರನ್



ಕೂಟದಲ್ಲಿ ಆರ್‌ಸಿಬಿ

2024ರ ಡಿಸೆಂಬರ್‌ನಲ್ಲಿ ನಡೆದಿದ್ದ ಮೆಗಾ ಹರಾಜಿನಲ್ಲೇ ಬೆಂಗಳೂರು ತಂಡದ ನಾಗಾಲೋಟ ಶುರುವಾಗಿದ್ದು. ಅಂದಿನ ದಿನ ಮಾತನಾಡಿದ್ದ ನಿರ್ದೇಶಕ ಮೊ ಬೋಬಾಟ್ ಮತ್ತು ಮುಖ್ಯ ತರಬೇತುದಾರ ಆ್ಯಂಡಿ ಫ್ಲವರ್ ನಾವು ಸ್ಟಾರ್ ಆಟಗಾರರಗಿಂತಲೂ ಗೆಲುವಿನಲ್ಲಿ ಮಿಂಚುವ ದೇಶಿ ಕ್ರಿಕೆಟಿಗರ ಮೊರೆ ಹೋದೆವು. ಬೇಕಾದ ಆಟಗಾರರನ್ನು ಖರೀದಿಸಿದೇವು ಎಂದು ಹೇಳಿದ್ದರು. ಆ ಹೇಳಿಕೆ ಬಂದಿದ್ದೆ ತಡ ಆರ್‌ಸಿಬಿ ಇತಿಹಾಸವೇ ಬದಲಾಯಿತು. ಪಂದ್ಯಾವಳಿಯಲ್ಲಿ ಸದೃಢ ತಂಡವಾಗಿ ಮೆರೆದಾಡಿತು. 2025ರ ಐಪಿಎಲ್ ಗೆದ್ದ ನಂತರ ಹೆಚ್ಚಿನ ಬದಲಾವಣೆ ಮಾಡಿಕೊಳ್ಳದ ಆರ್ ಸಿಬಿ ಯಶ್ ದಯಾಳ್ ಅವರನ್ನು ಬಿಟ್ಟು ಆಡಿದರೆ, ಜೋಶ್ ಹ್ಯಾಜೆಲ್ವುಡ್ ಕೆಲವು ಪಂದ್ಯಗಳಲ್ಲಿ ಆಡಲ್ಲ ಎಂಬ ಆಘಾತ ಎದುರಿಸಿತು. ಜೇಕಬ್ ಡಫಿ, ಭುವನೇಶ್ವರ್ ಕುಮಾರ್ ಮತ್ತು ಯುವ ಆಲ್ ರೌಂಡರ್ ರಸೀಖ್ ಸಲಾಂ ಧಾರ್ ಅವರ ಬಲದೊಂದಿಗೆ ಆಡಿದ ಆರ್‌ಸಿಬಿ ಬೌಲಿಂಗ್‌ನಲ್ಲಿ ಮೊದಲಿನಿಂದಲೂ ನಂಬರ್.1 ಆಗಿರುವುದೇ ವಿಶೇಷ. ಈಗ ತಂಡದಲ್ಲಿ ರಸೀಖ್, ಭುವನೇಶ್ವರ್ ಕುಮಾರ್, ಡಫಿ ಹಾಗೂ ಶೇಫರ್ಡ್ ಎಲ್ಲರೂ ಮಿಂಚುತ್ತಿದ್ದಾರೆ. ಬ್ಯಾಟಿಂಗ್ ವಿಚಾರಕ್ಕೆ ಬಂದರೆ ತಂಡಕ್ಕರುವ ದೊಡ್ಡ ಶಕ್ತಿಯೇ ವಿರಾಟ್ ಕೊಹ್ಲಿ. ಮೊದಲ ಪಂದ್ಯದಿಂದಲೂ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ಅತ್ತ ನಾಯಕ ಪಾಟಿದಾರ್ ತಂಡಕ್ಕೆ ಆನೆ ಬಲ ತಂದಿದ್ದಾರೆ. ಸಾಲ್ಟ್ ತಂಡದಲ್ಲಿ ಕೆಲವು ಪಂದ್ಯದ ಮಟ್ಟಿಗೆ ಇಲ್ಲದಿದ್ದರೂ ಅವರ ಬದಲಿಗೆ ಆರಂಭಿಕರಾಗಿ ಆಡುತ್ತಿರುವ ವೆಂಕಟೇಶ್ ಅಯ್ಯರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ಈ ನಡುವೆ ಮೂರನೇ ಕ್ರಮಾಂಕದಲ್ಲಿ ಆಡುವ ದೇವದತ್ತ ಪಡಿಕ್ಕಲ್ ಪಂದ್ಯದ ಗತಿಯೇ ಬದಲಿಸುತ್ತಿರುವುದು ಆರ್‌ಸಿಬಿಯ ಭರವಸೆ.

ಜಿಟಿ ದಾಳಿ ಎದುರಿಸಬೇಕಿದೆ ಆರ್‌ಸಿಬಿ

ಆದಾಗ್ಯೂ ಬೆಂಗಳೂರು ಗುಜರಾತ್ ಟೈಟಾನ್ಸ್ ಬೌಲಿಂಗ್ ಪಡೆಯನ್ನು ಸಮರ್ಥವಾಗಿ ಎದುರಿಸುವ ಸವಾಲನ್ನು ಹೊಂದಿದೆ. ಕ್ವಾಲಿಫೈಯರ್ ಪಂದ್ಯದಲ್ಲಿ ದಂಡಿಸಿರುವ ಆರ್‌ಸಿಬಿ, ರಬಾಡ, ಸಿರಾಜ್, ಹೋಲ್ಡರ್ ದಾಳಿಯನ್ನು ಎದುರಿಸಬೇಕಿದೆ. ಮುಖ್ಯವಾ ಆಡಿರುವ ಎರಡೂ ಪಂದ್ಯಗಳಲ್ಲಿ ಆರ್‌ಸಿಬಿಗೆ ಹೋಲ್ಡರ್ ಅಲ್ಪ ಕಾಟ ಕೊಟ್ಟಿದ್ದಾರೆ. ಎರಡು ಬಾರಿಯೂ ವಿರಾಟ್ ಕೊಹ್ಲಿ ವಿಕೆಟ್ ಪಡೆದಿರುವ ಜೇಸನ್ ಆರ್‌ಸಿಬಿ ವಿರುದ್ಧ ಉತ್ತಮ ಅಂಕಿ–ಸಂಖ್ಯೆಗಳನ್ನು ಅವರ ಹೊಂದಿರುವುದು ಸವಾಲನ್ನು ಎದುರಿಸಬೇಕಿದೆ.

ಪ್ರಮುಖ ಆಟಗಾರರು(ಆರ್‌ಸಿಬಿ)

ಬ್ಯಾಟಿಂಗ್
- ಕೊಹ್ಲಿ: 600 ರನ್
- ಪಾಟಿದಾರ್: 486ರನ್
- ಪಡಿಕ್ಕಲ್: 463ರನ್
- ಕೃನಾಲ್ : 281ರನ್, 13 ವಿಕೆಟ್

ಬೌಲಿಂಗ್
- ಭುವನೇಶ್ವರ್ : 26 ವಿಕೆಟ್
- ರಸೀಖ್ : 16 ವಿಕೆಟ್
- ಹ್ಯಾಜೆಲ್ವುಡ್: 18 ವಿಕೆಟ್
- ಸುಯಶ್: 9 ವಿಕೆಟ್

ಕೂಟದಲ್ಲಿ ಪ್ರದರ್ಶನ
- ಪಂದ್ಯ: 15
- ಗೆಲುವು: 10
- ಸೋಲು: 5



ಕಳೆದ ಪಂದ್ಯದ ಫಲಿತಾಂಶ
ಗುಜರಾತ್ ವಿರುದ್ಧ 47 ರನ್ ಗೆಲುವು

ಗುಜರಾತ್ ಬಳಗಕ್ಕೂ ತಪ್ಪದ ಸವಾಲು

ಗುಜರಾತ್ ಹಾದಿ ನೋಡುತ್ತಾ ಬಂದರೆ ವಿಶೇಷ ಕಾರಣ, ವಿಶೇಷ ಮೈಲಿಗಲ್ಲುಗಳು ಸಿಗುತ್ತವೆ. ದೊಡ್ಡ ಪ್ಲೇಯರ್‌ಗಳ ಲಿಸ್ಟ್‌ನಲ್ಲಿ ಸಿಗುವುದು ಶುಭಮನ್ ಗಿಲ್ ಮತ್ತು ಜಾಸ್ ಬಟ್ಲರ್ ಹೆಸರು. ಇನ್ನುಳಿದವರು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿದ್ದರೂ ಅಷ್ಟೊಂದು ಪ್ರಭಾವಿಯಾಗಿ ಕಂಡವರಲ್ಲ. ಯಥಾವತ್ತಾಗಿ ಸಾಯಿ ಸುದರ್ಶನ್ ಮತ್ತೊಮ್ಮೆ ಮಿಂಚಿದರು. ಶುಭಮನ್ ಗಿಲ್ ತಮ್ಮ ಕರಾರುವಾಕ್ ಪ್ರದರ್ಶನದೊಂದಿಗೆ ಈವರೆಗೂ ಮಿಂಚಿದ್ದಾರೆ. ಅವರ ಕಳೆದ ಪಂದ್ಯದಲ್ಲಿನ ಅವರ ಶತಕ ಬಲ ತಂದಿದೆ. ಮಧ್ಯಮ ಕ್ರಮಾಂಕದಲ್ಲಿ ವಾಷಿ, ಬಟ್ಲರ್ ಮಿಂಚಿರುವುದು ತಂಡಕ್ಕೆ ದೊಡ್ಡ ಬಲ. ಬೌಲಿಂಗ್ ವಿಭಾಗವನ್ನೇ ಶಕ್ತಿಯಾಗಿರಿಸಿರುವ ಗುಜರಾತ್ ಗೆಲುವಿನ ನಾಗಾಲೋಟದಲ್ಲಿದೆ. ಸಿರಾಜ್, ರಬಾಡ, ಹೋಲ್ಡರ್, ಕೃಷ್ಣ ಹೀಗೆ ಬಂದವರೆಲ್ಲಾ ಅತ್ಯುತ್ತಮ ಬೌಲರ್‌ಗಳೇ ಹೌದು. ಆದಾಗ್ಯೂ ಆರ್ ಸಿಬಿ ಪಡೆ ವಿರುದ್ಧ ಕ್ವಾಲಿಫೈಯರ್‌ನಲ್ಲಿ ದೊಡ್ಡ ಹಿನ್ನಡೆಯೊಂದನ್ನು ಅನುಭವಿಸಿದೆ. ಬ್ಯಾಟಿಂಗ್‌ನಲ್ಲೂ ಭುವನೇಶ್ವರ್ ದಾಳಿಗೆ ಉತ್ತರ ಕೊಡುವುದೇ ತಂಡಕ್ಕಿರುವ ದೊಡ್ಡ ಸವಾಲು.

ಪ್ರಮುಖ ಆಟಗಾರರು(ಗುಜರಾತ್)

ಬ್ಯಾಟಿಂಗ್
- ಗಿಲ್: 722 ರನ್
- ಸುದರ್ಶನ್: 710 ರನ್
- ಬಟ್ಲರ್: 507 ರನ್
- ಸುಂದರ್: 327ರನ್

ಬೌಲಿಂಗ್
- ರಬಾಡ: 28 ವಿಕೆಟ್
- ರಶೀದ್: 19 ವಿಕೆಟ್
- ಸಿರಾಜ್: 18 ವಿಕೆಟ್
- ಹೋಲ್ಡರ್: 17 ವಿಕೆಟ್

ಕೂಟದಲ್ಲಿ ಪ್ರದರ್ಶನ:
- ಪಂದ್ಯ: 16
- ಗೆಲುವು: 10
- ಸೋಲು: 6



ಕಳೆದ ಪಂದ್ಯದ ಫಲಿತಾಂಶ
ರಾಜಸ್ಥಾನ ವಿರುದ್ಧ 7 ವಿಕೆಟ್ ಜಯ

ಏಷ್ಯನ್ ಗೇಮ್ಸ್‌ಗೆ ವೈಭವ್!



- 30 ಜನ ಕ್ರಿಕೆಟಿಗರ ಸಂಭಾವ್ಯ ಪಟ್ಟಿಯಲ್ಲಿ ಸೂರ್ಯವಂಶಿ
- ಗಿಲ್–ಸೂರ್ಯಗಿಲ್ಲ ಅವಕಾಶ
- ಒಲಿಂಪಿಕ್ಸ್ ಸಮಿತಿ ಕೈಗೆ ಪಟ್ಟಿ

ಮುಂಬೈ: ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಕ್ರಿಕೆಟ್ ಸ್ಪರ್ಧೆಗಾಗಿ ಸಂಭಾವ್ಯ ಪಟ್ಟಿಯಲ್ಲಿ ವೈಭವ್ ಸೂರ್ಯವಂಶಿ ಅವರನ್ನು ಸೇರಿಸಲಾಗಿದೆ. ಬಹು ವರ್ಷಗಳ ನಂತರ ಏಷ್ಯನ್ ಗೇಮ್ಸ್‌ಗೆ ಕ್ರಿಕೆಟ್ ಮರಳಿದೆ. ಇದೇ ಪಂದ್ಯಾವಳಿಗಾಗಿ ಭಾರತ ತಂಡವನ್ನು ಪ್ರತಿನಿಧಿಸಲಿರುವ 30 ಜನರ ಸಂಭಾವ್ಯ ಪಟ್ಟಿಯನ್ನು ಬಿಸಿಸಿಐ ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಗೆ ಸಲ್ಲಿಸಿದೆ.

ಟೆಸ್ಟ್ ಮತ್ತು ಏಕದಿನ ನಾಯಕ ಶುಭಮನ್ ಗಿಲ್, ಹಾಲಿ ವಿಶ್ವಕಪ್ ಚಾಂಪಿಯನ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರ ಹೆಸರು ಇದರಲ್ಲಿಲ್ಲ. ಏಷ್ಯನ್ ಗೇಮ್ಸ್ ನಡೆಯುವ ಸಮಯದಲ್ಲೇ ವೆಸ್ಟ್ ಇಂಡೀಸ್‌ನೊಂದಿಗೆ ದೊಡ್ಡ ಸರಣಿ ಆಡಬೇಕಿದೆ. ಏಷ್ಯನ್ ಗೇಮ್ಸ್‌ನಲ್ಲಿ ಕ್ರಿಕೆಟ್ ಟಿ20 ಮಾದರಿಯಲ್ಲಿ ನಡೆಯುತ್ತದೆ. ಪರಿಣಾಮ ವಿಂಡೀಸ್ ಸರಣಿಗಾಗಿ ಬೇರೆ ತಂಡ ಮತ್ತು ಏಷ್ಯನ್ ಗೇಮ್ಸ್ ಸರಣಿಗಾಗಿ ಬೇರೆ ತಂಡವನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ.

ವಿಂಡೀಸ್ ವಿರುದ್ಧ ಭಾರತ 8 ವೈಟ್ ಬಾಲ್ ಪಂದ್ಯಗಳನ್ನಾಡಲಿದೆ. ಹೀಗಿರುವಾಗಿ ಶುಭಮನ್ ಗಿಲ್ ಏಕದಿನ ತಂಡವನ್ನು ಮುನ್ನಡೆಸಲಿದ್ದಾರೆ ಎನ್ನಲಾಗಿದೆ. ಟಿ20 ವಿಚಾರಕ್ಕೆ ಬಂದರೆ ಸೂರ್ಯಕುಮಾರ್ ಯಾದವ್ ಅವರನ್ನು ಒಲಿಂಪಿಕ್ಸ್ ಮುಂದಿನ ಟಿ20 ವಿಶ್ವಕಪ್ ಪಂದ್ಯಾವಳಿಯ ಯೋಜನೆಗಳಲ್ಲಿ ಪರಿಗಣಿಸಲಾಗಿಲ್ಲ ಎಂಬ ವಿಚಾರವೂ ಮುನ್ನೆಲೆಗೆ ಬಂದಿದೆ.

ಯಾರ್‍ಯಾರಿಗೆ ಅವಕಾಶ

ಮುಖ್ಯವಾಗಿ ಈ ಬಾರಿಯ ಐಪಿಎಲ್‌ನಲ್ಲಿ ಮಿಂಚಿ ವಿಶ್ವ ಕ್ರಿಕೆಟ್‌ನ ಪ್ರಮುಖ ಆಕರ್ಷಣೆಯಾಗಿರುವ ವೈಭವ್ ಸೂರ್ಯವಂಶಿ ಅವರನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. ರಾಜಸ್ಥಾನ ತಂಡದ ಯಶಸ್ವಿ ಜೈಸ್ವಾಲ್, ಧ್ರುವ್ ಜುರೇಲ್ ಅವರನ್ನು ಆಯ್ಕೆ ಮಾಡಲಾಗಿದೆ. ಆಯುಷ್ ಬದೋನಿ, ಹರ್ಷ ದುಬೆ, ಶೆಹಬಾಜ್ ಅಹ್ಮದ್, ಅನುಕುಲ್ ರಾಯ್, ಗಮನಾರ್ಹವಾಗಿ ರುತುರಾಜ್ ಗಾಯಕ್ವಾಡ್ ಅವರನ್ನು ಆಯ್ಕೆ ಮಾಡಲಾಗಿದೆ. ವಿಕೆಟ್ ಕೀಪರ್ ರಿಷಭ್ ಪಂತ್ ಅವರನ್ನೂ ಈ ಪಟ್ಟಿಯಲ್ಲಿ ಸೇರಿಸಲಾಗಿದೆ.

30 ಜನರ ಪಟ್ಟಿ

ಯಶಸ್ವಿ ಜೈಸ್ವಾಲ್, ಅಭಿಷೇಕ್ ಶರ್ಮ, ವೈಭವ್ ಸೂರ್ಯವಂಶಿ, ಇಶಾನ್ ಕಿಶನ್, ಸಂಜು ಸ್ಯಾಮ್ಸನ್ (ವಿ.ಕಿ), ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ವಿ.ಕಿ), ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್, ತಿಲಕ್ ವರ್ಮಾ, ಜಸ್‌ಪ್ರೀತ್ ಬುಮ್ರಾ, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ಕುಲದೀಪ್ ರೆಡ್ಡಿ, ಕುಲದೀಪ್ ರೆಡ್ಡಿ, ಕುಲದೀಪ್ ಯಾದವ್, ಕುಲದೀಪ್ ಯಾದವ್ ಅನುಕೂಲ್ ರಾಯ್, ಆಯುಷ್ ಬದೋನಿ, , ಹರ್ಷ್ ದುಬೆ, ಧ್ರುವ್ ಜುರೆಲ್, ಖಲೀಲ್ ಅಹ್ಮದ್, ರುತುರಾಜ್ ಗಾಯಕ್ವಾಡ್, ರವಿ ಬಿಷ್ಣೋಯ್, ಶಹಬಾಜ್ ಅಹ್ಮದ್, ಶಿವಂ ದುಬೆ, ವಿಪ್ರಜ್ ನಿಗಮ್, ಹರ್ಷಿತ್ ರಾಣಾ, ಯಶ್ ಠಾಕೂರ್, ವಾಷಿಂಗ್ಟನ್ ಸುಂದರ್.

ಫ್ರೆಂಚ್ ಓಪನ್: ಜೋಕೊವಿಚ್ ಹೊರಕ್ಕೆ ಪ್ರಿಕ್ವಾರ್ಟರ್‌ಗೆ ಜ್ವೆರೆವ್, ಸಬಲೆಂಕಾ



ಪ್ಯಾರಿಸ್: ಪ್ರತಿಷ್ಠಿತ ಫ್ರೆಂಚ್ ಓಪನ್ ಪಂದ್ಯಾವಳಿ ಪ್ರಿಕ್ವಾರ್ಟರ್‌ಫೈನಲ್‌ಗೆ ಅಲೆಕ್ಸಾಂಡರ್ ಜ್ವೆರೆವ್ ತಲುಪಿದ್ದಾರೆ. ಪಂದ್ಯಾವಳಿಯ ಮೊದಲ ಪಂದ್ಯದಿಂದಲೂ ಅತ್ಯುತ್ತಮ ಪ್ರದರ್ಶನ ನೀಡುತ್ತಿರುವ ಅವರು, ಗೆಲುವಿನ ನಾಗಾಲೋಟವನ್ನು ಮೂರನೇ ಸುತ್ತಿಗೆ ವಿಸ್ತರಿಸಿದರು. ಕ್ವಿಂಟಿನ್ ಹಾಲ್ಸ್ ಅವರೊಂದಿಗೆ ಕಠಿಣ ಪೈಪೋಟಿಯಲ್ಲಿ ಅವರು, 6–4, 6–3, 5–7, 6–2ರಿಂದ ಗೆಲುವು ಸಾಧಿಸಿದರು.

ಶುಕ್ರವಾರದ ಪ್ರಮುಖ ಪಂದ್ಯದಲ್ಲಿ ನೋವಾಕ್ ಜೋಕೊವಿಚ್ ಸೋಲನುಭವಿಸಿದ್ದರು. ಬ್ರೆಜಿಲ್‌ನ ಜೊವಾವೊ ಫೊನ್ಸಿಕಾ ವಿರುದ್ಧ ಆಡಿದ್ದ ಅವರು, 6–4, 6–4, 3–6, 5–7, 5–7ರಿಂದ ಸೋತು ಹೊರಬಿದ್ದರು. ಮೊದಲಿಗೆ ಮುನ್ನಡೆ ಸಾಧಿಸಿದ್ದ ಅವರು, ಬಳಿಕ ಅಚ್ಚರಿಯ ಸೋಲು ಕಂಡರು. ಈ ಹಿಂದೆ ಪಂದ್ಯಾವಳಿಯಿಂದ ಯಾನಿಕ್ ಸಿನ್ನರ್ ಸೋತು ಹೊರ ಬಿದ್ದಿದ್ದರು. ಈ ನಿಟ್ಟಿನಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ ಸ್ಟಾರ್ ಆಟಗಾರರು ಬಹುತೇಕ ಹೊರಬಿದ್ದಂತಿದೆ. ಜ್ವೆರೆವ್ ಮಾತ್ರವೇ ಉಳಿದಿದ್ದಾರೆ.

ಸಬಲೆಂಕಾ ಮುನ್ನಡೆ: ಮಹಿಳೆಯ ವಿಭಾಗದಲ್ಲಿ ತಮ್ಮ ಭರ್ಜರಿ ಪ್ರದರ್ಶನ ಮುಂದುವರಿಸಿರುವ ಅರಿನಾ ಸಬಲೆಂಕಾ ಡಾರಿಯಾ ಅವರೊಂದಿಗೆ 6–4, 7–5ರಿಂದ ಗೆಲುವು ಸಾಧಿಸಿದ್ದು, ಪ್ರಿ–ಕ್ವಾರ್ಟರ್‌ಗೇರಿದ್ದಾರೆ. ಅಚ್ಚರಿಯ ಫಲಿತಾಂಶದಲ್ಲಿ ಜೋವಿಕ್ ನಾವೊಮಿ ಒಸಾಕಾ ಅವರೊಂದಿಗೆ ಸೋತು ಹೊರನಡೆದಿದ್ದಾರೆ. ಶುಕ್ರವಾರದಂದು ತಮ್ಮ ಅತ್ಯುತ್ತಮ ಪ್ರದರ್ಶನದೊಂದಿಗೆ ಮಿಂಚಿರುವ ಈಗಾ ಸ್ವಿಯಾಟೆಕ್, ಮಾಗ್ಡಾ ಅವರೊಂದಿಗೆ ಗೆಲುವು ಸಾಧಿಸಿದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಈಗಾ 6–4, 6–4ರಿಂದ ಗೆದ್ದು ಬೀಗಿದ್ದಾರೆ.

ಸಿಂಗಾಪುರ ಓಪನ್: ವಿಶ್ವ ನಂ.1 ಜೋಡಿಗೆ ಶಾಕ್ ನೀಡಿದ ಭಾರತೀಯರು

ಫೈನಲ್‌ಗೆ ಸಾತ್ವಿಕ್–ಚಿರಾಗ್ ಲಗ್ಗೆ




ಸಿಂಗಾಪುರ: ಸಿಂಗಾಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ತಾರಾ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಫೈನಲ್‌ಗೆ ಪ್ರವೇಶಿಸಿದ್ದಾರೆ. ಶನಿವಾರ ನಡೆದ ಪುರುಷರ ಡಬಲ್ಸ್ ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಭಾರತೀಯ ಜೋಡಿ, ಅಗ್ರ ಶ್ರೇಯಾಂಕದ ಹಾಗೂ ವಿಶ್ವ ನಂ.1 ದಕ್ಷಿಣ ಕೊರಿಯಾದ ಕಿಮ್ ವೋನ್ ಹೋಸಿಯೊ ಸೆಯುಂಗ್ ಜೇ ಜೋಡಿಯನ್ನು ನೇರ ಗೇಮ್‌ಗಳಲ್ಲಿ ಮಣಿಸಿ ಸಂಚಲನ ಮೂಡಿಸಿತು. 52 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಸಾತ್ವಿಕ್–ಚಿರಾಗ್ 21–19, 21–18 ಅಂತರದಲ್ಲಿ ಗೆಲುವು ಸಾಧಿಸಿದರು. ಹಾಲಿ ವಿಶ್ವ ಚಾಂಪಿಯನ್‌ಗಳ ವಿರುದ್ಧ ಒತ್ತಡದ ಕ್ಷಣಗಳಲ್ಲೂ ಸಮಾಧಾನ ಕಾಪಾಡಿಕೊಂಡ ಭಾರತೀಯ ಜೋಡಿ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು. ಮೊದಲ ಗೇಮ್‌ನಲ್ಲಿ ವಿರಾಮದ ವೇಳೆಗೆ ಕೊರಿಯಾ ಜೋಡಿ 13–11ರಿಂದ ಮುನ್ನಡೆಯಲ್ಲಿತ್ತು. ಆದರೆ ಸಾತ್ವಿಕ್–ಚಿರಾಗ್ ಅದ್ಭುತ ಪುನರಾಗಮನ ಮಾಡಿ ಪ್ರಮುಖ ಅಂಕಗಳನ್ನು ಗಳಿಸುವ ಮೂಲಕ ಗೇಮ್ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನಲ್ಲೂ ಭಾರತೀಯ ಜೋಡಿ 11–14ರಿಂದ ಹಿನ್ನಡೆಯಲ್ಲಿತ್ತು. ಆದರೂ ಆತ್ಮವಿಶ್ವಾಸ ಕಳೆದುಕೊಳ್ಳದೆ ಹೋರಾಡಿದ ಸಾತ್ವಿಕ್–ಚಿರಾಗ್ ಸತತ ಅಂಕಗಳನ್ನು ಗಳಿಸಿ ಪಂದ್ಯವನ್ನು ಮುಗಿಸಿದರು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಸಾತ್ವಿಕ್– ಚಿರಾಗ್, ಇಂಡೋನೇಷ್ಯಾದ ಫಜರ್ ಅಲ್ಫಿಯನ್–ಮುಹಮ್ಮದ್ ಶೋಹಿಬುಲ್ ಫಿಕ್ರಿ ಜೋಡಿ ಹಾಗೂ ಚೀನಾದ ಲಿಯಾಂಗ್ ವೇ ಕಾಂಗ್‌ವಾಂಗ್ ಚಾಂಗ್ ಜೋಡಿ ನಡುವಿನ ಇನ್ನೊಂದು ಸೆಮಿಫೈನಲ್ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ. ಇನ್ನೊಂದೆಡೆ ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಧ್ರುವ್ ಕಪಿಲಾ ಮತ್ತು ತನಿಷಾ ಕ್ರಾಸ್ಟೊ ಅವರ ಅಭಿಯಾನ ಅಂತ್ಯಗೊಂಡಿತು. ಸೆಮಿಫೈನಲ್‌ನಲ್ಲಿ ಜಪಾನ್‌ನ ಯುಯಿಚಿ ಶಿಮೊಗಾ–ಮಿಸಯಾಕಾ ಹೋಬರಾ ಜೋಡಿಗೆ 16–21, 21–17, 13–21 ಅಂತರದಲ್ಲಿ ಸೋತು ಅವರು ಟೂರ್ನಿಯಿಂದ ಹೊರಬಿದ್ದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6000

5999 ಉತ್ತರ

ಎಡದಿಂದ ಬಲಕ್ಕೆ:
2.ಆತ್ಮರತಿ 4.ತುಡಿತ
6.ದಿಟ್ಟಿಗಿಡಿಯ 9.ನವರಸ
10.ನವರಸ 13.ಹಣದೊಡತಿ
15.ಮಾಳಿಗೆ 17.ಬಾಕಿ
18.ತಾಲಮಾನ
ಮೇಲಿನಿಂದ ಕೆಳಕ್ಕೆ : 1.ಪಾತ
2.ಆತುರಗಾರ 3.ರಜಾದಿನ
4.ಗಾರುಡಿ 7.ಯಶೋಮತಿ
8.ಜ್ಞಾನದಾಹ
11.ಮಾನಾಪಮಾನ
12.ಅತಿಬಲ 14.ಕಿರಣ
16.ಗೆಡ್ಡೆ

ಎಡದಿಂದ ಬಲಕ್ಕೆ
2.ವಿಮಾನವನ್ನೊಳಗೊಂಡ ವಸ್ತುಸ್ಥಿತಿ (4)
4.ಅದೃಷ್ಟ–ಸುದೈವದ ಸಮಾನಪದ (2)
5.ವಿಶ್ವದ ಅತಿದೊಡ್ಡ ಮರುಭೂಮಿ (3)
6.ಅವರು ಭಯದಿಂದ ಪಡೆದ ಆಶ್ವಾಸನೆ (4)
8.ಕುಚೇಷ್ಟೆ–ಅಧಿಕಪ್ರಸಂಗವಿದು (4)
10.ತಲೆ ರಕ್ಷಿಸಲು ಹಾಕಿಕೊಳ್ಳುವ ಸಾಧನ (4)
12.ಮೊಬಲಗಿನಲ್ಲಿ ಕೊಡುವ ಸೋಡಿ (4)
14.ಹರನ ಜಟೆಯ ಬಗೆಗಿನ ವೃಥಾ ಮಾತುಕತೆ (3)
16.ದನ–ಜಾನುವಾರು ಇದು (2)
17.ಮರಣ ವಿರಸವಾದರೆ ಜೀವನ? (4)
ಮೇಲಿನಿಂದ ಕೆಳಕ್ಕೆ
1.ಉದಾಸನಾಗಿ ಕುಳಿತ ಸೇವಕ (2)
2.ಹೊಳೆಯುವ–ವೈಭವದಿಂದ ಕೂಡಿದ್ದು (4)
3.ಮನುಷ್ಯರ ಬಗ್ಗೆ ಇರುವ ಅಂಜಿಕೆ (4)
4.ಭಾವನ ಗರ್ವ ಮುರಿದ ಪರಶುರಾಮ (3)
7.ಇದು ಆಕರ್ಷಿಸುವ ಸ್ವಭಾವ (4)
8.ಈಕೆ ರಾವಣನ ಪತ್ನಿ (4)
9.ಪೂರ್ವಕಥೆ–ಚರಿತ್ರೆಯಿದು(4)
11. ನೆರವನ್ನು ಉಲ್ಟಾ ನೀಡುತ್ತಿದ್ದಾರೆ (4)
13.ದಯನೀಯವಾಗಿ ಬೇಡು (3)
15.ಬಲವಾದ ಸುತ್ತುಗೋಡೆ ತಲೆಕೆಳಗಾಗಿದೆ (2)

ಕಿರುಸುದ್ದಿ

ಪಿಲಿಕುಲ: ನೂತನ ಆಯುಕ್ತ ಕೆ. ಶ್ರೀಕಾಂತ್ ರಾವ್ ಅಧಿಕಾರ ಸ್ವೀಕಾರ

ಮಂಗಳೂರು: ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ನೂತನ ಆಯುಕ್ತರಾಗಿ ಕೆ. ಶ್ರೀಕಾಂತ್ ರಾವ್ ಅವರು ಶನಿವಾರ ಅಧಿಕಾರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ನಿರ್ಗಮಿತ ಆಯುಕ್ತ ಡಾ. ಅರುಣ್ ಕುಮಾರ್ ಶೆಟ್ಟಿ ಎನ್, ಪ್ರಾಧಿಕಾರದ ಉಪಸಮಿತಿಯ ಅಧ್ಯಕ್ಷ ಡಾ. ಶ್ರೀನಿಕೇತನ್, ಆಡಳಿತಾಧಿಕಾರಿ ಡಾ. ಅಶೋಕ್ ಕೆ.ಆರ್. ಹಾಗೂ ಪ್ರಾಧಿಕಾರದ ಅಧಿಕಾರಿ ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ಅಕ್ರಮ ಕಸಾಯಿಖಾನೆಗೆ ಪೊಲೀಸ್ ದಾಳಿ

ಪುತ್ತೂರು: ಸವಣೂರಿನ ಮಾಂತೂರು ಸಮೀಪದ ಪಣೆಮಜಲು ಎಂಬಲ್ಲಿ ನಜೀರ್ ಎಂಬಾತನ ತೋಟದಲ್ಲಿ ನಡೆಯುತ್ತಿದ್ದ ಅಕ್ರಮ ಕಸಾಯಿಖಾನೆಗೆ ಹಿಂದೂ ಸಂಘಟನೆಗಳ ಮಾಹಿತಿಯನ್ನಾಧರಿಸಿ ಬೆಳ್ಳಾರೆ ಪೊಲೀಸರು ದಾಳಿ ನಡೆಸಿ ಗೋಮಾಂಸ ಹಾಗೂ ಹತ್ಯೆಗೆ ಬಳಸಲಾಗಿರುವ ಸಲಕರಣೆಗಳನ್ನು ವಶಕ್ಕೆ ಪಡೆದಿದ್ದಾರೆ. ಐವರು ಆರೋಪಿಗಳ ಪೈಕಿ ಸ್ಥಳ ಮಾಲೀಕ ನಜೀರ್ ಹಾಗೂ ಮತ್ತಿಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ತಪ್ಪಿಸಿಕೊಂಡಿರುವ ಉಳಿದ ಮೂವರ ಶೋಧಕ್ಕೆ ಬಲೆ ಬೀಸಿದ್ದಾರೆ. ಈ ಪ್ರದೇಶದಲ್ಲಿ ನಿರಂತರವಾಗಿ ಗೋಹತ್ಯೆ ನಡೆಯುತ್ತಿದ್ದು, ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಬಸ್ ಡಿಕ್ಕಿಯಾಗಿ ಮೋಟಾರ್ ಸೈಕಲ್ ಸವಾರ ಸಾವು

ಶಂಕರನಾರಾಯಣ: ಬಸ್ಸೊಂದು ಡಿಕ್ಕಿ ಹೊಡೆದು ಮೋಟಾರು ಸೈಕಲ್ ಸವಾರ ಮೃತಪಟ್ಟ ಘಟನೆ ಶಂಕರನಾರಾಯಣ ಠಾಣಾ ವ್ಯಾಪ್ತಿಯ ಕುಂದಾಪುರ–ಅಂಪಾರು ರಸ್ತೆಯ ಮೂಡುಬಗೆ ಬಾಳ್ಕಟ್ಟು ಸೇತುವೆ ಬಳಿ ಶನಿವಾರ ಬೆಳಗ್ಗೆ ನಡೆದಿದೆ. ಮೃತರನ್ನು ಬಸವ ನಾಯ್ಕ (80) ಎಂದು ಗುರುತಿಸಲಾಗಿದೆ. ಶನಿವಾರ ಬೆಳಗ್ಗೆ 11.45ರ ಸುಮಾರಿಗೆ ಬಸವ ನಾಯ್ಕ ಅವರು ಶಾನ್ಕಟ್ಟು ರಸ್ತೆಯಲ್ಲಿ ಸಾಗುತ್ತಿರುವಾಗ ಸಿದ್ದಾಪುರ ಕಡೆಯಿಂದ ವೇಗವಾಗಿ ಬಂದ ಬಸ್ ಬಸವ ಅವರ ಮೋಟಾರು ಸೈಕಲ್‌ಗೆ ಡಿಕ್ಕಿ ಹೊಡೆದಿತ್ತು. ಡಿಕ್ಕಿಯ ರಭಸಕ್ಕೆ ಬಸ್ ಸ್ವಲ್ಪ ದೂರ ಬೈಕ್‌ನ್ನು ಎಳೆದುಕೊಂಡು ಹೋಗಿತ್ತು. ತೀವ್ರವಾಗಿ ಗಾಯಗೊಂಡ ಬಸವ ನಾಯ್ಕರನ್ನು ಸಾರ್ವಜನಿಕರು ಉಪಚರಿಸಿ ಕುಂದಾಪುರ ಆಸ್ಪತ್ರೆಗೆ ಕರೆದುಕೊಂಡಿದ್ದು ಹೋಗಿದ್ದು, ಅಲ್ಲಿ ಪರೀಕ್ಷಿಸಿದ ವೈದ್ಯರು ಈಗಾಗಲೇ ಮೃತಪಟ್ಟಿರುವುದಾಗಿ ತಿಳಿಸಿದ್ದರು. ಈ ಬಗ್ಗೆ ಶಂಕರನಾರಾಯಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆರೆಗೆ ಬಿದ್ದು ಎರಡೂವರೆ ವರ್ಷದ ಬಾಲಕ ಮೃತ್ಯು

ಮುಳ್ಳೇರಿಯ: ಮನೆ ಸಮೀಪದ ಆವರಣವಿಲ್ಲದ ಕೆರೆಗೆ ಬಿದ್ದು ಎರಡೂವರೆ ವರ್ಷದ ಬಾಲಕ ಸಾವಿಗೀಡಾದ ಘಟನೆ ಸಂಭವಿಸಿದೆ. ಕಾರಡ್ಕ ಕಾರ್ಲೆ ನಿವಾಸಿ ಲೋಹಿತ್ ಶೆಟ್ಟಿ ಮತ್ತು ದಿವ್ಯಾ ದಂಪತಿಯ ಪುತ್ರ ದೇವನಂದ ಮೃತಪಟ್ಟ ಬಾಲಕ. ಶುಕ್ರವಾರ ಸಂಜೆ 6 ಗಂಟೆ ವೇಳೆ ಮಗುವಿನ ಮೃತದೇಹವನ್ನು ಕೆರೆಯಲ್ಲಿ ಪತ್ತೆಹಚ್ಚಲಾಗಿದೆ. ಬಾಲಕ ನಾಪತ್ತೆಯಾದ ಹಿನ್ನೆಲೆಯಲ್ಲಿ ನಡೆಸಿದ ಹುಡುಕಾಟದಿಂದ ಕೆರೆಯಲ್ಲಿ ಮೃತದೇಹ ಕಂಡುಬಂದಿದೆ. ಮನೆಯಿಂದ 300 ಮೀಟರ್ ದೂರದ ತೆಂಗಿನ ತೋಟದಲ್ಲಿರುವ ಕೆರೆಗೆ ಬಾಲಕ ಬಿದ್ದು ದುರಂತ ಸಂಭವಿಸಿದೆ. ಮನೆಯಂಗಳದಲ್ಲಿ ಆಟವಾಡುತ್ತಿದ್ದ ಮಗು ಆ ಕಡೆ ತೆರಳಿದ್ದು, ನೀರನ್ನು ಕಂಡು ಆಟಕ್ಕಿಳಿದಾಗ ದುರಂತ ಸಂಭವಿಸಿರಬೇಕೆಂದು ಶಂಕಿಸಲಾಗಿದೆ. ಬಾಲಕನನ್ನು ನೀರಿನಿಂದ ಹೊರತೆಗೆದು ಚೆಂಗಳದ ಸಹಕಾರಿ ಆಸ್ಪತ್ರೆಗೆ ಒಯ್ದರೂ ಆ ವೇಳೆಗೆ ಕೊನೆಯುಸಿರೆಳೆದಿದ್ದನು. ಮೃತ ಬಾಲಕ ತಂದೆ, ತಾಯಿ, ಸಹೋದರ ದೇವಾನುಷ್ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾನೆ.

ಹೊಸಮನೆಯ ಬೆಡ್ ರೂಮ್‌ನಲ್ಲಿ ಮಹಿಳೆ ನೇಣುಬಿಗಿದು ಆತ್ಮಹತ್ಯೆ

ಮುಳ್ಳೇರಿಯ: ಕಾರಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯ ಕರ್ಮಂತೋಡಿ ಮೂಡಾಂಕುಳ ಎಂಬಲ್ಲಿ ಮಹಿಳೆಯೋರ್ವೆ ಮನೆಯ ಬೆಡ್‌ರೂಮ್‌ನಲ್ಲಿ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ನಾಗಾಲ್ಯಾಂಡ್‌ನಲ್ಲಿ ಸೈನಿಕನಾಗಿರುವ ರಾಜೇಶ್‌ಕುಮಾರ್‌ರ ಪತ್ನಿ ಸೌಪರ್ಣಿಕ (40) ಮೃತಪಟ್ಟ ಮಹಿಳೆ. ಹೊಸತಾಗಿ ನಿರ್ಮಿಸಿದ ಮನೆಯ ಗೃಹ ಪ್ರವೇಶ ಒಂದು ತಿಂಗಳ ಹಿಂದೆಯಷ್ಟೇ ನಡೆದಿತ್ತು. ಈ ಕಾರ್ಯಕ್ರಮಕ್ಕೆ ಬಂದಿದ್ದ ರಾಜೇಶ್ ಕುಮಾರ್ ಮರಳಿ ಕೆಲಸ ಸ್ಥಳಕ್ಕೆ ತೆರಳಿದ್ದರು. ಶನಿವಾರ ಬೆಳಗ್ಗೆ ಮನೆಯ ಮೇಲಂತಸ್ತಿನ ಬೆಡ್‌ರೂಮ್‌ನಲ್ಲಿ ಮಹಿಳೆಯು ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾದರು. ಕೂಡಲೇ ಅವರನ್ನು ಮುಳ್ಳೇರಿಯದ ಆಸ್ಪತ್ರೆಗೆ ತಲುಪಿಸಿದರೂ ಅಷ್ಟರೊಳಗೆ ಸಾವು ಸಂಭವಿಸಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ. ಮುಳಿಯಾರು ಬಳಿಯ ಪಾತನಡ್ಕ ನಿವಾಸಿಯಾದ ಸೌಪರ್ಣಿಕರಿಗೆ ಇಬ್ಬರು ಮಕ್ಕಳಿದ್ದಾರೆ. ಆದೂರು ಪೊಲೀಸರು ಸ್ಥಳಕ್ಕೆ ತಲುಪಿ ತನಿಖೆ ನಡೆಸಿದ್ದಾರೆ. ವಿಷಯ ತಿಳಿದು ರಾಜೇಶ್ ಕುಮಾರ್ ಊರಿಗೆ ಮರಳಿದ್ದಾರೆ.

ಕೃಷಿಕನ ಶವ ಕೆರೆಯಲ್ಲಿ ಪತ್ತೆ

ಮುಳ್ಳೇರಿಯ: ಕಾರಡ್ಕ ಬಳಿಯ ಕೊಟ್ಟಂಗುಳಿಯಲ್ಲಿ ಕೃಷಿಕನೋರ್ವ ಕೆರೆಗೆ ಹಾರಿ ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಕೆರೆಗೆ ಹಾರುವ ಮೊದಲು ಕೈಗಳ ನರ ಕತ್ತರಿಸಿರುವುದಾಗಿಯೂ ಸಂಶಯಿಸಲಾಗುತ್ತಿದೆ. ಕೊಟ್ಟಂಗುಳಿ ನಿವಾಸಿ ಕುಂಞಂಬು ನಾಯರ್‌ರ ಪುತ್ರ ಅಜಿತ್ ಕುಮಾರ್ (43) ಆತ್ಮಹತ್ಯೆಗೈದ ವ್ಯಕ್ತಿ. ಶನಿವಾರ ಬೆಳಗ್ಗೆ ಅಜಿತ್ ಕುಮಾರ್ ಮನೆಯಲ್ಲಿ ಗೋಚರಿಸದ ಹಿನ್ನೆಲೆಯಲ್ಲಿ ನಡೆಸಿದ ಹುಡುಕಾಟ ವೇಳೆ ಮನೆ ಸಮೀಪದ ಅಡಿಕೆ ತೋಟದ ಕೆರೆಯಲ್ಲಿ ಬಿದ್ದಿರುವುದು ಕಂಡುಬಂದಿದೆ. ಕೂಡಲೇ ಅವರನ್ನು ಮೇಲಕ್ಕೆತ್ತಿ ಮುಳ್ಳೇರಿಯದ ಆಸ್ಪತ್ರೆಗೆ ತಲುಪಿಸಿದರೂ ಜೀವ ರಕ್ಷಿಸಲಾಗಲಿಲ್ಲ. ಈ ಹಿಂದೆ ಮಡಿಕೇರಿಯಲ್ಲಿ ಹೋಟೇಲ್ ನಡೆಸುತ್ತಿದ್ದ ಅಜಿತ್ ಕುಮಾರ್ ವ್ಯಾಪಾರದಲ್ಲಿ ನಷ್ಟ ಉಂಟಾದುದರಿಂದ ಭಾರೀ ಆರ್ಥಿಕ ಸಂದಿಗ್ಧತೆಯನ್ನು ಎದುರಿಸುತ್ತಿದ್ದರೆಂದು ಹೇಳಲಾಗುತ್ತಿದೆ. ನಂತರ ಊರಿಗೆ ಮರಳಿ ಕೃಷಿಯಲ್ಲಿ ಸಕ್ರಿಯರಾಗಿದ್ದರು. ಘಟನೆಗೆ ಸಂಬಂಧಿಸಿ ಆದೂರು ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ. ಮೃತರು ತಾಯಿ ಮಾಲತಿ, ಪತ್ನಿ ಚೈತ್ರಾ, ಒಂದು ಮಗು, ಸಹೋದರಿ ಅಜಿತಾ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಡ್ಯಾರ್ ಗಾರ್ಡನ್‌ನಲ್ಲಿ 11ನೇ ವರ್ಷದ ಪಟ್ಲ ಸಂಭ್ರಮ | ಭಾಗವತ ಪೊಲ್ಯರಿಗೆ ಯಕ್ಷಧ್ರುವ ಪಟ್ಲ ಪ್ರಶಸ್ತಿ

ಡಾ. ಆಳ್ವ ಯಕ್ಷಧ್ರುವ ಮಹಾಪೋಷಕ

ಮಂಗಳೂರು: ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಮಂಗಳೂರು ಇದರ 11ನೇ ವರ್ಷದ ಪಟ್ಲ ಸಂಭ್ರಮ 2026 ಕಾರ್ಯಕ್ರಮ ಅಡ್ಯಾರ್ ಗಾರ್ಡನ್‌ನಲ್ಲಿ ಶನಿವಾರ ನಡೆಯಿತು.

ಆಶೀರ್ವಚನ ನೀಡಿದ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಪಟ್ಲ ಟ್ರಸ್ಟ್ ಕಲಾತ್ಮಕವಾಗಿ ಮತ್ತು ಸಂಘಟನಾತ್ಮಕವಾಗಿ ಬೆಳೆಯುತ್ತಿದೆ ಎಂದರು.

ಒಡಿಯೂರು ಕ್ಷೇತ್ರದ ಶ್ರೀ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಜನರ ಮನಸ್ಸಿನಲ್ಲಿ ಉಳಿಯುವ ಕೆಲಸವನ್ನು ಪಟ್ಲ ಫೌಂಡೇಶನ್ ಟ್ರಸ್ಟ್ ಮಾಡುತ್ತಿದೆ ಎಂದರು.

> **ಟ್ರಸ್ಟ್‌ಗೆ ಸಹಕಾರ**
> **ಸಂಘ ಸಂಸ್ಥೆಗಳು ಪಾರದರ್ಶಕವಾಗಿ ಕೆಲಸ ಮಾಡಬೇಕು. ದಾನಿಗಳನ್ನು ಗೌರವಯುತವಾಗಿ ನೋಡಿಕೊಳ್ಳಬೇಕು. ಪಟ್ಲ ಫೌಂಡೇಶನ್ ಟ್ರಸ್ಟ್ ಪಾರದರ್ಶಕವಾಗಿ ಕೆಲಸ ಮಾಡಿ ಕಲಾವಿದರ ಏಳಿಗೆಗಾಗಿ ಶ್ರಮಿಸುತ್ತಿದೆ. ಮುಂದೆಯೂ ಪಟ್ಲ ಫೌಂಡೇಶನ್ ಟ್ರಸ್ಟ್‌ಗೆ ಸಹಕಾರ ನೀಡುತ್ತೇನೆ.**
> ■ ಡಾ. ಸದಾಶಿವ ಶೆಟ್ಟಿ ಕನ್ಯಾನ, ಮುಂಬೈ ಹೇರಂಭ ಇಂಡಸ್ಟ್ರೀಸ್ ಸಂಸ್ಥೆಯ ಅಧ್ಯಕ್ಷ



ಕಾರ್ಯಕ್ರಮವನ್ನು ಪಾವಂಜೆ ನಾಗವ್ರಜ ಕ್ಷೇತ್ರದ ಧರ್ಮದರ್ಶಿ ಡಾ. ಯಾಜಿ ನಿರಂಜನ ಭಟ್ ಉದ್ಘಾಟಿಸಿದರು.

ಸಭಾ ಕಾರ್ಯಕ್ರಮವನ್ನು ಪಟ್ಲ ಫೌಂಡೇಶನ್ ಟ್ರಸ್ಟ್‌ನ ಪ್ರಧಾನ ಸಂಚಾಲಕ ಶಶಿಧರ ಬಿ. ಶೆಟ್ಟಿ ಉದ್ಘಾಟಿಸಿ, ಕಲಾವಿದರ ಬದುಕು ಕಟ್ಟಿ ಕೊಡುವ ಕೆಲಸ ಪಟ್ಲ ಫೌಂಡೇಶನ್ ಮಾಡುತ್ತಿದೆ ಎಂದರು.

ಚಂಡೀಗಢ ಸರಕಾರದ ಕಾರ್ಯದರ್ಶಿ ರಾಜೇಶ್ ಪ್ರಸಾದ್, ಪ್ರೊ. ಎಂ.ಎಲ್. ಸಾಮಗ, ಮುಂಬೈ ವಿಕೆ ಗ್ರೂಪ್ಸ್‌ನ ಅಧ್ಯಕ್ಷ ಕರುಣಾಕರ ಎಂ. ಶೆಟ್ಟಿ ಮಧ್ಯಗುತ್ತು, ಉದ್ಯಮಿ ವೇಣುಗೋಪಾಲ್ ಶೆಟ್ಟಿ ಮುಂಬೈ, ಅಜಿತ್ ಶೆಟ್ಟಿ ಅಂಕಲೇಶ್ವರ, ಸಂಸದ ಬ್ರಿಜೇಶ್ ಚೌಟ, ದಿವಾಕರ ರಾವ್ ಕಟೀಲು, ಯೋಗೀಂದ್ರ ಭಟ್ ಉಳಿ, ಉದ್ಯಮಿ ಜಿ. ಶಂಕರ್ ಉಡುಪಿ, ಪಟ್ಲಗುತ್ತು ಮಹಾಬಲ ಶೆಟ್ಟಿ, ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ ಕೆ. ಭಂಡಾರಿ ಅಡ್ಯಾರ್, ಕೋಶಾಧಿಕಾರಿ ಸಿಎ ಸುದೇಶ್ ಕುಮಾರ್ ರೈ, ಯೋಜನಾ ನಿರ್ದೇಶಕ ಡಾ. ಸತೀಶ್ ಭಂಡಾರಿ, ಉಪಾಧ್ಯಕ್ಷರಾದ ಅಶೋಕ್ ಆರ್. ಶೆಟ್ಟಿ ಪೆರ್ಮುದೆ, ದುರ್ಗಾಪ್ರಸಾದ್ ಪಿವಿ ಪಡುಬಿದ್ರೆ, ಸಂಘಟನಾ ಕಾರ್ಯದರ್ಶಿ ಬಾಳ ಜಗನ್ನಾಥ ಶೆಟ್ಟಿ, ಜತೆ ಕಾರ್ಯದರ್ಶಿ ರಾಜೀವ ಪೂಜಾರಿ ಕೈಕಂಬ, ರವಿಚಂದ್ರ ಶೆಟ್ಟಿ ಅಶೋಕನಗರ, ಉದಯಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

ಟ್ರಸ್ಟ್ ಸ್ಥಾಪಕಾಧ್ಯಕ್ಷ ಪಟ್ಲಗುತ್ತು ಸತೀಶ್ ಶೆಟ್ಟಿ ಸ್ವಾಗತಿಸಿದರು. ಪ್ರದೀಪ್ ಆಳ್ವ ಕದ್ರಿ ವಂದಿಸಿದರು. ಸಂಘಟನಾ ಕಾರ್ಯದರ್ಶಿ ಕದ್ರಿ ನವನೀತ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು. ಸಮಾರಂಭದಲ್ಲಿ ನಾಲ್ಕು ಸಾವಿರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಯಿತು.

ಪ್ರಶಸ್ತಿ ಪ್ರದಾನ

ಡಾ. ಎಂ. ಮೋಹನ್ ಆಳ್ವ ಅವರಿಗೆ 2026 ರ ಯಕ್ಷಧ್ರುವ ಮಹಾಪೋಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. 2026ರ ಪಟ್ಲ ಪ್ರಶಸ್ತಿಯನ್ನು ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿ ಅವರಿಗೆ ಒಂದು ಲಕ್ಷ ರೂ. ನಗದು ಸಹಿತ ಪ್ರದಾನ ಮಾಡಲಾಯಿತು.
ಪ್ರಶಸ್ತಿ ಸ್ವೀಕರಿಸಿದ ಡಾ. ಎಂ. ಮೋಹನ್ ಆಳ್ವ ಮಾತನಾಡಿ, ಪಟ್ಲ ಫೌಂಡೇಶನ್ ಟ್ರಸ್ಟ್ ರಾಜ್ಯದಲ್ಲಿ ಸಾಂಸ್ಕೃತಿಕ ರಂಗದಲ್ಲಿ ಹೆಸರು ಮಾಡಿದ ಸಂಸ್ಥೆ. ಪಟ್ಲ ಅವರು ಯಕ್ಷಗಾನದ ಕಲೆಯಲ್ಲಿ ಯಾರೂ ಊಹಿಸದ ರೀತಿಯಲ್ಲಿ ಕೆಲಸ ಮಾಡಿದ್ದಾರೆ ಎಂದರು.
ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿ ಮಾತನಾಡಿ, ಕಲಾಸೇವೆಯ ನಿವೃತ್ತಿಯ ಅಂಚಿನಲ್ಲಿದ್ದಾಗ ಪಟ್ಲ ಪ್ರಶಸ್ತಿಯ ಸನ್ಮಾನ ಜವಾಬ್ದಾರಿಯನ್ನು ಹೆಚ್ಚಿಸಿದೆ ಎಂದರು.

ಪುರುಷರ ಓಪನ್ ಸೆಮಿಫೈನಲ್‌ಗೆ ಆರು ಸರ್ಫರ್‌ಗಳು ಆಯ್ಕೆ

ಎಸ್‌ಎಂಪಿಎ ಇಂಡಿಯನ್ ಓಪನ್ ಸರ್ಫಿಂಗ್

ಸುರತ್ಕಲ್ : ತಣ್ಣೀರುಬಾವಿ ಬ್ಲೂ ಬೇ ಬೀಚ್‌ನಲ್ಲಿ ನಡೆಯುತ್ತಿರುವ 7ನೇ ಎಸ್ಎಂಪಿಎ ಇಂಡಿಯನ್ ಓಪನ್ ಸರ್ಫಿಂಗ್ 2026ರ ಎರಡನೇ ದಿನದ ಸ್ಪರ್ಧೆಯಲ್ಲಿ 5 ವಿಭಾಗಗಳಲ್ಲಿ 6 ಕ್ವಾರ್ಟರ್ ಫೈನಲ್ ಹಾಗೂ 6 ಸೆಮಿಫೈನಲ್ ಪಂದ್ಯಗಳು ನಡೆದವು.

ಪುರುಷರ ಓಪನ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿಕೇರಳದರಮೇಶ್ ಬೂದಿಹಾಳ್ 14.83 ಅಂಕಗಳೊಂದಿಗೆ ಮೊದಲ ಸ್ಥಾನ ಪಡೆದರು. ಶ್ರೀಕಾಂತ್ ಡಿ 13.00, ಕಿಶೋರ್ ಕುಮಾರ್ 11.80, ಅಜೀಶ್ ಅಲಿ 9.93, ಸಂಜಯ್ ಸೆಲ್ವಮಣಿ 9.57 ಹಾಗೂ ಶಿವರಾಜ್ ಬಾಬು 8.76 ಅಂಕಗಳೊಂದಿಗೆ ಸೆಮಿಫೈನಲ್‌ಗೆ ತಲುಪಿದರು.

ಇದಕ್ಕೂ ಮೊದಲು ನಡೆದ ಎರಡನೇ ಸುತ್ತಿನಲ್ಲಿ 6 ಹೀಟ್‌ಗಳಲ್ಲಿ 24 ಸರ್ಫರ್‌ಗಳು ಸ್ಪರ್ಧಿಸಿದರು. ಕಿಶೋರ್ ಕುಮಾರ್ 14.17, ಅಜೀಶ್ ಅಲಿ 13.33, ರಮೇಶ್ ಬೂದಿಹಾಳ್ 13.00 ಅಂಕ ಗಳಿಸಿ ಅಗ್ರಸ್ಥಾನ ಪಡೆದರು. ಸಂಜಯ್ ಸೆಲ್ವಮಣಿ, ಶ್ರೀಕಾಂತ್ ಡಿ, ಶಿವರಾಜ್ ಬಾಬು, ತಯಿನ್ ಅರುಣ್, ನವೀನ್ ಕುಮಾರ್ ಆರ್, ಹರೀಶ್ ಎಂ, ಸೋಮ್ ಸೇಠಿ, ರೂಬನ್ ವಿ, ಸಂಚೈಕುಮಾರ್ ಎಸ್. ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದರು.

18 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ 3 ಕ್ವಾರ್ಟರ್ ಫೈನಲ್ ಹೀಟ್‌ಗಳಲ್ಲಿ 12 ಸರ್ಫರ್‌ಗಳು ಸ್ಪರ್ಧಿಸಿದರು. ಹರೀಶ್ ಪಿ. 13.60, ತಯಿನ್ ಅರುಣ್ 12.67, ಸೋಮ್ ಸೇಠಿ 12.00, ಯೋಗೇಶ್ ಎ. 11.34 ಅಂಕಗಳೊಂದಿಗೆ ಸೆಮಿಫೈನಲ್‌ಗೆ ತಲುಪಿದರು. ಪ್ರಹ್ಲಾದ್ ಶ್ರೀರಾಮ್ 9.40 ಹಾಗೂ ಪ್ರದೀಪ್ ಪೂಜಾರ್ 6.56 ಅಂಕ ಗಳಿಸಿ ಮುಂದಿನ ಸುತ್ತಿಗೆ ಆಯ್ಕೆಯಾದರು.

18 ವರ್ಷದೊಳಗಿನ ಬಾಲಕಿಯರ ಸೆಮಿಫೈನಲ್‌ನಲ್ಲಿ ಕಮಲಿ ಮೂರ್ತಿ 12.44 ಅಂಕಗಳೊಂದಿಗೆ ಫೈನಲ್‌ಗೆ ತಲುಪಿದರು. ಆದ್ಯ ಸಿಂಗ್ 7.50, ಸಾನ್ವಿ ಹೆಗ್ಡೆ 5.30, ದಮಯಂತಿ ಶ್ರೀರಾಮ್ 4.27 ಅಂಕಗಳೊಂದಿಗೆ ಫೈನಲ್ ಪ್ರವೇಶಿಸಿದರು.

14 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಹರೀಶ್ ಪಿ. 14.40, ಶೇಕ್ ದಾವೂದ್ ಎಸ್. 13.00, ಯೋಗೇಶ್ ಎ. 9.40, ಪ್ರಹ್ಲಾದ್ ಶ್ರೀರಾಮ್ 7.27 ಅಂಕಗಳೊಂದಿಗೆ ಫೈನಲ್‌ಗೆ ಆಯ್ಕೆಯಾದರು. ಬಾಲಕಿಯರ ವಿಭಾಗದಲ್ಲಿ ದಮಯಂತಿ ಶ್ರೀರಾಮ್ 9.50, ಸಾನ್ವಿತಾ ಕುಂದರ್ 5.10, ಆರಬೋಲು ನೇತ್ರಾ 1.00, ಗೌರಿ ಶ್ರೀಮುಷ್ಣಂ 0.50 ಅಂಕಗಳೊಂದಿಗೆ ಫೈನಲ್ ತಲುಪಿದರು.

ಸರ್ಫಿಂಗ್ ಫೆಡರೇಶನ್ ಆಫ್ ಇಂಡಿಯಾ ಆಶ್ರಯದಲ್ಲಿ ಮಂತ್ರ ಸರ್ಫ್ ಕ್ಲಬ್ ಮತ್ತು ಸರ್ಫಿಂಗ್ ಸ್ವಾಮಿ ಫೌಂಡೇಶನ್ ಈ ಚಾಂಪಿಯನ್‌ಶಿಪ್ ಆಯೋಜಿಸಿದೆ. ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ಸರ್ಫಿಂಗ್ ಅಸೋಸಿಯೇಷನ್ ಬೆಂಬಲ ನೀಡಿವೆ.



ಏಷ್ಯನ್ ಗೇಮ್ಸ್ 2026ಕ್ಕೆ ಭಾರತ ತಂಡದ ಆಯ್ಕೆಯ ಪ್ರಮುಖ ಕೂಟವಾಗಿರುವ ಈ ಚಾಂಪಿಯನ್‌ಶಿಪ್‌ನಲ್ಲಿ ಉತ್ತಮ ಸಾಧನೆ ದಾಖಲಾಗಿದೆ.

ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಆಗಮನ

ಧರ್ಮಸ್ಥಳ: ಗೌರವಾನ್ವಿತ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ವಾಯುಪಡೆಯ ವಿಶೇಷ ಹೆಲಿಕಾಪ್ಟರ್‌ನಲ್ಲಿ ಧರ್ಮಸ್ಥಳಕ್ಕೆ ಶನಿವಾರ ಸಂಜೆ ಆಗಮಿಸಿದರು.

ಅವರಿಗೆ ಧರ್ಮಸ್ಥಳ ಹೆಲಿಪ್ಯಾಡ್‌ನಲ್ಲಿ ಗೌರವಪೂರ್ವಕ ಸ್ವಾಗತ ಕೋರಲಾಯಿತು.

ಅವರನ್ನು ಎಸ್.ಡಿ.ಎಮ್. ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ಡಿ. ಸುರೇಂದ್ರ ಕುಮಾರ್ ಕ್ಷೇತ್ರದ ಪರವಾಗಿ ಸ್ವಾಗತಿಸಿದರು.

ವಿಧಾನಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್ ಉಪಸ್ಥಿತರಿದ್ದರು.

ಶ್ರೀ ಸನ್ನಿಧಿ ಆತಿಥಿಗೃಹದಲ್ಲಿ ಶನಿವಾರ ರಾತ್ರಿ ತಂಗಿದ ಅವರು ಭಾನುವಾರ ಮುಂಜಾನೆ ದೇವರ ದರ್ಶನ ಮಾಡಿ ವಿಶೇಷ ಪೂಜೆ ಸಲ್ಲಿಸಲ್ಲಿದ್ದಾರೆ.

ಬಳಿಕ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರನ್ನು ಭೇಟಿಯಾಗುವರು.

ಅನ್ನಪೂರ್ಣ ಭೋಜನಾಲಯ ಮತ್ತು ಸಾನ್ನಿಧ್ಯ ಸರದಿ ಸಾಲು ವ್ಯವಸ್ಥೆ (ಕ್ಯೂ ಕಾಂಪ್ಲೆಕ್ಸ್) ವೀಕ್ಷಿಸುವರು. ಪೂರ್ವಾಹ್ನ 10 ಗಂಟೆಗೆ ಅಮೃತವರ್ಷಿಣಿ ಸಭಾಭವನದಲ್ಲಿ ಸಿರಿ ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್ ಉದ್ಘಾಟಿಸುವರು.

ಉಪರಾಷ್ಟ್ರಪತಿಗಳ ಆಗಮನದ ಹಿನ್ನೆಲೆಯಲ್ಲಿ ಮಂಗಳೂರು ವಿಮಾನ ನಿಲ್ದಾಣ ಹಾಗೂ ಧರ್ಮಸ್ಥಳದಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.



ಮಂಗಳೂರಿಗೆ ಆಗಮನ

ಭಾರತದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಶನಿವಾರ ವಾಯುಪಡೆ ವಿಶೇಷ ವಿಮಾನದಲ್ಲಿ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ಅವರನ್ನು ಲೋಕಸಭಾ ಸದಸ್ಯ ಕ್ಯಾ. ಬ್ರಿಜೇಶ್ ಚೌಟ ಅವರು ಕರಾವಳಿಯ ಮಲ್ಲಿಗೆ ಹಾರ ಹಾಕಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಮತ್ತು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಉಪಸ್ಥಿತರಿದ್ದು, ಉಪರಾಷ್ಟ್ರಪತಿ ಅವರನ್ನು ಸ್ವಾಗತಿಸಿದರು.

ಮನೆ ಬೆಂಕಿಗಾಹುತಿ, ಅಪಾರ ನಷ್ಟ

ಬಂಟ್ವಾಳ: ತಾಲೂಕಿನ ಪುದು ಗ್ರಾಮದ ಕುಮ್ಡೇಲು ಎಂಬಲ್ಲಿ ಮನೆಯೊಂದು ಬೆಂಕಿಗಾಹುತಿಯಾಗಿ ಅಪಾರ ಪ್ರಮಾಣದ ನಷ್ಟವುಂಟಾದ ಘಟನೆ ಶನಿವಾರ ಸಂಜೆ ನಡೆದಿದೆ.

ಕುಮ್ಡೇಲುವಿನ ಕೃಷ್ಣಪ್ಪ ಕುಲಾಲ್ ಅವರ ಪುತ್ರ ಸುನಿಲ್ ಎಂಬವರ ಮನೆಗೆ ಬೆಂಕಿ ತಗುಲಿದ್ದು, ಈ ಸಂದರ್ಭದಲ್ಲಿ ಮನೆಯಲ್ಲಿ ಯಾರೂ ಇಲ್ಲದಿದ್ದು, ಯಾವುದೇ ಪ್ರಾಣ ಹಾನಿಯಾಗಿರುವುದಿಲ್ಲ ಎಂದು ತಿಳಿದು ಬಂದಿದೆ.

ಘಟನೆಯ ವೇಳೆ ಮನೆಯ ಸದಸ್ಯರು ಕೂಡ ಇಲ್ಲದಿದ್ದು, ಸಂಜೆ 4 ಗಂಟೆ ಹೊತ್ತಿಗೆ ಮನೆಯೊಳಗೆ ಬೆಂಕಿ ಕೆನ್ನಾಲಗೆ ಆವರಿಸಿ ಬಟ್ಟೆ ಬರೆಗಳ ಸಹಿತ ಎಲ್ಲಾ ಸೊತ್ತುಗಳು ಭಸ್ಮವಾಗಿದೆ ಎಂದು ತಿಳಿದು ಬಂದಿದೆ.

ಸ್ಥಳೀಯ ಗ್ರಾ.ಪಂ.ಪಿಡಿಒ ಸಹಿತ ಗ್ರಾಮಕರಣಿಕರು ಕೂಡ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿ ನಷ್ಟದ ಬಗ್ಗೆ ಅಂದಾಜಿಸಿದ್ದಾರೆ.



ಲಕ್ಷಾಂತರ ರೂ.ನಷ್ಟ

ಸ್ಥಳೀಯರು ಗಮನಿಸಿ ಬಂಟ್ವಾಳ ಅಗ್ನಿಶಾಮಕ ಠಾಣೆ ಹಾಗೂ ಸ್ಥಳೀಯ ಗ್ರಾ.ಪಂ.ಗೆ ಮಾಹಿತಿ ನೀಡಿದ್ದಾರೆ. ಸುದ್ದಿ ತಿಳಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸ್ಥಳೀಯರ ಸಹಕಾರದೊಂದಿಗೆ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬೆಂಕಿ ಅವಘಡದಿಂದ ಲಕ್ಷಾಂತರ ರೂ.ನಷ್ಟ ಸಂಭವಿಸಿದ್ದು, ಶಾರ್ಟ್ ಸರ್ಕ್ಯೂಟ್‌ನಿಂದ ಈ ಘಟನೆ ಸಂಭವಿಸಿರಬೇಕೆಂದು ಶಂಕಿಸಲಾಗಿದೆ.



ಪುತ್ತೂರು ದೇವಾಲಯಕ್ಕೆ ಆವರಣ ಗೋಡೆ ಯೋಜನೆ

ಗದ್ದೆಯ ಮೂಲೆಯಲ್ಲಿ ಕುಡುಕರಿಗೆ ಹಾಸಿಗೆಯಾಗುತ್ತಿದೆ ಶಿಲೆಕಲ್ಲುಗಳು!

ಪುತ್ತೂರು: ಇತಿಹಾಸ ಪ್ರಸಿದ್ಧ ಮಹತೋಭಾರ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ಸುತ್ತಲಿನ ವಿಸ್ತಾರವಾದ ಜಾಗವನ್ನು ಸುಭದ್ರಗೊಳಿಸುವ ದೃಷ್ಟಿಯಿಂದ ಆವರಣ ಗೋಡೆ ನಿರ್ಮಿಸಲು ತರಿಸಲಾಗಿದ್ದ ಶಿಲೆಕಲ್ಲು ಗದ್ದೆಯ ಮೂಲೆಯಲ್ಲಿ ಈಗ ಅನಾಥವಾಗಿ ಬಿದ್ದಿದೆ.

ದೇವಾಲಯದ ಪರಿಸರದಲ್ಲಿ ಸುಮಾರು 20 ಎಕರೆ ಜಾಗ ತೆರೆದ ಸ್ಥಿತಿಯಲ್ಲಿದೆ. ಜಾಗದ ರಕ್ಷಣೆ, ಭದ್ರತಾ ದೃಷ್ಟಿಯಿಂದ ಆವರಣ ಗೋಡೆ ನಿರ್ಮಾಣ ಮಾಡಬೇಕೆಂದು ಭಕ್ತರ ಕಡೆಯಿಂದಲೂ ಹಿಂದಿನಿಂದಲೂ ಆಗ್ರಹವಿತ್ತು. ಈ ಹಿನ್ನೆಲೆಯಲ್ಲಿ ಹಿಂದಿನ ವ್ಯವಸ್ಥಾಪನಾ ಸಮಿತಿ ಆವರಣ ಗೋಡೆ ರಚನೆಗೆ ಉತ್ಸುಕವಾಗಿತ್ತು. ಈ ದೃಷ್ಟಿಯಿಂದ ಶಿಲೆಕಲ್ಲು ತರಿಸಲಾಗಿದ್ದು, ಅನಂತರ ಆವರಣ ಗೋಡೆ ನಿರ್ಮಾಣ ವಿಚಾರ ನೆನೆಗುದಿಗೆ ಬಿದ್ದಿದೆ. ಪರಿಣಾಮ ಈ ಶಿಲೆಕಲ್ಲುಗಳನ್ನು ಒಂದೆಡೆ ರಾಶಿ ಹಾಕಲಾಗಿದ್ದು, ಕುಡುಕರಿಗೆ ಹಾಸಿಗೆಯ ರೂಪದಲ್ಲಿ ಬಳಕೆಯಾಗುತ್ತಿದೆ. ಭಕ್ತರ ಹಣ ಈ ರೀತಿ ವ್ಯರ್ಥ ಮಾಡಲಾಗುತ್ತಿದೆ ಎನ್ನುವ ಆರೋಪ ವ್ಯಕ್ತವಾಗಿದೆ.

ದೇವಾಲಯಕ್ಕೆ ಸಂಬಂಧಿಸಿದ ಜಾಗ ಸುರಕ್ಷಿತವಾಗಿರಬೇಕು ಎನ್ನುವ ದೃಷ್ಟಿಯಿಂದ ದಶಕದಿಂದ ಸಂಬಂಧಪಟ್ಟ ಇಲಾಖೆ, ಅಧಿಕಾರಿಗಳು, ಸಮಿತಿಯವರಿಗೆ ಮನವಿ ಮಾಡುತ್ತಲೇ ಬಂದಿದ್ದೇವೆ. ಕಳೆದ ವ್ಯವಸ್ಥಾಪನಾ ಅವಧಿಯಲ್ಲಿ ಶಿಲೆ ಕಲ್ಲು ತರಿಸಿದ್ದರೂ ಅಳವಡಿಸುವ ಕಾರ್ಯಕ್ಕೆ ಮುಂದಾಗಿಲ್ಲ. ಒಟ್ಟಿನಲ್ಲಿ ಇಚ್ಛಾಶಕ್ತಿಯ ಕೊರತೆಯಿಂದ ಭಕ್ತರ ಹಣ ವ್ಯರ್ಥವಾಗುತ್ತಿದೆ ಎನ್ನುತ್ತಾರೆ ಶ್ರೀ ಮಹಾಲಿಂಗೇಶ್ವರ ದೇವಾಲಯ ಸಂರಕ್ಷಣಾ ಸಮಿತಿ ಸದಸ್ಯ ಬಾಲಚಂದ್ರ ಸೊರಕೆ.



ಆಶಾ ಕಾರ್ಯಕರ್ತೆಯರು, ಬಿಎಂಎಸ್ ಮುಂದಾಳತ್ವದಲ್ಲಿ ಜಿಲ್ಲಾ ಆರೋಗ್ಯ–ಕುಟುಂಬ ಕಲ್ಯಾಣಾಧಿಕಾರಿಗೆ ಮನವಿ ಸಲ್ಲಿಕೆ

ಆಶಾ ಕಾರ್ಯಕರ್ತೆಯರ ಸಮಸ್ಯೆಗಳ ಪರಿಹರಿಸಲು ಮನವಿ

ಮಂಗಳೂರು: ಆಶಾ ಕಾರ್ಯಕರ್ತೆಯರ ಮೇಲಿನ ಹೆಚ್ಚುತ್ತಿರುವ ಡಿಜಿಟಲ್ ಕೆಲಸದ ಒತ್ತಡ, ಪ್ರೋತ್ಸಾಹ ಧನ ವಿಳಂಬ ಹಾಗೂ ಸೇವಾ ಭದ್ರತೆ ಕೊರತೆ ಸೇರಿದಂತೆ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಜಿಲ್ಲಾ ಆಶಾ ಕಾರ್ಯಕರ್ತೆಯರು ಹಾಗೂ ಜಿಲ್ಲಾ ಭಾರತೀಯ ಮಜ್ದೂರು ಸಂಘ (ಬಿಎಂಎಸ್)ದ ಮುಂದಾಳತ್ವದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಚ್.ಆರ್. ತಿಮ್ಮಯ್ಯ ಅವರಿಗೆ ಶನಿವಾರ ಮನವಿ ಸಲ್ಲಿಸಲಾಯಿತು.

ಜಿಲ್ಲಾಆರೋಗ್ಯಾಧಿಕಾರಿಮೂಲಕಮುಖ್ಯಮಂತ್ರಿ, ಆರೋಗ್ಯ ಸಚಿವರು ಹಾಗೂ ಆರೋಗ್ಯ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಮನವಿ ರವಾನಿಸಿ ಆಶಾ ಕಾರ್ಯಕರ್ತೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲಾಯಿತು.

ಮನವಿಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಜಾರಿಯಲ್ಲಿರುವ 'ಸಮಸ್ತ' ಡಿಜಿಟಲ್ ಆರೋಗ್ಯ ಮಾಹಿತಿ ವ್ಯವಸ್ಥೆ ಮೂಲಕ ಆಶಾ ಕಾರ್ಯಕರ್ತೆಯರ ಮೇಲೆ ಅತಿಯಾದ ಡಿಜಿಟಲ್ ಕೆಲಸದ ಹೊರೆ ಹೇರಲಾಗುತ್ತಿದ್ದು, ಮನೆಮನೆ ಭೇಟಿ, ಗರ್ಭಿಣಿಯರ ಆರೈಕೆ ಹಾಗೂ ಆರೋಗ್ಯ ಜಾಗೃತಿ ಕಾರ್ಯಗಳ ಜೊತೆಗೆ ಗಂಟೆಗಟ್ಟಲೆ ಡಾಟಾ ದಾಖಲಿಸುವ ಅನಿವಾರ್ಯತೆ ಉಂಟಾಗಿದೆ ಎಂದು ತಿಳಿಸಲಾಗಿದೆ. ಇದರಿಂದ ಆರೋಗ್ಯ ಸೇವೆಯ ಗುಣಮಟ್ಟಕ್ಕೂ ಧಕ್ಕೆಯಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಲಾಗಿದೆ.

ಮನವಿಯಲ್ಲಿ 'ಸಮಸ್ತ' ಆ್ಯಪ್‌ನ ಹೆಚ್ಚುವರಿ ಕೆಲಸದ ಒತ್ತಡ ರದ್ದುಪಡಿಸುವುದು, ಪ್ರೋತ್ಸಾಹ ಧನವನ್ನು ಸಮಯಕ್ಕೆ ಬಿಡುಗಡೆಗೊಳಿಸುವುದು, ಪ್ರೋತ್ಸಾಹ ಧನ ಹೆಚ್ಚಳ ಹಾಗೂ ಆಶಾ ಕಾರ್ಯಕರ್ತೆಯರ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯ ಮಟ್ಟದ ಸಮಿತಿ ರಚಿಸುವಂತೆ ಒತ್ತಾಯಿಸಲಾಗಿದೆ.

ಭಾರತೀಯ ಮಜ್ದೂರು ಸಂಘದ ರಾಜ್ಯ ಉಪಾಧ್ಯಕ್ಷ ಸತೀಶ್ ಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೋಪಾಲಕೃಷ್ಣ, ಜಿಲ್ಲಾ ಉಪಾಧ್ಯಕ್ಷ ರೋಹಿತಾಶ್ವ, ಆಶಾ ಕಾರ್ಯಕರ್ತೆಯರ ಮಜ್ದೂರು ಸಂಘದ ರಾಜ್ಯ ಕಾರ್ಯದರ್ಶಿ ರೇವತಿ, ಬಂಟ್ವಾಳ ತಾಲೂಕು ಅಧ್ಯಕ್ಷೆ ತುಳಸಿ ದೇವರಾಜ್, ಕಾರ್ಯದರ್ಶಿ ಡೀಲಾಕ್ಷೀ, ಕೋಶಾಧಿಕಾರಿ ಸೌಮ್ಯ, ಗೌರವಾಧ್ಯಕ್ಷೆ ಗಿರಿಜಾ ನಾವೂರು, ಪ್ರಮುಖರಾದ ಪ್ರಮೀಳಾ, ಹರಿಣಾಕ್ಷೀ, ಪ್ರಮೀಳಾ ಮಾಣಿ, ಹೇಮಾವತಿ ಸೇರಿದಂತೆ ಆಶಾ ಕಾರ್ಯಕರ್ತೆಯರ ತಂಡ ಹಾಗೂ ಜಿಲ್ಲಾ ಬಿಎಂಎಸ್ ಪ್ರಮುಖರು ಉಪಸ್ಥಿತರಿದ್ದರು.



> **ಆಶಾ ಕಾರ್ಯಕರ್ತೆಯರು ಕೊರೊನಾ ಸೇರಿದಂತೆ ಸಂಕಷ್ಟದ ಸಂದರ್ಭಗಳಲ್ಲಿ ಜೀವವನ್ನೇ ಪಣಕ್ಕಿಟ್ಟು ಸೇವೆ ಸಲ್ಲಿಸಿದ್ದರೂ, ಇಂದು ಅವರಿಗೆ ತಕ್ಕ ಗೌರವ, ಭದ್ರತೆ ಹಾಗೂ ನ್ಯಾಯ ದೊರೆಯುತ್ತಿಲ್ಲ. 'ಸಮಸ್ತ' ಆ್ಯಪ್‌ನ ಹೆಚ್ಚುವರಿ ಒತ್ತಡವನ್ನು ಹಿಂಪಡೆಯಬೇಕು, ಪ್ರೋತ್ಸಾಹ ಧನವನ್ನು ನಿಗದಿತ ದಿನಾಂಕಕ್ಕೆ ಪಾವತಿಸಬೇಕು ಹಾಗೂ ನಾಲ್ಕು ವರ್ಷಗಳಿಂದ ಹೆಚ್ಚಳವಾಗದಿರುವ ಧನವನ್ನು ತಕ್ಷಣ ಪರಿಷ್ಕರಿಸಬೇಕು.**
> ■ ವಕೀಲ ಅನಿಲ್ ಕುಮಾರ್ ಯು., ಬಿಎಂಎಸ್ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 33° 26° | ಉಡುಪಿ 33° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 31, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2


ನೀರಿನ ಸಂಪರ್ಕ ವಿತರಣೆಗೊಂದಲ ಶೀಘ್ರ ಪರಿಹಾರ: ಶಾಸಕ ಕೋಟ್ಯಾನ್



ಪುಟ 6

ಬಜೆ ಅಣೆಕಟ್ಟೆಗೆ ಒಳಹರಿವು ಆರಂಭ: ಸದ್ಯ ಉಡುಪಿ ನಗರ ನಿರಾಳ

ಅಡ್ಯಾರ್ ಗಾರ್ಡನ್‌ನ ವೇದಿಕೆಯಲ್ಲಿ ಮೇಳೈಸಿತು ಯಕ್ಷಗಾನ, ನಾಟ್ಯ, ಹಾಸ್ಯ ವೈಭವದ ಸಂಭ್ರಮ



ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ನೇತೃತ್ವದಲ್ಲಿ ಮಂಗಳೂರು ನಗರದ ಹೊರವಲಯದ ಅಡ್ಯಾರ್ ಗಾರ್ಡನ್‌ನಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ 'ಪಟ್ಲ ಸಂಭ್ರಮ 2026'ರಲ್ಲಿ ಯಕ್ಷಗಾನ, ಭರತನಾಟ್ಯ, ಯಕ್ಷಗಾನ ಹಾಸ್ಯ ವೈಭವ ಪ್ರೇಕ್ಷಕರ ಮನಸೂರೆಗೊಳಿಸಿತು. ಭಾರೀ ಸಂಖ್ಯೆಯಲ್ಲಿ ಕಲಾಭಿಮಾನಿಗಳು ಪಾಲ್ಗೊಂಡು ಕಾರ್ಯಕ್ರಮದ ಮೆರುಗು ಇನ್ನಷ್ಟು ಹೆಚ್ಚಿಸಿದರು.

ಸುತ್ತಮುತ್ತ

ಜೂ.9ರಿಂದ ಕೇರಳ ಮೀನುಗಾರಿಕೆಗೆ 52 ದಿನಗಳ ರಜೆ ಘೋಷಣೆ

ಮಂಗಳೂರು: ಕಾಸರಗೋಡು ಸಹಿತ ಕೇರಳ ರಾಜ್ಯದಲ್ಲಿ ಜೂ.9ರ ಮಧ್ಯರಾತ್ರಿಯಿಂದ ಜು.31ರವರೆಗೆ 52 ದಿನಗಳಕಾಲ ಯಾಂತ್ರೀಕೃತ ಮೀನುಗಾರಿಕೆಗೆ ನಿಷೇಧ ಹೇರಲಾಗಿದೆ. ತಿರುವನಂತಪುರದಲ್ಲಿ ಕರೆಯಲಾದ ಸಭೆಯಲ್ಲಿ ಈ ನಿರ್ಧಾರ ಪ್ರಕಟಗೊಂಡಿದೆ. ಈ ಅವಧಿ ಮೀನುಗಳ ಸಂತಾನೋತ್ಪತ್ತಿ ಕಾಲವಾಗಿರುವ ಕಾರಣದಿಂದ ಆಳ ಸಮುದ್ರ ಮೀನುಗಾರಿಕೆಯನ್ನು ಪ್ರತೀ ವರ್ಷ ಸ್ಥಗಿತಗೊಳಿಸಲಾಗುತ್ತಿದೆ.

ಹುಸಿಯಾದ ಮಳೆ ನಿರೀಕ್ಷೆ: ಕರಾವಳಿಯಲ್ಲಿ ತಾಪ ಮತ್ತಷ್ಟು ಏರಿಕೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ಕರಾವಳಿಯಲ್ಲಿ ಎರಡು ದಿನಗಳ ಕಾಲ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದರೂ ಕೆಲವೆಡೆ ಹಗುರ ಮಳೆ ಹೊರತುಪಡಿಸಿ ಎಲ್ಲೂ ಭಾರೀ ಮಳೆಯಾಗಿಲ್ಲ. ಈ ನಡುವೆ ವಾತಾವರಣದ ತಾಪಮಾನ ಮತ್ತಷ್ಟು ಏರಿಕೆಯಾಗಿದ್ದು, ಗರಿಷ್ಠ 34 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿದೆ. ಶನಿವಾರ ಎಲ್ಲೆಡೆ ದಿನಪೂರ್ತಿ ಮೋಡ ಮುಸುಕಿದ ವಾತಾವರಣ ಕಂಡುಬಂದಿತ್ತು.

ಮೀನುಗಾರಿಕಾ ಋತು ಇಂದು ಅಂತ್ಯ: ದಡ ಸೇರಿವೆ ಬೋಟ್‌ಗಳು

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮೀನುಗಾರಿಕಾ ಋತು ಇಂದು ಅಂತ್ಯಗೊಳ್ಳುತ್ತಿದ್ದು, ಮುಂದಿನ 61 ದಿನಗಳ ಕಾಲ ಯಾಂತ್ರೀಕೃತ ಬೋಟ್‌ಗಳ ಮತ್ಸ್ಯಬೇಟೆ ಸ್ಥಗಿತಗೊಳ್ಳಲಿದೆ.

ಆಯವ್ಯಯದ ಲೆಕ್ಕಾಚಾರ ಶುರು

ಮೀನುಗಾರಿಕೆಗೆ ರಜೆ ಘೋಷಣೆ ಹಿನ್ನೆಲೆಯಲ್ಲಿ ಬೋಟ್‌ಗಳು ಒಂದೊಂದಾಗಿ ದಡದತ್ತ ಮುಖ ಮಾಡುತ್ತಿದ್ದು, ಮೀನುಗಾರರು ಈ ಋತುವಿನಲ್ಲಿನ ಆಯವ್ಯಯದ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ.

ದಕ್ಷಿಣ ಕನ್ನಡ, ಉಡುಪಿ ಧಾರ್ಮಿಕ ಕ್ಷೇತ್ರಗಳಲಿ ಹೆಚ್ಚುತ್ತಿದೆ ಭಕ್ತ ಪ್ರವಾಹ

ಮಂಗಳೂರು: ವಾರಾಂತ್ಯ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಧಾರ್ಮಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡುತ್ತಿದ್ದಾರೆ. ಕರಾವಳಿಯಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದೆ.

ಅಕ್ಷರ ದೇಗುಲದಲ್ಲಿ ಪ್ರಾರಂಭೋತ್ಸವ ಗೌಜಿ

ನಾಳೆ ಶಾಲೆ ಶುರು!

ಎಲ್ಲೆಲ್ಲೂ ಇನ್ನು ಮಕ್ಕಳ ಕಲರವ, ಘಂಟೆ ಸದ್ದು

ಮಂಗಳೂರು: ನಾಳೆಯಿಂದ ಎಲ್ಲೆಡೆ ನೂತನ ಶೈಕ್ಷಣಿಕ ವರ್ಷದ ತರಗತಿಗಳು ಆರಂಭವಾಗುತ್ತಿದ್ದು, ಮಕ್ಕಳ ಸ್ವಾಗತಕ್ಕೆ ದಕ್ಷಿಣ ಕನ್ನಡ, ಉಡುಪಿಯ ಶಾಲೆಗಳು ಸರ್ವ ಸಿದ್ಧತೆ ಪೂರ್ಣಗೊಳಿಸಿ ಸಜ್ಜಾಗಿವೆ. ಶಾಲೆಗಳ ಆಡಳಿತಾತ್ಮಕ ಕೆಲಸ ಕಾರ್ಯಗಳು ಶುಕ್ರವಾರದಿಂದಲೇ ಅಧಿಕೃತವಾಗಿ ಆರಂಭಗೊಂಡಿದ್ದು, ಶನಿವಾರ ಕೂಡಾ ಸಿದ್ಧತೆಗಳು ಮುಂದುವರಿದಿತ್ತು.

ಶಾಲಾಡಳಿತಕ್ಕೆ ಸಿಕ್ಕಿದೆ ಎಲ್ಲರ ಸಾಥ್

ಈ ಬಾರಿ ಸ್ವಚ್ಛತೆಗೆ ಎಲ್ಲೆಡೆ ಹೆಚ್ಚಿನ ಒತ್ತು ನೀಡುತ್ತಿರುವುದು ಕಂಡುಬಂದಿದ್ದು, ಎಲ್ಲೆಡೆ ಶಾಲಾಡಳಿತಗಳಿಗೆ ಸ್ಥಳೀಯ ಸಂಘ ಸಂಸ್ಥೆಗಳು, ಎಸ್‌ಡಿಎಂಸಿ, ಹಳೆ ವಿದ್ಯಾರ್ಥಿಗಳು ಸಾಥ್ ನೀಡುತ್ತಿದ್ದಾರೆ. ಶಾಲಾ ಆವರಣದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಬಿಸಿಯೂಟ ವ್ಯವಸ್ಥೆ ಹೀಗೆ ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿಸಲು ಶಿಕ್ಷಕರುಗಳೂ ಕೂಡಾ ಟೊಂಕಕಟ್ಟಿ ನಿಂತಿದ್ದಾರೆ. ಶಾಲಾ ಪ್ರಾರಂಭೋತ್ಸವಕ್ಕೆ ಅಲಂಕಾರ ಕೂಡಾ ಭರದಿಂದ ಸಾಗಿದೆ.



ಎಲ್ಲರೂ ಈಗ ರೆಡಿ!

- ಎಲ್ಲೆಡೆ ಮತ್ತೆ ಕೇಳಿಸಲಿದೆ ಪುಟಾಣಿಗಳ ಕಲರವ
- ಕರಾವಳಿಯಲ್ಲಿ ಶಾಲಾ ಪ್ರಾರಂಭೋತ್ಸವ ಖುಷಿ
- ಇಲಾಖೆ, ಆಡಳಿತಗಳಿಂದ ಸರ್ವ ಸಿದ್ಧತೆ ಪೂರ್ಣ
- ಮಕ್ಕಳು, ಶಿಕ್ಷಕರಲ್ಲಿ ಈಗ ಮನೆಮಾಡಿದೆ ಸಂಭ್ರಮ

ಸ್ವಾಗತಕ್ಕಾಗಿ ಸಿಂಗರಿಸಿಕೊಂಡಿದೆ ಅಕ್ಷರ ದೇಗುಲ!

ನಾಳೆಯಿಂದ ಶಾಲಾರಂಭವಾಗುತ್ತಿದ್ದು, ಎಲ್ಲಾ ಶಾಲೆಗಳು ಸುಣ್ಣಬಣ್ಣ ಬಳಿದುಕೊಂಡು ವಿದ್ಯಾರ್ಥಿಗಳ ಸ್ವಾಗತಕ್ಕಾಗಿ ಸಜ್ಜಾಗಿವೆ. ಈ ನಡುವೆ ಇದೇ ವಾರ ಮುಂಗಾರು ಕೂಡಾ ಕಾಲಿಡುತ್ತಿರುವ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ, ಶಾಲಾಡಳಿತಗಳು ಹೆಚ್ಚಿನ ಎಚ್ಚರಿಕೆ ವಹಿಸಿದ್ದು, ಶಾಲಾಕಟ್ಟಡದ ಸ್ಥಿತಿಯನ್ನು ಪರಿಶೀಲಿಸಿದೆ. ಇದಲ್ಲದೆ ಮೇಲ್ಛಾವಣಿ, ಅಕ್ಕಪಕ್ಕದಲ್ಲಿ ಅಪಾಯ ಉಂಟುಮಾಡುವ ಮರಗಿಡಗಳು, ಭೂಕುಸಿತ ಸಾಧ್ಯತೆಯ ಸ್ಥಳಗಳನ್ನು ಗುರುತಿಸಲಾಗಿದ್ದು, ಎಲ್ಲಾ ಕಡೆಗಳಲ್ಲಿ ಹೆಚ್ಚಿನ ಕಾಳಜಿ ವಹಿಸಲಾಗಿದೆ.

ಬಿಸಿಯೂಟಕ್ಕೆ ಅಡುಗೆ ಅನಿಲ ಸಂಗ್ರಹದ ಚಿಂತೆ

ಕೊಲ್ಲಿ ಯುದ್ಧದ ಪರಿಣಾಮ ವಾಗಿ ಅಡುಗೆ ಅನಿಲ ಪೂರೈಕೆ ವ್ಯವಸ್ಥೆ ಇನ್ನೂ ಹಳಿಗೆ ಬಂದಿಲ್ಲ. ಹೀಗಾಗಿ ಶಾಲಾ ಬಿಸಿಯೂಟ ವ್ಯವಸ್ಥೆಗೆ ಅಡುಗೆ ಅನಿಲ ಕೊರತೆ ಬಾಧಿಸೀತೇ ಎಂಬ ಚಿಂತೆ ಈಗ ಕಾಡುತ್ತಿದೆ.



ಶಿಕ್ಷಣ ಇಲಾಖೆ ಈಗಾಗಲೇ ಮುನ್ನೆಚ್ಚರಿಕೆ ವಹಿಸಿದ್ದು, ಎಲ್ಲೂ ಎಲ್‌ಪಿಜಿ ಅಭಾವ ಕಂಡುಬರದಂತೆ ಕ್ರಮ ಕೈಗೊಂಡಿದೆ. ಎಲ್ಲಾ ಗ್ಯಾಸ್ ಏಜೆನ್ಸಿಗಳಿಗೂ ಸೂಚನೆ ನೀಡಲಾಗಿದ್ದು, ಶಾಲೆಗಳಿಗೆ ಮೊದಲ ಆದ್ಯತೆ ನೀಡುವಂತೆ ಕೂಡಾ ಸೂಚಿಸಲಾಗಿದೆ.

ಕಂಗಾಲಾಗುತ್ತಿದ್ದಾರೆ ಇಲ್ಲಿ ಕೃಷಿಕರು

ಕಡಬ ತಾಲೂಕಿನಲ್ಲಿ ಕಾಡಾನೆಗಳ ಹಾವಳಿ

ಅಡಿಕೆ, ತೆಂಗು ಬಾಳೆ ಫಸಲು ಧ್ವಂಸ

ಕಡಬ: ಕಡಬ ತಾಲೂಕಿನ ಕೊಣಾಜೆ ಗ್ರಾಮದ ಪಲ್ಲತ್ತಡ್ಕ ಮನೆ ಯಶೋಧರ ಗೌಡ ಎಂಬವರ ಕೃಷಿ ತೋಟಕ್ಕೆ ಲಗ್ಗೆ ಇಟ್ಟರುವ ಆನೆಗಳ ಹಿಂಡು ಅಪಾರ ಪ್ರಮಾಣದಲ್ಲಿ ನಷ್ಟ ಉಂಟುಮಾಡಿವೆ. ಅಡಿಕೆ, ಬಾಳೆ ಗಿಡ ಹಾಗೂ ಇತರ ಕೃಷಿಗಳನ್ನು ಧ್ವಂಸ ಮಾಡಿರುವ ಆನೆಗಳು ಅಪಾರ ಪ್ರಮಾಣದ ಕಷ್ಟ ನಷ್ಟಗಳಿಗೆ ಕಾರಣವಾಗಿದೆ.

ತೋಟಕ್ಕೆ ಆನೆ, ಆನೆ ಮರಿಗಳ ತಂಡ

ಆನೆ ಹಾಗೂ ಆನೆಮರಿಗಳು ಹಿಂಡೊಂದು ಗುರುವಾರ ತಡ ರಾತ್ರಿ ಕೃಷಿ ತೋಟಕ್ಕೆ ದಾಳಿ ನಡೆಸಿ ಸುಮಾರು 60ಕ್ಕೂ ಹೆಚ್ಚು ಫಸಲು ಬರುವ ಅಡಿಕೆ ಮರಗಳು, 200ಕ್ಕೂ ಹೆಚ್ಚು ಬಾಳೆ ಗಿಡಗಳು ಹಾಗೂ ತೆಂಗಿನ ಮರಗಳನ್ನು, ನೀರಾವರಿ ಪೈಪುಗಳನ್ನು ನಾಶ ಪಡಿಸಿವೆ. ಇದರಿಂದಾಗಿ ಲಕ್ಷ ರೂ.ಗಳಿಗೂ ಅಧಿಕ ನಷ್ಟ ಉಂಟಾಗಿದೆ.

ಈ ಭಾಗದಲ್ಲಿ ಆನೆಗಳ ಹಾವಳಿಯಿಂದ ತೀವ್ರ ಸಂಕಷ್ಟ ಎದುರಾಗುತ್ತಿದ್ದು, ಒಂದೆಡೆ ಕೃಷಿ ಫಸಲು ನಷ್ಟವಾಗುತ್ತಿದ್ದರೆ ಇನ್ನೊಂದೆಡೆ ಇಲ್ಲಿ ಓಡಾಟ ನಡೆಸಲು ನಾಗರಿಕರು ಭಯ ಪಡುವ ಸ್ಥಿತಿ ನಿರ್ಮಾಣವಾಗಿದೆ. ಅರಣ್ಯ ಇಲಾಖೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಕೃಷಿಕರು ವ್ಯಾಪಕ ಒತ್ತಾಯ ನಡೆಸಿದ್ದಾರೆ.



ಕಾಡಾನೆ ಮಾತ್ರ ಅಲ್ಲ ಕಾಡು ಹಂದಿಗಳದ್ದೂ ಕಾಟ

ಈ ಪರಿಸರದಲ್ಲಿ ನಿರಂತರವಾಗಿ ಕಾಡು ಹಂದಿಗಳು ತೋಟಕ್ಕೆ ನುಗ್ಗಿ ಕಾಳು ಮೆಣಸು ಬಳ್ಳಿ, ಮರಗೆಣಸು, ಬಾಳೆ ಗಿಡಗಳನ್ನು ನಾಶ ಪಡಿಸುತ್ತಿವೆ. ಈ ಬಗ್ಗೆ ಯಶೋಧರ ಅವರು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರಿಗೆ ಮನವಿ ಮಾಡಿ ಸೂಕ್ತ ಪರಿಹಾರ ಒದಗಿಸುವಂತೆ ಅವರಲ್ಲಿ ಕೇಳಿಕೊಂಡಿದ್ದಾರೆ.

ಮಂದಗತಿಯಲ್ಲಿದೆ ಅವೈಜ್ಞಾನಿಕ ಮಣ್ಣು ಅಗೆತ ಭೂಕುಸಿತ ತಡೆಯ ಕ್ರಮ

ಮಳೆಗಾಲ ಕಾಲಿಡುತ್ತಿದ್ದರೂ ಹಸಿರಾಗುತ್ತಿಲ್ಲ ಬೆಟ್ಟ

ಕಾಸರಗೋಡು: ಜಿಲ್ಲೆಯಲ್ಲಿ ನೂತನ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಂಗವಾಗಿ ಚೆರುವತ್ತೂರಿನಲ್ಲಿರುವ ರಸ್ತೆ ಬದಿಯ ಬೆಟ್ಟವನ್ನು ಹಸಿರನ್ನಾಗಿಸುವ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಬೇಕು ಎಂಬ ಜಿಲ್ಲಾಡಳಿತದ ಸೂಚನೆಯಿದ್ದರೂ ಕಾಮಗಾರಿ ಮಾತ್ರ ಆಮೆಗತಿಯಲ್ಲಿದೆ.

ಮಳೆ ಬಿದ್ದರೆ ಅವ್ಯವಸ್ಥೆಯ ಆಗರ

ಮಳೆಗಾಲ ಆರಂಭಗೊಂಡರೆ ರಸ್ತೆ ಬದಿಯಲ್ಲಿನ ಈ ಹಸಿರು ಯೋಜನೆ ಅವ್ಯವಸ್ಥೆಯ ಆಗರವಾಗುವ ಆತಂಕವನ್ನು ಇಲ್ಲಿನ ನಾಗರಿಕರು ವ್ಯಕ್ತಪಡಿಸುತ್ತಿದ್ದಾರೆ. ಚೆರುವತ್ತೂರು ಮಾಯಿಚ್ಚದಲ್ಲಿ ಹೆದ್ದಾರಿ ಬಳಿಯ ವೀರಮಲೆ ಬೆಟ್ಟದಲ್ಲಿ ಹಸಿರು ಯೋಜನೆ ಕೈಗೊಳ್ಳುವ ಕಾಮಗಾರಿಯನ್ನು ಆರಂಭಿಸಲಾಗಿದ್ದರೂ, ಪ್ರಸ್ತುತ ಕೆಲಸ ಕಾರ್ಯಗಳು ಮಂದಗತಿಯಲ್ಲಿವೆ.



ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆ ಸಲುವಾಗಿ ಅವೈಜ್ಞಾನಿಕ ವಿಧಾನದಲ್ಲಿ ಗುಡ್ಡದ ಮಣ್ಣಿನ ಅಗೆತದಿಂದ ಹಾನಿಗೊಂಡ ಪಾರಂಪರಿಕ ಪ್ರದೇಶದಲ್ಲಿ ಈ ಬಾರಿಯ ಮಳೆಗಾಲದಲ್ಲಿ ಭೂಕುಸಿತ ಸಂಭವಿಸುವ ಸಾಧ್ಯತೆಯಿದೆ. ಕಳೆದ ವರ್ಷ ಭಾರೀ ಮಳೆಗೆ ವೀರಮಲೆ ಬೆಟ್ಟದಿಂದ ರಾಷ್ಟ್ರೀಯ ಹೆದ್ದಾರಿ ತನಕದಲ್ಲಿ ಭಾರೀ ಭೂಕುಸಿತ ಉಂಟಾಗಿ ಎಲ್ಲೆಡೆ ಆತಂಕ ಸೃಷ್ಟಿಯಾಗಿತ್ತು. »ಪುಟ 6

ಧಾರಾಕಾರ ಮಳೆಗೆ ಕೆಲಸ ತಾತ್ಕಾಲಿಕ ಸ್ಥಗಿತ

ಈ ಮಧ್ಯೆ ಕಳೆದ ವಾರ ಸುರಿದ ಧಾರಾಕಾರ ಭಾರೀ ಮಳೆಯಿಂದಾಗಿ ಹಸಿರು ಅಳವಡಿಸುವ ಯೋಜನೆಯು ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಬೆಟ್ಟದ ಅಥವಾ ಗುಡ್ಡದ ಒಂದು ಭಾಗವನ್ನು ಸಂಪೂರ್ಣವಾಗಿ ಟೆರೇಸ್‌ಗಳಾಗಿ ಪರಿವರ್ತಿಸುವ ಕೆಲಸ ಪ್ರಸ್ತುತ ಸಾಗುತ್ತಿದೆ. ಮಳೆಗಾಲ ಆರಂಭದ ವೇಳೆ ಇದು ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ ಈ ಬಾರಿಯೂ ಭೂಕುಸಿತದಂತಹ ಜಟಿಲ ಸಮಸ್ಯೆಗಳು ಎದುರಾಗುವ ಭೀತಿ ಇಲ್ಲಿನ ನಾಗರಿಕರನ್ನು ಆವರಿಸಿವೆ.

ಉಪ್ಪಿನಕಾಯಿ ಉದ್ಯಮ ಆರಂಭಿಸಿದ 'ಗೃಹಲಕ್ಷ್ಮೀ ಯೋಜನೆ' ಫಲಾನುಭವಿ

ಸುಳ್ಯ: ಗೃಹಲಕ್ಷ್ಮೀ ಯೋಜನೆ ಫಲಾನುಭವಿ, ಸುಳ್ಯ ಪಟ್ಟಣ ಪಂಚಾಯತ್ ಮಾಜಿ ಸದಸ್ಯೆ ಶ್ರೀಲತಾ ಪ್ರಸನ್ನ ಕೇರ್ಪಳ ಎಂಬವರು ರಾಜ್ಯ ಸರ್ಕಾರದ 'ಗೃಹಲಕ್ಷ್ಮೀ ಯೋಜನೆ' ಹಣದಿಂದ ಪ್ರೀತು ಪಿಕಲ್ ಪ್ರಾಡಕ್ಟ್ಸ್ ಉದ್ಯಮವನ್ನು ಇತ್ತೀಚೆಗೆ ಪ್ರಾರಂಭಿಸಿದ್ದಾರೆ.

ನವ ಉದ್ಯಮಿಗೆ ಶುಭಹಾರೈಕೆ

ಶನಿವಾರ ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ಉಪ್ಪಿನಕಾಯಿ ಖರೀದಿಸುವ ಮೂಲಕ ನವ ಉದ್ಯಮಿಗೆ ಶುಭ ಹಾರೈಸಿ ಪ್ರೋತ್ಸಾಹ ನೀಡಿದರು. ಸುಳ್ಯ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಭವಾನಿ ಶಂಕರ್ ಕಲ್ಮಡ್ಕ, ನಗರ ಕಾಂಗ್ರೆಸ್ ಅಧ್ಯಕ್ಷ ಶಶಿಧರ ಎಂ.ಜೆ., ಸುಳ್ಯ ನಗರ ಪಂಚಾಯತ್ ನಿಕಟಪೂರ್ವ ಸದಸ್ಯ ಶರೀಫ್ ಕಂಠಿ, ಸುಳ್ಯ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಚೇತನ್ ಕಜೆಗದ್ದೆ, ಇಂಟಕ್ ಕಾಂಗ್ರೆಸ್ ಸ್ನೇಹ ಸಂಗಮ ರಿಕ್ಷಾ ಯೂನಿಯನ್ ಅಧ್ಯಕ್ಷ ಪದ್ಮನಾಭ ಹರ್ಲಡ್ಕ, ಸುಳ್ಯ ಬ್ಲಾಕ್ ಕಾಂಗ್ರೆಸ್ ಕಚೇರಿ ನಿರ್ವಾಹಕ ಮಂಜುನಾಥ ಮಡ್ತಿಲ, ಕಾವೂರು ಮಹಾವಿಷ್ಣು ದೇವಸ್ಥಾನ ವಗ್ಗೆರೆ ಪಂಚಸ್ಥಾಪನಾ ಮರ್ಕಂಜ ಇದರ ವ್ಯವಸ್ಥಾಪನಾ ಸಮಿತಿ ಸದಸ್ಯ ಮೋಹಿತ್ ಹರ್ಲಡ್ಕ ಉಪಸ್ಥಿತರಿದ್ದರು.



ಇಂಡಿಯನ್ ಓಪನ್‌ನಲ್ಲಿ ಛಾಪು ಮೂಡಿಸುತ್ತಿದೆ ಕರ್ನಾಟಕ | ಅಲೆಗಳ ಮೇಲೆ ನಿಂತು ದೇಶ ಪ್ರತಿನಿಧಿಸಲು ಸಜ್ಜಾಗುತ್ತಿದ್ದಾರೆ ಕರಾವಳಿ ಮಕ್ಕಳು

ದೇಶದಲ್ಲಿ ಸರ್ಫಿಂಗ್‌ನ ಹೊಸ ಅಲೆ ಎಬ್ಬಿಸಿದೆ ತಣ್ಣೀರುಬಾವಿ, ಸಸಿಹಿತ್ಲು ಬೀಚ್‌ಗಳು!

ಸುರತ್ಕಲ್: ಒಂದೊಮ್ಮೆ 'ವಿದೇಶಿ ಕ್ರೀಡೆ' ಎನಿಸಿದ್ದ ಸರ್ಫಿಂಗ್ ಇದೀಗ ಕರ್ನಾಟಕದ ಕರಾವಳಿಯಲ್ಲಿ ಹೊಸ ಅಲೆ ಎಬ್ಬಿಸಿದೆ. ಅದರಲ್ಲೂ ಈಗ ನಮ್ಮ ತಣ್ಣೀರುಬಾವಿ ಮತ್ತು ಸಸಿಹಿತ್ಲು ಬೀಚ್‌ಗಳು ದೇಶದ ಪ್ರಮುಖ ಸರ್ಫಿಂಗ್ ತಾಣಗಳಾಗಿ ಗುರುತಿಸಿಕೊಳ್ಳುತ್ತಿವೆ.

ಇಂಡಿಯನ್ ಓಪನ್‌ನಲ್ಲಿ ಕರಾವಳಿ ಕಳೆ

ಈ ಬಾರಿಯ 7ನೇ ಎನ್‌ಎಂಪಿಎ ಇಂಡಿಯನ್ ಓಪನ್ ಸರ್ಫಿಂಗ್‌ನಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಸೇರಿದಂತೆ ಹಲವು ರಾಜ್ಯಗಳ ಸರ್ಫರ್‌ಗಳು ಭಾಗವಹಿಸಿದ್ದಾರೆ. ತಣ್ಣೀರುಬಾವಿ ಬ್ಲೂ ಬೇ ಬೀಚ್‌ನಲ್ಲಿ ನಡೆಯುತ್ತಿರುವ ಸ್ಪರ್ಧೆ ಈಗ ದೇಶದಲ್ಲಿಯೇ ಗಮನಸೆಳೆಯುತ್ತಿದ್ದು, ಸಮುದ್ರದ ಅಲೆಗಳ ಜೊತೆ ಸರ್ಫರ್‌ಗಳ ನರ್ತನ ದೇಶ ವಿದೇಶದ ನೋಡುಗರಿಗೆ ರೋಮಾಂಚನ ನೀಡುತ್ತಿದೆ.





ಸಂಗಮ ವಿಶೇಷ

ಕಡಲ ಅಲೆಗಳ ಜೊತೆ ಸಾಹಸ ಪ್ರದರ್ಶನ

ಸರ್ಫಿಂಗ್ ಎಂದರೆ ಸುಮ್ಮನೆ ಬೋರ್ಡ್‌ನ ಮೇಲೆ ನಿಲ್ಲುವುದಲ್ಲ, ಸಮುದ್ರದ ಅಲೆಯ ವೇಗ, ದಿಕ್ಕು, ಎತ್ತರವನ್ನು ಗ್ರಹಿಸಿ, ಸಮತೋಲನ ಕಾಯ್ದುಕೊಂಡು ಸಾಧ್ಯವಾದಷ್ಟು ಹೆಚ್ಚು ಹೊತ್ತು ಅಲೆಯ ಮೇಲೆ ಸವಾರಿ ಮಾಡುವ ಕಲೆ. ಇಲ್ಲಿ ಸಮುದ್ರವನ್ನು ಹತೋಟಿಗೆ ತೆಗೆದುಕೊಳ್ಳುವ ಈ ಪ್ರಯತ್ನವನ್ನು ಸಮುದ್ರದ ತೀರದಲ್ಲಿ ನಿಂತು ನೋಡುವುದೇ ಒಂದು ರೋಮಾಂಚನಕಾರಿ ವಿಶಿಷ್ಟವಾದ ಅನುಭವವಾಗಿದೆ.

ಸಾಹಸದ ಹಿಂದಿದೆ ಮಂತ್ರ ಸರ್ಫಿಂಗ್ ಕ್ಲಬ್‌ನ ಶ್ರಮ

ಕಳೆದ ಕೆಲವು ವರ್ಷಗಳ ಹಿಂದೆ ಬೆರಳೆಣಿಕೆಯಷ್ಟಿದ್ದ ಸರ್ಫರ್‌ಗಳು ಇಂದು ನೂರಾರು ಸಂಖ್ಯೆಗೆ ತಲುಪಿದ್ದಾರೆ. ಇದರ ಹಿಂದೆ ಮಂತ್ರ ಸರ್ಫಿಂಗ್ ಕ್ಲಬ್‌ನ ಶ್ರಮವಿದೆ. ಸ್ಥಳೀಯ ಮೀನುಗಾರರ ಮಕ್ಕಳಿಗೆ ಉಚಿತ ಬೋರ್ಡ್, ತರಬೇತಿ ನೀಡಿ ಕ್ಲಬ್ ಸರ್ಫಿಂಗ್‌ನ್ನು ಜನಸಾಮಾನ್ಯರ ಕ್ರೀಡೆಯನ್ನಾಗಿ ಮಾಡಿದೆ. 'ಮೊದಲು ಭಯ ಆಗ್ತಿತ್ತು. ಈಗ ಅಲೆ ಬಂದರೆ ಖುಷಿ ಆಗುತ್ತೆ' ಎನ್ನುತ್ತಾನೆ 14 ವರ್ಷದ ಸ್ಥಳೀಯ ಸರ್ಫರ್ ಹರೀಶ್.

14 ರಿಂದ 40ರವರೆಗೆ

ಇದು ವೈಯಕ್ತಿಕ ಕ್ರೀಡೆ. 14 ವರ್ಷದ ಮಕ್ಕಳಿಂದ ಹಿಡಿದು 40 ವರ್ಷದ ಹಿರಿಯರವರೆಗೆ ಎಲ್ಲರಿಗೂ ಅವಕಾಶವಿದೆ. ತಮ್ಮ ಪೂರ್ಣ ಸಾಮರ್ಥ್ಯ ತೋರಲು ಇದು ಸೂಕ್ತ ವೇದಿಕೆ. ಪುರುಷರು, ಮಹಿಳೆಯರು, ಗ್ರೋಮ್ಸ್ ವಿಭಾಗಗಳಲ್ಲಿ ಸ್ಪರ್ಧೆ ನಡೆಯುತ್ತಿದೆ.

- ಸರ್ಫಿಂಗ್ ಪ್ರಿಯರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ ತಣ್ಣೀರುಬಾವಿ, ಸಸಿಹಿತ್ಲು
- ಅಲೆಗಳ ನಾಡಲ್ಲಿ ಈಗ ಸರ್ಫ್ ಆಗುತ್ತಿವೆ ಹೊಸ ಹೊಸ ಸಾಧನೆಗಳ ಕನಸುಗಳು

ಕರಾವಳಿ ಪ್ರತಿಭೆಗಳಿಗೆ ಏಷ್ಯನ್ ಗೇಮ್ಸ್‌ಗೆ ರಹದಾರಿ

2026ರ ಏಷ್ಯನ್ ಗೇಮ್ಸ್‌ನಲ್ಲಿ ಸರ್ಫಿಂಗ್‌ಗೆ ಅಧಿಕೃತವಾಗಿ ಅವಕಾಶ ಸಿಕ್ಕಿ ಕರಾವಳಿ ಪ್ರತಿಭೆಗಳಿಗೆ ದೊಡ್ಡ ಬಾಗಿಲು ತೆರೆದಿದೆ. ಎನ್‌ಎಂಪಿಎ ಇಂಡಿಯನ್ ಓಪನ್ ಭಾರತ ತಂಡದ ಆಯ್ಕೆಯ ಪ್ರಮುಖ ಕೂಟ ಹೌದು. 'ವಾಟರ್ ಸ್ಪೋರ್ಟ್ಸ್‌ನಲ್ಲಿ ದೇಶಕ್ಕೆ ಪದಕ ತರಲು ನಮ್ಮ ಹುಡುಗರಿಗೆ ಇದೊಂದು ಸುವರ್ಣ ಅವಕಾಶ ಎನ್ನುತ್ತಾರೆ ಸ್ಪರ್ಧಾ ನಿರ್ದೇಶಕ ನವಾಜ್ ಜಬ್ಬಾರ್. ಕರಾವಳಿಯ ಮಕ್ಕಳು ಅಲೆಗಳ ಮೇಲೆ ನಿಂತು ದೇಶ ಪ್ರತಿನಿಧಿಸಲು ಸಜ್ಜಾಗುತ್ತಿದ್ದಾರೆ.

ಸುತ್ತಮುತ್ತ

ಅಶೋಕ್ ರೈಗೆ ಸಚಿವ ಸ್ಥಾನಕ್ಕಾಗಿ ಪ್ರಾರ್ಥನೆ



ಪುತ್ತೂರು: ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಸೇರಿದಂತೆ ವಿವಿಧ ಧರ್ಮಗಳ ಶ್ರದ್ಧಾ ಕೇಂದ್ರಗಳಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ ಅವರ ನೇತೃತ್ವದಲ್ಲಿ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈಯವರಿಗೆ ಸಚಿವ ಸ್ಥಾನ ಸಿಗುವಂತೆ ಅನುಗ್ರಹಿಸಲು ಪ್ರಾರ್ಥನೆ ಮಾಡಲಾಯಿತು. ಬ್ಲಾಕ್ ಪ್ರಧಾನ ಕಾರ್ಯದರ್ಶಿ ರವಿಪ್ರಸಾದ್ ಶೆಟ್ಟಿ, ಸಾಮಾಜಿಕ ಜಾಲತಾಣ ಸಂಚಾಲಕ ಸುಪ್ರೀತ್ ಕಣ್ಣಾರಾಯ, ಬನ್ನೂರು ವಲಯಾಧ್ಯಕ್ಷ ರೋಶನ್ ರೈ ಬನ್ನೂರು, ನವೀನ್ ಕರ್ಕೇರ, ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್, ಸದಸ್ಯರಾದ ಮಹಾಬಲ ರೈ ಒಳತ್ತಡ್ಕ, ಸುಭಾಷ್ ರೈ ಬೆಳ್ಳಿಪ್ಪಾಡಿ, ದಿನೇಶ್ ಪಿ.ವಿ, ಉದ್ಯಮಿ ಚಂದ್ರಹಾಸ್ ರೈ ಮುಂತಾದ ಮುಖಂಡರು ಉಪಸ್ಥಿತರಿದ್ದರು.

ಜೂ.2ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಮೂಡುಬಿದಿರೆ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಫೀಡರ್‌ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೂಡುಬಿದಿರೆ ಪೇಟೆ, ಮಾಸ್ತಿಕಟ್ಟೆ, ನೆಲ್ಲಿಗುಡ್ಡೆ, ಗಾಂಧಿನಗರ, ಕಾಡದಬೆಟ್ಟು, ಮಹಾವೀರ ಕಾಲೇಜ್, ವಿವೇಕಾನಂದ ನಗರ, ಸ್ವರಾಜ್ ಮೈದಾನ, ಒಂಟಿಕಟ್ಟೆ, ಕಡಲಕೆರೆ, ಪಿಲಿಪಂಜರ, ನಾಗರಕಟ್ಟೆ, ಅರಮನೆಬಾಗಿಲು, ಜ್ಯೋತಿನಗರ, ಜೈನ್ ಪೇಟೆ, ಮಹಾವೀರ ಕಾಲೇಜ್ ರೋಡ್, ಪುಚ್ಚೆಮೊಗರು ವಾಟರ್ ಸಪ್ಲೈ, ಮಾಸ್ತಿಕಟ್ಟೆ, ಶೇಡಿಗುರಿ, ಹೊಸಬೆಟ್ಟು ಇರುವೈಲು, ಹೊಸ್ಮಾರ್ ಪದವು ಕೊನ್ನೆಪದವು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.2ರಂದು ಬೆಳಿಗ್ಗೆ 9.30ರಿಂದ ಸಂಜೆ 6ರ ವರೆಗೆ ವಿದ್ಯುತ್ ನಿಲುಗಡೆ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಜೂನ್ 2ರಂದು ಬೀಳ್ಕೊಡುಗೆ, ದೀಪಪ್ರದಾನ

ಬಂಟ್ವಾಳ: ಕಲ್ಲಡ್ಕ ಶ್ರೀ ರಾಮ ಪದವಿ ಮಹಾವಿದ್ಯಾಲಯದಲ್ಲಿ 2025–26ನೇ ಸಾಲಿನ ಅಂತಿಮ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ – ದೀಪಪ್ರದಾನ ಕಾರ್ಯಕ್ರಮ ಜೂ. 2 ರಂದು ಆಜಾದ್ ಭವನದಲ್ಲಿ ನಡೆಯಲಿದೆ. ವಿವೇಕಾನಂದ ವಿದ್ಯಾವರ್ಧಕ ಸಂಘ, ಪುತ್ತೂರು ಇದರ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಜ್ಯುವೆಲ್ಲರಿ ಅಸೋಸಿಯೇಷನ್ ಬೆಂಗಳೂರು ಇದರ ಅಧ್ಯಕ್ಷರಾದ ಡಾ. ಚೇತನ್ ಕುಮಾರ್ ಮೆಹ್ತಾ ಹಾಗೂ ಮಂಗಳೂರಿನ ವೈದ್ಯರು ಮತ್ತು ಉದ್ಯಮಿಗಳಾದ ಡಾ. ಪ್ರಕಾಶ್ ಶೆಟ್ಟಿ ಅಭ್ಯಾಗತರಾಗಿ ಆಗಮಿಸಲಿದ್ದಾರೆ. ಸಂಸ್ಥೆಯ ಅಧ್ಯಕ್ಷ ಬಿ. ನಾರಾಯಣ ಸೋಮಯಾಜಿ, ಸಂಚಾಲಕ ವಸಂತ ಮಾಧವ, ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ ಕಾಯರ್‌ಕಟ್ಟೆ ಮತ್ತಿತರರು ಉಪಸ್ಥಿತರಿರುತ್ತಾರೆ ಎಂದು ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸುಭದ್ರಾ ಕಲ್ಯಾಣ' ಪುರಾಣ ಪ್ರವಚನ



ಮಂಗಳೂರು: ಗಮಕ ಕಲಾ ಪರಿಷತ್ತು ಮಂಗಳೂರು ತಾಲೂಕು ವತಿಯಿಂದ 'ಅಧಿಕ ಮಾಸದ ಗಮಕ ಸಪ್ತಾಹ'ವನ್ನು ನಗರದ ವಿವಿಧ ದೇವಸ್ಥಾನಗಳಲ್ಲಿ ಏರ್ಪಡಿಸಲಾಗಿದೆ. ಮಂಗಳೂರಿನ ಶ್ರೀ ಮಂಗಳಾದೇವಿ ದೇವಸ್ಥಾನದಲ್ಲಿ ಜರುಗಿದ ಸಪ್ತಾಹದ ಆರನೆಯ ದಿನ ಶುಕ್ರವಾರ ಕವಿ ಕುಮಾರವ್ಯಾಸ ವಿರಚಿತ 'ಕರ್ನಾಟ ಭಾರತ ಕಥಾ ಮಂಜರಿ'ಯ 'ಸುಭದ್ರಾ ಕಲ್ಯಾಣ' ಕಥಾಭಾಗದ ಪುರಾಣ ಪ್ರವಚನ ನಡೆಯಿತು. ಯುವ ಗಮಕಿ ಮಧೂರು ರಾಮ ಪ್ರಕಾಶ ಕಲ್ಲೂರಾಯ ಕಾವ್ಯವಾಚನವನ್ನು ನೆರವೇರಿಸಿದರು. ಯಕ್ಷಗಾನ ಅರ್ಥಧಾರಿ ಭಾಸ್ಕರ ರೈ ಕುಕ್ಕುವಳ್ಳಿ ವ್ಯಾಖ್ಯಾನ ನಡೆಸಿಕೊಟ್ಟರು. ಹಿರಿಯ ಗಮಕಿ, ಗಮಕ ಕಲಾ ಪರಿಷತ್ತಿನ ನಿರ್ದೇಶಕ ಸುರೇಶ್ ರಾವ್ ಅತ್ತೂರು ಸ್ವಾಗತಿಸಿ, ಸ್ತುತಿ ಗೀತೆಯನ್ನು ಹಾಡಿದರು.

ಜೂನ್ 2ರಂದು ಉದ್ಘಾಟನಾ ಸಮಾರಂಭ | ಸಿದ್ಧತೆ ಪರಿಶೀಲಿಸಿದ ಜಿಲ್ಲಾ ಸತ್ರ ನ್ಯಾಯಾಧೀಶ ಬಸವರಾಜ್

ಬಾಡಿಗೆ ಕಟ್ಟಡದಲ್ಲಿ ಕಡಬ ನ್ಯಾಯಾಲಯದ ಕಾರ್ಯಾರಂಭ

ಕಡಬ: ತಾಲೂಕು ಕೇಂದ್ರವಾಗಿ ರೂಪುಗೊಂಡ ಬಳಿಕ ಕಡಬ ತಾಲೂಕಿನಲ್ಲಿ ನ್ಯಾಯಾಲಯ ಪ್ರಾರಂಭಿಸಬೇಕು ಎನ್ನುವ ಈ ಭಾಗದ ಬಹು ದಿನಗಳ ಬೇಡಿಕೆ ಈಡೇರುತ್ತಿದ್ದು, ಜೂ.2ರಂದು ಕಡಬ ಗಣೇಶ್ ಬಿಲ್ಡಿಂಗ್ ಎಂಬ ಖಾಸಗಿಯವರ ಕಟ್ಟಡದಲ್ಲಿ ಬಾಡಿಗೆ ನೆಲೆಯಲ್ಲಿ ನ್ಯಾಯಾಲಯ ಪ್ರಾರಂಭವಾಗಲಿದೆ.



ಬಾಡಿಗೆ ಕಟ್ಟಡದಲ್ಲಿ ಕಾರ್ಯಕಲಾಪ

ಶನಿವಾರ ಕಡಬಕ್ಕೆ ಆಗಮಿಸಿದ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶ ಬಸವರಾಜ್ ಗಣೇಶ್ ಬಿಲ್ಡಿಂಗ್ ಎರಡನೇ ಮಹಡಿಯಲ್ಲಿ ನ್ಯಾಯಾಲಯ ಪ್ರಾರಂಭಿಸಲು ನಡೆಸಿರುವ ಸಿದ್ಧತೆಗಳನ್ನು ಪರಿಶೀಲಿಸಿ ಪತ್ರಕರ್ತರೊಂದಿಗೆ ಮಾತನಾಡಿ, ನ್ಯಾಯಾಲಯ ಪ್ರಾರಂಭಿಸುವ ಬಗ್ಗೆ ಮಾಹಿತಿ ನೀಡಿದರು. ಜೂ.2ರಂದು ಬಾಡಿಗೆ ಕಟ್ಟಡದಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ನ್ಯಾಯಾಲಯ ಪ್ರಾರಂಭಿಸಲು ಬೇಕಾದ ಸಿದ್ಧತೆಗಳು ಕೊನೆಯ ಹಂತದಲ್ಲಿದೆ. ಎಲ್ಲಾ ಮೂಲಭೂತ ವ್ಯವಸ್ಥೆಗಳನ್ನುಸರಿಪಡಿಸಿಕೊಂಡುನ್ಯಾಯಲಯವನ್ನು ಅಧಿಕೃತವಾಗಿ ಪ್ರಾರಂಭಿಸಲಾಗುತ್ತದೆ. ಬಳಿಕ ವಾರದಲ್ಲಿ ಎರಡು ದಿನ ಮಂಗಳವಾರ ಹಾಗೂ ಶುಕ್ರವಾರ ಇಲ್ಲಿ ಕಲಾಪ ನಡೆಯಲಿದೆ. ನ್ಯಾಯಾಲಯಕ್ಕೆ ಸ್ವಂತ ಕಟ್ಟಡ ನಿರ್ಮಾಣ ಮಾಡುವ ದೃಷ್ಟಿಯಿಂದ ಕಡಬ ತಾಲೂಕು ಕಚೇರಿಯ ಬಳಿ 3 ಎಕ್ರೆ ಜಾಗವನ್ನು ಮೀಸಲಿರಿಸಲಾಗಿದೆ. ನೂತನ ಕಟ್ಟಡ ನಿರ್ಮಾಣ ಆಗುವ ತನಕ ಬಾಡಿಗೆ ಕಟ್ಟದಲ್ಲೇ ಕಾರ್ಯಕಲಾಪ ನಡೆಯಲಿದೆ ಎಂದು ನ್ಯಾಯಾಧೀಶರು ಮಾಹಿತಿ ನೀಡಿದರು. ಈ ಸಂದರ್ಭ ಕಡಬದ ನ್ಯಾಯವಾದಿಗಳಾದ ಲೋಕೇಶ್ ಎಂ.ಜೆ., ಶಿವಪ್ರಸಾದ್ ಪುತ್ತಿಲ, ಆಶ್ವಿತ್ ಕಂಡಿಗ, ಅವಿನಾಶ್ ಬೈತಡ್ಕ, ಕೃಷ್ಣಪ್ಪ ಗೌಡ ಕಕ್ವೆ, ಮನೋಹರ ಸಬಳೂರು, ಕೌಶಿಕ್ ಆಲಂಕಾರು, ಅರ್ಪಿತಾ ಪಿ., ಸುಮನಾ ಎಂ, ಕಟ್ಟಡ ಮಾಲೀಕ ಸುಂದರ ಗೌಡ ಮಂಡೆಕರ ಮತ್ತಿತರರು ಉಪಸ್ಥಿತರಿದ್ದರು.

ದಶಕಗಳ ಕನಸು ಈಡೇರಿಕೆ

ತಾಲೂಕು ಕೇಂದ್ರವಾದ ಕಡಬದಲ್ಲಿ ನ್ಯಾಯಾಲಯವನ್ನು ಪ್ರಾರಂಭಿಸಬೇಕೆಂಬ ಸ್ಥಳೀಯರ ಹಾಗೂ ನ್ಯಾಯವಾದಿಗಳ ಐದು ವರ್ಷಗಳ ನಿರಂತರ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಿದೆ. ನ್ಯಾಯಾಲಯದ ಕಾರ್ಯಕಲಾಪಗಳಿಗಾಗಿ ದೂರದ ಪುತ್ತೂರುಹಾಗೂಸುಳ್ಯಕ್ಕೆಅಲೆಯುವುದನ್ನುತಪ್ಪಿಸುವ ದೃಷ್ಟಿಯಿಂದ ಕಡಬ ತಾಲೂಕು ಕೇಂದ್ರದಲ್ಲಿಯೇ ನ್ಯಾಯಾಲಯ ಸ್ಥಾಪನೆಯಾಗಬೇಕು ಎಂಬ ಬೇಡಿಕೆ ಇತ್ತು. ಕಳೆದ ಎರಡು ವರ್ಷಗಳಿಂದ ಈ ಕುರಿತಾದ ಪ್ರಕ್ರಿಯೆಗಳು ನಡೆಯುತ್ತಿದ್ದು, ಈಗ ಅದಕ್ಕೆ ಅಂತಿಮ ರೂಪ ದೊರೆತಿದೆ. ಕಡಬದ ಮಿನಿ ವಿಧಾನ ಸೌಧದ ಬಳಿ ನ್ಯಾಯಾಲಯ ಸಂಕೀರ್ಣ ನಿರ್ಮಾಣಕ್ಕಾಗಿ 3 ಎಕರೆ ಜಾಗವನ್ನು ಗುರುತಿಸಲಾಗಿದೆಯಾದರೂ, ಕಟ್ಟಡ ನಿರ್ಮಾಣ ಕಾರ್ಯ ವಿಳಂಬವಾಗುವ ಹಿನ್ನೆಲೆಯಲ್ಲಿ ಸದ್ಯಕ್ಕೆ ಬಾಡಿಗೆ ಕಟ್ಟಡದಲ್ಲಿ ನ್ಯಾಯಾಲಯವನ್ನು ಆರಂಭಿಸಲಾಗುತ್ತಿದೆ.

ಈಗ ಬಾಡಿಗೆ ಕಟ್ಟಡದಲ್ಲಿ ಮೂಲ ಸೌಕರ್ಯಗಳ ನವೀಕರಣ ಕಾರ್ಯ ಮುಗಿದಿದೆ. ಹೈಕೋರ್ಟ್‌ನಿಂದ ಸಿಗಬೇಕಾದ ಅನುಮತಿ ಕೂಡಾ ಸಿಕ್ಕಿದೆ. ಇನ್ನು ಕಡಬ ತಾಲೂಕಿನ ವ್ಯಾಪ್ತಿಗೆ ಸಂಬಂಧಿಸಿದ ನ್ಯಾಯಾಲಯದ ಕಲಾಪಗಳನ್ನು ಕಡಬದಲ್ಲಿಯೇ ನಡೆಸಲಾಗುತ್ತಿದೆ.

ಹಣದ ಉಳಿತಾಯ, ಶೀಘ್ರ ನ್ಯಾಯದಾನದ ನಿರೀಕ್ಷೆ

ಪ್ರಸ್ತುತ ಪುತ್ತೂರು ನ್ಯಾಯಾಲಯದಲ್ಲಿರುವ ಕಡಬ ತಾಲೂಕು ವ್ಯಾಪ್ತಿಯ ಪ್ರಕರಣಗಳ ಕಡತಗಳನ್ನು ಈಗಾಗಲೇ ಪುತ್ತೂರು ತಾಲೂಕಿನಿಂದ ಬೇರ್ಪಡಿಸಿ ಪ್ರತ್ಯೇಕಿಸಲಾಗಿದೆ ಎಂದು ತಿಳಿದು ಬಂದಿದೆ. ಹೈಕೋರ್ಟ್ ಸೂಚನೆಯಂತೆ ನವೀಕರಣ ಕಾರ್ಯ ಮುಗಿಸಲಾಗಿದ್ದು, ಕಟ್ಟಡ ಮಾಲೀಕರು ಹಾಗೂ ಜಿಲ್ಲಾಸತ್ರ ನ್ಯಾಯಾಧೀಶರ ಮಧ್ಯೆ ಒಪ್ಪಂದ ಪ್ರಕ್ರಿಯೆ ಎಲ್ಲವೂ ಮುಗಿದಿದೆ. ನ್ಯಾಯಾಲಯ ಪ್ರಾರಂಭವಾಗುವುದರಿಂದ ಕಡಬ ತಾಲೂಕಿನ ಸಾರ್ವಜನಿಕರಿಗೆ ಮತ್ತು ನ್ಯಾಯವಾದಿಗಳಿಗೆ ಬಹಳಷ್ಟು ಸಮಯ ಹಾಗೂ ಹಣದ ಉಳಿತಾಯವಾಗಲಿದ್ದು, ಸ್ಥಳೀಯವಾಗಿ ಶೀಘ್ರ ನ್ಯಾಯದಾನ ದೊರೆಯಲು ಸಹಕಾರಿಯಾಗಲಿದೆ.

ಕುಂದು ಕೊರತೆ ಸಭೆಯಲ್ಲಿ ದೂರು | ನೀರಿನ ಸಂಪರ್ಕ ವಿತರಣೆ ಗೊಂದಲ

ಕ್ರಮದ ಭರವಸೆ ನೀಡಿದ ಶಾಸಕ ಕೋಟ್ಯಾನ್

ಮುಲ್ಕಿ: ಮೂಡುಬಿದಿರೆ ಶಾಸಕ ಉಮಾನಾಥ್ ಎ. ಕೋಟ್ಯಾನ್ ಅವರು ಶನಿವಾರ ಮುಲ್ಕಿಯ ಕಾರ್ನಾಡ್ ಗೇರುಕಟ್ಟೆಪ್ರಜಾಸೌಧ ಸೇವಕ ಕಚೇರಿಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿದರು. ಹಾಗೂ ಸ್ಥಳದಲ್ಲಿಯೇ ಪರಿಹಾರ ಸೂಚಿಸಲು ಪ್ರಯತ್ನಿಸಿದರು.



ಕುಂದು ಕೊರತೆ ಸಭೆಯಲ್ಲಿ ಕಳೆದ ಹಲವಾರು ವರ್ಷಗಳಿಂದ ಪಡುಪಣಂಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯಾಚರಿಸುತ್ತಿರುವ ವಿಶ್ವ ಬ್ಯಾಂಕ್, ನೆರವಿನ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಸಮಿತಿಯು ನೇರವಾಗಿ ಗ್ರಾಹಕರಿಂದ ಸಂಪರ್ಕ ಶುಲ್ಕ ಪಡೆದು ನೀರಿನ ಸಂಪರ್ಕ ನೀಡಿರುವ ಬಗ್ಗೆ ಗ್ರಾಮ ಪಂಚಾಯತ್ ಆಡಳಿತವು ಸಮಿತಿಗೆ ನೋಟಿಸ್ ನೀಡಿ ಯಾವುದೇ ಸಮಿತಿಗೆ ನೀರು ನಿರ್ವಹಣೆ ಜವಾಬ್ದಾರಿ ಮಾತ್ರ ಇರುವುದು ಸಂಪರ್ಕ ಮಂಜೂರಾತಿ ನೀಡುವುದು ಗ್ರಾ.ಪಂ. ಹಕ್ಕು ಆಗಿದೆ. ಹಾಗೂ ಸರಕಾರದ ನಿಯಮಾವಳಿಗಳಂತೆ ಪಂಚ ತಂತ್ರ ತಂತ್ರಾಂಶದ ಮೂಲಕ ಮಾತ್ರ ನೀರಿನ ಸಂಪರ್ಕ ಮಂಜೂರಾತಿ ನೀಡಲು ಅವಕಾಶ ಇರುತ್ತದೆ. ಆದ್ದರಿಂದ ಸಮಿತಿಗಳು ಸಂಪರ್ಕ ಶುಲ್ಕ ಸ್ವತಃ ಪಡೆದು ನೀರಿನ ಸಂಪರ್ಕ ನೀಡಿದ್ದಲ್ಲಿ ಅದು ಅನಧಿಕೃತವಾಗಿರುವುದಲ್ಲದೆ ಗ್ರಾಮ ಪಂಚಾಯತ್‌ಗೆ ಮತ್ತು ಸರಕಾರಕ್ಕೆ ಆರ್ಥಿಕ ನಷ್ಟ ಉಂಟಾಗುತ್ತದೆ ಎಂದು ನೋಟಿಸು ನೀಡಿದ್ದು, ಈ ಬಗ್ಗೆ ಸಮಿತಿಯು ಶಾಸಕರಿಗೆ ದೂರು ನೀಡಿದರು. ಈ ಬಗ್ಗೆ ಶಾಸಕರು ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಕಿನ್ನಿಗೋಳಿ ಪ.ಪಂ. ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ, ಸದಸ್ಯ ಲೋಕಯ್ಯ ಸಾಲ್ಯಾನ್ ಕೊಂಡೇಲ, ಮುಲ್ಕಿ ತಹಶೀಲ್ದಾರ್ ಶ್ರೀಧರ ಮುಂದಲಮನಿ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸುನಿಲ್ ಆಳ್ವ, ಬಿಜೆಪಿ ನಾಯಕ ದೇವಪ್ರಸಾದ್ ಪುನರೂರು,ಸತೀಶ್ ಅಂಚನ್, ರಂಗನಾಥ ಶೆಟ್ಟಿ ವಿನೋದ್ ಸಾಲ್ಯಾನ್ ಬೆಳ್ಳಾಯರು, ಶ್ಯಾಮ್ ಪ್ರಸಾದ್, ಶೈಲೇಶ್ ಕುಮಾರ್, ಅಶೋಕ್ ಜನನಿ, ವಿಠ್ಠಲ್ ಎನ್.ಎಂ., ಹಳೆಯಂಗಡಿ ಗ್ರಾಪಂ ಮಾಜಿ ಅಧ್ಯಕ್ಷೆ ಪೂರ್ಣಿಮಾ, ಮಾಜಿ ಉಪಾಧ್ಯಕ್ಷ ಅಶೋಕ್ ಬಂಗೇರ, ಕಚೇರಿಯ ಕಾರ್ಯದರ್ಶಿ, ರಮೇಶ್ ಹಂಗರಗಿ ಮತ್ತಿತರರಿದ್ದರು.

ಶಾಸಕರಿಗೆ ದೂರು

ಹಳೆಯಂಗಡಿಯ ಬಹು ಮಹಡಿ ಕಟ್ಟಡದ ತ್ಯಾಜ್ಯ ನೀರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹರಿದು ದುರ್ವಾಸನೆ ಹಾಗೂ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಶಾಸಕರಿಗೆ ಸ್ಥಳೀಯರು ಶಾಸಕರಿಗೆ ದೂರು ನೀಡಿದರು. ಹಳೆಯಂಗಡಿ ಪೇಟೆಯ ಒಳ ರಸ್ತೆಯ ಯುವಕ ಮಂಡಲದ ಕಟ್ಟಡದ ಬಳಿ ರಸ್ತೆ ತಡೆಗೋಡೆ ಕುಸಿದಿದ್ದು ಮಳೆಗಾಲದ ಮೊದಲು ನಿರ್ಮಾಣದ ಬಗ್ಗೆ ಶಾಸಕರಿಗೆ ಮನವಿ. ಹಾಗೂ ಕ್ಷೇತ್ರದ ವಿವಿಧೆಡೆಯಿಂದ ಬಂದ ನಾಗರಿಕರು ತಮ್ಮ ಸಮಸ್ಯೆ ಹೇಳಿಕೊಂಡರು ಹಾಗೂ ಶಾಸಕರ ಮೂಲಕ ಸೂಕ್ತ ಪರಿಹಾರ ಕಲ್ಪಿಸಲಾಯಿತು.

ಬಂಟ್ವಾಳದಲ್ಲಿ ಜಿಲ್ಲಾ ಸಮಾವೇಶ | ಮಾಜಿ ಸಚಿವ ರಮಾನಾಥ ರೈ ಹೇಳಿಕೆ

ಎನ್‌ಡಿಎಯಿಂದ ದೇಶದ ಕಾಯ್ದೆಗಳ ದುರ್ಬಲ

ಬಂಟ್ವಾಳ: ಅಧಿಕಾರ ವಿಕೇಂದ್ರೀಕರಣದ ಉದ್ದೇಶದಿಂದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಮಂಡಿಸಿದ್ದ ಪಂಚಾಯತ್ ರಾಜ್ ತಿದ್ದುಪಡಿ ಕಾಯ್ದೆಗೆ ಬಿಜೆಪಿ ಅಡ್ಡಿಪಡಿಸಿದ್ದು, ಬಳಿಕ ಕಾಂಗ್ರೆಸ್ ಆಡಳಿತಾವಧಿಯಲ್ಲೇ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿ ಗ್ರಾಮೀಣ ಜನರಿಗೆ ಅಧಿಕಾರ ಹಂಚಿಕೆಯಲ್ಲಿ ಕಾಂಗ್ರೆಸ್ ಮಹತ್ವದ ಪಾತ್ರ ವಹಿಸಿದೆ ಎಂದು ಮಾಜಿ ಸಚಿವ ಬಿ. ರಮಾನಾಥ ರೈ ಹೇಳಿದರು.



ದ.ಕ. ಜಿಲ್ಲಾ ಕಾಂಗ್ರೆಸ್ ಆಶ್ರಯದಲ್ಲಿ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ ದ.ಕ ವತಿಯಿಂದ ಪಾಣೆ ಮಂಗಳೂರು ಮತ್ತು ಬಂಟ್ವಾಳ ಬ್ಲಾಕ್ ಕಾಂಗ್ರೆಸ್ ಸಹಕಾರದಲ್ಲಿ ಶನಿವಾರ ಬಂಟ್ವಾಳ ತಾಲೂಕು ಆಡಳಿತ ಕಚೇರಿ ಮುಂಭಾಗ ನಡೆದ ಜಿಲ್ಲಾಸಮಾವೇಶದಲ್ಲಿ ಅವರು ಮಾತನಾಡಿದರು.

ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸರ್ವ ಶಿಕ್ಷಣ ಅಭಿಯಾನ, ಗ್ರಾಮೀಣ ರಸ್ತೆ ಅಭಿವೃದ್ಧಿ ಕುಡಿಯುವ ನೀರಿನ ಯೋಜನೆ, ಆಹಾರ ಭದ್ರತಾ ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆ ಸೇರಿದಂತೆ ಹಲವು ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದು ದುರ್ಬಲ ವರ್ಗಗಳ ಸಬಲೀಕರಣಕ್ಕೆ ನೆರವಾಗಿದೆ ಎಂದು ಹೇಳಿದರು.

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಪಂಚಾಯತ್ ರಾಜ್ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಮೂಲಕ ಪ್ರಜಾಪ್ರಭುತ್ವದ ಮೂಲ ಆಶಯಗಳಿಗೆ ಧಕ್ಕೆ ತರುತ್ತಿದ್ದಾರೆ ಎಂದು ಆರೋಪಿಸಿದರು.

ಮುಖ್ಯ ಭಾಷಣಕಾರ ಸುಧೀರ್ ಕುಮಾರ್ ಮುರುಳ್ಯ, ಕೇಂದ್ರದ ಬಿಜೆಪಿ ಸರ್ಕಾರದ ನೀತಿಗಳಿಂದ ಬಡ ಹಾಗೂ ಮಧ್ಯಮ ವರ್ಗದ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದರು.

ಮತದಾರರ ಪಟ್ಟಿಯ ಪರಿಷ್ಕರಣೆಯಲ್ಲಿ ತಾಂತ್ರಿಕ ಲೋಪಗಳಿಂದ ಅರ್ಹ ಮತದಾರರ ಹೆಸರುಗಳು ಕೈಬಿಡುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಗೇರು ನಿಗಮದ ಅಧ್ಯಕ್ಷೆ ಮಮತಾ ಎಸ್. ಗಟ್ಟಿ ಪ್ರವಾಸೋದ್ಯಮ ನಿಗಮದ ಅಧ್ಯಕ್ಷೆ ಶಾಲೆಟ್ ಪಿಂಟೋ, ಕೆ.ಪಿ.ಸಿ.ಸಿ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಮಹಮ್ಮದ್ ಮಾತನಾಡಿದರು. ಪಕ್ಷದ ಮುಖಂಡರಾದ ಚಂದ್ರಪ್ರಕಾಶ್ ಶೆಟ್ಟಿ ಅಶ್ವನಿ ಕುಮಾರ್ ರೈ, ಬಿ. ಪದ್ಮಶೇಖರ್ ಜೈನ್, ಪಿ.ಪಿ. ವರ್ಗೀಸ್, ಶಾಹುಲ್ ಹಮೀದ್, ಸರ್ವೋತ್ತಮ ಗೌಡ ನೆಲ್ಯಾಡಿ, ದಿನೇಶ್ ಮೂಳೂರು, ಚಂದ್ರಶೇಖರ ಭಂಡಾರಿ, ಬಾಲಕೃಷ್ಣ ಅಂಚನ್, ಅರುಣ್ ಕುಮಾರ್ ಶೆಟ್ಟಿ, ಪದ್ಮನಾಭ ಸಾಲ್ಯಾನ್, ರಾಧಾಕೃಷ್ಣ ಬೊಲ್ಲೂರು, ಅಭಿಲಾಷ್ ಪಿ.ಕೆ., ಪ್ರಶಾಂತ್ ಕಾಜವ, ರಮೇಶ್ ಶೆಟ್ಟಿ, ಉಮೇಶ್ ಬೋಳಂತೂರು ಕುಮಾರಿ ಅಪ್ಪಿ, ಉಷಾ ಅಂಚನ್, ಜಯಂತಿ ಪೂಜಾರಿ, ಸುಧೀ ರ್ ಕುಮಾರ್ ಶೆಟ್ಟಿ, ಐಡಾ ಸುರೇಶ್, ಶೈಲಜಾ ರಾಜೇಶ್ ಹಾಗೂ ಅಬ್ದುಲ್ ರಹಿಮಾನ್, ಬೇಬಿ ಕುಂದರ್, ನವಾಝ್ ಬಡಕಬೈಲು ಇದ್ದರು. ಜಗದೀಶ್ ಕೊಯಿಲ ಸ್ವಾಗತಿಸಿದರು. ಕುಳಾಲು ಸುಭಾಷ್ಚಂದ್ರ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೃಂದಾ ಪೂಜಾರಿ ವಂದಿಸಿದರು. ಅಬ್ದುಲ್ ರಝಾಕ್ ಕುಕ್ಕಾಜೆ ನಿರೂಪಿಸಿದರು.

ನಿವೃತ್ತ ಗ್ರಂಥಪಾಲಕರಿಗೆ ಶಾಲಾ ಮಕ್ಕಳಿಂದ ಪುಷ್ಪಾರ್ಚನೆ ಮೂಲಕ ಗೌರವ



ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತದ ಎಸ್.ಎಸ್.ಪಿ.ಯು. ಕಾಲೇಜಿನಲ್ಲಿ ಸುಮಾರು 26 ವರ್ಷಗಳ ಕಾಲ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿದ್ದ ಬಾಬು ಎಚ್. ಹಾಸನಡ್ಕ ಅವರು ಶನಿವಾರ ಸೇವಾ ನಿವೃತ್ತಿ ಹೊಂದಿದ್ದು ಅವರು ಶನಿವಾರ ಕಾಲೇಜಿಗೆ ಆಗಮಿಸುವಾಗ ವಿದ್ಯಾರ್ಥಿಗಳು ಪುಷ್ಪಾರ್ಚನೆ ಮೂಲಕ ಅವರನ್ನು ಬರಮಾಡಿಕೊಂಡರು.

ತಮ್ಮ ಸೇವಾವಧಿಯ ಅಂತಿಮ ದಿನ ವಿದ್ಯಾ ಸಂಸ್ಥೆಗೆ ಗ್ರಂಥಪಾಲಕರು ಆಗಮಿಸುವಾಗ ಪ್ರೌಢ ಶಾಲಾ ವಿಭಾಗದ ಹಿರಿಯ ಸಹಶಿಕ್ಷಕ ಎಂ. ಕೃಷ್ಣ ಭಟ್ ಮತ್ತು ಕಾಲೇಜಿನ ಪ್ರಾಚಾರ್ಯ ಸೋಮಶೇಖರ್ ನಾಯಕ್ ಕಾಲೇಜಿನ ದ್ವಾರದ ಬಳಿ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ಕಾಲೇಜಿನ ವಿದ್ಯಾರ್ಥಿಗಳು ಎರಡು ಭಾಗದಲ್ಲಿ ಸಾಲಾಗಿ ನಿಂತು ಅವರಿಗೆ ಪುಷ್ಪಾರ್ಚನೆ ಮಾಡಿದರು. ಕೆಲವು ವಿದ್ಯಾರ್ಥಿಗಳು ಪಾದಸ್ಪರ್ಶ ಮಾಡಿ ಗುರು ನಮನ ಸಲ್ಲಿಸಿದರು. ಬಳಿಕ ಬಾಬು ಎಚ್. ಅವರು ಕೊನೆಯ ದಿನದ ಹಾಜರಾತಿಗೆ ಸಹಿ ಮಾಡಿದರು. ಕಾಲೇಜಿನ ಪ್ರಾಚಾರ್ಯ ಸೋಮಶೇಖರ್ ನಾಯಕ್, ಪ್ರೌಢ ಶಾಲಾ ಮುಖ್ಯ ಗುರು ನಂದಾ ಹರೀಶ್, ಹಿರಿಯ ಸಹಶಿಕ್ಷಕ ಎಂ. ಕೃಷ್ಣ ಭಟ್, ಸಾಂಸ್ಕೃತಿಕ ಸಂಘದ ಸಂಚಾಲಕಿ ರೇಖಾರಾಣಿ ಸೋಮಶೇಖರ್, ವಿದ್ಯಾರ್ಥಿ ಸರಕಾರದ ಸಂಚಾಲಕ ಜಯಪ್ರಕಾಶ್ ಆರ್., ಸ್ಟಾಫ್ ಸೆಕ್ರೆಟರಿ ಗಿರೀಶ್, ಸ್ಟೀಚ್ ಮುಖ್ಯಸ್ಥೆ ಉಪನ್ಯಾಸಕಿ ಜಯಶ್ರೀ ವಿ. ದಂಬೆಕೋಡಿ, ದೈಹಿಕ ಶಿಕ್ಷಣ ಉಪನ್ಯಾಸಕ ರಾಧಾಕೃಷ್ಣ ಚಿದ್ಗಲ್, ಉಪನ್ಯಾಸಕರಾದ ಶ್ರೀಧರ್ ಪುತ್ರನ್, ಮನೋಜ್ ಕುಮಾರ್ ಬಿ.ಎಸ್., ಜ್ಯೋತಿ ಪಿ. ರೈ, ಸವಿತಾ ಕೈಲಾಸ್, ಪ್ರವೀಣ್ ಎ., ಸೌಮ್ಯ ದಿನೇಶ್, ಶ್ರುತಿ ಅಶ್ವಥ್, ಭವ್ಯಶ್ರೀ ಕುಲ್ಕುಂದ, ಸೌಮ್ಯಕೀರ್ತಿ, ಮಾನಸಾ ಭಟ್, ಸಾಂಸ್ಕೃತಿಕ ಸಂಘದ ಸಹ ಸಂಚಾಲಕ ರತ್ನಾಕರ ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಕೆವಿಜಿ ಮೆಡಿಕಲ್ ಕಾಲೇಜಿನಿಂದ ರಾಜ್ಯಮಟ್ಟದ ವಿಶೇಷ ಕಾರ್ಯಾಗಾರ



ಸುಳ್ಯ: ಕೆ.ವಿ.ಜಿ. ಮೆಡಿಕಲ್ ಕಾಲೇಜ್ ಬೆಳ್ಳಿ ಹಬ್ಬ ವರ್ಷಾಚರನೆಯ ಪ್ರಯುಕ್ತ ಸ್ಥೂಲ ಕಾಯತೆ (ಬೊಜ್ಜು) ನಿರ್ವಹಣೆ ಹಾಗೂ ನಿವಾರಣೆ ಕುರಿತ ರಾಜ್ಯ ಮಟ್ಟದ ಕಾರ್ಯಾಗಾರ ಶನಿವಾರ ನಡೆಯಿತು.

ಮೆಡಿಕಲ್ ಕಾಲೇಜ್ ಜೀವರಸಾಯನ ಶಾಸ್ತ್ರ ವಿಭಾಗದ ನೇತೃತ್ವದಲ್ಲಿ ನಡೆದ ಕಾರ್ಯಾಗಾರವನ್ನು ಕೆ.ವಿ.ಜಿ. ಮೆಡಿಕಲ್ ಕಾಲೇಜ್ ವೈದ್ಯಕೀಯ ನಿರ್ದೇಶಕ ಹಾಗೂ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್ ಅಧ್ಯಕ್ಷ ಡಾ.ಕೆ.ವಿ. ಚಿದಾನಂದ ಹಾಗೂ ಮೆಡಿಕಲ್ ಕಾಲೇಜ್ ಪ್ರಾಂಶುಪಾಲೆ ಡಾ. ನೀಲಾಂಬಿಕೈ ನಟರಾಜನ್ ಉದ್ಘಾಟಿಸಿ, ಈ ಕಾರ್ಯಗಾರವು ಬೊಜ್ಜು ನಿರ್ವಣೆ ಮತ್ತ ನಿವಾರಣೆಯ ಕ್ಷೇತ್ರಕ್ಕೆ ಹೊಸ ಒಳನೋಟ ನೀಡುವಂತಾಗಲಿ ಎಂದು ಆಶಿಸಿದರು.

ಗಂಭೀರ ಚಿಂತನೆ ಅಗತ್ಯ

ಡಾ.ಕೆ.ವಿ. ಚಿದಾನಂದ ಮಾತನಾಡಿ, ಸ್ಥೂಲಕಾಯತೆ ಮತ್ತು ಬೊಜ್ಜು ಎಲ್ಲರ ಸಮಸ್ಯೆ. ಶ್ರೀಮಂತರಿಂದ ಹಿಡಿದು ಕಚೇರಿ ಕೆಲಸಗಾರರವರೆಗೆ ಪ್ರತಿಯೊಬ್ಬರೂ ಇದರ ನಿವಾರಣೆ ಕುರಿತು ಚಿಂತಿಸಬೇಕಾಗುತ್ತದೆ. ಆದ್ದರಿಂದ ಬೊಜ್ಜು ನಿವಾರಣೆ ಮತ್ತು ಅದು ಬಾರದಂತೆ ತಡೆಯುವ ವಿಧಾನದ ಬಗ್ಗೆ ಮಾಹಿತಿ ಹಾಗೂ ಶಿಕ್ಷಣ ಪ್ರತಿಯೊಬ್ಬರಿಗು ದೊರೆಯಬೇಕು ಹಾಗೂ ಸಮಾಜಕ್ಕೂ ಇದರ ಪ್ರಚಾರವಾಗಬೇಕಿದೆ ಎಂದರು.

ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಉಪಾಧ್ಯಕ್ಷೆ ಶೋಭಾ ಚಿದಾನಂದ ಉಪಸ್ಥಿತರಿದ್ದರು. ಜೀವರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಶಿವರಾಜ ಶಂಕರ್ ವೈ.ಎಂ. ಸ್ವಾಗತಿಸಿ, ಕಾರ್ಯದರ್ಶಿ ಡಾ. ಶ್ರುತಿ ರೈ ವಂದಿಸಿದರು. ಬಯೋಕೆಮಿಸ್ಟ್ರಿ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಪ್ರಜ್ಞಾ ಆರ್.ಎಚ್. ಮತ್ತು ಸೀನಿಯರ್ ರೆಸಿಡೆಂಟ್ ನಮಿತಾ ಎನ್. ಕಶ್ಯಪ್ ನಿರ್ವಹಿಸಿದರು. ಸಭಾ ಕಾರ್ಯಕ್ರಮದ ಬಳಿಕ ನುರಿತ ವೈದ್ಯ ಸಂಪನ್ಮೂಲ ವ್ಯಕ್ತಿಗಳಿಂದ ಸಂಜೆಯ ತನಕ ಸ್ಥೂಲ ಕಾಯತೆ ಕುರಿತು ವಿಚಾರ ಸಂಕಿರಣ ಕಾರ್ಯಾಗಾರ ನಡೆಯಿತು.



ಮುಲ್ಕಿಯ ಒಳಲಂಕೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಶ್ರೀ ಕಾಶಿ ಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿ ಉಪಸ್ಥಿತಿಯಲ್ಲಿ ಶತ ಚಂಡಿಕ ಹವನ ನಡೆಯಿತು. ಶಾಸಕ ಉಮಾನಾಥ ಕೋಟ್ಯಾನ್ ಕ್ಷೇತ್ರಕ್ಕೆ ಭೇಟಿ ನೀಡಿ ಪ್ರಸಾದ ಸ್ವೀಕರಿಸಿದರು. ಈ ಸಂದರ್ಭ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು.



2025 - 26 ಸಾಲಿನ ನಗರ ಯೋಜನೆಯಲ್ಲಿ ಬಿಡುಗಡೆಗೊಂಡ 20 ಲಕ್ಷ ರೂ. ಅನುದಾನದಲ್ಲಿ, ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಾವೂರು 15 ವಾರ್ಡ್‌ನಲ್ಲಿ ನೂತನವಾಗಿ ನಿರ್ಮಾಣವಾಗಲಿರುವ ಅಂಗನವಾಡಿಗೆ ಶಾಸಕ ಡಾ. ವೈ. ಭರತ್ ಶೆಟ್ಟಿ ಅವರು ಶಿಲಾನ್ಯಾಸ ನೆರವೇರಿಸಿದರು. ಯೋಜನಾಧಿಕಾರಿ ಶ್ವೇತಾ ಎನ್., ಮೇಲ್ವಿಚಾರಕಿ ಅನುಪಮಾ ಕೆ.ಎಸ್., ನಿಕಟಪೂರ್ವ ಕಾರ್ಪೊರೇಟರ್ ಸುಮಂಗಲ ರಾವ್, ಅಂಗನವಾಡಿ ಕಾರ್ಯಕರ್ತೆ ಪೂಜಾ, ಶಾಲಾ ಮುಖ್ಯ ಶಿಕ್ಷಕಿ ಜಯಂತಿ, ಮಹಾಶಕ್ತಿ ಕೇಂದ್ರ ಅಧ್ಯಕ್ಷ ಸಿತೇಶ್ ಕೊಂಡೆ, ವಾರ್ಡ್ ಅಧ್ಯಕ್ಷ ಅಜಿತ್ ಶೆಟ್ಟಿ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಅರ್ತಿವೊಡಲು ದೇವಸ್ಥಾನಲ್ಲಿ ಕೃಷ್ಣರಾಜ ತಂತ್ರಿ ಕುಡುಪು ಸಂದೇಶ

ಶಾಂತಿ, ನೆಮ್ಮದಿ ನೆಲೆಸಲು ದೃಢಕಲಶ ಬಹುಮುಖ್ಯ

ಮಂಗಳೂರು: ಅರ್ತಿವೊಡಲು ಶ್ರೀ ವಿಷ್ಣು ಮೂರ್ತಿ ದೇವಸ್ಥಾನ ಕೊಂಗ್ರಿಬೈಲು ಕುಂಜತ್ತಬೈಲು ಇಲ್ಲಿನ ಅರ್ತಿವೊಡಲು ಶ್ರೀ ವಿಷ್ಣುಮೂರ್ತಿ ದೇವರಿಗೆ ಶನಿವಾರ ದೃಢಕಲಶ ನಡೆಯಿತು.



ಕೃಷ್ಣರಾಜ ತಂತ್ರಿ ಕುಡುಪು ಆಶೀರ್ವಚನ ನೀಡಿ, ಬ್ರಹ್ಮಕಲಶೋತ್ಸವ ಎನ್ನುವುದು ಕ್ಷೇತ್ರದ ಆಧಿದೇವತೆಗೆ ಪರಮ ಪವಿತ್ರವಾದದ್ದು, ಅದರ ಯಶಸ್ಸಿನ ಬಳಿಕ ಶಾಂತಿ, ನೆಮ್ಮದಿ ನೆಲಸಲು ದೃಢಕಲಶ ಕೂಡ ಅತ್ಯಂತ ಮುಖ್ಯ. ಅಂತಹ ಪರಿಪೂರ್ಣ ಸೇವೆಯನ್ನು ಅರ್ತಿವೋಡಲು ವಿಷ್ಣುಮೂರ್ತಿ ದೇವರು ಪಡೆದುಕೊಂಡಿದ್ದಾರೆ. ಮುಂದಕ್ಕೆ ಈ ಕ್ಷೇತ್ರ ಉತ್ತಮ ಅಭಿವೃದ್ಧಿ ಹೊಂದಿ ಭಕ್ತರಿಗೆಲ್ಲಾ ದೇವರ ಆಶೀರ್ವಾದ ಸಿಗುವಂತಾಗಲಿ ಎಂದು ಹಾರೈಸಿದರು. ಕ್ಷೇತ್ರದ ಪ್ರಧಾನ ಅರ್ಚಕ ನಾರಾಯಣ ಮಯ್ಯ, ಕ್ಷೇತ್ರದ ಆಡಳಿತ ಮೊಕ್ತೇಸರ ಡಾ. ನರೇಶ್ ರೈ ದೇವ್ಪುಣೆಗುತ್ತು, ಬ್ರಹ್ಮಕಲಶೋತ್ಸವ ಸಮಿತಿಯಕಾರ್ಯಾಧ್ಯಕ್ಷಆಶೀಶ್ ಬಲ್ಲಾಳ್ ಕೂಳೂರುಬೀಡು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವಿಠಲ ಆಳ್ವ ಹಳೆಮೊಗರು ಇದ್ದರು. ಶಂಭು ಶೆಟ್ಟಿ ಲೆಕ್ಕಪತ್ರ ಮಂಡಿಸಿದರು. ಸಮಿತಿಯ ರಮಾನಂದ ಭಂಡಾರಿ, ರಣದೀಪ್ ಕಾಂಚನ್, ಚಂದ್ರರಾಜ್ ಶೆಟ್ಟಿ ಅಕ್ಷತಾ ತಮ್ಮ ಅನಿಸಿಕೆ ಹಂಚಿಕೊಂಡರು. ದೀಪಕ್ ಪೂಜಾರಿ ವಂದಿಸಿದರು. ಜಗದೀಶ್ ಶೆಟ್ಟಿ ಮುರ ಹಾಗೂ ಶರತ್ ಕುಮಾರ್ ಮುಂದಾಳತ್ವದಲ್ಲಿ ಸುರೇಖಾ ಶೆಟ್ಟಿ ಡಾ. ಪ್ರಿಯ ಹರೀಶ್, ಶಿಲ್ಪಾ ನವೀನ್ ಕಾರ್ಯಕ್ರಮ ನಿರೂಪಿಸಿದರು.

ಧಾರ್ಮಿಕ ಕಾರ್ಯಕ್ರಮ

ಶ್ರೀ ಕ್ಷೇತ್ರದಲ್ಲಿ ಬೆಳಗ್ಗೆ ದೇವತಾಪ್ರಾರ್ಥನೆ, ಸ್ವಸ್ತಿ ಪುಣ್ಯಾಹವಾಚನ, ಆದ್ಯಗಣಯಾಗ, ಶ್ರೀ ದೇವರಿಗೆ ಕಲಶಪ್ರತಿಷ್ಠೆ ಅಧಿವಾಸ ಹೋಮ, ಕಲಶಾಭಿಶೇಕ, ಪ್ರಸನ್ನಪೂಜೆ, 'ಧನ್ಯೋತ್ಸವ', ಮಧ್ಯಾಹ್ನ ಅನ್ನಸಂತರ್ಪಣೆ, ರಾತ್ರಿ ಶ್ರೀ ದೇವರಿಗೆ 'ರಂಗಪೂಜೆ' ನಡೆಯಿತು.

ಮರೋಳಿ ಬಳಿ ಕಾಮಗಾರಿಗೆ ಶಾಸಕ ವೇದವ್ಯಾಸ್‌ರಿಂದ ಶಿಲಾನ್ಯಾಸ

20 ಲ.ರೂ. ವೆಚ್ಚದಲ್ಲಿ ತಡೆಗೋಡೆ ಕಾಮಗಾರಿ

ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 37ನೇ ಮರೋಳಿ ವಾರ್ಡಿನ ಪಿ.ಎಲ್. ಕ್ಯಾಟರ್ಸ್ ಲೇನ್ ಮರೋಳಿ ಬಳಿ ತಡೆಗೋಡೆ ನಿರ್ಮಾಣ ಕಾಮಗಾರಿಯು 20 ಲಕ್ಷ ರೂ. ಅನುದಾನದಲ್ಲಿ ನಡೆಯಲಿದ್ದು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಗುದ್ದಲಿ ಪೂಜೆ ನಡೆಯಿತು.



ನಂತರ ಮಾತನಾಡಿದ ಶಾಸಕರು, ಮಳೆಗಾಲದಲ್ಲಿ ಈ ಪ್ರದೇಶಕ್ಕೆ ತೊಂದರೆ ಉಂಟಾಗುತ್ತಿದ್ದ ಬಗ್ಗೆ ಸ್ಥಳೀಯರು ಮಾಡಿದ ಮನವಿಯಂತೆ ಲಭ್ಯ ಅನುದಾನಗಳನ್ನು ಬಳಸಿಕೊಂಡು ಕಾಮಗಾರಿ ಕೈಗೆತ್ತಿಕೊಳ್ಳ ಲಾಗುತ್ತಿದ್ದು, ಶೀಘ್ರದಲ್ಲಿ ಪೂರ್ಣಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ಪ್ರಮುಖರಾದ ಕಿರಣ್ ಮರೋಳಿ, ಮನೋಹರ್ ಶೆಟ್ಟಿ ಕದ್ರಿ, ರುಕ್ಮಯ್ಯ, ರಾಘು, ಅರುಣ್ ಶೆಟ್ಟಿ ರಾಜೇಶ್ ಆಲಂಗಾರ್, ಮಾಲತಿ, ಶರತ್, ಸುಲೋಚನಾ, ವತ್ಸಲಾ, ವಾಲ್ಟರ್ ಪಿಂಟೊ, ಶೇಖರ್ ಪೂಜಾರಿ, ಸ್ಟೆಲ್ಲಾ ಲೋಬೊ, ಸ್ಟೀವನ್ ಲೋಬೊ, ಜಗದೀಶ್ ಸಾಲ್ಡಾನ, ರೇಷ್ಮಾ ಪಿಂಟೊ, ಬೆನೆಡಿಕ್ಟ್ ಮಸ್ಕರೇನ್, ವಾರ್ಡಿನ ಪ್ರಮುಖರು, ಕಾರ್ಯಕರ್ತರು, ಪದಾಧಿಕಾರಿಗಳು ಹಾಗೂ ಸ್ಥಳೀಯ ನಿವಾಸಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸುತ್ತ ಮುತ್ತ

ಕೇಂದ್ರ ಸರ್ಕಾರದ ವಿವಿಧ ಸೌಲಭ್ಯ ಪಡೆಯಲು ರೈತ ಐಡಿ ಮಾಡಿಸಿ

ಬಂಟ್ವಾಳ: ಕೇಂದ್ರ ಸರ್ಕಾರದ ಬರಪರಿಹಾರ, ಬೆಳೆವಿಮೆ ಹಾಗೂ ಪಿ.ಎಂ. ಕಿಸಾನ್ ಯೋಜನೆಯಡಿ ಸೌಲಭ್ಯಗಳನ್ನು ಪಡೆಯಲು ರಾಜ್ಯದ 'ಫ್ರೂಟ್ಸ್' ಮಾದರಿಯಂತೆಯೇ ಕೇಂದ್ರ ಸರ್ಕಾರವು ಕೇಂದ್ರ ರೈತ ಐಡಿ' ವಿತರಿಸುವ ಪ್ರಕ್ರಿಯೆಯನ್ನು ಆರಂಭಿಸಿದೆ.
ಬಂಟ್ವಾಳ ತಾಲೂಕಿನಲ್ಲಿ ಒಟ್ಟು ಎಫ್.ಐ.ಡಿ. ಹೊಂದಿರುವ 69,755 ರೈತರ ಪೈಕಿ ಇನ್ನು 14,546 ರೈತರು ನೋಂದಣಿಗೆ ಬಾಕಿ ಉಳಿದಿದ್ದು, ರೈತರು ಮೊದಲು ಇ-ಕೆವೈಸಿ ಮಾಡಿಸಿದ ಬಳಿಕ ವಿದ್ಯುನ್ಮಾನ ಸಹಮತಿ ಪತ್ರ ನೀಡುವುದು ಕಡ್ಡಾಯ. ಇದರ ನಂತರ ಕೇಂದ್ರದ ರೈತ ಐಡಿ ಸೃಜನೆಯಾಗಲಿದೆ ಎಂದು ಬಂಟ್ವಾಳ ಕೃಷಿ ಇಲಾಖೆಯ ಪ್ರಕಟಣೆ ತಿಳಿಸಿದೆ.
ಇನ್ನು ಕೆಲವೇ ದಿನಗಳಲ್ಲಿ ಈ ನೋಂದಣಿ ಪ್ರಕ್ರಿಯೆಯು ಮುಕ್ತಾಯಗೊಳ್ಳಲಿದ್ದು, ಕೃಷಿ ಜಮೀನು ಹೊಂದಿರುವ ತಾಲೂಕಿನ ಎಲ್ಲಾ ರೈತರು ಕೇಂದ್ರ ರೈತ ಐಡಿ ಮಾಡಿಸಿಕೊಳ್ಳುವುದು ಕಡ್ಡಾಯ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬೇಕಾಗುವ ದಾಖಲಾತಿಗಳು

ಪಹಣಿ ಪತ್ರ (ಆರ್ ಟಿ ಸಿ, ರೈತರ ಆಧಾರ್ ಕಾರ್ಡ್, ಆಧಾರ್ ಕಾರ್ಡ್‌ಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆ, ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ ಮಾದಲಾದ ದಾಖಲೆಗಳು ಬೇಕಾಗಿದೆ.

ನೋಂದಣಿ ಎಲ್ಲಿ ಮಾಡಿಸಬೇಕು?

ರೈತರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ಗ್ರಾಮ ವನ್ ಕೇಂದ್ರ, ಕಂದಾಯ ಅಥವಾ ತೋಟಗಾರಿಕೆ ಇಲಾಖೆಯ ಕಚೇರಿ ಸಂಪರ್ಕಿಸಿ ಅಗತ್ಯ ದಾಖಲೆಗಳೊಂದಿಗೆ ಪ್ರಕ್ರಿಯೆ ಪೂರ್ಣಗೊಳಿಸಬಹುದು. ಕೇಂದ್ರ ಐಡಿ ಮಾಡಿಸಲು ಬಾಕಿ ಇರುವ ಎಲ್ಲಾ ರೈತ ಬಾಂಧವರು ಕೂಡಲೇ ಈ ಅವಕಾಶವನ್ನು ಬಳಸಿಕೊಳ್ಳುವಂತೆ ಕೃಷಿ ಇಲಾಖೆಯ ಪ್ರಕಟಣೆ ತಿಳಿಸಿದೆ.

ಶಾಸಕ ಪೊನ್ನಣ್ಣಗೆ ಸಚಿವ ಸ್ಥಾನಕ್ಕೆ ಒತ್ತಾಯ

ಪೊನ್ನಂಪೇಟೆ: ಕೊಡಗು ಜಿಲ್ಲೆಯ ವೀರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರಿಗೆ ರಾಜ್ಯ ಸರ್ಕಾರದ ಹೊಸ ಸಚಿವ ಸಂಪುಟದಲ್ಲಿ ಸಂಪುಟ ದರ್ಜೆಯ ಸಚಿವ ಸ್ಥಾನವನ್ನು ನೀಡಬೇಕೆಂದು ಕೊಡವ ಜನಾಂಗದ ಪ್ರಮುಖ ಪ್ರಾತಿನಿಧಿಕ ಸಂಸ್ಥೆ ಜಬ್ಬೂಮಿ ಚಾರಿಟೇಬಲ್ ಟ್ರಸ್ಟ್ ಒತ್ತಾಯಿಸಿದೆ.
ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿರುವ ಸಂಘಟನೆ ಪ್ರಮುಖರು, ಪಕ್ಷಬೇಧ ಮರೆತು ಎಲ್ಲಾ ಧರ್ಮ ಜಾತಿ ಜನಾಂಗಕ್ಕೂ ನ್ಯಾಯಯುತವಾಗಿ ಅವರ ಪ್ರತಿನಿಧಿಯಾಗಿ ಕ್ಷೇತ್ರದಲ್ಲಿ ಎ. ಎಸ್. ಪೊನ್ನಣ್ಣ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೂ ಮೊದಲು ಅವರು ಸರ್ಕಾರದ ಹಲವಾರು ಜವಾಬ್ದಾರಿಯನ್ನು ನಿಭಾಯಿಸಿದ್ದು ಸಚಿವ ಸಂಪುಟದಲ್ಲಿ ಸಂಪುಟ ದರ್ಜೆಯ ಸ್ಥಾನಮಾನ ನೀಡಿದರೆ ಉತ್ತಮವಾಗಿ ನಿರ್ವಹಿಸುವ ಎಲ್ಲಾ ಅರ್ಹತೆ ಪೊನ್ನಣ್ಣ ಅವರು ಹೊಂದಿದ್ದಾರೆ. ಪೊನ್ನಣ್ಣ ಅವರಿಗೆ ಸಚಿವ ಸ್ಥಾನವನ್ನು ನೀಡುವ ಮೂಲಕ ಅತಿ ಸೂಕ್ಷ್ಮ ಕೊಡವ ಜನಾಂಗಕ್ಕೆ ಈ ಮೂಲಕ ಸಚಿವ ಸ್ಥಾನ ನೀಡಿದಂತೆ ಹಾಗೂ ಪ್ರಾದೇಶಿಕವಾಗಿಯೂ ಜಿಲ್ಲೆಯನ್ನು ಪರಿಗಣಿಸಿದಂತೆ ಆಗುತ್ತದೆ ಎಂದು ಜಂಟಿ ಹೇಳಿಕೆಯಲ್ಲಿ ಜಬ್ಬೂಮಿ ಚಾರಿಟೇಬಲ್ ಟ್ರಸ್ಟ್‌ನ ಸಂಚಾಲಕ ಚೊಟ್ಟೆಕ್'ಮಾಡ ರಾಜೀವ್ ಬೋಪಯ್ಯ, ಸಹ ಸಂಚಾಲಕ ಅಚ್ಚಾಂಡಿರ ಕುಶಾಲಪ್ಪ, ಕಾರ್ಯದರ್ಶಿ ಅಣ್ಣೀರ ಹರೀಶ್ ಮಾದಪ್ಪ, ಚೋಕಂಡ ಸೂರಜ್, ಖಜಾಂಚಿ ಜಮ್ಮಡ ಗಣೇಶ್ ಅಯ್ಯಣ್ಣ ಅವರು ಒತ್ತಾಯಿಸಿದ್ದಾರೆ.

ಸಸಿಹಿತ್ಲು: ವಿಶ್ವ ಋತು ಚಕ್ರ ದಿನಾಚರಣೆ



ಮುಲ್ಕಿ: ಕೆಮ್ರಾಲ್ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಶ್ರೀದೇವಿ ನರ್ಸಿಂಗ್ ಕಾಲೇಜು ಸಹಯೋಗದಲ್ಲಿ ಸಸಿಹಿತ್ಲು ಆಯುಷ್ಮಾನ್ ಆರೋಗ್ಯ ಕೇಂದ್ರದಲ್ಲಿ ಗುರುವಾರ ವಿಶ್ವ ಋತು ಚಕ್ರ ದಿನಾಚರಣೆ ನಡೆಯಿತು. ಪೌಷ್ಟಿಕ ಆಹಾರ, ಆಹಾರ ಪದ್ಧತಿ,ಮುಟ್ಟಿನ ಸಮಯದಲ್ಲಿ ಅನುಸರಿಸುವ ಕ್ರಮಗಳು, ಪರಿಸರ ಸ್ನೇಹಿ ಮುಟ್ಟಿನ ಉತ್ಪನ್ನ ಗಳ ಬಗ್ಗೆ ಮಾಹಿತಿ ನೀಡಲಾಯಿತು. ಈ ಸಂದರ್ಭ ಪ್ರಾಥಮಿಕ ಆರೋಗ್ಯ ಕೇಂದ್ರದ ಸುರಕ್ಷಾಧಿಕಾರಿ ಮಾರ್ಗರೆಟ್ ಸುದರ್ಶಿನಿ , ಸಹಾಯಕ ಆರೋಗ್ಯ ಅಧಿಕಾರಿ ಸುನಿಲ್ , ಶ್ರೀದೇವಿ ನರ್ಸಿಂಗ್ ಕಾಲೇಜು ಉಪನ್ಯಾಸಕ ಶ್ರೀನಿವಾಸ್ ಕಮ್ಯೂನಿಟಿ ಹೆಲ್ತ್ ವಿಭಾಗ ಉಪಸ್ಥಿತರಿದ್ದರು. ಸಾಂಕ್ರಾಮಿಕ ರೋಗ ತಪಾಸಣಾ ಶಿಬಿರವನ್ನು ಸಸಿಹಿತ್ಲು ಭಗವತಿ ದೇವಳ ಆವರಣದಲ್ಲಿ ನಡೆಸಲಾಯಿತು.

ಶಾಸಕ ಅಶೋಕ್ ರೈ ನೇತೃತ್ವದಲ್ಲಿ ಸ್ಥಳ ಪರಿಶೀಲನೆ | ಕಿಂಡಿ ಅಣೆಕಟ್ಟು ನಿರ್ಮಾಣಕ್ಕೆ ಸಿದ್ಧತೆ

ವೀರಮಂಗಲ ದೇವರ ಅವಭೃತ ಪ್ರದೇಶ ಅಭಿವೃದ್ಧಿಗೆ ಯೋಜನೆ

ಪುತ್ತೂರು: ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ದೇವರು ಅವಭೃತಕ್ಕೆ ತೆರಳುವ ಪುಣ್ಯಸ್ಥಳವಾಗಿರುವ ವೀರಮಂಗಲ ಕುಮಾರಧಾರ ನದಿಯ ಕಿನಾರೆಯನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸುವ ಜತೆಗೆ ಸ್ಥಳೀಯ ಕೃಷಿಕರನ್ನು ವಿಶ್ವಾಸಕ್ಕೆ ಪಡೆದು ರಸ್ತೆ ಅಗಲೀಕರಣದ ಕಾರ್ಯ ನಿರ್ವಹಿಸಲಾಗುವುದು ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹೇಳಿದ್ದಾರೆ.
ಅವರು ವೀರಮಂಗಲದಲ್ಲಿನ ಅವಭೃತದ ಜಾಗವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಸ್ಥಳ ಪರಿಶೀಲನೆ ನಡೆಸಿ ಮಾಧ್ಯಮಗಳ ಜತೆ ಮಾತನಾಡಿದರು.

ರೂ.200 ಕೋಟಿಗಳ ಪ್ರಸ್ತಾವನೆ

ಈ ಪ್ರದೇಶದಲ್ಲಿ ಸುಮಾರು 18 ಎಕರೆ ಸರಕಾರಿ ಜಾಗ ಇದ್ದು, ಹೀಗಾಗಿ ಸುಮಾರು 10 ಎಕರೆಯಷ್ಟು ಜಾಗದಲ್ಲಿ ವಾಹನ ನಿಲುಗಡೆ, ಹೆಚ್ಚಿನ ಸಂಖ್ಯೆಯ ಶೌಚಾಲಯಗಳು, ಸ್ನಾನ ಗೃಹ, 20 ಅಡಿ ಅಗಲದ ರಸ್ತೆ ನಿರ್ಮಾಣವಾಗಬೇಕಿದೆ. ಈ ಪ್ರದೇಶದಲ್ಲಿ ನದಿಯಲ್ಲಿ ನೀರು ನಿಲ್ಲಿಸುವ ದೃಷ್ಟಿಯಿಂದ ಕಟಾರದಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣಕ್ಕೆ ರೂ.200 ಕೋಟಿಗಳ ಪ್ರಸ್ತಾವನೆ ಇದ್ದು, ತಡೆಗೋಡೆ ಕೂಡ ನಿರ್ಮಾಣವಾಗಬೇಕಿದೆ ಎಂದರು.



ಸಾಧಕ-ಬಾಧಕಗಳ ಚರ್ಚಿಸಲಾಗುವುದು

ಸ್ಥಳೀಯ ಕೃಷಿಕರನ್ನು ವಿಶ್ವಾಸಕ್ಕೆ ಪಡೆದು ರಸ್ತೆ ಅಗಲೀಕರಣ, ನದಿ ಪರಂಬೋಕುಗಳನ್ನು ತೆರವು ಮಾಡಿ ಗ್ರಾಮದ ಜನರಲ್ಲಿ ಸಾಧಕ-ಬಾಧಕಗಳ ಕುರಿತು ಚರ್ಚಿಸಿ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದರು.
ಈ ವೇಳೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ಪುತ್ತೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಾದರಿಯಾಗಿ ಅಭಿವೃದ್ಧಿ ಮಾಡಲಾಗುವುದು

ದೇವರು ಪುಣ್ಯ ಸ್ನಾನಕ್ಕೆ ಬರುವ ಸಂದರ್ಭ ವೀರಮಂಗಲದಲ್ಲಿ ಸುಮಾರು 25 ಸಾವಿರದಷ್ಟು ಭಕ್ತರು ಸೇರುತ್ತಿದ್ದು, ಮುಂದೆ ಪ್ರತಿವರ್ಷವೂ ಭಕ್ತರ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತದೆ. ಸಾಕಷ್ಟು ದೂರ ದೇವರು ಪುಣ್ಯ ಸ್ನಾನಕ್ಕೆ ಬರುವ ಅಪರೂಪದ ಸ್ಥಳವಾಗಿದ್ದು, ನದಿಯಲ್ಲಿ ದೇವರ ಜಳಕದ ಬಳಿಕ ಭಕ್ತರು ಸ್ನಾನ ಮಾಡುತ್ತಾರೆ. ಹೀಗಾಗಿ ಈ ಪುಣ್ಯ ಜಾಗವನ್ನು ಮಾದರಿಯಾಗಿ ಅಭಿವೃದ್ಧಿ ಮಾಡಬೇಕು ಎಂಬ ಯೋಚನೆ ಇದೆ ಎಂದು ಶಾಸಕರ ಅಶೋಕ್ ರೈ ಹೇಳಿದರು.

ಸಮಗ್ರ ಅಭಿವೃದ್ಧಿ

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಕೆಲವೊಂದು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ದೇವಳಕ್ಕೆ ಸೇರಿದ ಜಾಗ ಸ್ವಾಧೀನಪಡಿಸಿಕೊಳ್ಳುವ ಕಾರ್ಯ ನಡೆಸಲಾಗಿದೆ. ಇದೀಗ ದೇವರು ಅವಭೃತಕ್ಕೆ ತೆರಳುವ ವೀರಮಂಗಲ ಕುಮಾರಧಾರ ನದಿಯ ಕಿನಾರೆಯನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಒಟ್ಟಿನಲ್ಲಿ ಶ್ರೀ ಮಹಾಲಿಂಗೇಶ್ವರ ದೇವಳವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದು ನನ್ನ ಆಶಯವಾಗಿದೆ.
● ಅಶೋಕ್ ಕುಮಾರ್ , ಶಾಸಕರು

ದೇರಳಕಟ್ಟೆ ಕೆ.ಎಸ್. ಹೆಗ್ಡೆ ಆಸ್ಪತ್ರೆಯಲ್ಲಿ ಆಯೋಜನೆ

ಜೂ.4ರಿಂದ 'ವಿಶ್ವ ಶಿಶು ಶಸ್ತ್ರಚಿಕಿತ್ಸಾ' ಸಪ್ತಾಹ

ಉಳ್ಳಾಲ: ಮಕ್ಕಳಲ್ಲಿ ಕಂಡುಬರುವ ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಸಮಯೋಚಿತ ಶಿಶು ಶಸ್ತ್ರಚಿಕಿತ್ಸಾ ಆರೈಕೆಯ ಮಹತ್ವದ ಕುರಿತು ತಿಳಿ ಹೇಳಲು ವಿಶ್ವದಾದ್ಯಂತ 'ವಿಶ್ವ ಶಿಶು ಶಸ್ತ್ರಚಿಕಿತ್ಸಾ ಸಪ್ತಾಹ'ವನ್ನು ಆಚರಿಸಲಾಗುತ್ತಿದ್ದು, ಈ ನಿಟ್ಟಿನಲ್ಲಿ ದೇರಳಕಟ್ಟೆ ಕೆ.ಎಸ್.ಹೆಗ್ಡೆ ಆಸ್ಪತ್ರೆಯಲ್ಲಿ ಶಿಶು ಶಸ್ತ್ರಚಿಕಿತ್ಸಾ ವಿಭಾಗದ ವತಿಯಿಂದ ಜೂ. 4ರಿಂದ 10ರವರೆಗೆ 'ವಿಶ್ವ ಶಿಶು ಶಸ್ತ್ರಚಿಕಿತ್ಸಾ ಸಪ್ತಾಹ'ವನ್ನು ಹಮ್ಮಿಕೊಳ್ಳಲಾಗಿದೆ.

ವಿವಿಧ ಜಾಗೃತಿ ಕಾರ್ಯಕ್ರಮ

ಈ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಪ್ರತಿ ಮಗುವಿಗೂ ಸುಲಭವಾಗಿ ಲಭ್ಯವಾಗುವ, ಕೈಗೆಟುಕುವ ವೆಚ್ಚದ ಹಾಗೂ ಗುಣಮಟ್ಟದ ಶಸ್ತ್ರಚಿಕಿತ್ಸಾ ಆರೈಕೆ ದೊರೆಯಬೇಕೆಂಬ ಆಶಯವನ್ನು ಈ ಆಚರಣೆಯಲ್ಲಿ ಇರಿಸಲಾಗಿದೆ. ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಹಲವು ಜಾಗೃತಿ ಕಾರ್ಯಕ್ರಮಗಳು ನಡೆಯಲಿವೆ.
ಶಿಶು ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಮೂವರು ತಜ್ಞ ಶಿಶು ಶಸ್ತ್ರಚಿಕಿತ್ಸಕರಾದ ಡಾ.ಸಂದೀಪ್ ಬಿ. ರೈ (ಪ್ರೊಫೆಸರ್ ಹಾಗೂ ಕೆ.ಎಸ್. ಹೆಗ್ಡೆ ವೈದ್ಯಕೀಯ ಅಕಾಡೆಮಿಯ ಡೀನ್), ಡಾ.ಔರೀನ್ ಡಿಕುನ್ಹಾ (ಅಸೋಸಿಯೇಟ್ ಪ್ರೊಫೆಸರ್ ಹಾಗೂ ವಿಭಾಗದ ಪ್ರಭಾರ ಮುಖ್ಯಸ್ಥರು) ಮತ್ತು ಡಾ.ಕೇಶವ ಪವನ್ (ಅಸಿಸ್ಟೆಂಟ್ ಪ್ರೊಫೆಸರ್)ಕಾರ್ಯ ನಿರ್ವಹಿಸುತ್ತಿದ್ದಾರೆ.

ಶೇ.50 ರಿಯಾಯಿತಿ

ವಿಶ್ವ ಶಿಶು ಶಸ್ತ್ರಚಿಕಿತ್ಸಾ ಸಪ್ತಾಹದ ಅಂಗವಾಗಿ, ಈ ಅವಧಿಯಲ್ಲಿ ಹೊರರೋಗಿ ವಿಭಾಗಕ್ಕೆ ಭೇಟಿ ನೀಡುವ ಮಕ್ಕಳಿಗೆ ಶಿಶು ಶಸ್ತ್ರಚಿಕಿತ್ಸಾ ವಿಭಾಗದ ವತಿಯಿಂದ ನಡೆಸುವ ಶಸ್ತ್ರಚಿಕಿತ್ಸೆಗಳ ಮೇಲೆ 50% ರಿಯಾಯಿತಿ ನೀಡಲಾಗುವುದು ಎಂದು ಆಸ್ಪತ್ರೆಯ ಆಡಳಿತ ವರ್ಗ ತಿಳಿಸಿದೆ.

ಅರಿವು ಮೂಡಿಸುವ ಉದ್ದೇಶ

'ಪ್ರತಿ ಮಗುವಿಗೂ ಸುರಕ್ಷಿತ ಶಸ್ತ್ರಚಿಕಿತ್ಸೆ' ಎಂಬುದು ಈ ವರ್ಷದ ಆಚರಣೆಯ ಧ್ಯೇಯವಾಕ್ಯವಾಗಿದೆ. ಈ ಹಿನ್ನೆಲೆಯಲ್ಲಿ ಶಿಶು ಶಸ್ತ್ರಚಿಕಿತ್ಸೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶವನ್ನು ವಿಭಾಗದ ವೈದ್ಯರು ಹೊಂದಿದ್ದಾರೆ.

ವಿಶೇಷ ವೈದ್ಯಕೀಯ ವಿಭಾಗ

ಶಿಶು ಶಸ್ತ್ರಚಿಕಿತ್ಸೆ ಎಂಬುದು ನವಜಾತ ಶಿಶುಗಳಿಂದ ಹಿಡಿದು ಹದಿಹರೆಯದ ಮಕ್ಕಳವರೆಗೆ ಉಂಟಾಗುವ ವಿವಿಧ ಕಾಯಿಲೆಗಳ ರೋಗನಿರ್ಣಯ, ಶಸ್ತ್ರಚಿಕಿತ್ಸಾ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಯ ನಂತರದ ಆರೈಕೆ ಒಳಗೊಂಡಿರುವ ವಿಶೇಷ ವೈದ್ಯಕೀಯ ವಿಭಾಗವಾಗಿದೆ. ಮಕ್ಕಳು ವಯಸ್ಕರಂತಲ್ಲ, ಮಕ್ಕಳ ದೈಹಿಕ ಬೆಳವಣಿಗೆ, ದೇಹದ ಕಾರ್ಯವೈಖರಿ ಹಾಗೂ ಅವರ ವಿಶೇಷ ಶಸ್ತ್ರಚಿಕಿತ್ಸಾ ಅಗತ್ಯ ಅರ್ಥಮಾಡಿಕೊಂಡಿರುವ ವೈದ್ಯರಿಂದಲೇ ಮಕ್ಕಳ ಶಸ್ತ್ರಚಿಕಿತ್ಸೆ ನಡೆಸುವುದು ಅತ್ಯುತ್ತಮ. ಆದುದರಿಂದ ಮಕ್ಕಳಿಗೆ ನಡೆಸುವ ಶಸ್ತ್ರಚಿಕಿತ್ಸೆಗಳನ್ನು ಶಿಶುಶಸ್ತ್ರಚಿಕಿತ್ಸಾ ತಜ್ಞರು (ನೆರವೇರಿಸಿದಾಗ ಅತ್ಯುತ್ತಮ ಫಲಿತಾಂಶಗಳನ್ನು ಪಡೆಯಬಹುದು.

ವಿವಿಧ ಸ್ಪರ್ಧೆ

ಈ ಸಂದೇಶ ವ್ಯಾಪಕವಾಗಿ ತಲುಪಿಸುವ ಉದ್ದೇಶದಿಂದ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಸ್ಪರ್ಧೆ ನಡೆಸಲಾಗುತ್ತಿದ್ದು, ನಿಟ್ಟೆ ವಿವಿ ಎಲ್ಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಮುಕ್ತವಾಗಿರುವ ಪೋಸ್ಟರ್ ಸ್ಪರ್ಧೆಯನ್ನೂ ಆಯೋಜಿಸಲಾಗಿದೆ.

ಸಾಂಸ್ಕೃತಿ ಕಾರ್ಯಕ್ರಮ

ಆಚರಣೆಯ ಕೊನೆಯ ದಿನ, ಶಿಶು ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ಪಡೆದ ಹಳೆಯ ರೋಗಿಗಳು ಹಾಗೂ ಅವರ ಪೋಷಕರಿಗಾಗಿ ಮನರಂಜನಾ, ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರ ನಂತರ ಈ ವಿಶೇಷ ಸಂದರ್ಭ ಸ್ಮರಿಸುವ 'ಔಪಚಾರಿಕ ಸಮಾರಂಭ' ನಡೆಯಲಿದೆ.

ಶಿರ್ವ ಮಣಿಪುರ ರೋಟರಿ ಸಂಸ್ಥೆಗಳ ಅಂತರ್‌ಜಿಲ್ಲಾ ಸಂಯುಕ್ತ ಸಭೆ

ರೋಟರಿಯ ಹಲವು ಸೇವಾ ಯೋಜನೆ ಶ್ಲಾಘನೀಯ

ಶಿರ್ವ: ಸೇವಾಸಕ್ತ, ಸಮಾನ ಮನೋಭಾವನೆಯುಳ್ಳ, ತಮ್ಮ ವೃತ್ತಿಯನ್ನೇ ಸೇವೆ ಎಂದು ಭಾವಿಸಿ, ಸೇವಾದರ್ಶ ಮೌಲ್ಯಗಳನ್ನು ರೂಢಿಸಿಕೊಂಡ ವ್ಯಕ್ತಿಗಳ ಸಾಮೂಹಿಕ ಸಂಘಟನೆಯೊಂದಿಗೆ ರೋಟರಿ ಸಂಸ್ಥೆ ಆರಂಭಗೊಂಡಿದೆ. ವೃತ್ತಿ ಆಧಾರಿತ ಸದಸ್ಯತನದಿಂದ ವಿಶ್ವವ್ಯಾಪಿಯಾಗಿ ಬೆಳೆದ ಸೇವಾ ಸಂಸ್ಥೆಯೇ ಅಂತಾರಾಷ್ಟ್ರೀಯ ರೋಟರಿ ಎಂದು ರೋಟರಿ ಇದರ ಮಾಜಿ ಸಹಾಯಕ ಗವರ್ನರ್ ಜೊಸ್ಸಿ ಪಿಂಟೊ ಕಿನ್ನಿಗೋಳಿ ಹೇಳಿದ್ದಾರೆ.
ಅವರು ಶುಕ್ರವಾರ ಬಂಟಕಲ್ಲು ರೋಟರಿ ಭವನದಲ್ಲಿ ಶಿರ್ವ ರೋಟರಿ ನೇತೃತ್ವದಲ್ಲಿ ಜರಗಿದ ಅ.ರೋ.ಜಿಲ್ಲೆ 3181 ಇದರ ಕಿನ್ನಿಗೋಳಿ ರೋಟರಿ ಮತ್ತು ಅ.ರೊ.ಜಿಲ್ಲೆ 3182 ಇದರ ಶಿರ್ವ ಮಣಿಪುರ ರೋಟರಿ ಸಂಸ್ಥೆಗಳ 'ಅಂತರ್ಜಿಲ್ಲಾ ಸಂಯುಕ್ತ ಸಭೆ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.
ಪೋಲಿಯೋ ಮುಕ್ತ ವಿಶ್ವದ ನಿರ್ಮಾಣದಲ್ಲಿ ಹಾಗೂ ಪ್ರಕೃತಿ ವಿಕೋಪ, ಮಾರಕ ಸಾಂಕ್ರಾಮಿಕ ರೋಗಗಳು, ಶಿಕ್ಷಣ, ಆರೋಗ್ಯ, ಹಸಿವು, ಮಾನವೀಯತೆಯ ನೆಲೆಯಲ್ಲಿ ರೋಟರಿ ಪ್ರತಿಷ್ಠಾನದಿಂದ ವಿಶ್ವವ್ಯಾಪಿಯಾಗಿ ನೂರಾರು ಸೇವಾ ಯೋಜನೆಗಳು ನಡೆದಿವೆ ಎಂದರು.
ವಲಯ 5ರ ಸಹಾಯಕ ಗವರ್ನರ್ ವಿಘ್ನೇಶ್ ಶೆಣೈ ಮಾತನಾಡಿದರು.
ಕಿನ್ನಿಗೋಳಿ ರೋಟರಿ ಅಧ್ಯಕ್ಷ ಸಾಯಿನಾಥ್ ಶೆಟ್ಟಿ, ಮಣಿಪುರ ರೋಟರಿ ಅಧ್ಯಕ್ಷ ರಾಜೇಶ್ ನಾಯ್ಕ್, ವಲಯ ಸೇನಾನಿ ನಾಗರಾಜ ಆಚಾರ್ಯ ಮಾತನಾಡಿದರು. ಕಾರ್ಯದರ್ಶಿ ಸದಾಶಿವ ನಾಯಕ್ ಕಿನ್ನಿಗೋಳಿ, ಗಿಲ್ಬರ್ಟ್ ಡಿಸೋಜ ಮಣಿಪುರ ವೇದಿಕೆಯಲ್ಲಿದ್ದರು. ಕಾರ್ಯಕ್ರಮದಲ್ಲಿ ಮಾಜಿ ಸಹಾಯಕ ಗವರ್ನರ್‌ಗಳಾದ ಶರತ್ ಶೆಟ್ಟಿ ಕಿನ್ನಿಗೋಳಿ, ಬಿ.ಪುಂಡಲೀಕ ಮರಾಠೆ ಶಿರ್ವ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿರ್ವ ರೋಟರಿ ಅಧ್ಯಕ್ಷ ವಿಲಿಯಮ್ ಮಚಾದೊ ವಹಿಸಿ ಪ್ರಸ್ತಾವನೆಗೈದು, ಸ್ವಾಗತಿಸಿದರು. ಶಿರ್ವ ರೋಟರಿ ಕಾರ್ಯದರ್ಶಿ ಹೊನ್ನಯ್ಯ ಶೆಟ್ಟಿಗಾರ್ ವಂದಿಸಿದರು. ಪೂರ್ವಾಧ್ಯಕ್ಷ ಡಾ.ವಿಟ್ಠಲ್ ನಾಯಕ್ ಕಾರ್ಯಕ್ರಮ ನಿರೂಪಿಸಿದರು. ಸಾರ್ಜಂಟ್ ರಫಾಯಲ್ ಮಥಾಯಸ್, ವಿಷ್ಣುಮೂರ್ತಿ ಸರಳಾಯ ಸಹಕರಿಸಿದರು.



ಸೇವಾ ಸದಸ್ಯರೇ ರೋಟರಿ ಆಸ್ತಿ

ಸಮಯ ಮತ್ತು ಸಂಪತ್ತನ್ನು ಸಮಾಜಸೇವೆಗೆ ನೀಡುವ ಮನೋಭಾವನೆಯ ಸದಸ್ಯರೇ ರೋಟರಿಯ ಆಸ್ತಿ. ಸದಸ್ಯರ ಒಗ್ಗಟ್ಟು ಮತ್ತು ಕ್ರಿಯಾಶೀಲತೆಯಿಂದ ಯೋಜಿತ ಕಾರ್ಯಗಳು ಯಶಸ್ವಿಯಾಗುತ್ತವೆ. ಜಿಲ್ಲೆಯ ಹಿರಿಯ ಸಂಸ್ಥೆಯಲ್ಲಿ ಒಂದಾದ ಶಿರ್ವ ರೋಟರಿಯ ಸೇವಾ ಕೊಡುಗೆ ಗಳು ಅನನ್ಯ.
● ವಿಘ್ನೇಶ್ ಶೆಣೈ

ಅರಣ್ಯ ಇಲಾಖೆಯಿಂದ ಮಾನವ-ವನ್ಯಜೀವಿ ಸಂಘರ್ಷ ಉಪಶಮನಕ್ಕೆ ಜನಜಾಗೃತಿ ಕಾರ್ಯಾಗಾರ



ಮಡಿಕೇರಿ: ಅರಣ್ಯ ಇಲಾಖೆ ವತಿಯಿಂದ ಮಾನವ-ವನ್ಯಜೀವಿಸಂಘರ್ಷ ಉಪಶಮನ ಕುರಿತ ಜನ ಜಾಗೃತಿ ಕಾರ್ಯಾಗಾರ ತಿತಿಮತಿ ವಲಯದ ವತಿಯಿಂದ ಚೆನ್ನಂಗಿ ಶಾಖಾ ವ್ಯಾಪ್ತಿಯ ಮಾಲ್ದಾರೆ ಗ್ರಾ.ಪಂ. ವ್ಯಾಪ್ತಿಯ ಬಾಡಗ ಬಾಣಂಗಾಲ ಹಾಗೂ ಮಾಲ್ದಾರೆ ಗ್ರಾಮಗಳಲ್ಲಿ ನಡೆಯಿತು.

ಅಹವಾಲು ಮಂಡನೆ

ಕಾರ್ಯಾಗಾರದಲ್ಲಿ ಮತ ಪೈಸಾರಿ, ಬಜೆಗೊಲ್ಲಿ, ಬಾಣಂಗಾಲ, ಹುಂಡಿ, ಮಾರ್ಗೊಲ್ಲಿ ಹಾಗೂ ಮಾಲ್ದಾರೆ ಗ್ರಾಮದ ರೈತರು ಮತ್ತು ಗ್ರಾಮಸ್ಥರು ಭಾಗವಹಿಸಿ, ವನ್ಯಜೀವಿಗಳಿಂದ ಉಂಟಾಗುತ್ತಿರುವ ಸಮಸ್ಯೆಗಳು ಹಾಗೂ ಕೃಷಿಗೆ ಆಗುತ್ತಿರುವ ಹಾನಿಗಳ ಬಗ್ಗೆ ಅಹವಾಲು ಮಂಡಿಸಿದರು.
ಈ ಸಂದರ್ಭ ಅರಣ್ಯ ಇಲಾಖೆ ಅಧಿಕಾರಿಗಳು ವನ್ಯಜೀವಿ ಸಂಘರ್ಷ ತಡೆಗಟ್ಟಲು ಇಲಾಖೆಯಿಂದ ಕೈಗೊಳ್ಳಲಾಗುತ್ತಿರುವ ಮುಂಜಾಗ್ರತಾ ಕ್ರಮ , ಸುರಕ್ಷತಾ ವಿಧಾನಗಳು, ಜನರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಗ್ರಾಮಸ್ಥರ ಸಹಕಾರ ಅಗತ್ಯ

ಅಲ್ಲದೆ, ಮಾನವ-ವನ್ಯಜೀವಿ ಸಂಘರ್ಷ ಪರಿಣಾಮಕಾರಿಯಾಗಿ ಕಡಿಮೆ ಮಾಡಲು ಗ್ರಾಮಸ್ಥರು ಇಲಾಖೆಯೊಂದಿಗೆ ಕೈಜೋಡಿಸಿ ಸಹಕರಿಸುವಂತೆ ಮನವಿ ಮಾಡಿದರು.
ವೀರಾಜಪೇಟೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಎಚ್. ಜಗನ್ನಾಥ್ ಅವರ ನಿರ್ದೇಶನದಡಿ, ಸಹಾಯಕ ಅರಣ್ಯ ಸಂರಕ್ಷಣಾ ಧಿಕಾರಿ ಮಂಜುನಾಥ್ ಅಧ್ಯಕ್ಷತೆಯಲ್ಲಿ, ವಲಯ ಅರಣ್ಯಾಧಿಕಾರಿ ಎಚ್.ಎಸ್. ಗಂಗಾಧರ್ ಮಾರ್ಗದರ್ಶನದಲ್ಲಿ ಕಾರ್ಯಾಗಾರ ನಡೆಯಿತು.
ಕಾರ್ಯಕ್ರಮದಲ್ಲಿ ಉಪ ವಲಯ ಅರಣ್ಯಾಧಿಕಾರಿ ಶಶಿ ಪಿ.ಟಿ., ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು, ಸದಸ್ಯರು, ರೈತ ಸಂಘದ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಧರ್ಮಸ್ಥಳದಿಂದ ಕುಂಭಾಶಿ ಸರಕಾರಿ ಶಾಲಾ ಕೊಠಡಿಗೆ ಅನುದಾನ ಮಂಜೂರು, ಹಸ್ತಾಂತರ



ಕುಂದಾಪುರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಕುಂದಾಪುರ-2 ವ್ಯಾಪ್ತಿಯ ಕುಂಭಾಶಿ ಕೊರವಡಿಯ ಸರಕಾರಿ ಹಿ.ಪ್ರಾ. ಶಾಲೆಯ ಶಾಲಾ ಕೊಠಡಿ ನಿರ್ಮಾಣಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರು 1.5 ಲಕ್ಷ ರೂ. ಅನುದಾನವನ್ನು ಮಂಜೂರು ಮಾಡಿದ್ದು ಈ ಮೊತ್ತವನ್ನು ತಾಲೂಕು ಯೋಜನಾಧಿಕಾರಿ ಸುಧೀರ್ ಹಂಗಳೂರು ಇವರು ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಶಾಲಾ ಅಭಿವೃದ್ಧಿ ಸಮಿತಿಯವರಿಗೆ ಹಸ್ತಾಂತರಿಸಿದರು.
ಈ ಸಂದರ್ಭ ಮಾತನಾಡಿದ ಯೋಜನಾಧಿಕಾರಿ ಸುಧೀರ್ ಅವರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಶಾಲೆಯವರ ಮನವಿಯ ಮೇರೆಗೆ ಶಾಲಾ ಕಟ್ಟಡ ರಚನೆ ಜ್ಞಾನದೀಪ ಶಿಕ್ಷಕರ ಒದಗಣೆ, ಶಾಲೆಗಳಿಗೆ ಪೀಠೋಪಕರಣ ಒದಗಣೆ, ಕುಡಿಯುವ ವಾಟರ್ ಫಿಲ್ಟರ್ ಒದಗಣೆ ಹೀಗೆ ಹತ್ತು ಹಲವಾರು ಸೌಲಭ್ಯಗಳು ಒದಗಿಸಿಕೊಡುತ್ತಿದೆ. ಇದುವರೆಗೆ ಕುಂದಾಪುರ ತಾಲೂಕಿನಲ್ಲಿ ಒಟ್ಟು 14 ಶಾಲೆಗಳಿಗೆ ಒಟ್ಟು 32 ಲಕ್ಷದ ಅನುದಾನವನ್ನು ಒದಗಿಸಿಕೊಡಲಾಗಿರುತ್ತದೆ ಎಂದು ತಿಳಿಸಿದರು.
ಈ ಸಂದರ್ಭ ಸ.ಹಿ.ಪ್ರಾ ಶಾಲೆ ಕೊರವಡಿ ಇದರ ಮುಖ್ಯೋಪಾಧ್ಯಾಯರಾದ ಶ್ಯಾಮಲಾ, ಕುಂಭಾಶಿ ಬಿ. ಒಕ್ಕೂಟದ ಅಧ್ಯಕ್ಷರಾದ ಶೈಲಜಾ, ವಲಯ ಜನಜಾಗೃತಿ ಸದಸ್ಯರಾದ ಸುಧಾಕರ ಶೆಟ್ಟಿ, ಎಸ್‌ಡಿಎಂಸಿ ಉಪಾಧ್ಯಕ್ಷ ಸತೀಶ್, ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ರಾಜೇಶ್ ಕಾಂಚನ್, ಕಟ್ಟಡ ಸಮಿತಿಯ ಅಧ್ಯಕ್ಷ ಎಂ. ರಾಮ ಕಾಂಚನ್ ಹಾಗೂ ಶಾಲೆಯ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಮೇಲ್ವಿಚಾರಕಿ ಹೇಮಲತಾ ಹಾಗೂ ಸೇವಾ ಪ್ರತಿನಿಧಿಗಳಾದ ಪ್ರೇಮಾ ವಿಜಯ ಹಾಗೂ ಸಾರಿಕಾ ಉಪಸ್ಥಿತರಿದ್ದರು.

ಸತ್ಯದ ಅನಾವರಣ ಮಾಧ್ಯಮದ ಜವಾಬ್ದಾರಿ: ಪಿ.ಬಿ.ಹರೀಶ್ ರೈ



ಮಂಗಳೂರು: ಮಾಧ್ಯಮವು ಸಮಾಜದ ಕೈಗನ್ನಡಿ. ಮಾಧ್ಯಮಗಳು ಸಮಾಜದ ನೈಜ ಚಿತ್ರಣ ಆಗುಹೋಗುಗಳನ್ನು, ಸಾಧನೆ ಮತ್ತು ಸಮಸ್ಯೆಗಳನ್ನು ನೇರವಾಗಿ ಜನತೆಗೆ ತಲುಪಿಸುತ್ತಿವೆ. ಸತ್ಯದ ಅನಾವರಣ ಮಾಧ್ಯಮದ ಜವಾಬ್ದಾರಿ ಎಂದು ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಹೇಳಿದರು.
ರೋಟರಿ ಕ್ಲಬ್ ಮಂಗಳೂರು ನಾರ್ತ್ ವತಿಯಿಂದ ನಗರದ ರೋಟರಿ ಬಾಲ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾಧ್ಯಮ ಮತ್ತು ಸಮಾಜ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಪತ್ರಿಕೆಗಳ ಓದಲು ಪ್ರೇರೆಪಿಸಬೇಕು

ಇಂದಿನ ವಿದ್ಯಾಥಿಗಳು, ಯುವ ಜನತೆ ಓದಿನಿಂದ ವಿಮುಖರಾಗುತ್ತಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಬರುವ ಎಲ್ಲ ವಿಚಾರಗಳು ಸತ್ಯ ಎಂದು ನಂಬುವ ಸ್ಥಿತಿ ಇದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ದಿನ ಪತ್ರಿಕೆಗಳು ನೈಜ ಸುದ್ದಿಯ ಜತೆಗೆ ಜ್ಞಾನದ ಆಗರವಾಗಿದೆ. ಪತ್ರಿಕೆ ಓದುವಂತೆ ಮಕ್ಕಳನ್ನು ಪ್ರೇರೇಪಿಸುವುದು ಹಿರಿಯರ ಜವಾಬ್ದಾರಿ ಎಂದರು.
ರೋಟರಿ ಕ್ಲಬ್ ಮಂಗಳೂರು ನಾರ್ತ್ ಅಧ್ಯಕ್ಷ ಡಾ.ಅರುಣ್ ಕುಮಾರ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶಾಂಭವಿ ಪ್ರಭು, ನಿಕಟಪೂರ್ವ ಅಧ್ಯಕ್ಷ ಮೋಹನ್ ನಾಯರ್, ನಿಯೋಜಿತ ಅಧ್ಯಕ್ಷ ಸುದರ್ಶನ್ ನಾಯಕ್, ಡಾ.ಸತೀಶ್ ಕುಮಾರ್ ಶೆಟ್ಟಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.
ಆರ್.ಎಂ.ಗೊಗೆರಿ ಮುಖ್ಯ ಅತಿಥಿಯನ್ನು ಪರಿಚಯಿಸಿದರು. ಗಣೇಶ್ ಹೆಗ್ಡೆ ಕಾರ್ಯಕ್ರಮ ನಿರೂಪಿಸಿದರು.

ಮೂಡಂಬೈಲು ಪ್ರೌಢಶಾಲೆಯ 'ಶತಮಾನೋತ್ಸವ ಸಂಭ್ರಮದ' ಸಮಾರೋಪ | ರಂಗಮಂದಿರ ಸಮರ್ಪಣಾ ಸಮಾರಂಭ

ನನ್ನ ಜೀವನದ ಪ್ರತಿಯೊಂದು ಸಾಧನೆಗೂ ವಿದ್ಯಾಭ್ಯಾಸವೇ ಕಾರಣ: ಡಾ.ಸದಾಶಿವ ಶೆಟ್ಟಿ ಕುಳೂರು

ಮಂಜೇಶ್ವರ: ಮೂಡಂಬೈಲು ಸರಕಾರಿ ಪ್ರೌಢಶಾಲೆಯ ಶತಮಾನೋತ್ಸವ ಸಂಭ್ರಮದ ಸಮಾರೋಪ ಸಮಾರಂಭ ಹಾಗೂ ನೂತನವಾಗಿ ನಿರ್ಮಿಸಲಾದ ರಂಗ ಮಂದಿರದ ಉದ್ಘಾಟನಾ ಕಾರ್ಯಕ್ರಮವು ಅದ್ದೂರಿಯಾಗಿ ನೆರವೇರಿತು.
ರಂಗ ಮಂದಿರವನ್ನು ಉದ್ಘಾಟಿಸಿದ ಕೊಡುಗೈದಾನಿ, ಉದ್ಯಮಿ ಡಾ.ಸದಾಶಿವ ಶೆಟ್ಟಿ ಕುಳೂರು ಕನ್ಯಾನ ಮಾತನಾಡಿ, ನಾನು ಏನೇನು ಸಾಧನೆ ಮಾಡಿದ್ದೇನೋ ಅದಕ್ಕೆ ನಾನು ಪಡೆದ ವಿದ್ಯಾಭ್ಯಾಸವೇ ಕಾರಣ. ಮೂಡಂಬೈಲು ಪ್ರೌಢಶಾಲೆ ನನಗೆ ಅತ್ಯಂತ ಹತ್ತಿರವಾದ ಶಾಲೆ. ನಾನು ಕುಳೂರು ಶಾಲೆಯಲ್ಲಿ ಕಲಿತಿದ್ದರೂ ಮೂಡಂಬೈಲು ಶಾಲೆಯೊಂದಿಗೂ ನನಗೆ ಆತ್ಮೀಯ ಸಂಬಂಧವಿದೆ ಎಂದು ಹೇಳಿದರು.
ಸಭಾ ಕಾರ್ಯಕ್ರಮವನ್ನು ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಉದ್ಘಾಟಿಸಿ ಮಾತನಾಡಿದರು.



ಹಿರಿಯರಾದ ಶಿವರಾಮ ಪದಕಣ್ಣಾಯರು ಮಾತನಾಡಿ, ದಾನಿಗಳ ನೆರವಿನಿಂದ ಈ ಭವ್ಯವಾದ ರಂಗ ಮಂದಿರ ನಿರ್ಮಾಣ ಸಾಧ್ಯವಾಯಿತು. ಎಲ್ಲರ ಕನಸು ಈ ಮೂಲಕ ನನಸಾಗಿದ್ದು, ಶಾಲೆ ಇನ್ನೂ ಅಭಿವೃದ್ಧಿಯಾಗಲಿ ಎಂದು ಶುಭ ಹಾರೈಸಿದರು.
ಅಧ್ಯಕ್ಷತೆಯನ್ನು ಕಾಸರಗೋಡು ಜಿ.ಪಂ.ನ ಸ್ಥಾಯೀ ಸಮಿತಿ ಅಧ್ಯಕ್ಷೆ ಇರ್ಫಾನ ಇಕ್ಬಾಲ್ ವಹಿಸಿದ್ದರು. ಶತಮಾನೋತ್ಸವ ಸಮಿತಿಯ ಅಧ್ಯಕ್ಷ, ವಕೀಲ ಎಂ.ದಾಮೋದರ ಶೆಟ್ಟಿ ಪ್ರಸ್ತಾವನೆಗೈದರು. ಶಾಲಾ ಮುಖ್ಯ ಅಧ್ಯಾಪಕಿ ದಯಾವತಿ ಸಾಲಿಯಾನ್ ಸ್ವಾಗತಿಸಿದರು.
ಅತಿಥಿಗಳಾಗಿ ಮಂಜೇಶ್ವರ ಬ್ಲಾಕ್ ಪಂಚಾಯತ್ ಸದಸ್ಯೆ ಜ್ಯೋತಿ ಪಿ.ರೈ, ಮೀಂಜ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಉಷಾ ಪೂಂಜ, ಮಂಜೇಶ್ವರ ಶಿಕ್ಷಣಾಧಿಕಾರಿ ಜಾರ್ಜ್ ಕ್ರಾಸ್ತಾ ಸಿ.ಎಚ್., ಮೀಯಪದವು ಶಾಲೆ ವ್ಯವಸ್ಥಾಪಕ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಶಿಕ್ಷಕ ಬಾಲಕೃಷ್ಣ ಭಂಡಾರಿ ದಡ್ಡಂಗಡಿ, ಬಲ್ಲಂಗುಡೇಲು ಕ್ಷೇತ್ರ ಸೇವಾ ಸಮಿತಿ ಅಧ್ಯಕ್ಷ ಜಯರಾಮ ಬಲ್ಲಂಗುಡೇಲು, ಪಟ್ಟತ್ತಮೊ ಗರು ಮಸೀದಿಯ ಅಧ್ಯಕ್ಷ ಅಬ್ದುಲ್ಲ ಕರಿಬೈಲು, ಮೂಡಂಬೈಲು ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಮ್ ಪ್ರಕಾಶ್ ಆಳ್ವ ಪಟ್ಟತ್ತಮೊಗರು, ಶತಮಾನೋತ್ಸವ ಸಮಿತಿ ಕೋಶಾಧಿಕಾರಿ ಬಶೀರ್ ಮೂಡಂಬೈಲು, ಶತಮಾನೋತ್ಸವ ಪ್ರಚಾರ ಸಮಿತಿಯ ಸಂಚಾಲಕ ಜಗದೀಶ್ ಮೂಡಂಬೈಲು, ಶತಮಾನೋತ್ಸವ ಸಮಿತಿ ಕಾರ್ಯದರ್ಶಿ ಅನಂತನಾರಾಯಣ ಪದಕಣ್ಣಾಯ, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಅಬ್ದುಲ್ಲಕುಂಞಿ, ಎಂಪಿಟಿಎ ಅಧ್ಯಕ್ಷೆ ಅನುಪಮಾ ಉಪಸ್ಥಿತರಿದ್ದರು.

ಸಹಕಾರ ನೀಡಲು ಸಿದ್ಧ

ಎರಡನೇ ಬಾರಿಗೆ ಶಾಸಕನಾಗಿ ನನಗೆ ಲಭಿಸಿದ ಮೊದಲ ಕಾರ್ಯಕ್ರಮ , ಮೊದಲ ಸನ್ಮಾನ ಇದಾಗಿದ್ದು, ಇದು ನನಗೆ ಅಪಾರ ಸಂತೋಷ ತಂದಿದೆ. ಮುಂದಿನ ದಿನಗಳಲ್ಲಿ ಮೂಡಂಬೈಲು ಶಾಲಾ ಪ್ರಗತಿಗಾಗಿ ನನ್ನಿಂದ ಸಾಧ್ಯವಿರುವ ಎಲ್ಲಾ ಸಹಕಾರ ನೀಡಲು ಸಿದ್ಧನಿದ್ದೇನೆ.
● ಎಂ.ಅಶ್ರಫ್, ಶಾಸಕರು

ನಿವೃತ್ತ ಮುಖ್ಯ ಶಿಕ್ಷಕರಿಗೆ ಗೌರವ

ಮೂಡಂಬೈಲು ಶಾಲೆಯ ನಿವೃತ್ತ ಮುಖ್ಯ ಶಿಕ್ಷಕರು ಹಾಗೂ ಇತರ ಶಿಕ್ಷಕರನ್ನು ಗೌರವಿಸಲಾಯಿತು. ಶತಮಾನೋತ್ಸವ ಸಂಭ್ರಮದ ಸವಿ ನೆನಪಿಗಾಗಿ ಸ್ಮರಣ ಸಂಚಿಕೆಯನ್ನು ಇದೇ ಸಂದರ್ಭ ಅತಿಥಿಗಳು ಬಿಡುಗಡೆಗೊಳಿಸಿದರು.
ಸಿನಿಮಾ ನಟ ಹಾಗೂ ಶಿಕ್ಷಕ ನಾಗರಾಜ ಪದಕಣ್ಣಾಯ ಮತ್ತು ಶಿಕ್ಷಕ ಅರವಿಂದಕ್ಷ ಭಂಡಾರಿ ನಿರೂಪಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ

ಸಭಾ ಕಾರ್ಯಕ್ರಮದ ನಂತರ ಮಕ್ಕಳಿಂದ , ಊರವರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು. ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಹಣೆಯನ್ನು ಶಾಲಾ ಶಿಕ್ಷಕಿಯರಾದ ಮೋಹಿನಿ ಚಿಗುರುಪಾದೆ, ಶ್ರೀಲತಾ ಡಿ., ಪೂರ್ಣಿಮಾ ಅಪ್ಪತ್ತಿಮಾರ್, ಪೂರ್ಣಿಮಾ, ಮೋಹಿನಿ ಬಿ.ಕೆ., ಲತಾ ಬಾಲಕೃಷ್ಣ ಶೆಟ್ಟಿ, ಶಿಕ್ಷಕ ರಾಜೇಶ್ ನಡೆಸಿಕೊಟ್ಟರು.

ಸುತ್ತ ಮುತ್ತ

ಎ.ಎಸ್.ಪೊನ್ನಣ್ಣಗೆ ಸಚಿವ ಸ್ಥಾನ ನೀಡಲು ಕೊಡವ ಸಮಾಜ ಒತ್ತಾಯ

ಮಡಿಕೇರಿ: ರಾಜ್ಯದಲ್ಲಿ ನೂತನ ಮಂತ್ರಿಮಂಡಲ ರಚನೆಯ ಸಂದರ್ಭ ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಮೂರ್ನಾಡು ಕೊಡವ ಸಮಾಜ ಒತ್ತಾಯಿಸಿದೆ.



ಪತ್ರಿಕಾ ಪ್ರಕಟಣೆ ನೀಡಿರುವ ಮೂರ್ನಾಡು ಕೊಡವ ಸಮಾಜದ ಅಧ್ಯಕ್ಷ ತೇಲಪಂಡ ಸಿ.ಸುಬ್ಬಯ್ಯ ಅವರು ಎ.ಎಸ್.ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ಲಭಿಸಿದರೆ ಅತ್ಯಂತ ಸೂಕ್ಷ್ಮ ಜನಾಂಗದ ಕೊಡವರಿಗೆ ಹೆಮ್ಮೆ ಎನಿಸಲಿದೆ, ಅಲ್ಲದೆ ಕೊಡವರು ಹಾಗೂ ಕೊಡಗಿನ ಸಮಗ್ರ ಅಭಿವೃದ್ಧಿಯಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ರಾಜಕೀಯವಾಗಿ ಕೊಡಗು ಜಿಲ್ಲೆ ರಾಜ್ಯದ ಗಮನ ಸೆಳೆದಿದ್ದರೂ ಕಳೆದ ಅನೇಕ ವರ್ಷಗಳಿಂದ ಕೊಡವರಿಗೆ ಯಾವುದೇ ಸರಕಾರ ಸಚಿವ ಸ್ಥಾನವನ್ನು ನೀಡಿಲ್ಲ. ಪ್ರಸ್ತುತ ನೂತನ ಮಂತ್ರಿ ಮಂಡಲದ ಸಂದರ್ಭವಾದರೂ ಕೊಡವ ಜನಾಂಗದ ಎ.ಎಸ್.ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ಸಿಗಬಹುದು ಎನ್ನುವ ವಿಶ್ವಾಸವಿದೆ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾಗಿ ಅತ್ಯಂತ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿರುವ ಪೊನ್ನಣ್ಣ ಅವರು ರಾಷ್ಟ್ರ ಮಟ್ಟದಲ್ಲೂ ಗಮನ ಸೆಳೆದಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡಿದರೆ ಕೊಡಗು ಜಿಲ್ಲೆಗೆ ಮಾತ್ರವಲ್ಲ ಕರ್ನಾಟಕ ರಾಜ್ಯಕ್ಕೂ ಲಾಭವಾಗಲಿದೆ. ಆದ್ದರಿಂದ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಸರ್ವ ಕೊಡವರ ಪರವಾಗಿ ಕೋರಿಕೊಳ್ಳುತ್ತಿರುವುದಾಗಿ ತೇಲಪಂಡ ಸಿ.ಸುಬ್ಬಯ್ಯ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಉಡುಪಿ: ಕರ್ನಾಟಕ ಪ.ಜಾತಿ ಮತ್ತು ಪ.ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ, ಬೆಂಗಳೂರು ಇವರ ವತಿಯಿಂದ ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯಗಳ ಕಲ್ಯಾಣಕ್ಕಾಗಿ ಸ್ವಂತ ನಿವೇಶನ ಹೊಂದಿರುವ ಪ.ಪಂಗಡಗಳ ಅಲೆಮಾರಿ ಸಮುದಾಯದವರಿಗೆ ಮನೆ ನಿರ್ಮಾಣಕ್ಕಾಗಿ ವಸತಿ ಯೋಜನೆಯಡಿ 2 ಲಕ್ಷ ರೂ. ಸಹಾಯಧನ ಮಂಜೂರು ಮಾಡಲು ಅರ್ಹ ಫಲಾನುಭವಿಗಳಿಂದ ನಿಗದಿತ ನಮೂನೆಯಲ್ಲಿ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಫಲಾನುಭವಿಗಳು ನಿವೇಶನ ಹೊಂದಿರುವ ಬಗ್ಗೆ ಹಕ್ಕುಪತ್ರ / ಪೂರಕ ದಾಖಲಾತಿ ಪ್ರತಿ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ ಮತ್ತು ಬ್ಯಾಂಕ್ ಪಾಸ್‌ಬುಕ್ ಪ್ರತಿಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಉಡುಪಿ ಮೊ.ನಂ: 9480843209, ಕುಂದಾಪುರ ಮೊ.ನಂ: 9480843208 ಹಾಗೂ ಕಾರ್ಕಳ ಮೊ.ನಂ: 9480843207 ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಕಚೇರಿ ಪ್ರಕಟಣೆ ತಿಳಿಸಿದೆ.

ವಾರಸುದಾರರಿಗೆ ಸೂಚನೆ

ಉಡುಪಿ: ಗಂಗೊಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ದಾಕುಹಿತ್ಲು ಎಂಬಲ್ಲಿ ನಿರ್ಗತಿಕ ಸ್ಥಿತಿಯಲ್ಲಿದ್ದ ಗೌರಿ ಖಾರ್ವಿ (61) ಎಂಬ ವೃದ್ಧ ಮಹಿಳೆಯನ್ನು ರಕ್ಷಿಸಿ, ತಾತ್ಕಾಲಿಕ ಆಶ್ರಯಕ್ಕಾಗಿ ಉದ್ಯಾವರದ ಹಿರಿಯ ನಾಗರಿಕರ ಕನಸಿನ ಮನೆಗೆ ದಾಖಲಿಸಿದ್ದು, ವೃದ್ಧೆಯ ಸಂಬಂಧಿಕರು ಯಾರಾದರೂ ಇದ್ದಲ್ಲಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ಟೋಲ್ ಫ್ರೀ ಸಂಖ್ಯೆ:1090 ಅಥವಾ ದೂ.ಸಂಖ್ಯೆ: 0820-2526394 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ಕಚೇರಿ ಪ್ರಕಟಣೆ ತಿಳಿಸಿದೆ.

ನಿಟ್ಟೆ: ಕಾರ್ಯಾಗಾರ

ಕಾರ್ಕಳ: ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗವು ಜೆಡ್ -ಕಾಸ್ಟ್‌ಪ್ರೊ ಮತ್ತು ಎಎಫ್‌ಡಿಇಎಕ್ಸ್ ತಂತ್ರಾಂಶಗಳ ಕುರಿತು ಮೂರು ದಿನಗಳ ಕಾರ್ಯಾಗಾರವನ್ನು ಮೇ 25 ರಿಂದ 27 ರವರೆಗೆ ಹಮ್ಮಿಕೊಂಡಿತ್ತು. ಶಿಬಿರಾರ್ಥಿಗಳು ಈ ಕಾರ್ಯಾಗಾರದಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ತಂತ್ರಾಂಶದ ಪ್ರಸ್ತುತ ಮಾಹಿತಿಯನ್ನು ಪಡೆದರು. ಇಂಜಿನಿಯರಿಂಗ್ ಎಂದೊಡನೆ ಕಂಪ್ಯೂಟರ್ ಸೈನ್ಸ್‌ನತ್ತ ಓಡುವ ಈ ಕಾಲದಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಎಂದರೆ ಕೇವಲ ಯಂತ್ರಗಳ ಕುರಿತು ಅಧ್ಯಯನವಲ್ಲ, ಇಲ್ಲಿಯೂ ಕಂಪ್ಯೂಟರ್ ತಂತ್ರಜ್ಞಾನದ ಬಳಕೆ ಯಥೇಚ್ಛವಾಗಿದೆ ಎಂದು ಜನರಿಗೆ ಮನವರಿಕೆ ಮಾಡುವಲ್ಲಿ ಕಾರ್ಯಾಗಾರವು ದಿಕ್ಸೂಚಿಯಾಗಿದೆ.

ಕೊಡಗು ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಯಲ್ಲಿ ಪತ್ರಕರ್ತ ಚಿದ್ವಿಲಾಸ್ ಸಲಹೆ

ಯುವ ಜನತೆ, ಮಕ್ಕಳಲ್ಲಿ ಸಾಹಿತ್ಯಾಸಕ್ತಿ ಮೂಡಿಸಬೇಕಿದೆ

ಸುಂಟಿಕೊಪ್ಪ: ಕನ್ನಡದ ಭಾಷೆ ಸಾಹಿತ್ಯದ ಬೆಳವಣಿಗೆಯಲ್ಲಿ ಕನ್ನಡಿಗರು ಕನ್ನಡೇತರರನ್ನು ತೊಡಗಿಸಿಕೊಂಡಾಗ ಕನ್ನಡ ಹೆಚ್ಚು ಬಳಕೆ ಮತ್ತು ಪ್ರಾಶಸ್ತ್ಯವನ್ನು ಪಡೆಯುತ್ತದೆ ಎಂದು ಹಿರಿಯ ಪತ್ರಕರ್ತ ಚಿದ್ವಿಲಾಸ್ ಹೇಳಿದರು.

ಕೊಡಗು ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಇಲ್ಲಿನ ಕವಿ ಶಿಷ್ಯ ಪಂಜೆ ಮಂಗೇಶರಾಯರ ವೇದಿಕೆಯಲ್ಲಿ ಎರಡನೇ ದಿನದ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕನ್ನಡ ಭಾಷೆ ಮತ್ತು ಸಾಹಿತ್ಯ ವಿಷಯಗಳಲ್ಲಿ ಅನ್ಯ ಭಾಷಿಕರಿಗೆ ವಿಶೇಷವಾದ ಕಾರ್ಯಕ್ರಮದ ಸ್ಪರ್ಧೆಯನ್ನು ಏರ್ಪಡಿಸಿ ಅವರಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಸೊಬಗು ಮತ್ತು ಸೊಗಡನ್ನು ಪರಿಚಯಿಸಿ ಅವರಲ್ಲಿ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸಬೇಕು ಎಂದು ಕರೆ ನೀಡಿದರು.

ಯುವ ಜನತೆಯಲ್ಲಿ ಮತ್ತು ವಿಶೇಷವಾಗಿ ಮಕ್ಕಳಲ್ಲಿ ಕನ್ನಡ ಸಾಹಿತ್ಯ ಮತ್ತು ಭಾಷೆಯ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಅವರು ಹೇಳಿದರು.

'ಕನ್ನಡ ಕಥಾ ಜಗತ್ತು ಮತ್ತು ಕೊಡಗು' ಎಂಬ ವಿಷಯದ ಬಗ್ಗೆ ನಿವೃತ್ತ ಪ್ರಾಂಶುಪಾಲ ಮತ್ತು ಪತ್ರಕರ್ತ ಡಾ.ಜೆ.ಸೋಮಣ್ಣ ಅವರು ತಮ್ಮ ವಿಷಯ



ಮಂಡಿಸಿ,'ಕೊಡಗಿನಲ್ಲಿ ಮೊದಲ ಸ್ವಾತಂತ್ರ್ಯ ಕನ್ನಡ ಕತೆ' 1900 ರಲ್ಲಿ ಕವಿ ಶಿಷ್ಯ ಪಂಜೆ ಮಂಗೇಶರಾಯರ 'ನನ್ನ ಚಿಕ್ಕ ತಂದೆಯ ಉಯಿಲು' ಎಂಬುದಾಗಿ ಉಲ್ಲೇಖಿಸಿ ಅವರು ಮುಂದೆ ಕೊಡಗಿನ ಕಥಾ ಜಗತ್ತಿನಲ್ಲಿ ಕೊಡಗಿನ ಗೌರಮ್ಮ ಅವರು ಜೀವಪರ, ಪ್ರಗತಿಪರ ಮಾತ್ರವಲ್ಲದೇ ಬಂಡಾಯಗಾರ್ತಿ ಲೇಖಕಿಯಾಗಿ ಹೊರಹೊಮ್ಮಿದ್ದಾರೆ. 1927ರ ಸುಮಾರಿಗೆ ಈ ರೀತಿಯ ಸಾಹಿತ್ಯ ರಚನೆ ಮಾಡಿದ ಕೊಡಗಿನ ಗೌರಮ್ಮ ಆಗ 27ರ ಹರೆಯದವರಾಗಿದ್ದರು ಎಂಬುದು ಉಲ್ಲೇಖಾರ್ಹ.ಕೊಡಗಿನ ಗೌರಮ್ಮ ಅವರ ಕತೆಗಳಲ್ಲಿ ಬಾಲ್ಯ ವಿವಾಹ, ವಿಧವಾ ವಿವಾಹ, ಪುನರ್ ವಿವಾಹ ಮೊದಲಾದ ವಿಷಯಗಳ ಬಗ್ಗೆ ಬರೆದಿದ್ದು, ಕೊಡಗಿನ ಚಿತ್ರಣ ಮತ್ತು ಕೊಡಗಿನ ಜೀವನ ಚಿತ್ರಣ ಇಲ್ಲವೆಂದು ವಿಷಾದಿಸಿದರು.

ಸಾಹಿತ್ಯವನ್ನು ತಲುಪಿಸುವಲ್ಲಿ ಸೋಲು

'ಸಾಹಿತ್ಯ ಕ್ಷೇತ್ರದತ್ತ ಯುವ ಪೀಳಿಗೆಯನ್ನು ಆಕರ್ಷಿಸಲು ದಾರಿ' ಎಂಬ ವಿಷಯದ ಕುರಿತು ಮಾತನಾಡಿದ ಲೇಖಕರು ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರ ಆರ್.ಕೆ.ಬಾಲಚಂದ್ರ ಅವರು, ಸಾಹಿತ್ಯದ ನೀತಿ , ಸಾಹಿತ್ಯ ನಿರ್ಮಾಣ ಮತ್ತು ಸಾಹಿತ್ಯವನ್ನು ಇಂದಿನ ಪೀಳಿಗೆಗೆ ತಲುಪಿಸುವ ಕೆಲಸ ದಲ್ಲಿ ನಾವು ಸೋತಿದ್ದೇವೆ.ಹಳೆಯ ಅಥವಾ ಹೊಸ ಸಾಹಿತ್ಯ ಮತ್ತು ಸಾಹಿತಿ ಬದಲಾಗಿಲ್ಲ,ಆದರೆ ನಾವು ನಮ್ಮ ಮಕ್ಕಳಿಗೆ,ಯುವ ಪೀಳಿಗಗೆ ಯಾವ ರೀತಿ ಹೇಳಿಕೊಡುತ್ತಿದ್ದೇವೇ ಅದು ಬದಲಾಗಬೇಕು. ಕತೆ ನಾಟಕಗಳಾಗಿ, ಕವಿತೆ ಸಂಗೀತ ವಾಗಿ ಮಕ್ಕಳ ಮನಸ್ಸನ್ನು ತಟ್ಟಬೇಕು.ನಮ್ಮ ನಡುವಿನ ಸಾಹಿತಿಗಳು, ಕವಿಗಳು ಸಾಮಾಜಿಕ ಜಾಲತಾಣ, ಡಿಜೀಟಲೀಕರಣದ ವಿವಿಧ ಮಾಧ್ಯಮಗಳ ಮೂಲಕ ಮಕ್ಕಳನ್ನು ತಲುಪಬೇಕು ಎಂದು ಅವರು ಕರೆ ನೀಡಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಮೇಲೆ ಜನಪ್ರತಿನಿಧಿಗಳ ಮೂಲಕ ನಾವು ಹಕ್ಕೊತಯ ಮಂಡಿಸಬೇಕು ಎಂದು ಅವರು ಕರೆ ನೀಡಿದರು.

ಕೊಡಗನ್ನು ಕ್ರೀಡಾ ಜಿಲ್ಲೆಯೆಂದು ಘೋಷಿಸಬೇಕು

'ಕೊಡಗು ಕ್ರೀಡೆಯ ತವರೂರು ಆಗಬೇಕಾದ ಅನುಕೂಲಗಳು' ವಿಷಯದ ಮೇಲೆ ಮಾತನಾಡಿದ ಕ್ರೀಡಾ ಬರಹಗಾರ ಚೆಪ್ಪುಡಿರ ಕಾರ್ಯಪ್ಪ ಅವರು, ಪುಟ್ಟ ಜಿಲ್ಲೆ ಕೊಡಗು 19 ಮಂದಿ ಒಲಂಪಿಕ್ ಆಟಗಾರರು, 2 ವಿಶ್ವಕಪ್ ಆಟಗಾರರು ಇನ್ನೂರಕ್ಕೂ ಹೆಚ್ಚು ಹಾಕಿ ಆಟಗಾರರನ್ನು ನೀಡಿದೆ.ಕ್ರೀಡೆ ಈ ಜಿಲ್ಲೆಯ ಜನರ ರಕ್ತದಲ್ಲಿದೆ.ಕ್ರೀಡೆಗೆ ಜಾತಿ ಇಲ್ಲ.ಕೊಡಗಿನ ಕ್ರೀಡಾ ಶಾಲೆಗಳಲ್ಲಿ, ವಸತಿ ಗೃಹಗಳಲ್ಲಿ ಕ್ರೀಡಾ ಪಟುಗಳಿಗೆ ಹೆಚ್ಚಿನ ಅವಕಾಶವಾಗಬೇಕು.ಕೊಡಗನ್ನು ಕ್ರೀಡಾ ಜಿಲ್ಲೆಯೆಂದು ಘೋಷಿಸಬೇಕು ಎಂದು ಆಗ್ರಹಿಸಿದರು.

ವಿಚಾರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಮಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ. ಕೋಡಿರ ಲೋಕೇಶ್ ಮೊಣ್ಣಪ್ಪ ಮಾತನಾಡಿ, 1935ಕ್ಕಿಂತ ಹಿಂದೆಯೇ ಡಿವಿಜಿ ಅವರು ಕೊಡಗಿನ ಬೆಡಗು ಎಂಬ ಕವನದ ಮೂಲಕ ಕೊಡಗನ್ನು ವಿಶ್ವಕ್ಕೆ ಪರಿಚಯಿಸಿದ್ದಾರೆ.ಕೊಡಗಿನ ಭೂ ಪ್ರದೇಶದ ಸರ್ವೆ ಯನ್ನು 1911 ರಲ್ಲಿ ಕೊಡಗಿನ ವೀರರಾಜನು ವೀರರಾಜನ ಶಿಸ್ತು ಎಂದು 35 ಸಂಪುಟದಲ್ಲಿ ಆನೆ ಚರ್ಮದ ಹೊದಿಕೆಯಲ್ಲಿ ಮಾಡಿಸಿ ಇಟ್ಟಿದ್ದಾನೆ. ಅದು ಡಿಜಿಟಲೀಕರಣವಾಗಿ ಜನ ಸಾಮಾನ್ಯರ ಕೈಗೆ ಸಿಗುವಂತಾಗಬೇಕು ಎಂದು ಆಶಿಸಿದರು.ನಾವೆಲ್ಲರೂ ಐಷಾರಾಮಿ ಮನೆಗಳು, ಬಂಗಲೆಗಳನ್ನು ನಿರ್ಮಿಸುತ್ತೇವೆ.ಆದರೆ ಒಂದು ಕೋಣೆಯಲ್ಲಿ ಪುಟ್ಟ ಗ್ರಂಥಾಲಯವನ್ನು ನಿರ್ಮಿಸಿಕೊಳ್ಳಲು ಮರೆಯುತ್ತೇವೆ ಎಂದು ಅವರು ವಿಷಾದಿಸಿದರು. ಕಾರ್ಯಕ್ರಮದಲ್ಲಿ ಕೊಡಗು ಜಿಲ್ಲಾ ಲೇಖಕ ಮತ್ತು ಕಲಾವಿದರ ಬಳಗದ ಅಧ್ಯಕ್ಷ ಲೋಕನಾಥ್ ಅಮೆಚೂರು, ಸೋಮವಾರಪೇಟೆ ತಾಲೂಕು ಬಿಇಒ ಕೃಷ್ಣಪ್ಪ, ಸಮ್ಮೇಳನದ ಸರ್ವಾಧ್ಯಕ್ಷ ಸಾಹಿತಿ ಅಬ್ದುಲ್ ರಶೀದ್ ಇದ್ದರು. ಟಿ.ಎಸ್ .ಸುಮಾ ಸ್ವಾಗತಿಸಿದರೆ, ಶ್ವೇತಾ ರವೀಂದ್ರ ಕಾರ್ಯಕ್ರಮ ನಿರ್ವಹಿಸಿದರು. ಎ.ವಿ.ಮಂಜುನಾಥ ವಂದಿಸಿದರು.

ಪಾಣಾಜೆ ಸುಬೋಧ ಪ್ರೌಢಶಾಲೆಯಲ್ಲಿ ಪ್ರಾರಂಭೋತ್ಸವ: ಬ್ಯಾಗ್‌ಗಳ ವಿತರಣೆ



ನಿಡ್ಪಳ್ಳಿ: ಪಾಣಾಜೆ ಸುಬೋಧ ಪ್ರೌಢ ಶಾಲೆಯ 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ ಜರಗಿತು.

ಮುಖ್ಯ ಅತಿಥಿ ಮಂಗಳೂರು ಲ್ಯಾಂಡ್ ಟ್ರೇಡ್ಸ್‌ನ ಜನರಲ್ ಮೆನೇಜರ್ ಪದ್ಮನಾಭ ಶೆಟ್ಟಿ ಹಾಗೂ ಶಾಲಾ ಸಂಚಾಲಕ ಗಿಳಿಯಾಲು ಮಹಾಬಲೇಶ್ವರ ಭಟ್ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿ ಪದ್ಮನಾಭ ಶೆಟ್ಟಿ ಶುಭ ಹಾರೈಸಿದರು. ಅಧ್ಯಕ್ಷತೆ ವಹಿಸಿದ್ದ ಶಾಲಾ ಸಂಚಾಲಕ ಮಹಾಬಲೇಶ್ವರ ಭಟ್, ಶಿಕ್ಷಣದ ಪ್ರಾಮುಖ್ಯತೆ, ವಿದ್ಯಾರ್ಥಿಗಳ ಜವಾಬ್ದಾರಿ, ಶಾಲಾ ಸ್ವಚ್ಛತೆ, ಸಮಯ ಪರಿಪಾಲನೆ ಹಾಗೂ ಶಿಸ್ತಿನ ಶಿಕ್ಷಣ ತಮ್ಮ ಯಶಸ್ಸಿಗೆ ಕಾರಣ ಎಂದು ಹೇಳಿದರು.

ಮಂಗಳೂರಿನ ಪ್ರತಿಷ್ಠಿತ ಲ್ಯಾಂಡ್ ಡೆವಲಪರ್ ಹಾಗೂ ಬಿಲ್ಡರ್ ಸಂಸ್ಥೆ ಲ್ಯಾಂಡ್ ಟ್ರೇಡ್ಸ್ ವತಿಯಿಂದ ಸಂಸ್ಥೆಯ ವಿದ್ಯಾಸಂಕಲ್ಪ ಯೋಜನೆಯಂತೆ ಎಲ್ಲಾ ಮಕ್ಕಳಿಗೆ ಶಾಲಾ ಬ್ಯಾಗುಗಳನ್ನು ವಿತರಿಸಲಾಯಿತು. ಪ್ರತಿ ವರ್ಷ ಸಂಚಾಲಕರು ನೀಡುವ ಪೆನ್ನುಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೆ, ಅತಿಥಿಗಳಿಗೆ, ಶಿಕ್ಷಕರಿಗೆ ಶಿಕ್ಷಕೇತರ ಸಿಬ್ಬಂದಿಯವರಿಗೆ ವಿತರಿಸಲಾಯಿತು. ಲ್ಯಾಂಡ್ ಟ್ರೇಡ್ಸ್‌ನ ಪ್ರತಿನಿಗಳನ್ನು ಹೂ ನೀಡಿ ಗೌರವಿಸಲಾಯಿತು. ವಿದ್ಯಾರ್ಥಿನಿಯರಾದ ವೈಶಾವಿ ಕೆ.ಪಿ. ಮತ್ತು ದೀಪಿಕಾ ಪಿ.ಎಸ್. ಪ್ರಾರ್ಥಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಸುರೇಶ್ ಎಸ್.ಪಿ. ಸ್ವಾಗತಿಸಿ, ಮುಖ್ಯ ಶಿಕ್ಷಕಿ ನಿರ್ಮಲ ಕೆ. ವಂದಿಸಿದರು.

ಎರಡು ದಿನಗಳ 'ಮಣೆಲ್ ಗ್ರಾಮೊಡೊಂಜಿ ಚಿತ್ರಕೂಟ' ಉದ್ಘಾಟನೆ



ಕೈಕಂಬ: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಇಂಟಾಕ್ ಮಂಗಳೂರು ವಿಭಾಗ ಮತ್ತು ರಾಣಿ ಅಬ್ಬಕ್ಕ ಚಾವಡಿ ಮಣೆಲ್ (ಮಳಲಿ)ಇವರ ಜಂಟಿ ಆಶ್ರಯದಲ್ಲಿ ಮಳಲಿಯ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ಸಭಾಭವನದಲ್ಲಿ ಎರಡು ದಿನಗಳ ಕಾಲ ಆಯೋಜಿಸಲಾಗಿರುವ ಮಣೆಲ್ದ ಪೆರ್ಮೆ ರಾಣಿ ಅಬ್ಬಕ್ಕ 'ಮಣೆಲ್ ಗ್ರಾಮೊಡೊಂಜಿ ಚಿತ್ರಕೂಟ' ಕಾರ್ಯಕ್ರಮ ವನ್ನು ಖ್ಯಾತ ಚಿತ್ರಕಲಾವಿದ ಗಣೇಶ್ ಸೋಮಯಾಜಿ ಶನಿವಾರ ಉದ್ಘಾಟಿಸಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರನಾಥ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸಿದ್ದರು. ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್ ಎಸ್. ಭೂಮರೆಡ್ಡಿ ಭಾಗವಹಿಸಿದರು. ನಿವೃತ್ತ ಪ್ರೊಫೆಸರ್ ಅಕ್ಷಯ್ ಕುಮಾರ್ ನಿರೂಪಿಸಿದರು. ತುಳು ಸಾಹಿತ್ಯ ಅಕಾಡೆಮಿ ಸದಸ್ಯ ಬೂಬ ಪೂಜಾರಿ ಮಳಲಿ ಸ್ವಾಗತಿಸಿ, ಪ್ರಸ್ತಾವಿಸಿದರು. ದೇವಸ್ಥಾನದ ಟ್ರಸ್ಟಿ ವಾಮನ್ ನಾಯ್ಕ್ ಮಳಲಿ, ಮಳಲಿ ಜುಮ್ಮಾ ಮಸೀದಿ ಅಧ್ಯಕ್ಷ ಅಬ್ದುಲ್ ರಜಾಕ್, ಪ್ರಶಾಂತ್ ಕುಮಾರ್ ಕಟ್ಟೆಮಾರ್, ಇಂಟಾಕ್ ಮಂಗಳೂರು ವಿಭಾಗ ಸಂಚಾಲಕ ಸುಭಾಶ್ಚಂದ್ರ ಬಸು ಮತ್ತಿತರರು ಉಪಸ್ಥಿತರಿದ್ದರು.

ಮಣೆಲ್-ಅಬ್ಬಕ್ಕರ ಬಗ್ಗೆ ಅಧ್ಯಯನಶೀಲ ಸಾಮಾಜಿಕ-ಸಾಂಸ್ಕೃತಿಕ, ಚಾರಿತ್ರಿಕ ಮತ್ತು ಸೃಜನಾತ್ಮಕ ಕಲಾಕೃತಿ ರಚಿಸಲಿರುವ ಖ್ಯಾತ ಕಲಾವಿದರಾದ ವಿಲ್ಸನ್ ಸೋಜಾ, ಸಂತೋಷ್ ಅಂದ್ರಾದೆ, ಜೀವನ್ ಸಾಲ್ಯಾನ್, ಹರೀಶ್ ಕೊಡಿಯಾಲಬೈಲು, ರೇಷ್ಮಾ ಎಸ್, ದೀಘಾರ್ ಎಂ, ನಶ್ಮಿತಾ ಡಿ. ಎನ್, ಶ್ರೀಕಾಂತ್ ಎ, ಅಭಿಷೇಕ್ ತ್ರಿರ್ಥಹಳ್ಳಿ, ರೂಪೇಶ್ ಸುವರ್ಣ, ಎನ್. ಸಂದೀಪ್, ಲಿಖಿತ್ ಪೂಜಾರಿ ಪಾಲ್ಗೊಂಡಿದ್ದರು. ಇತಿಹಾಸ ತಜ್ಞ ನಿವೃತ್ತ ಉಪನ್ಯಾಸಕ ಡಾ. ಪುಂಡಿಕ್ಕಾ ಗಣಪಯ್ಯ ಭಟ್ ಉಪನ್ಯಾಸ ನೀಡಿದರು.

ವಿಟ್ಲದಲ್ಲಿ ಬೃಹತ್ ಉದ್ಯೋಗ ಮೇಳ, 400ಕ್ಕೂ ಅಧಿಕ ಆಕಾಂಕ್ಷಿಗಳು ಭಾಗಿ



ವಿಟ್ಲ: ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಅತ್ಯಂತ ಮಹತ್ವವಿದೆ. ಐಟಿಐ ವಿದ್ಯಾರ್ಥಿಗಳು ತಮ್ಮ ತಾಂತ್ರಿಕ ಜ್ಞಾನ, ಕೌಶಲ್ಯ ಮತ್ತು ಶಿಸ್ತಿನ ಮೂಲಕ ಕೈಗಾರಿಕಾ ಕ್ಷೇತ್ರದಲ್ಲಿ ಉತ್ತಮ ಭವಿಷ್ಯ ನಿರ್ಮಿಸಿಕೊಳ್ಳಬಹುದು. ಈ ಉದ್ಯೋಗ ಮೇಳವು ವಿದ್ಯಾರ್ಥಿ ಗಳು ಮತ್ತು ಕೈಗಾರಿಕೆಗಳ ನಡುವೆ ಉತ್ತಮ ಸೇತುವೆಯಾಗಿದ್ದು ಉದ್ಯೋಗಾವಕಾಶ ನೇರವಾಗಿ ಒದಗಿಸುವ ವೇದಿಕೆಯಾಗಿದೆ ಎಂದು ಕೆನರಾ ಕೈಗಾರಿಕಾ ಸಂಘ ಬೈಕಂಪಾಡಿ ಅಧ್ಯಕ್ಷ ಎಂ.ಡಿ. ಪೂಜಾರಿ ಹೇಳಿದರು.

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ವಿಟ್ಲ ಐಎಂಸಿ, ಸರ್ಕಾರಿ ಐಟಿಐ ವಿಟ್ಲ, ಕ್ವೆಸ್ಟ್ ಅಲೈನ್ ಆಶ್ರಯದಲ್ಲಿ ನಡೆದ ಬೃಹತ್ ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿದರು. ಎಸ್.ಆರ್.ಕೆ. ಲ್ಯಾಡರ್ಸ್ ಮಾಲೀಕ ಕೇಶವ ಅಮೈ, ಕ್ವೆಸ್ಟ್ ಅಲೈನ್ಸ್ ಅಸಿಸ್ಟೆಂಟ್ ಮ್ಯಾನೇಜರ್ ಜನಾರ್ದನ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಪ್ರಾಚಾರ್ಯ ಹರೀಶ ವಹಿಸಿದ್ದರು. ವಿವಿಧ ಕಂಪನಿಗಳ ಪ್ರಮುಖರಾದ ರಾಘವೇಂದ್ರ, ಯಕ್ಷಿತ್ ಆರ್., ಕೃತಾ ಎಸ್.ಆರ್., ಶ್ರೇಯ ವಿ., ದೀಪಕ್, ರಾಜಶೇಖರ್, ಪ್ರಮೋದ್, ಲೀಲಾವತಿ, ಶರ್ಮಿಳಾ, ಶಿವಪ್ರಸಾದ್ ಜಿ.ಎಂ., ಚೆನ್ನೇಶ್, ಶಿವಕಾರ್ತಿಕ್, ಪ್ರತೀಕ್, ಶ್ರೀನಿವಾಸ್ ಪಡಿಯಾರ್, ಅಭಿಶೇಕ್, ಪ್ರೀತಮ್, ಅಭಿಶೇಕ್, ಅಡ್ನಾನ್ ಫಾರೂಖಿ, ಪರಮೇಶ್ವರಿ, ಶ್ರೀವತ್ಸ ಭಾಗವಹಿಸಿದರು.

ಸುಪ್ರಜಿತ್ ಐಟಿಐ ವಿಟ್ಲ, ಒಡಿಯೂರು ಶ್ರೀ ಗುರುದೇವ ಐಟಿಐ, ಶ್ರೀ ಮಹಾಲಿಂಗೇಶ್ವರ ಐಟಿಐ ಪುತ್ತೂರು, ಶ್ರೀ ಪರಿವಾರ ಪಂಚಲಿಂಗೇಶ್ವರ ಐಟಿಐ ನಿಂತಿಕಲ್ಲು, ಸರಕಾರಿ ಐಟಿಐ ನರಿಮೊಗರು ಮತ್ತೂರು, ಕೆವಿಜಿ ಐಟಿಐ ಸುಳ್ಯ, ಸರಕಾರಿ ಐಟಿಐ ವಿಟ್ಲದ 400ಕ್ಕೂ ಅಕ ಉದ್ಯೋಗ ಆಕಾಂಕ್ಷಿಗಳು ಭಾಗವಹಿಸಿ, 206 ವಿದ್ಯಾರ್ಥಿಗಳು ವಿವಿಧ ಕಂಪನಿಗಳಿಗೆ ಆಯ್ಕೆಗೊಂಡರು. ಮೇಳದ ಸಂಯೋಜಕ ಶರತ್ ಕುಮಾರ್ ಎಸ್. ಎಚ್. ಸ್ವಾಗತಿಸಿ, ಕಿರಿಯ ತರಬೇತಿ ಅಧಿಕಾರಿ ತೀರ್ಥಾಕ್ಷಿ ವಂದಿಸಿದರು. ಕಿರಿಯ ತರಬೇತಿ ಅಧಿಕಾರಿ ಜಯಂತ್ ನಿರ್ವಹಿಸಿದರು.

ಶಾಸಕದ್ವಯರಿಗೆ ಸಚಿವ ಸ್ಥಾನಕ್ಕಾಗಿ ಮಡಿಕೇರಿ ಕಾಂಗ್ರೆಸ್‌ನಿಂದ ಪ್ರಾರ್ಥನೆ



ಮಡಿಕೇರಿ: ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಮಂತ್ರಿಮಂಡಲದಲ್ಲಿ ಕೊಡಗು ಜಿಲ್ಲೆಯ ಶಾಸಕದ್ವಯರಾದ ಡಾ.ಮಂತರ್ ಗೌಡ ಹಾಗೂ ಎ.ಎಸ್.ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ಲಭಿಸಲಿ ಎಂದು ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ನಗರದ ಕೋಟೆ ಶ್ರೀ ಮಹಾಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿತು.

ಪೂಜೆಯ ನೇತೃತ್ವ ವಹಿಸಿ ಮಾತನಾಡಿದ ಪ್ರಚಾರಸಮಿತಿಯ ಅಧ್ಯಕ್ಷ ವಿ.ಜಿ.ಮೋಹನ್ ಅವರು ಜಿಲ್ಲೆಯ ಇಬ್ಬರು ಶಾಸಕರು ಸಚಿವ ಸ್ಥಾನವನ್ನು ಹೊಂದಲು ಸಮರ್ಥರಾಗಿದ್ದಾರೆ. ನಾಡಿನ ಒಳಿತಿಗಾಗಿ ಸಚಿವ ಸ್ಥಾನ ಲಭಿಸಲಿ ಎಂದು ಪ್ರಾರ್ಥಿಸಿರುವುದಾಗಿ ತಿಳಿಸಿದರು. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ವೈ.ರಾಜೇಶ್, ಶ್ರೀ ಓಂಕಾರೇಶ್ವರ ದೇವಾಲಯ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಚುಮ್ಮಿ ದೇವಯ್ಯ, ಕೆಪಿಸಿಸಿ ಸದಸ್ಯ ಹೆಚ್.ಎಂ.ನಂದಕುಮಾರ್, ನಗರಾಧ್ಯಕ್ಷ ಪ್ರಕಾಶ್ ಆಚಾರ್ಯ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶಶಿ, ಕಾರ್ಮಿಕ ಘಟಕದ ಅಧ್ಯಕ್ಷ ದಿನೇಶ್, ಪ್ರಚಾರ ಸಮಿತಿ ಉಪಾಧ್ಯಕ್ಷ ದೇರಾಜೆ ಕಿರಣ್, ಅಕ್ರಮ ಸಕ್ರಮ ಸಮಿತಿ ಸದಸ್ಯರಾದ ಹರಿಪ್ರಸಾದ್ ಕೋಚನ, ಮನು ಮುದ್ದಪ್ಪ ಪ್ರಚಾರ ಸಮಿತಿ ಕಾರ್ಯದರ್ಶಿ ಕೀರ್ತನ್ ಮೂವನ್, ಕವನ್ ಕೊತ್ತೊಳಿ, ಶರಣ್, ವಸಂತ್ ಭಟ್, ಅರ್ಜುನ್, ಕೋಚನ ಚೇತನ, ಮಿನಾಜ್ ಪ್ರವೀಣ್, ಹಬೀಬ್, ಜಿ.ಸಿ.ಜಗದೀಶ್ ಮತ್ತಿತರರಿದ್ದರು.

ಬಂಟ್ವಾಳ ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆ



ಬಂಟ್ವಾಳ: ಬಂಟ್ವಾಳ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆಯು ಸಮಿತಿಯ ಅಧ್ಯಕ್ಷ ಜಯಂತಿ ವಿ. ಪೂಜಾರಿ ಅವರ ಅಧ್ಯಕ್ಷತೆಯಲ್ಲಿ ತಾಲೂಕು ಪಂಚಾಯತ್ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಕಚೇರಿಯಲ್ಲಿ ನಡೆಯಿತು.

ವೈದ್ಯಕೀಯ ಉದ್ದೇಶದಿಂದ ಪಡಿತರ ಚೀಟಿಗಾಗಿ ಸಲ್ಲಿಸಿದ ಅರ್ಜಿಯನ್ನು ತ್ವರಿತವಾಗಿ ವಿಲೇವಾರಿ ಮಾಡಲು ಮಂಗಳೂರು ನಾಗರಿಕ ಆಹಾರ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕರನ್ನು ಕೋರಲು ಸಮಿತಿ ಸದಸ್ಯರು ಸಭೆಯಲ್ಲಿ ಆಗ್ರಹಿಸಿದರು. ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳು, ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಕಾರ್ಯದರ್ಶಿ ಸಚಿನ್ ಕುಮಾರ್, ಗ್ಯಾರೆಂಟಿ ಅನುಷ್ಠಾನ ಸಮಿತಿಯ ಸದಸ್ಯರು, ಅನುಷ್ಠಾನ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.



ಕೋಟದ ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಳಕ್ಕೆ ದಿ.ಕೋಟೇಶ್ವರ ಸೂರ್ಯನಾರಾಯಣ ರಾವ್ ಅವರ ಪುತ್ರ ಸುರೇಶ ಭಟ್ ಹಾಗೂ ರೇವತಿ ದಂಪತಿಗಳು ದೇವಳಕ್ಕೆ ಬರುವ ಭಕ್ತರಿಗಾಗಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೊಡುಗೆಯಾಗಿ ನೀಡಿದರು. ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಪ್ರಕಾಶ ಕಾರಂತರು ದಾನಿಗಳಿಗೆ ಶಾಲು ಹೊದಿಸಿ, ಪ್ರಸಾದ ನೀಡಿ ಗೌರವಿಸಿದರು. ದೇವಸ್ಥಾನದ ಆಡಳಿತ ಮಂಡಳಿಯ ಉಪಾಧ್ಯಕ್ಷ ಸಿ . ಚಂದ್ರಶೇಖರ ಉಪಾಧ್ಯ ಹಾಗೂ ಆಡಳಿತ ಮಂಡಳಿಯ ಸದಸ್ಯ ಕೆ. ತಾರಾನಾಥ ಹೊಳ್ಳ ಉಪಸ್ಥಿತರಿದ್ದರು.



ಶಿರ್ವದ ಎಲ್ಲೂರು ಸೀಮೆಯ ಅಂಜಾರು ಮನೆತನದ ನರಪಾಡಿ ಶ್ರೀನಾಗ ಬ್ರಹ್ಮಾದಿ ಪಂಚ ದೈವಿಕ ಸನ್ನಿಧಿಯಲ್ಲಿ ಆಗಮ ಪಂಡಿತ ಕುತ್ಯಾರು ಕೇಂಜ ಶ್ರೀಧರ ತಂತ್ರಿಗಳ ಮಾರ್ಗದರ್ಶನದಲ್ಲಿ ಶುಕ್ರವಾರ ಪ್ರಧಾನ ಅರ್ಚಕ ಕೇಂಜ ಭಾರ್ಗವ ತಂತ್ರಿ ನೇತೃತ್ವದಲ್ಲಿ ಪ್ರಾಯಶ್ಚಿತ್ತ ಪೂರ್ವಕ ಆಶ್ಲೇಷಾ ಬಲಿ ಸಹಿತ ಧಾರ್ಮಿಕ ಅನುಷ್ಠಾನಗಳು, ಅನ್ನಸಂತರ್ಪಣೆ ನಡೆಯಿತು. ಧಾರ್ಮಿಕ ಅನುಷ್ಠಾನದಲ್ಲಿ ಬೆಳ್ಳಿಬೆಟ್ಟು ಗಣೇಶ್ ಭಟ್, ಶಿರೂರು ರಾಮದಾಸ್ ಭಟ್, ಕೇಂಜ ಶ್ರೀರಾಮ ತಂತ್ರಿಗಳು ಸಹಕರಿಸಿದರು. ಅಂಜಾರು ಮನೆತನದ ನಾರಾಯಣ ಶೆಟ್ಟಿ ಕಿಶೋರ್ ಶೆಟ್ಟಿ ಡಾ.ವಿವೇಕ್ ಶೆಟ್ಟಿ ಶಿರ್ವ ಸಿ.ಎ.ಬ್ಯಾಂಕ್ ಅಧ್ಯಕ್ಷ ಕುತ್ಯಾರು ಪ್ರಸಾದ್ ಶೆಟ್ಟಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಉದ್ಯಮಿ ಸಾಯಿನಾಥ್ ಶೆಟ್ಟಿ ಸಹಿತ ಕುಟುಂಬಸ್ಥರು, ಭಕ್ತಾದಿಗಳು ಪಾಲ್ಗೊಂಡಿದ್ದರು.

ಉಡುಪಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ನೇತೃತ್ವದಲ್ಲಿ ಜೋಡುಕಟ್ಟೆ ಬಳಿ ನೀಟ್ ಹಗರಣ, ಎಸ್‌ಐಆರ್ ಪ್ರಕ್ರಿಯೆ ವಿರುದ್ಧ ಬೃಹತ್ ಪ್ರತಿಭಟನೆ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿಲ್ಲ, ಮಾರಾಟ ಮಾಡಲಾಗಿದೆ: ಜಯಪ್ರಕಾಶ್ ಹೆಗ್ಡೆ

ಉಡುಪಿ: ದೇಶದಲ್ಲಿ ಸದ್ದು ಮಾಡುತ್ತಿರುವ ವೈದ್ಯಕೀಯ ಪ್ರವೇಶಾತಿ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಯು ಕೇವಲ ಸೋರಿಕೆಯಾಗಿಲ್ಲ, ಬದಲಿಗೆ ಅದನ್ನು ವ್ಯವಸ್ಥಿತವಾಗಿ ಮಾರಾಟ ಮಾಡಲಾಗಿದೆ. ಹಾಗಾಗಿ ಈ ದಂಧೆಯ ಹಿಂದಿರುವ ಕಿಡಿಗೇಡಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಮಾಜಿ ಸಂಸದ ಕೆ. ಜಯಪ್ರಕಾಶ್ ಹೆಗ್ಡೆ ಆಗ್ರಹಿಸಿದ್ದಾರೆ.

ದೇಶದಲ್ಲಿ ಸಂಭವಿಸಿರುವ ನೀಟ್ ಹಗರಣ, ಎಸ್‌ಐಆರ್ ಪ್ರಕ್ರಿಯೆ ಹಾಗೂ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿರುವ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ಉಡುಪಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ನೇತೃತ್ವದಲ್ಲಿ ಜೋಡುಕಟ್ಟೆ ಬಳಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.



ಪ್ರಶ್ನೆ ಪತ್ರಿಕೆ ಮಾರಾಟದ ತಪ್ಪು ಆಡಳಿತ ಮಂಡಳಿಯದ್ದಾಗಿದ್ದು, ಈಗ ಮತ್ತೆ ಮರು ಪರೀಕ್ಷೆ ನಡೆಸುವ ಮೂಲಕ ಪ್ರಾಮಾಣಿಕವಾಗಿ ಓದಿದ ವಿದ್ಯಾರ್ಥಿಗಳ ಮೇಲೆ ಅನಗತ್ಯವಾಗಿ ಮಾನಸಿಕ ಹೊರೆ ಏರಿಸುತ್ತಿರುವುದು ಸರಿಯಲ್ಲ ಎಂದು ಜಯಪ್ರಕಾಶ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು. ಇಂತಹ ಗೊಂದಲಗಳಿಗೆ ಮುಕ್ತಿ ಹಾಡಲು ಮುಂಬರುವ ವರ್ಷದಿಂದ ರಾಜ್ಯಮಟ್ಟದಲ್ಲೇ ಪ್ರತ್ಯೇಕ ಪರೀಕ್ಷೆಗಳನ್ನು ನಡೆಸಿ, ನಮ್ಮ ರಾಜ್ಯದ ಮಕ್ಕಳಿಗೆ ವೈದ್ಯಕೀಯ ಸೀಟುಗಳು ಸುಲಭವಾಗಿ ಸಿಗುವಂತಾಗಬೇಕು ಎಂದು ಅವರು ಒತ್ತಾಯಿಸಿದರು. ಇದೇ ವೇಳೆ ಇಂಧನ ಬೆಲೆ ಏರಿಕೆ ಕುರಿತು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಕಚ್ಚಾ ತೈಲಗಳ ಬೆಲೆ ಏರಿಕೆಯ ನೆಪವೊಡ್ಡಿ ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹೇರಬಾರದು. ಮಾಜಿ ಪ್ರಧಾನಿ ಡಾ. ಮನ್ಮೋಹನ್ ಸಿಂಗ್ ಅವರ ಯಶಸ್ವಿ ಆರ್ಥಿಕ ನೀತಿಗಳನ್ನು ಕಲಿತು ದೇಶದ ಜನತೆಯನ್ನು ಸಂಕಷ್ಟದಿಂದ ಪಾರು ಮಾಡಿ ಎಂದು ಕೇಂದ್ರಕ್ಕೆ ಕಿವಿಮಾತು ಹೇಳಿದರು.

ಮತದಾನದ ಹಕ್ಕಿನ ಹರಣಕ್ಕೆ ಯತ್ನ

ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಕೆಪಿಸಿಸಿ ಉಪಾಧ್ಯಕ್ಷ ಎಂ.ಎ. ಗಫೂರ್, ಕೇಂದ್ರ ಸರ್ಕಾರವು ತಂತ್ರದ ಮೂಲಕ ನಾಗರಿಕರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನಕ್ಕೆ ಕೈ ಹಾಕಿದೆ. ಬಿಹಾರ ರಾಜ್ಯವೊಂದರಲ್ಲೇ ಸುಮಾರು 35 ಲಕ್ಷ ಮತದಾರರ ಹೆಸರುಗಳು ಪಟ್ಟಿಯಿಂದ ಕಾಣೆಯಾಗಿರುವುದು ಇದಕ್ಕೆ ಸಾಕ್ಷಿ ಎಂದರು. ಪ್ರಜಾಪ್ರಭುತ್ವದ ಸ್ವಾಯತ್ತ ಸಂಸ್ಥೆಗಳಾದ ಸಿಬಿಐ ಸೇರಿದಂತೆ ತನಿಖಾ ಸಂಸ್ಥೆಗಳನ್ನು ರಾಜಕೀಯವಾಗಿ ದುರುಪಯೋಗಪಡಿಸಿಕೊಳ್ಳಲಾಗುತ್ತಿದ್ದು, ಈ ಬಗ್ಗೆ ನಾವೆಲ್ಲರೂ ಜಾಗೃತರಾಗಬೇಕಿದೆ. ಬರುವ ದಿನಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಸಾರ್ವಜನಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸುವ ಅವಶ್ಯಕತೆಯಿದೆ ಎಂದರು.

ಸೈಕಲ್ ರ್‍ಯಾಲಿ

ಇದಕ್ಕೂ ಮುನ್ನ ಉಡುಪಿ ಬ್ರಹ್ಮಗಿರಿಯ ಜಿಲ್ಲಾ ಕಾಂಗ್ರೆಸ್ ಭವನದಿಂದ ಆರಂಭವಾದ ಬೃಹತ್ ಕಾಲ್ನಡಿಗೆ ಮೆರವಣಿಗೆಯು ಬ್ರಹ್ಮಗಿರಿ ವೃತ್ತದ ಮೂಲಕ ಸಾಗಿ ಜೋಡುಕಟ್ಟೆ ಮೈದಾನವನ್ನು ತಲುಪಿತು. ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಾಗಿದ ಈ ಪ್ರತಿಭಟನೆಯಲ್ಲಿ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಸದಸ್ಯರು ಸೈಕಲ್‌ಗಳ ಮೂಲಕ ರ್‍ಯಾಲಿ ನಡೆಸಿ ಇಂಧನ ಬೆಲೆ ಏರಿಕೆಯ ವಿರುದ್ಧ ವಿನೂತನವಾಗಿ ಜನರ ಗಮನ ಸೆಳೆದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪ್ರಮುಖರಾದ ಗೋಪಾಲ ಪೂಜಾರಿ, ಅಶೋಕ್ ಕುಮಾರ್ ಕೊಡವೂರು, ಮುನಿಯಾಲು ಉದಯಕುಮಾರ್ ಶೆಟ್ಟಿ, ಅಲೆವೂರು ಹರೀಶ್ ಕಿಣಿ, ಕಿಶನ್ ಹೆಗ್ಡೆ ಕೊಳ್ಕೆಬೈಲ್, ದಿನೇಶ ಪುತ್ರನ್, ಹರಿಪ್ರಸಾದ್ ರೈ, ಕೀರ್ತಿ ಶೆಟ್ಟಿ, ಮಹಾಬಲ ಕುಂದರ್, ಕೃಷ್ಣ ಶೆಟ್ಟಿ, ಮಂಜುನಾಥ್ ಪೂಜಾರಿ, ದಿನೇಶ್ ಹೆರೂರು, ಸಂತೋಷ್ ಕುಮಾರ್, ಗೋಪಿನಾಥ್ ಭಟ್, ಸೌರಭ್ ಬಲ್ಲಾಳ್ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಸುತ್ತಮುತ್ತ

ಮಧೂರು: ಇಂದು ಸುಬ್ರಹ್ಮಣ್ಯ ರಂಗಾ ಭಟ್ ಸೇವೆಯಿಂದ ನಿವೃತ್ತಿ

ಕಾಸರಗೋಡು: ದಕ್ಷಿಣ ಭಾರತದ ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲಿ ಒಂದಾದ ಕಾಸರಗೋಡು ಜಿಲ್ಲೆಯ ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಾಲಯದಲ್ಲಿ 49 ವರ್ಷಗಳ



ಕಾಲ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಪ್ರಬಂಧಕ ಬಿ.ಎನ್.ಸುಬ್ರಹ್ಮಣ್ಯ ರಂಗಾ ಭಟ್ ಮೇ 31ರಂದು ನಿವೃತ್ತರಾಗಲಿರುವರು. 1977ರಲ್ಲಿ ಉದ್ಯೋಗಕ್ಕೆ ಸೇರ್ಪಡೆಗೊಂಡ ಅವರು ಪದೋನ್ನತಿ ಪಡೆದು ಪ್ರಬಂಧಕರಾಗಿ ಸ್ತುತ್ಯರ್ಹ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅವರು ಕರ್ತವ್ಯ ನಿರತರಾಗಿದ್ದ ಸಂದರ್ಭ ಮಧೂರಿನಲ್ಲಿ ಎರಡು ಬಾರಿ ನಡೆದ ಮೂಡಪ್ಪ ಸೇವಾ ಮಹೋತ್ಸವ, ಬ್ರಹ್ಮಕಲಶೋತ್ಸವ, ಮಹಾರುದ್ರಯಾಗ, ಋಕ್ ಸಂಹಿತಾ ಯಜ್ಞ, ಸಹಸ್ರನಾಳಿಕೇರ ಗಣಯಾಗ, ವಾರ್ಷಿಕ ಉತ್ಸವಗಳು ವಿಜೃಂಭಣೆಯಿಂದ ನಡೆದಿವೆ. ಮಧೂರು ದೇವಸ್ಥಾನದ ಅಭಿವೃದ್ಧಿಗಾಗಿ ಸಹೋದ್ಯೋಗಿಗಳ ಹಾಗೂ ಅಧಿಕಾರಿಗಳ ಜೊತೆ ಮಾತ್ರವಲ್ಲದೆ ವಿವಿಧ ಸಮಿತಿಗಳೊಂದಿಗೆ ಸಹಕರಿಸುತ್ತಾ ಬಂದಿದ್ದಾರೆ. ಮಧೂರಿನ ದಿ.ನಾರಾಯಣ ರಂಗಾ ಭಟ್ ಮತ್ತು ಸಾವಿತ್ರಿ ಅಮ್ಮ ದಂಪತಿಯ ಪುತ್ರನಾಗಿ 1961ರಲ್ಲಿ ಜನಿಸಿದ ಬಿ.ಎನ್.ಸುಬ್ರಹ್ಮಣ್ಯ ರಂಗಾ ಭಟ್ ಸುದೀರ್ಘ ಕಾಲ ಮಧೂರಿನಲ್ಲಿಯೇ ನೆಲೆಸಿದ್ದರು. ಕೆಲವು ವರ್ಷಗಳಿಂದ ಉಳಿಯಕ್ಕೆ ವಾಸ್ತವ್ಯವನ್ನು ಬದಲಾಯಿಸಿದ್ದಾರೆ. ಜನಸೇವೆಯೇ ಜನಾರ್ದನ ಸೇವೆಯೆಂದು ನಂಬಿರುವ ಅವರು ದಕ್ಷ ಅಧಿಕಾರಿಯಾಗಿ ಹೆಸರು ಗಳಿಸಿದ್ದಾರಲ್ಲದೆ ಭಕ್ತಜನ ಸಂಪ್ರೀತ ವ್ಯಕ್ತಿಯಾಗಿ ಸರ್ವಾದರಣೀಯರಾಗಿದ್ದಾರೆ. ಸೇವೆಯಿಂದ ನಿವೃತ್ತರಾಗುವ ಸಂದರ್ಭದಲ್ಲಿ ಅವರಿಗೆ ಆತ್ಮೀಯರು ವಿದಾಯ ಕೋರಿದ್ದಾರೆ.

ಶಿಕ್ಷಕ ಹುದ್ದೆಗೆ ಸಂದರ್ಶನ

ಕಾಸರಗೋಡು: ಮೊಗ್ರಾಲ್ ಪುತ್ತೂರು ಬೆದ್ರಡ್ಕ ಸರಕಾರಿ ತಾಂತ್ರಿಕ ಪ್ರೌಢಶಾಲೆಯಲ್ಲಿ ಎಚ್‌ಎಸ್‌ಎ ಅರೆಕಾಲಿಕ ಕನ್ನಡ ಹುದ್ದೆಯ ನೇಮಕಾತಿಗಾಗಿ ಜೂನ್ 3 ರಂದು ಬೆಳಗ್ಗೆ 11 ಗಂಟೆಗೆ ಸಂದರ್ಶನ ನಡೆಯಲಿದೆ. ಸಂಬಂಧಿತ ವಿಷಯದಲ್ಲಿ ಪದವಿ, ಬಿ.ಎಡ್., ಕೆ.ಟಿ.ಇ.ಟಿ. ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 9495780483, 9447386911 ಸಂಪರ್ಕಿಸಬಹುದು.

ನೀರ್ಚಾಲು ಶಾಲೆಯ ವಿದ್ಯಾರ್ಥಿಗಳ ಸಾಧನೆ





ಬದಿಯಡ್ಕ: 2025–26ನೇ ಶೈಕ್ಷಣಿಕ ವರ್ಷ ದಲ್ಲಿ ಕೇರಳ ಸರಕಾರದ ಶಿಕ್ಷಣ ಇಲಾಖೆಯು ನಡೆಸಿದ ಸಿಎಂ ಕಿಡ್ಸ್ ಸ್ಕಾಲರ್ ಶಿಪ್ ಪರೀಕ್ಷೆಯ (ಎಲ್‌ಎಸ್‌ಎಸ್)ಫಲಿತಾಂಶವು ಪ್ರಕಟವಾಗಿದ್ದು ನೀರ್ಚಾಲಿನ ಮಹಾಜನ ಸಂಸ್ಕೃತ ಕಾಲೇಜು ಅನುದಾನಿತ ಕಿರಿಯ ಪ್ರಾಥಮಿಕ ಶಾಲೆಯ ಐದು ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿ ವಿದ್ಯಾರ್ಥಿವೇತನಕ್ಕೆ ಅರ್ಹತೆ ಪಡೆದಿದ್ದಾರೆ. ಈ ಶಾಲೆಯ ವಿದ್ಯಾರ್ಥಿಗಳಾದ ಅದ್ವೈತ್ ಎಂ., ಕನಿಹಾವಿ., ವಿಷ್ಣು ಕೆ.ಎ., ಶಿವಪ್ರಸಾದ ಬಿ.ಭಟ್, ಅಜಯ್ ಕೃಷ್ಣ ಡಿ. ಸಾಧನೆ ಮಾಡಿದ್ದಾರೆ.

ವಿದ್ಯಾಗಿರಿ ಶಾಲಾ ಮಕ್ಕಳಿಗೆ ಸ್ಕಾಲರ್‌ಶಿಪ್



ಬದಿಯಡ್ಕ: 2025–2026ನೇ ಸಾಲಿನ ಸಿಎಂ ಕಿಡ್ಸ್ ಸ್ಕಾಲರ್‌ಶಿಪ್‌ಗೆ ವಿದ್ಯಾಗಿರಿ ಎಸ್‌ಎಬಿಎಂಪಿ ಯುಪಿ ಶಾಲೆಯ ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ. ಎಲ್‌ಎಸ್‌ಎಸ್ ಪರೀಕ್ಷೆಯಲ್ಲಿ 4ನೇ ತರಗತಿಯ ವಿದ್ಯಾರ್ಥಿಗಳಾದ ಸಮನ್ವಿ ಎನ್.ರೈ, ಶಿಖಾ ಎಂ., ಪ್ರಣವ್ ಎಂ.ರೈ ಹಾಗೂ ಯುಎಸ್‌ಎಸ್ ಪರೀಕ್ಷೆಯಲ್ಲಿ ಮೊಹಮ್ಮದ್ ಅಫ್ಸಲ್ ಎ. ಸ್ಕಾಲರ್ ಶಿಪ್‌ಗೆ ಅರ್ಹತೆ ಗಳಿಸಿದ್ದಾರೆ.

'ಒಳ್ಳೆಯದನ್ನು ಖರೀದಿಸಿ, ಒಳ್ಳೆಯದನ್ನು ಸೇವಿಸಿ' ಶೀರ್ಷಿಕೆಯಡಿ ಕುಟುಂಬಶ್ರೀಯ ಹೊಸ ಉದ್ಯಮ ಆರಂಭ

ಜಿಲ್ಲೆಯಾದ್ಯಂತ ಮನೆ ಬಾಗಿಲಿಗೇ ಬರಲಿವೆ ಉತ್ಪನ್ನಗಳು!

ಕಾಸರಗೋಡು: ಜಿಲ್ಲೆಯಲ್ಲಿ ಕುಟುಂಬಶ್ರೀ ಘಟಕಗಳ ಸ್ಥಳೀಯ ಉತ್ಪನ್ನಗಳಿಗೆ ಇನ್ನು ಮುಂದೆ ಮಾರುಕಟ್ಟೆಗಳನ್ನು ಹುಡುಕಬೇಕಾಗಿಲ್ಲ, ಅಲ್ಲದೆ ಅಂತಹ ಉತ್ಪನ್ನ ಮಾರುಕಟ್ಟೆಗಳಿಗೆ ಹೋಗಿ ಅರಸಬೇಕಾಗಿಯೂ ಇಲ್ಲ, ಅದರ ಬದಲು ಜಿಲ್ಲೆಯಾದ್ಯಂತ ಮನೆ ಬಾಗಿಲಿಗೆ ನೇರವಾಗಿ ಉತ್ಪನ್ನಗಳ ಪೂರೈಕೆಯಾಗಲಿವೆ. 'ಒಳ್ಳೆಯದನ್ನು ಖರೀದಿಸಿ, ಒಳ್ಳೆಯದನ್ನು ಸೇವಿಸಿ' ಎಂಬ ಶೀರ್ಷಿಕೆಯಡಿ ಕುಟುಂಬಶ್ರೀ ಘಟಕಗಳ ಉತ್ಪನ್ನಗಳನ್ನು ಜಿಲ್ಲೆಯ ಪ್ರತೀ ಮನೆಗೆ ನೇರವಾಗಿ ತಲುಪಿಸಲು ಕುಟುಂಬಶ್ರೀ ಜಿಲ್ಲಾ ಮಿಷನ್ ನೇತೃತ್ವ ವಿವಿಧ ಪೂರಕ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಹಿನ್ನೆಲೆ ಹೋಂ ಶಾಪ್ ಯೋಜನೆ ಮೂಲಕ ಸಾಮಗ್ರಿಗಳನ್ನು ಮನೆಗಳಿಗೆ ತಲುಪಿಸುವ ಉದ್ದೇಶ ಹೊಂದಿದೆ.

ಆರು ಬ್ಲಾಕ್‌ಗಳ ವ್ಯಾಪ್ತಿಯಲ್ಲಿ ಜಾರಿ

ಮಾರುಕಟ್ಟೆಯಲ್ಲಿ ರಾಸಾಯನಿಕ ಪದಾರ್ಥಗಳು ಬೆರೆತ ಆಹಾರ ವಸ್ತುಗಳ ಬದಲಿಗೆ ವಿಷರಹಿತವಾದ ಹಾಗೂ ಶುದ್ಧವಾದ ಉತ್ಪನ್ನಗಳನ್ನು ಜನರಿಗೆ ಒದಗಿಸುವುದು ಯೋಜನೆಯ ಪ್ರಧಾನ ಗುರಿಯಾಗಿದೆ. ಮೊದಲ



ಹಂತದಲ್ಲಿ ಜಿಲ್ಲೆಯ ಆರು ಬ್ಲಾಕ್‌ಗಳ ವ್ಯಾಪ್ತಿಯಲ್ಲಿ ಯೋಜನೆಯನ್ನು ಜಾರಿಗೊಳಿಸಲಾಗುವುದು.

ಇಬ್ಬರು ಸೇಲ್ಸ್ ಎಕ್ಸಿಕ್ಯೂಟಿವ್‌ಗಳ ನೇಮಕ

ತರಬೇತಿ ಪಡೆದ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್‌ಗಳ ಮೂಲಕ ಪ್ರತಿಯೊಂದು ಕಾಸರಗೋಡಿನ ಸ್ಥಳೀಯಾಡಳಿತ ಸಂಸ್ಥೆಯ ವಾರ್ಡ್‌ಗಳನ್ನು ಕೇಂದ್ರೀಕರಿಸಿ ಯೋಜನೆಯು ಕಾರ್ಯಾಚರಿಸಲಿದೆ. ಒಂದು ವಾರ್ಡ್‌ನಿಂದ ತಲಾ ಇಬ್ಬರು ಸೇಲ್ಸ್ ಎಕ್ಸಿಕ್ಯೂಟಿವ್‌ಗಳನ್ನು ಆಯ್ಕೆ ಮಾಡಲಾಗುವುದು.

ತರಬೇತಿ ನೀಡಲಾಗುವುದು

ಉತ್ಪನ್ನಗಳ ಮಾರಾಟ, ಗ್ರಾಹಕರೊಂದಿಗೆ ಆಶಯ ವಿನಿಮಯ ಇತ್ಯಾದಿಗಳಲ್ಲಿ ಇವರಿಗೆ ತರಬೇತಿ ನೀಡಲಾಗುವುದು. ಈ ಎಕ್ಸಿಕ್ಯೂಟಿವ್‌ಗಳು ಸಾಮಗ್ರಿಗಳೊಂದಿಗೆ ಮನೆಗಳಿಗೆ ಆಗಮಿಸುವರು. ಆರ್ಡರ್ ಅನುಸರಿಸಿ ಗ್ರಾಹಕರಿಗೆ ಉತ್ಪನ್ನಗಳನ್ನು ಕ್ಲಪ್ತ ಸಮಯಕ್ಕೆ ತಲುಪಿಸಲಾಗುವುದು.

- **ಮಾರುಕಟ್ಟೆಯಲ್ಲಿ ರಾಸಾಯನಿಕ ಪದಾರ್ಥಗಳು ಬೆರೆತ ಆಹಾರ ವಸ್ತುಗಳ ಬದಲಿಗೆ ವಿಷರಹಿತ ಹಾಗೂ ಶುದ್ಧವಾದ ಉತ್ಪನ್ನಗಳನ್ನು ಜನರಿಗೆ ಒದಗಿಸುವುದು ಯೋಜನೆಯ ಪ್ರಧಾನ ಗುರಿ.**
- **ತರಬೇತಿ ಪಡೆದ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್‌ಗಳ ಮೂಲಕ ಪ್ರತಿಯೊಂದು ಕಾಸರಗೋಡಿನ ಸ್ಥಳೀಯಾಡಳಿತ ಸಂಸ್ಥೆಯ ವಾರ್ಡ್‌ಗಳನ್ನು ಕೇಂದ್ರೀಕರಿಸಿ ಯೋಜನೆ ಕಾರ್ಯಾಚರಣೆ**

ಜಿಲ್ಲೆಯಾದ್ಯಂತ 8000ಕ್ಕೂ ಅಧಿಕ ಕುಟುಂಬಶ್ರೀ ಕಿರು ಕೈಗಾರಿಕಾ ಘಟಕಗಳಿವೆ. ಆದರೆ ಅವುಗಳಿಂದ ಹೋಂ ಶಾಪ್ ಮೂಲಕ ಮಾರಾಟ ಮಾಡಲು ಉದ್ದೇಶಿಸುವ ಉತ್ಪನ್ನಗಳನ್ನು ಕಟ್ಟುನಿಟ್ಟಿನ ಗುಣಮಟ್ಟ ತಪಾಸಣೆಗೆ ಒಳಪಡಿಸಲು ನಿರ್ಧರಿಸಲಾ ಗಿದೆ. ಗುಣಮಟ್ಟ ಸಂಪೂರ್ಣವಾಗಿ ಖಾತರಿಯಾದ ಉತ್ಪನ್ನಗಳನ್ನಷ್ಟೇ ಹೋಂ ಶಾಪ್ ಮಾರುಕಟ್ಟೆಗೆ ಆಯ್ಕೆ ಮಾಡಲಾಗುವುದು.

ಜಿಲ್ಲೆಯ 42 ಸಿಡಿಎಸ್ ಘಟಕಗಳ ಮೂಲಕ 1600ರಷ್ಟು ಮಂದಿ ಮಹಿಳೆಯರಿಗೆ ನೇರವಾಗಿ ನೌಕರಿ ನೀಡಲು ಹೋಂ ಶಾಪ್ ಯೋಜನೆಯ ಮೂಲಕ ಸಾಧ್ಯವಾಗಲಿದೆ. ಜೊತೆಗೆ ನೂತನ ಉದ್ಯಮಶೀಲತೆಗೆ ಬರಲು ಹೆಚ್ಚಿನ ಮಹಿಳೆಯರಿಗೆ ಪ್ರೇರಣೆಯಾಗಲಿದೆ. ಇದುವರೆಗೆ ದೊಡ್ಡ ಬ್ರಾಂಡ್‌ಗಳೊಂದಿಗೆ ಸ್ಪರ್ಧಿಸಿ ಅತ್ಯುತ್ತಮ ಉತ್ಪನ್ನಗಳನ್ನು ಕನಿಷ್ಠ ಬೆಲೆಗೆ ಗ್ರಾಹಕರಿಗೆ ಪೂರೈಸಲು ಸಾಧ್ಯವಾಗಿರಲಿಲ್ಲ, ವಸ್ತುಗಳನ್ನು ಸಮರ್ಪಕವಾಗಿ ತಲುಪಿಸಲಾಗುತ್ತಿಲ್ಲ ಎಂಬುದು ಕುಟುಂಬಶ್ರೀ ಘಟಕಗಳ ನೋವಾಗಿತ್ತು. ಆದರೆ ಇನ್ನು ಮುಂದೆ ಎಲ್ಲಾ ಮನೆಗಳಿಗೆ ನೇರವಾಗಿ ಉತ್ಪನ್ನಗಳನ್ನು ಪೂರೈಸುವುದರಿಂದ ಇಂತಹ ಸಮಸ್ಯೆಗೆ ಸಂಪೂರ್ಣ ಪರಿಹಾರ ಲಭಿಸಲಿದೆ ಎಂದು ಕುಟುಂಬಶ್ರೀ ಜಿಲ್ಲಾ ಮಿಷನ್ ಅಭಿಪ್ರಾಯಪಟ್ಟಿದೆ. 42 ಕುಟುಂಬಶ್ರೀ ಸಿಡಿಎಸ್‌ಗಳಲ್ಲಿ ಸೂಪರ್ ಮಾರ್ಕೆಟ್‌ಗಳನ್ನು ಸ್ಥಾಪಿಸುವುದರ ಬಗ್ಗೆಯೂ ಯೋಜನೆ ರೂಪಿಸಲಾಗುತ್ತಿದೆ.

ಪತ್ರಕರ್ತರ ಮಕ್ಕಳಿಗೆ ಕಲಿಕೋಪಕರಣ ವಿತರಣೆ, ಕೃತಿ ಪರಿಚಯ ಸಮಾರಂಭ

ಕೇರಳದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಯತ್ನ

ಮಂಜೇಶ್ವರ: ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಕಾಸರಗೋಡು ಜಿಲ್ಲಾ ಸಮಿತಿ ಇವುಗಳ ಆಶ್ರಯದಲ್ಲಿ ಪತ್ರಕರ್ತರ ಮಕ್ಕಳಿಗೆ ಕಲಿಕೋಪಕರಣ ವಿತರಣೆ ಹಾಗೂ ಎಂ.ಶಾಫಿ ಬಂಡಸಾಲೆ ಅವರ ಕೃತಿ ಪರಿಚಯ ಕಾರ್ಯಕ್ರಮವು ಶನಿವಾರ ಉಪ್ಪಳ ವ್ಯಾಪಾರಿ ಭವನದಲ್ಲಿ ನಡೆಯಿತು.



ಸಮಾರಂಭದಲ್ಲಿ ಕಲಿಕೋಪಕರಣಗಳನ್ನು ವಿತರಿಸಿ ಮಾತನಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅವರು, ರಾಷ್ಟ್ರೀಯತೆ ಬೆಳೆದಂತೆ ಗಡಿಗಳಿಗೆ ಹೆಚ್ಚು ಮಹತ್ವವಿಲ್ಲ, ಆದರೂ ಸ್ಥಳೀಯ ಸಂಸ್ಕೃತಿ ಉಳಿಸಲು ಪ್ರಯತ್ನಗಳು ಬೇಕು. ಈ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಗಡಿ ಪ್ರದೇಶಗಳ ಭಾಷಾ ಅಭಿವೃದ್ಧಿಗೆ ನೆರವು ನೀಡುತ್ತಿದೆ ಎಂದರು.

ಆಂಗ್ಲ ಭಾಷಾ ಪ್ರೇಮದ ಭರಾಟೆಯಲ್ಲಿ ಕನ್ನಡ ಸಹಿತ ಪ್ರಾದೇಶಿಕ ಭಾಷೆಗಳಿಗೆ ತೀವ್ರ ಅಪಾಯ ಕಾಡಿದೆ. ದ್ವಿಭಾಷೆ, ತ್ರಿಭಾಷಾ ಕಲಿಕೆಗಳಂತಹ ಉಪಕ್ರಮಗಳೂ ಪರಿಣಾಮಕಾರಿಯಾಗುತ್ತಿಲ್ಲ, ಈ ನಿಟ್ಟಿನಲ್ಲಿ ಮಾಧ್ಯಮಗಳ ಮೂಲಕ ಪತ್ರಕರ್ತರು ಪ್ರಾದೇಶಿಕ ಮಟ್ಟದಲ್ಲಿ ಭಾಷಾಭಿಮಾನ, ಮನಸ್ಸುಗಳನ್ನು ಕಟ್ಟಿಕೊಡಲು ಮಾಡುತ್ತಿರುವ ಯತ್ನಗಳು ಶ್ಲಾಘನೀಯ ಎಂದರು.

ಈ ಸಂದರ್ಭ ಮಂಜೇಶ್ವರದ ನೂತನ ಶಾಸಕ ಎ.ಕೆ.ಎಂ.ಅಶ್ರಫ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭ ಮಾತನಾಡಿದ ಶಾಸಕರು, ಕಾಸರಗೋಡಿನ ಕನ್ನಡ ಅಸ್ಮಿತೆಯನ್ನು ಕಾಪಿಡುವ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚಿಸುವಂತೆ ಕೇರಳದ ನೂತನ ಸರಕಾರಕ್ಕೆ ಮನವಿ ಸಲ್ಲಿಸಲಾಗಿದ್ದು ಕರಡು ಯೋಜನೆ ರಚಿಸಲಾಗುತ್ತಿದೆ ಎಂದರು.

ಕಾರ್ಯನಿರತ ಕನ್ನಡ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ರವಿ ನಾಯ್ಕಾಪು ಅಧ್ಯಕ್ಷತೆ ವಹಿಸಿದ್ದರು. ಎಂ.ಶಾಫಿ ಬಂಡಸಾಲೆ ಅವರ ಮನದ ಮಾತು ಕವನ ಸಂಕಲನದ ಬಗ್ಗೆ ಕಾರ್ಯನಿರತ ಪತ್ರಕರ್ತರ ಸಂಘದ ಕರ್ನಾಟಕ ರಾಜ್ಯ ಸಮಿತಿ ಸದಸ್ಯ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಮಾತನಾಡಿದರು. ಕೃತಿಕಾರ ಎಂ.ಶಾಫಿ ಬಂಡಸಾಲೆ ಅವರನ್ನು ಈ ಸಂದರ್ಭ ಗೌರವಿಸಲಾಯಿತು.

ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಸಂಸ್ಥಾಪಕ ಎಸ್.ಪ್ರದೀಪ್ ಕುಮಾರ್ ಕಲ್ಲೂರ, ಕನ್ನಡ ಸಾಹಿತ್ಯ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ. ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಗಮಕ ಕಲಾ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ತೆಕ್ಕೆಕೆರೆ ಶಂಕರನಾರಾಯಣ ಭಟ್, ಸಾಮಾಜಿಕ ಕಾರ್ಯಕರ್ತೆ ಸುಜಾತ ಶೆಟ್ಟಿ, ಗೋಪಾಲ ಶೆಟ್ಟಿ ಅರಿಬೈಲು, ರಾಘವ ಚೇರಾಲು, ಮೊಹಮ್ಮದ್ ಅಝೀಂ ಮಣಿಮುಂಡ, ಇಬ್ರಾಹಿಂ ಕುಂಬಂಕುಝಿ ಅತಿಥಿಗಳಾಗಿ ಭಾಗವಹಿಸಿದ್ದರು.

ಆರ್ಯಭಟ ಪ್ರಶಸ್ತಿ ವಿಜೇತ ಪ್ರೊ.ಎ. ಶ್ರೀನಾಥ್ ಕಾಸರಗೋಡು ಹಾಗೂ ಯುವ ವೈದ್ಯೆ ಡಾ.ಷಸಾ ಅವರನ್ನು ಗೌರವಿಸಲಾಯಿತು. ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಗಂಗಾಧರ ತೆಕ್ಕೆಮೂಲೆ ಸ್ವಾಗತಿಸಿ, ಜಯ ಮಣಿಯಂಪಾರೆ ವಂದಿಸಿದರು. ಪುರುಷೋತ್ತಮ ಭಟ್ ಕೆ. ನಿರೂಪಿಸಿದರು. ಎ.ಆರ್.ಸುಬ್ಬಯ್ಯಕಟ್ಟೆ ಸಹಕರಿಸಿದರು.

ನಿಸರ್ಗದ ಮಡಿಲಿನಲ್ಲಿ ಸಾಹಿತ್ಯ ಕಲರವ | ಮನಸ್ವಿನಿ ಮಹಿಳಾ ವೇದಿಕೆ ಉದ್ಘಾಟನೆ

ಚುಳ್ಳಿಕಾನದಲ್ಲಿ ಹಳೆ ಬೇರು ಹೊಸ ಚಿಗುರುಗಳ ಸಮಾಗಮ

ಬದಿಯಡ್ಕ: ಬರವಣಿಗೆಯ ಕ್ಷೇತ್ರದಲ್ಲಿ ಹಳೆ ಬೇರುಗಳನ್ನು ಗುರುತಿಸಿ, ಹೊಸ ಚಿಗುರುಗಳನ್ನು ನೀರೆರೆದು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಳ್ಳಿ ಹಳ್ಳಿಗಳಲ್ಲಿ ಮಹಿಳೆ ಸಾಹಿತ್ಯ ಕ್ಷೇತ್ರದಲ್ಲಿ ಮುನ್ನೆಲೆಗೆ ಬರಬೇಕು ಎನ್ನುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದಿರುವ ಮನಸ್ವಿನಿ ಮಹಿಳಾ ವೇದಿಕೆ (ಮನೆ ಮನೆ ಸಾಹಿತ್ಯ) ಚುಳ್ಳಿಕಾನ ಬದಿಯಡ್ಕ ಇದರ ಉದ್ಘಾಟನಾ ಸಮಾರಂಭ ಹಾಗೂ ಭಾವಗಾನ ಮತ್ತು ಕವಿಗೋಷ್ಠಿ ಕಾರ್ಯಕ್ರಮವು ಪ್ರಬುದ್ಧ ಕವಯಿತ್ರಿ ಪ್ರಮೀಳಾ ಚುಳ್ಳಿಕಾನ ಅವರ ನಿವಾಸವಾದ ನಿಸರ್ಗ – ಚುಳ್ಳಿಕಾನದಲ್ಲಿ ಗುರುವಾರ ಜರಗಿತು.



ವಿಶ್ರಾಂತ ಕನ್ನಡ ಪ್ರಾಧ್ಯಾಪಿಕೆ ಹಾಗೂ ಸಾಹಿತಿ ಡಾ.ಯು.ಮಹೇಶ್ವರಿ ದೀಪ ಬೆಳಗಿಸಿ ಉದ್ಘಾಟಿಸಿದರು. ಕಥೆಗಾರ್ತಿ, ಸಾಹಿತಿ ಸ್ನೇಹಲತಾ ದಿವಾಕರ್ ಶುಭಾಶಂಸನೆಗೈದರು. ಸಾಹಿತಿ, ಕವಯತ್ರಿ ಸೀತಾಲಕ್ಷ್ಮಿ ವರ್ಮ ವಿಟ್ಲ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಹಿರಿಯ ಸಾಹಿತಿ, ಲೇಖಕಿ ಬಿ.ಸತ್ಯವತಿ ಭಟ್ ಕೊಳಚಪ್ಪು ಸಭಾಧ್ಯಕ್ಷತೆ ವಹಿಸಿದ್ದರು.

ಕವಯತ್ರಿ ಜ್ಯೋತ್ಸ್ನಾ ಎಂ. ಕಡಂದೇಲು ಪ್ರಸ್ತಾವನೆಗೈದರು. ನಿವೃತ್ತ ಶಿಕ್ಷಕಿ ಹಾಗೂ ಹಿರಿಯ ಸಾಹಿತಿ ಲಕ್ಷ್ಮಿ ವಿ.ಭಟ್ ಮಂಜೇಶ್ವರ ಸ್ವಾಗತಿಸಿದರು. ಕವಯತ್ರಿ ಪ್ರಮೀಳಾ ಚುಳ್ಳಿಕಾನ ಧನ್ಯವಾದವಿತ್ತರು. ಶಿಕ್ಷಕಿ ಹಾಗೂ ಕವಯತ್ರಿ ಸುಶೀಲಾ ಪದ್ಯಾಣ ಕಾರ್ಯಕ್ರಮ ನಿರೂಪಿಸಿದರು. ಕನ್ನಡ ಸಾಹಿತ್ಯ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಹಿರಿಯ ಸಾಹಿತಿ ಡಾ.ಕೊಳ್ಚಪ್ಪೆ ಗೋವಿಂದ ಭಟ್, ಲತೀಶ್ ಸಂಕೋಳಿಗೆ ಹಾಗೂ ಹಿರಿಯ ಕಿರಿಯ ಸಾಹಿತ್ಯ ಬಂಧುಗಳು ಸಭೆಯಲ್ಲಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸನ್ಮಾನಿತರು

ಸಾಹಿತ್ಯ ಕ್ಷೇತ್ರದಲ್ಲಿ ಹಿರಿಯರಿಗೂ ಕಿರಿಯರಿಗೂ ಸ್ಪೂರ್ತಿಯ ಚಿಲುಮೆ ಯಂತಿರುವ ಹಿರಿಯ ಸಾಹಿತಿಗಳಾದ ಬಿ.ಸತ್ಯವತಿ ಭಟ್ ಕೊಳಚಪ್ಪು ಮತ್ತು ಡಾ.ಯು.ಮಹೇಶ್ವರಿ ಅವರನ್ನು ಸನ್ಮಾನಿಸಲಾಯಿತು.

ವಿಚಾರ ಸಂಕಿರಣ

ಸಭಾ ಕಾರ್ಯಕ್ರಮದ ನಂತರ ವಿಚಾರ ಸಂಕಿರಣ ಕಾರ್ಯಕ್ರಮವನ್ನು ನಡೆಸಲಾಯಿತು.

ಮಹಿಳಾ ಸಬಲೀಕರಣದ ಕುರಿತು ಡಾ.ಯು.ಮಹೇಶ್ವರಿ, ಕೌಟುಂಬಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಮಹಿಳೆಯರ ಪಾತ್ರ ಕುರಿತು ಸ್ನೇಹಲತಾ ದಿವಾಕರ್ ಹಾಗೂ ಸ್ತ್ರೀ ಶಕ್ತಿ ಮಹಾಶಕ್ತಿ ಕುರಿತು ಸೀತಾಲಕ್ಷ್ಮಿ ವರ್ಮ ವಿಟ್ಲ ವಿಚಾರ ಮಂಡಿಸಿದರು.

ಭಾವಗಾನ, ಕವಿಗೋಷ್ಠಿ

ನಿರ್ಮಲಾ ಶೇಷಪ್ಪ ಪೆರ್ಲ, ಜ್ಯೋತ್ಸ್ನಾ ಎಂ. ಕಡಂದೇಲು, ಸಂಧ್ಯಾ ಕೊರೆಕ್ಕಾನ, ಪ್ರಭಾವತಿ ಕೆದಿಲಾಯ ಪುಂಡೂರು ಭಾವಗಾನ ನಡೆಸಿಕೊಟ್ಟರು. ಆಯ್ದ ಕವಯತ್ರಿಯರ ರಚನೆಗೆ ಶ್ಯಾಮಲಾ ಸಂಪತ್ತಿಲ ರಾಗ ಸಂಯೋಜಿಸಿದರು. ನಂತರ ಕವಿಗೋಷ್ಠಿ ಜರಗಿತು.

ಮಾಲತಿ ಪಟ್ಟಣ ಶೆಟ್ಟಿಯವರ ಕವಿತೆಗಳು ಸಾಮಾಜಿಕ ಸಮಸ್ಯೆಗಳಿಗೆ ಧ್ವನಿಯಾಗಿವೆ



ಕಾಸರಗೋಡು: ಮಾಲತಿ ಪಟ್ಟಣ ಶೆಟ್ಟಿ ಅವರ ಕವಿತೆಗಳು ವೈಯಕ್ತಿಕ ನೋವು ನಲಿವುಗಳಿಗಲ್ಲದೆ ಸಾಮಾಜಿಕ ತಲ್ಲಣಗಳಿಗೂ ಸ್ಪಂದಿಸುತ್ತವೆ. ಅವರ ಕಾವ್ಯವು ಭಾಷಣ, ಗೋಳಾಟಗಳಾಗಿ ಉಳಿಯದೆ ಸಾಮಾಜಿಕ ಸಮಸ್ಯೆಗಳಿಗೆ ಧ್ವನಿಯಾಗುತ್ತದೆ. ಆ ಕಾಲಘಟ್ಟದಲ್ಲಿ ಇಂತಹ ಪ್ರಯತ್ನ ಅಪರೂಪವಾಗಿತ್ತು ಎಂದು ಯುವ ಸಾಹಿತಿ ಡಾ.ಸುಭಾಷ್ ಪಟ್ಟಾಜೆ ಕಾಸರಗೋಡು ಅಭಿಪ್ರಾಯ ವ್ಯಕ್ತಪಡಿಸಿದರು.

ಧಾರವಾಡದ ರಾ.ಹ.ದೇಶಪಾಂಡೆ ಸಭಾಭವನದಲ್ಲಿ ಉತ್ತರ ಕರ್ನಾಟಕ ಲೇಖಕಿಯರ ಸಂಘವು ಆಯೋಜಿಸಿದ್ದ 'ಹಿರಿಯಕ್ಕನ ಅಕ್ಷರ ಸಂಭ್ರಮ' ಎಂಬ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಮಾಲತಿ ಪಟ್ಟಣ ಶೆಟ್ಟಿಯವರ ಕಾವ್ಯವು ಲೇಖಕಿಯನ್ನೂ ಒಳಗೊಂಡಂತೆ ಸಮಾಜದ ಸಂಕಟವನ್ನು ತೋಡುವ, ಮಾನವ ಜಗತ್ತಿನೊಡನೆ ಅರ್ಥಪೂರ್ಣ ಸಂಬಂಧ ಬೆಸೆಯುವ, ಬದುಕಿನ ಅರ್ಥವನ್ನು ಹುಡುಕುವ ಮಾಧ್ಯಮವಾಗಿದೆ ಎಂದರು.

ಯುವ ವಿಮರ್ಶಕ ವಿಕಾಸ ಹೊಸಮನಿ ಮಾತನಾಡಿ, ಮಾಲತಿ ಪಟ್ಟಣ ಶೆಟ್ಟಿಯವರ ಕಥೆಗಳಲ್ಲಿ ಸುಶಿಕ್ಷಿತ, ಧೈರ್ಯವಂತ ಹಾಗೂ ಒಂಟಿ ಮಹಿಳೆಯರು ಕಂಡು ಬರುತ್ತಾರೆ. ಅವರು ಸ್ವತಂತ್ರರಾದರೂ ಸ್ವೇಚ್ಛಾಚಾರಿಗಳಲ್ಲ, ಮಾಲತಿಯವರದ್ದು ವಾಸ್ತವ ಪ್ರಜ್ಞೆ ಹಿನ್ನೆಲೆ ರೂಪುಗೊಂಡ ಸ್ತ್ರೀವಾದ ಹೊರತು ಸಾಹಿತ್ಯಕ ಪಠ್ಯ ರೂಪಿಸಿದ ಸ್ತ್ರೀವಾದ ವಲ್ಲ ಎಂದರು.

ಮಾಲತಿ ಪಟ್ಟಣ ಶೆಟ್ಟಿಯವರ ಜೊತೆ ಹುಬ್ಬಳ್ಳಿ ಧಾರವಾಡದ ಲೇಖಕಿಯರು ಸಂವಾದ ನಡೆಸಿದರು. ನಿವೃತ್ತ ಕುಲಪತಿ ವೀರಣ್ಣ ರಾಜೂರ ಅಧ್ಯಕ್ಷತೆ ವಹಿಸಿದ್ದರು. ಲಲಿತಾ ಪಾಟೀಲ, ಸುವರ್ಣಾ, ಪುಷ್ಪಾ ಹಾಲಭಾವಿ, ಸುನಂದಾ, ಮಾಲತಿ ಹೆಗಡೆ, ರೂಪಾ ಜೋಶಿ, ಅನಿತಾ ಗುಡಿ, ಉಷಾ ಗದ್ದಗಿಮಠ, ಮೇಘಾ ಹುಕ್ಕೇರಿ, ಸುಮಾ ಹಡಪದ ಮತ್ತಿತರರಿದ್ದರು.

ಬೆವ್‌ಕೋ ಸಂಸ್ಥೆಯ ಪ್ಲಾಸ್ಟಿಕ್ ಮದ್ಯ ಬಾಟ್ಲಿ ಸಂಗ್ರಹ ಯೋಜನೆ ಹಿಂತೆಗೆತ

ಕಾಸರಗೋಡು: ಜಿಲ್ಲೆಯಲ್ಲಿ ಮದ್ಯ ಮಾರಾಟ ನಡೆಸುವ ಸಂದರ್ಭ ಪ್ಲಾಸ್ಟಿಕ್ ಬಾಟ್ಲಿಗಳನ್ನು ಸಂಗ್ರಹಿಸುವ ಬೆವ್‌ಕೋ ಸಂಸ್ಥೆ ಯೋಜನೆಯನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಲಾಗಿದೆ. ಮದ್ಯ ಮಾರಾಟ ವೇಳೆ ಗ್ರಾಹಕರಿಂದ 20 ರೂಪಾಯಿ ಪಡೆದು ಬಾಟ್ಲಿಗಳನ್ನು ಸಂಗ್ರಹಿಸುವ ಯೋಜನೆ ಇದಾಗಿದೆ. ಕ್ಲೀನ್ ಕೇರಳ ಕಂಪೆನಿಯ ಸಹಕಾರದೊಂದಿಗೆ ಈ ಯೋಜನೆ ಜಾರಿಗೊಳಿಸಲಾಗಿದ್ದು ಆದರೆ ಇದು ಲಾಭದಾಯಕವಲ್ಲ ಎಂಬುದನ್ನು ಅರಿತು ಹಿಂತೆಗೆದು ಕೊಳ್ಳಲು ತೀರ್ಮಾನಿಸಲಾಗಿದೆ.



ತಿರುವನಂತಪುರ ನಗರ ಹಾಗೂ ಕಣ್ಣೂರು ಜಿಲ್ಲೆಯ ಗ್ರಾಮೀಣ ವಲಯದಲ್ಲಿ ತಲಾ 10ರಂತೆ ಮದ್ಯದಂಗಡಿಗಳಿಂದ ಸಂಸ್ಥೆ ಬಾಟ್ಲಿ ಸಂಗ್ರಹ ಕಾರ್ಯವನ್ನು ಪ್ರಾಥಮಿಕ ಹಂತದಲ್ಲಿ ಆರಂಭಿಸಿತ್ತು. ನಂತರದ ಹಂತಗಳಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ಯೋಜನೆ ಕೈಗೊಳ್ಳಲಾಗಿತ್ತು. ಬಳಿಕ ಜನವರಿ 29ರ ವರೆಗೆ 56,68,654 ಬಾಟ್ಲಿಗಳನ್ನು ಈ ಮೂಲಕ ಸಂಗ್ರಹಿಸಲಾಗಿತ್ತು.

ಸರಕಾರದ ನಿಯಂತ್ರಣದಲ್ಲಿರುವ ಕ್ಲೀನ್ ಕೇರಳ ಕಂಪೆನಿಯನ್ನು ಪ್ರಸ್ತುತ ಯೋಜನೆಯಿಂದ ಹೊರತುಪಡಿಸಲಾಯಿತು. ಆದ್ದರಿಂದ ಹೊಸ ಏಜೆನ್ಸಿಯನ್ನು ಪತ್ತೆಹಚ್ಚಲು ಬಿವರೇಜಸ್ ಕಾರ್ಪೊರೇಶನ್ ಕಳೆದ ಜನವರಿಯಲ್ಲಿ ಕ್ರಮ ಕೈಗೊಂಡಿತ್ತು. ಅದರಂತೆ ಟೆಂಡರ್ ಆಹ್ವಾನಿಸಿದರೂ ಅದರಲ್ಲಿ ಪಾಲ್ಗೊಂಡ 3 ಖಾಸಗಿ ಸಂಸ್ಥೆಗಳು ತಾಂತ್ರಿಕ ಅರ್ಹತೆ ಪಡೆಯದಿರುವುದರಿಂದ ಅದನ್ನು ರದ್ದುಪಡಿಸಲಾಯಿತು.

ಸ್ಥಳಾವಕಾಶದ ಕೊರತೆ

ಕಾಸರಗೋಡು ಜಿಲ್ಲೆಯ ಮದ್ಯದಂಗಡಿಗಳಲ್ಲಿ ಸಂಗ್ರಹಿಸುವ ಬಾಟ್ಲಿಗಳನ್ನು ಯಂತ್ರಗಳ ಸಹಾಯದಿಂದ ಶೀಟ್‌ಗಳನ್ನಾಗಿಸಿ ಇತರ ರಾಜ್ಯಗಳ ರೀ ಸೈಕ್ಲಿಂಗ್ ಸಂಸ್ಥೆಗಳಿಗೆ ಕಳುಹಿಸಲಾಗುತ್ತಿತ್ತು. ಆದರೆ ವಾರದಲ್ಲಿ ಒಂದು ಅಥವಾ ಎರಡು ಬಾರಿ ಮಾತ್ರ ಬಾಟ್ಲಿಗಳನ್ನು ಸಂಗ್ರಹಿಸಲು ಸಾಧ್ಯವಿದೆ ಎಂದು ಬೆವ್‌ಕೋ ಸಂಸ್ಥೆಯು ಹೇಳಿದೆ. ಬಹುತೇಕ ಚಿಲ್ಲರೆ ಮಾರಾಟ ಕೇಂದ್ರಗಳಲ್ಲಿ ಖಾಲಿ ಬಾಟ್ಲಿಗಳನ್ನು ಸಂಗ್ರಹಿಸಿಡಲು ಸ್ಥಳಾವಕಾಶದ ಕೊರತೆ ಎದುರಾಗಿದೆ. ಈ ಹಿನ್ನೆಲೆ ಮದ್ಯದ ಖಾಲಿ ಬಾಟ್ಲಿಗಳನ್ನು ಯಾವ ರೀತಿ ಸಂಗ್ರಹಿಸುವುದು ಮತ್ತು ಎಲ್ಲಿಗೆ ಕಳುಹಿಸುವುದು ಎಂಬ ಪ್ರಶ್ನೆಗೆ ಸಮರ್ಪಕ ಉತ್ತರವಿಲ್ಲದಿರುವುದು ವಿಪರ್ಯಾಸವಾಗಿದೆ.

ಜೂನ್ 16 ರಿಂದ 30ರ ವರೆಗೆ ಮೊದಲ ಹಂತದ ಸ್ವಯಂ ಗಣತಿ

ಕಾಸರಗೋಡು: ಜಿಲ್ಲೆಯು 2027ರ ಜನಗಣತಿ ಪ್ರಕ್ರಿಯೆಗೆ ಸಿದ್ಧತೆ ನಡೆಸುತ್ತಿದ್ದು, ಇದು ವಿಕಸಿತ ಭಾರತ 2047ರ ಮೂಲಾಧಾರವಾಗಲಿದೆ. ಮೊದಲ ಹಂತದ ಸ್ವಯಂ ಗಣತಿಯನ್ನು ಜೂನ್ 16 ರಿಂದ 30 ರ ತನಕ ನಡೆಸಬಹುದು. ವಸತಿ ಮೌಲ್ಯಮಾಪನ ಮತ್ತು ವಸತಿ ಗಣತಿಯನ್ನು ಒಳಗೊಂಡಿರುವ ಮೊದಲ ಹಂತದ ದತ್ತಾಂಶ ಸಂಗ್ರಹಣೆಯನ್ನು ಜುಲೈ 1 ರಿಂದ 30ರ ವರೆಗೆ 30 ದಿನಗಳ ಅವಧಿಯಲ್ಲಿ ನಡೆಸಲಾಗುವುದು.

1948ರ ಜನಗಣತಿ ಕಾಯ್ದೆಯ ಪ್ರಕಾರ ಸಾರ್ವಜನಿಕರು ಒದಗಿಸುವ ಮಾಹಿತಿಯನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುತ್ತದೆ. ವ್ಯಕ್ತಿಗಳ ಹೆಸರುಗಳನ್ನು ಬಹಿರಂಗಪಡಿಸಲಾಗುವುದಿಲ್ಲ ಅಥವಾ ತೆರಿಗೆ ಸಂಬಂಧಿತ ವಿಷಯಗಳು ಅಥವಾ ಇತರ ವಿಚಾರಣೆಗಳಿಗೆ ಬಳಸಲಾಗುವುದಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಈ ಬಾರಿ ಪೋರ್ಟಲ್ ಮೂಲಕ ಜನರು ತಮ್ಮ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಒದಗಿಸಲು ಸ್ವಯಂ ಗಣತಿ ಸೌಲಭ್ಯವನ್ನು ಒದಗಿಸಲಾಗಿದೆ. ಈ ಕುರಿತು ಮಾಹಿತಿಯನ್ನು ದಾಖಲಿಸುವ ಮೂಲಕ ಪಡೆದ ಎಸ್‌ಇ – ಐಡಿಯನ್ನು ಅಧಿಕಾರಿಗಳು ಡೇಟಾ ಸಂಗ್ರಹಣೆಗಾಗಿ ತಮ್ಮ ಮನೆಗಳಿಗೆ ಭೇಟಿ ನೀಡಿದಾಗ ಅವರಿಗೆ ಹಸ್ತಾಂತರಿಸಬೇಕು.

ದೇಶದ ಭವಿಷ್ಯದ ಅಭಿವೃದ್ಧಿ ನೀತಿಗಳನ್ನು ರೂಪಿಸಲು ಮತ್ತು ಸಂಪನ್ಮೂಲಗಳನ್ನು ಸಮಾನವಾಗಿ ವಿತರಿಸಲು ಜನಗಣತಿ ದತ್ತಾಂಶವು ಆಧಾರವಾಗಿದೆ. ಉತ್ತಮ ಶಾಲೆಗಳು, ಆಸ್ಪತ್ರೆಗಳು, ರಸ್ತೆಗಳನ್ನು ಖಚಿತಪಡಿಸಿಕೊಳ್ಳಲು, ಸರಿಯಾದ ಯೋಜನೆಗೆ ಇದು ಅತ್ಯಗತ್ಯ. ಮುಂಬರುವ ವರ್ಷಗಳ ಅಭಿವೃದ್ಧಿ ಜನರು ಒದಗಿಸುವ ಸರಿಯಾದ ಮಾಹಿತಿಯನ್ನು ಅವಲಂಬಿಸಿರುವುದರಿಂದ ಎಲ್ಲರೂ ಅಧಿಕಾರಿಗಳೊಂದಿಗೆ ಸಂಪೂರ್ಣವಾಗಿ ಸಹಕರಿಸಲು ವಿನಂತಿಸಲಾಗಿದೆ.


ಮಾಹಿತಿ ಸಂಗ್ರಹ

ಮನೆಗಳು, ಸೌಲಭ್ಯಗಳು ಮತ್ತು ಸ್ವತ್ತುಗಳ ಬಗ್ಗೆ ಮೂಲಭೂತ ಮಾಹಿತಿಯನ್ನು ಸಂಗ್ರಹಿಸುವುದು ಈ ಹಂತದ ಮುಖ್ಯ ಉದ್ದೇಶವಾಗಿದೆ. ಜನಗಣತಿಯ ನಿರ್ಣಾಯಕ ಎರಡನೇ ಹಂತವು 2027ನೇ ಫೆಬ್ರವರಿಯಲ್ಲಿ ನಡೆಯಲಿದೆ.

ಸಂದಿಗ್ಧತೆಯಲ್ಲಿವೆ ಕಾಸರಗೋಡು ಜಿಲ್ಲೆಯ ಕಟ್ಟಡ ನಿರ್ಮಾಣ ವಲಯಗಳು

ಕಾಲಕ್ಕನುಗುಣವಾಗಿ ಕೂಲಿ ಹೆಚ್ಚಳಕ್ಕೆ ಆಗ್ರಹಿಸುತ್ತಿರುವ ಕಾರ್ಮಿಕರು

ಕಾಸರಗೋಡು: ಕಟ್ಟಡ ನಿರ್ಮಾಣ ಸಾಮಗ್ರಿಗಳ ಬೆಲೆಯಲ್ಲಿ ಉಂಟಾದ ಭಾರೀ ಹೆಚ್ಚಳ, ಕಾರ್ಮಿಕರ ಕೊರತೆ ಮೊದಲಾದ ಸಂದಿಗ್ಧತೆಗಳನ್ನು ಎದುರಿಸುತ್ತಿರುವ ಕಾಸರಗೋಡು ಜಿಲ್ಲೆಯ ಕಟ್ಟಡ ನಿರ್ಮಾಣ ವಲಯದ ಸಮಸ್ಯೆಗೆ ಇನ್ನೂ ಪರಿಹಾರವಾಗಿಲ್ಲ. ಜಿಲ್ಲೆಯ ನಿರ್ಮಾಣ ವಲಯದಲ್ಲಿ ದುಡಿಯುತ್ತಿರುವವರ ಪೈಕಿ ಶೇಕಡಾ 90ರಷ್ಟು ಮಂದಿ ಹೊರರಾಜ್ಯ ಕಾರ್ಮಿಕರಾಗಿದ್ದಾರೆ ಎಂಬುದು ಗಮನಾರ್ಹವಾಗಿದೆ.



ಹೊರರಾಜ್ಯ ಕಾರ್ಮಿಕರು ವಿಧಾನಸಭಾ ಚುನಾವಣಾ ಮತದಾನಕ್ಕಾಗಿ ಊರಿಗೆ ತೆರಳಿದ್ದರಿಂದ ಕಳೆದ ಮೂರು ತಿಂಗಳಿನಿಂದ ಜಿಲ್ಲೆಯ ನಿರ್ಮಾಣ ಕ್ಷೇತ್ರವು ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಂಡಿದೆ. ಇದೀಗ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡ ಸ್ಥಿತಿಯಲ್ಲಿವೆ. ಆದರೆ ಇದೀಗ ಮರಳಿದ ಕೆಲ ಹೊರರಾಜ್ಯ ಕಾರ್ಮಿಕರು ಸಂಘಟಿತರಾಗಿ ಕೂಲಿ ಹೆಚ್ಚಳವನ್ನು ಆಗ್ರಹಿಸುತ್ತಿದ್ದು, ನಿರ್ಮಾಣ ವಲಯದ ಗುತ್ತಿಗೆದಾರರನ್ನು ಇನ್ನೂ ಇಕ್ಕಟ್ಟಿಗೆ ಒಳಪಡಿಸಿದೆ.


ಇಲ್ಲಿಯವರೆಗೆ ಪ್ರತಿಯೊಬ್ಬರ ನೈಪುಣ್ಯತೆಯ ಅನುಸಾರ ಹೊರರಾಜ್ಯ ಕಾರ್ಮಿಕರಾದ ಮೇಸ್ತ್ರಿಗೆ ದಿನಕ್ಕೆ 1000 ರೂ.ನಿಂದ 1100 ರೂ. ವರೆಗೆ, ಹೆಲ್ಪರ್‌ಗಳಿಗೆ 800 ರೂ. ಸರಾಸರಿ ಕೂಲಿ ನೀಡಲಾಗುತ್ತಿತ್ತು. ಆದರೆ ಪ್ರಸ್ತುತ ಮೇಸ್ತ್ರಿಗಳು 1700 ರೂ.ನಿಂದ 2000 ರೂ. ವರೆಗೆ, ಹೆಲ್ಪರ್‌ಗಳು 1200 ರೂ.ನಿಂದ 1300 ರೂ. ವರೆಗೆ ಕೂಲಿ ಕೇಳುತ್ತಿದ್ದಾರೆ. ಈ ಮೂಲಕ ಮೊದಲಿದ್ದ ಕೂಲಿಗಿಂತ ಶೇಕಡಾ 50 ರಿಂದ 60ರ ವರೆಗೆ ಅಧಿಕ ಬೇಡಿಕೆ ಇರಿಸಿದ್ದಾರೆ. ಕೂಲಿಯನ್ನು ಹೆಚ್ಚಿಸಿ ನೀಡದಿದ್ದರೆ ನೌಕರಿ ನಡೆಸುವುದಿಲ್ಲ ಎಂದು ಒಂದು ವಿಭಾಗದ ಹೊರರಾಜ್ಯ ಕಾರ್ಮಿಕರು ಹೇಳುತ್ತಿದ್ದಾರೆ.

ಡೀಸೆಲ್, ಪೆಟ್ರೋಲ್‌ಗೆ ಬೆಲೆ ಹೆಚ್ಚಿಸಿದಾಗ ವಾಹನಗಳ ಬಾಡಿಗೆ ಹೆಚ್ಚಳಗೊಂಡಿದೆ. ಇದಲ್ಲದೆ ಗ್ಯಾಸ್ ಬೆಲೆ ಹೆಚ್ಚಿಸಿದ್ದರಿಂದ ಹೊಟೇಲ್‌ಗಳಲ್ಲಿ ಆಹಾರ ವಸ್ತುಗಳ ಬೆಲೆ ಹೆಚ್ಚಳವಾಗಿದೆ. ಈ ಎಲ್ಲಾ ವಿಚಾರಗಳನ್ನು ಹಾಗೂ ಸಮಸ್ಯೆಗಳನ್ನು ನಿರ್ಮಾಣ ವಲಯವು ಗಂಭೀರವಾಗಿ ಪರಿಗಣಿಸುತ್ತಿದೆ.

ಸಮಯಕ್ಕನುಗುಣ ನಡೆಯುತ್ತಿಲ್ಲ ಕಾಮಗಾರಿ

ಕಾಸರಗೋಡು ಜಿಲ್ಲೆಯ ವಿವಿಧೆಡೆ ನಿರ್ದಿಷ್ಟ ಕಾಲಾವಧಿಯೊಳಗೆ ಕಾಮಗಾರಿ ಪೂರ್ತಿಗೊಳಿಸುವುದಾಗಿ ಭರವಸೆಯಿತ್ತು ಬಹುತೇಕ ಗುತ್ತಿಗೆದಾರರು ಕಟ್ಟಡ ನಿರ್ಮಾಣ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ಆದರೆ ಸಮಯಕ್ಕನುಗುಣವಾಗಿ ಕಾರ್ಯ ಚಟುವಟಿಕೆ ನಡೆಯುತ್ತಿಲ್ಲ, ನಿರ್ಮಾಣ ಸಾಮಗ್ರಿಗಳ ಬೆಲೆ ಹೆಚ್ಚಳ ಕಾರಣದಿಂದ ಈಗಾಗಲೇ ಸಂದಿಗ್ಧತೆಯಲ್ಲಿರುವ ನಿರ್ಮಾಣ ವಲಯಕ್ಕೆ ಕೂಲಿ ಹೆಚ್ಚಳ ಹೊರಲಾಗದು ಎಂದು ಗುತ್ತಿಗೆದಾರರು ಅಭಿಪ್ರಾಯಪಟ್ಟಿದ್ದಾರೆ.

ಶೇಡಿಕಾವು ಶ್ರೀ ಕೃಷ್ಣ ವಿದ್ಯಾಲಯ ಶಾಲಾ ಪ್ರವೇಶೋತ್ಸವ



ಕುಂಬಳೆ: ಶೇಡಿಕಾವು ಶಂಕರಪುರಂ ಶ್ರೀಕೃಷ್ಣ ವಿದ್ಯಾಲಯದಲ್ಲಿ 2026–27ನೇ ಶೈಕ್ಷಣಿಕ ವರ್ಷದ ಶಾಲಾ ಪ್ರವೇಶೋತ್ಸವ ಹಾಗೂ ಶಿಶುವಾಟಿಕದ ಅರುಣ ತರಗತಿಗೆ ಹೊಸ ಕಟ್ಟಡದ ಉದ್ಘಾಟನೆಯನ್ನು ಶುಕ್ರವಾರ ವಿವಿಧ ಕಾರ್ಯಕ್ರಮಗಳೊಂದಿಗೆ ನೆರವೇರಿಸಲಾಯಿತು.

ಭಾರತೀಯ ವಿದ್ಯಾನಿಕೇತನದ ಕಾಸರಗೋಡು ಜಿಲ್ಲಾಧ್ಯಕ್ಷ ಶಿವಶಂಕರನ್ ಉದ್ಘಾಟನೆ ನಿರ್ವಹಿಸಿ ಮಾತನಾಡಿದರು. ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಡಾ.ಎಂ.ಶ್ರೀಧರ ಭಟ್ ಮಾವೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ರವಿಶಂಕರ ನೆಗಳಗುಳಿ ದಿಕ್ಸೂಚಿ ಭಾಷಣ ಮಾಡಿ ಶುಭಕೋರಿದರು.

ಶಾಲಾ ಮುಖ್ಯೋಪಾಧ್ಯಾಯಿನಿ ಸರಿತಾ ದಿನೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು. ಗೌರೀಶ್ ವಂದಿಸಿದರು. ಗಾಯತ್ರಿ ಮಾತಾಶ್ರೀ ಕಾರ್ಯಕ್ರಮ ಕಾರ್ಯಕ್ರಮ ನಿರೂಪಿಸಿದರು.

ಸುತ್ತಮುತ್ತ

ಜೂ.2ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಕುಂದಾಪುರ: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಬೈಂದೂರು, ಶಿರೂರು, ಪಡುವರಿ, ಉಪ್ಪುಂದ, ಯಡ್ತರೆ, ಬಿಜೂರು, ತಗ್ಗರ್ಸೆ, ಗಂಗನಾಡು, ಯಳಜಿತ್, ಮುದೂರು, ಕೊಲ್ಲೂರು, ನಾಯ್ಕನಕಟ್ಟೆ, ಕೆರ್ಗಾಲ್, ಆರೆಶಿರೂರು, ಗೋಳಿಹೊಳೆ, ಇಡೂರು, ಕಂಬದಕೋಣೆ, ಕಿರಿಮಂಜೇಶ್ವರ, ಮರವಂತೆ ಮತ್ತು ಹೇರೂರು ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.2ರಂದು ಬೆಳಿಗ್ಗೆ 9.30ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಜೂ.2ರಂದು ಕಾರ್ಕಳ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಕಾರ್ಕಳ: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಕಾರ್ಕಳ ತಾಲೂಕಿನ ಬಜಗೋಳಿ, ಕೆರ್ವಾಶೆ, ಮುಡ್ರಾಲು, ಕಡಾರಿ, ಮುಲ್ಲೂರು, ಮಾಳ, ಗುರ್ಗಲ್ ಗುಡ್ಡೆ, ಚೌಕಿ, ಹುಕ್ರಟ್ಟೆ, ನೆಲ್ಲಿಕಾರು, ಚೆಂಡೆ ಬಸದಿ, ಪುಚ್ಚಬೆಟ್ಟು, ಜ್ಯೋತಿನಗರ, ಪೇರಲ್ಕೆ, ಪೆರ್ನೋಡಿ, ಹೊಸ್ಮಾರು, ಈದು, ನಲ್ಲೂರು, ನೆಲ್ಲಿಗುಡ್ಡೆ, ನೂರಾಳ್ ಬೆಟ್ಟು ಏರಿಯಾ ನಿಟ್ಟೆ, ನಿಟ್ಟೆ ಕಾಲೇಜು, ನಿಟ್ಟೆ ವಾಟರ್ ಸಪ್ಲೈ, ಬೋರ್ಗಲ್ ಗುಡ್ಡೆ, ಹಾಮಾಜೆ, ಕುಂಟಾಡಿ, ಕೈಕಂಬ, ಪದವು, ಗುಂಡ್ಯಡ್ಕ, ಕೈರಬೆಟ್ಟು ನಿಟ್ಟೆ ಪಂಚಾಯತ್, ನಿಟ್ಟೆ ಮಸೀದಿ, ದೂಪದಕಟ್ಟೆ, ಕೆಮ್ಮಣ್ಣು ಮತ್ತು ಹೆಬ್ರಿ ತಾಲೂಕಿನ ಅಂಡಾರು, ಶಿರ್ಲಾಲು, ಮುಂಡ್ಲಿ ರೋಡ್, ಕಾಡುಹೊಳೆ, ಮುನಿಯಾಲು, ಅಜೆಕಾರು, ಹೆರ್ಮುಂಡೆ, ಎಣ್ಣೆಹೊಳೆ, ಕಡ್ತಲ, ಕುಕ್ಕುಜೆ, ಎಳ್ಳಾರೆ, ಹೆಬ್ರಿ, ಹೆಬ್ರಿ ಪೇಟೆ, ತಾಣ, ಮುದ್ರಾಡಿ, ಮುನಿಯಾಲು, ಬಚ್ಚಪ್ಪು, ಕಬ್ಬಿನಾಲೆ, ಮುಂಡಾಡಿಜೆಡ್ಡು, ಕಳ್ತೂರು, ಸಂತೆಕಟ್ಟೆ, ಕರ್ಜೆ, ಕುರ್ಪಾಡಿ, ಬೆಳೆಂಜೆ, ಮಡಾಮಕ್ಕಿ, ಕಾಸನಮಕ್ಕಿ, ಶಿವಪುರ, ಕೆರೆಬೆಟ್ಟು, ಕನ್ಯಾನ, ಚಾರ, ಹೊಸೂರು, ಹುತ್ತುರ್ಕೆ ವಾಟರ್ ಸಪ್ಲೈ, ಕಲ್ಲಿಲ್ಲು ವಾಟರ್ ಸಪ್ಲೈ, ಸೀತಾನದಿ, ಸೋಮೇಶ್ವರ, ನಾಡ್ಪಾಲು, ವರಂಗ, ಮಾತಿಬೆಟ್ಟು ಪಡುಕುಡೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.2ರಂದು ಬೆಳಿಗ್ಗೆ 9ರಿಂದ ಸಂಜೆ 5:30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಜೂ.2ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಉಡುಪಿ: ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸಾಲ್ಮರ , ಕಲಾಯಿಬೈಲು, ಸಂಪಿಗೆನಗರ, ಕುತ್ಪಾಡಿ, ಅನಂತಕೃಷ್ಣ ನಗರ, ಉದ್ಯಾವರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.2ಕ್ಕೆ ಬೆಳಿಗ್ಗೆ 9.30ರಿಂದ ಸಂಜೆ 5:30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಜೂ.3ರಂದು ವಿದ್ಯುತ್ ವ್ಯತ್ಯಯ

ಮಲ್ಪೆ ಬೀಚ್ ಹಾರ್ಬರ್, ಕೊಳ, ಫಿಶ್ ಕ್ಯೂರಿಂಗ್ ಯಾರ್ಡ್, ಮಲ್ಪೆ ಪೇಟೆ, ಜೇಮ್ಸ್ ಕಂಪೌಂಡ್ ತೊಟ್ಟಂ, ಬಡಾನಿಡಿಯೂರು, ಬೈಲಕೆರೆ, ವಡಬಾಂಡೇಶ್ವರ, ಸುಬ್ರಹ್ಮಣ್ಯ ವಾರ್ಡ್, ಪುತ್ತೂರು, ಲಕ್ಷ್ಮೀ ನಗರ, ಹಿರಣ್ಯಧಾಮ, ಶ್ರೀನಗರ, ಪಾಳೆಕಟ್ಟೆ, ತೆಂಕ ನಿಡಿಯೂರು, ಗರಡಿ ಮಜಲು, ಗರ್ಡೆ ಲಕ್ಷ್ಮೀನಗರ, ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.3ರಂದು ಬೆಳಿಗ್ಗೆ 9.30ರಿಂದ ಸಂಜೆ 5:30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ಪ್ರಕಟನೆಯಲ್ಲಿ ತಿಳಿಸಿದೆ.

ಮೊದಲನೇ ಪುಟದಿಂದ

ಹಸಿರಾಗುತ್ತಿಲ್ಲ ಬೆಟ್ಟ

ಇದರ ನಂತರ ಭೂಕುಸಿತವನ್ನು ತಡೆಗಟ್ಟಲು ಇಲ್ಲಿ ಸಮರ್ಥವಾದ ಸುರಕ್ಷತಾ ವ್ಯವಸ್ಥೆಯನ್ನು ಸಿದ್ಧಪಡಿಸುವ ಬೇಡಿಕೆಯಿರಿಸಲಾಗಿತ್ತು. ಅಲ್ಲದೆ ಭೂಕುಸಿತವನ್ನು ತಡೆಗಟ್ಟಲು ಟೆರೇಸ್‌ಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ಬೆಟ್ಟವನ್ನು ನೆಲಸಮ ಮಾಡಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಗುತ್ತಿಗೆದಾರ ಕಂಪೆನಿಗೆ ಸೂಚಿಸಿತ್ತು. ಇದಕ್ಕಾಗಿ ಬೆಟ್ಟದ ಮೇಲ್ಭಾಗದಿಂದ ಹೆಚ್ಚಿನ ಭೂಮಿಯನ್ನು ಸ್ವಾಧೀನಪಡಿಸಲು ತಿಳಿಸಲಾಗಿತ್ತು.

ಬೆಟ್ಟದ ಮೇಲಿನ ಭಾಗದಲ್ಲಿರುವ ಭೂಮಿ ಅರಣ್ಯ ಇಲಾಖೆಗೆ ಸೇರಿದ್ದಾಗಿದೆ. ಅದನ್ನು ಹಸ್ತಾಂತರಿಸುವ ತಾಂತ್ರಿಕ ಕೆಲಸಗಳು ತುಂಬಾ ವಿಳಂಬವಾಗಲಿವೆ. ಅರಣ್ಯ ಇಲಾಖೆಯ ಭೂಮಿಯನ್ನು ಪಡೆಯಲು ಗುತ್ತಿಗೆದಾರ ಸಂಸ್ಥೆಗೆ ತಾತ್ವಿಕವಾಗಿ ಅನುಮತಿ ಸಿಕ್ಕಿರುವುದರಿಂದ ಟೆರೇಸ್‌ಗಳನ್ನು ಹಸಿರು ಸ್ಥಳಗಳಾಗಿ ಪರಿವರ್ತಿಸುವ ಕೆಲಸ ಅತ್ಯಂತ ನಿಧಾನಗತಿಯಲ್ಲಿ ನಡೆಯುತ್ತಿದೆ.

ಎಸ್‌ಸಿ-ಎಸ್‌ಟಿ ಯುವ ಉದ್ಯಮಶೀಲತಾ ಸಮಾವೇಶದಲ್ಲಿ ಕೋಟ ಶ್ರೀನಿವಾಸ ಪೂಜಾರಿ ಆರೋಪ

ಒಳ ಮೀಸಲಾತಿ ವಿಚಾರದಲ್ಲಿ ಬಿಜೆಪಿ ವಿರುದ್ಧ ಅಪಪ್ರಚಾರ

ಕುಂದಾಪುರ: ಉದ್ಯಮ ಕ್ಷೇತ್ರಗಳು ಸವಾಲುಗಳು ಸಮಸ್ಯೆಗಳು ಸದಾ ಇರುತ್ತದೆ. ಉದ್ಯಮದಲ್ಲಿ ಯಶಸ್ಸು ಅಥವಾ ಆದ ಸಮಸ್ಯೆಗಳ ಬಗ್ಗೆ ಚರ್ಚೆಗಳು ನಡೆಯಬೇಕಿದೆ. ಉದ್ಯಮಶೀಲತೆಯಲ್ಲಿ ಉದ್ಯಮ ವನ್ನು ಕಟ್ಟಿಕೊಳ್ಳುತ್ತೇವೆ ಮತ್ತು ಉದ್ಯಮವನ್ನು ಮಾಡುತ್ತೇವೆ ಎನ್ನುವವರು ಅನುಭವವನ್ನು ಪಡೆದುಕೊಳ್ಳಬೇಕು. ಇದು ಇತರರಿಗೆ ಮಾರ್ಗದರ್ಶಕವಾಗಲಿದೆ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಅಧ್ಯಯನ ಮತ್ತು ಅಭಿವೃದ್ಧಿ ಟ್ರಸ್ಟ್ ಮಂಗಳೂರು ಮತ್ತು ಸಮೃದ್ಧ ಬೈಂದೂರು ಇದರ ವತಿಯಿಂದ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಅವರ ಪರಿಕಲ್ಪನೆಯ ಎಸ್.ಸಿ-ಎಸ್.ಟಿ ಯುವ ಉದ್ಯಮಶೀಲತಾ ಸಮಾವೇಶ 'ಭೀಮೋದ್ಯಮ 2026' ವನ್ನು ಹೆಮ್ಮಾಡಿಯ ಜಯಶ್ರೀ ಸಭಾಭವನದಲ್ಲಿ ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದುಳಿದ ವರ್ಗದ ಅಭಿವೃದ್ಧಿಗೆ ಶ್ರಮ

ಬಿಜೆಪಿ ಸರಕಾರದ ಅವಧಿಯಲ್ಲಿ ಒಳ ಮೀಸಲಾತಿ ಮಾಡಿ ಕಷ್ಟದಲ್ಲಿರುವ, ಆರ್ಥಿಕವಾಗಿ ಬಡವರಿರುವ



ಸಮುದಾಯ, ಅವರನ್ನು ಮೇಲಕ್ಕೆತ್ತುವ ಪ್ರಯತ್ನ ಮಾಡಲಾಗಿತ್ತು. ಮೀಸಲಾತಿ ಹಂಚಿಕೆಯಲ್ಲಿ ಮಾಡಿರುವ ಪ್ರಮಾಣ ಈವತ್ತು ಮಾಡಿರುವ ಪ್ರಮಾಣಕ್ಕಿಂತ ಹೆಚ್ಚಾಗಿತ್ತು. ಆದರೆ ಪ್ರಚಾರದ ಕೊರತೆಯಿಂದ ಇದು ಜನರ ಮನಮುಟ್ಟುವಲ್ಲಿ ವಿಫಲವಾಯಿತು. ಮೀಸಲಾತಿ ರದ್ದು ಮಾಡಿದ್ದಾರೆ ಎಂಬ ಅಪಪ್ರಚಾರ ಮಾಡಲಾಯಿತು ಎಂದು ಹೇಳಿದ ಅವರು, ಸಮಾಜದಲ್ಲಿ ಒಳಿತನ್ನು ಮಾಡಲು ಹೋದಾಗ ಸಮಾಜಕ್ಕೆ ಒಳಿತಾದರೂ ಮಾಡಿದವರಿಗೆ ಸಮಸ್ಯೆಯಾಗುತ್ತದೆ. ಹೀಗಾಗಿ ಇಂತಹ ಯೋಜನೆಗಳು ಸಮಾಜಕ್ಕೆ ತಲುಪಬೇಕಾದರೆ ಶ್ರಮವಹಿಸುವ ಕೆಲಸ ಆಗಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಎಸ್.ಸಿ., ಎಸ್.ಟಿ. ಸಮುದಾಯದವರು ಇಲ್ಲಿಯವರೆಗೆ ಕೆಲಸಗಾರರಾಗಿರುವ ಸಂಭವಗಳೇ ಹೆಚ್ಚು. ಇನ್ನು ಮುಂದೆ ಕೆಲಸ ಕೊಡುವ ಉದ್ಯೋಗಗಳು ಅವರಿಂದ ಪ್ರಾರಂಭವಾಗಲಿ, ಕೆಲಸ ಹುಡುಕುವುದನ್ನು ಬಿಟ್ಟು ಬೇರೆಯವರಿಗೆ ಕೆಲಸ

> ಉದ್ಯಮದಲ್ಲಿನ ವಿಚಾರಗಳನ್ನು ವಿಮರ್ಶೆ ಮಾಡಬೇಕು, ಬೇರೆಯವರಿಂದ ಮಾರ್ಗದರ್ಶನ ಪಡೆಯಬೇಕು, ಉದ್ಯಮಕ್ಕೆ ಯಾವ ರೀತಿಯ ಮಾರುಕಟ್ಟೆ ಇದೆ ಎನ್ನುವ ಬಗ್ಗೆ ಯೋಚನೆ ಮಾಡಬೇಕು. ಬ್ಯಾಂಕಿಂಗ್ ವ್ಯವಸ್ಥೆ ಗಮನದಲ್ಲಿಟ್ಟುಕೊಂಡು ಉದ್ಯಮವನ್ನು ಸ್ಥಾಪಿಸಿ ಯಶಸ್ಸು ಪಡೆಯಲು ಗಮನ ಹರಿಸಬೇಕು. ನಾವು ಮಾಡುವ ಉದ್ಯೋಗಗಳು ನಾವು ಶ್ರಮ ವಹಿಸಿ ದುಡಿದರೆ ನಮಗೆ ಅನುಕೂಲವಾಗುತ್ತದೆ ಎಂಬ ನಂಬಿಕೆ ಬಂದರೆ ಇಡೀ ಶ್ರಮ ಸಾರ್ಥಕವಾಗುತ್ತದೆ.
>
> ● ಕೋಟ ಶ್ರೀನಿವಾಸ ಪೂಜಾರಿ

ಕೊಡುವ ಶಕ್ತಿ ಬರಲಿ ಎಂದು ಹಾರೈಸಿದರು.

ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾಪು ಶಾಸಕ ಗುರ್ಮೆ ಸುರೇಶ ಶೆಟ್ಟಿ ಶುಭಾಶಂಸನೆಗೈದರು. ಬೆಂಗಳೂರು ಸಾಮರಸ್ಯ ವೇದಿಕೆಯ ಸಾಮಾಜಿಕ ಕಾರ್ಯಕರ್ತ ವಾದಿರಾಜ್ ವಿಷಯ ಮಂಡನೆ ಮಾಡಿದರು. ಇದೇ ಸಂದರ್ಭ ಸಾಧಕರಾದ ಮೋಹನಂಗಯ್ಯ ಸ್ವಾಮಿ, ದಿನಕರ ಬಾಬು, ಕುಮಾರ್ ದಾಸ್, ಶಿವಾನಂದ ತಲ್ಲೂರು, ಎಸ್ .ನಾರಾಯಣ ಬ್ರಹ್ಮಾವರ, ಕೊಲ್ಲೂರು ದೇವಳದ ವ್ಯವಸ್ಥಾಪನಾ ಸಮಿತಿ ಸದಸ್ಯ ಮಹಾಲಿಂಗ ನಾಯ್ಕ್, ಪುಂಡಲೀಕ ಮಂಕಿ ಅವರನ್ನು ಸಮ್ಮಾನಿಸಲಾಯಿತು. ಬಿಜೆಪಿ ರಾಜ್ಯ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ದಿನಕರ ಬಾಬು, ಬಿಜೆಪಿ ಬೈಂದೂರು ಮಂಡಲ ಅಧ್ಯಕ್ಷೆ ಅನಿತಾ ಆರ್.ಕೆ., ಉಪಾಧ್ಯಕ್ಷೆ ಮಾಲತಿ ನಾಯ್ಕ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಸಂಚಾಲಕ ಅಕ್ಷಯ್ ಗುಜ್ಜಾಡಿ ಸ್ವಾಗತಿಸಿದರು. ಎಸ್.ಸಿ.- ಎಸ್ .ಟಿ ಅಧ್ಯಯನ ಟ್ರಸ್ಟ್ ಅಧ್ಯಕ್ಷ ಮೋಹನಂಗಯ್ಯ ಸ್ವಾಮಿ ಪ್ರಸ್ತಾವನೆಗೈದರು. ಸುಧಾಕರ ಬೈಂದೂರು ಮತ್ತು ಸುಂದರ ಜಿ. ಗಂಗೊಳ್ಳಿ ಕಾರ್ಯಕ್ರಮ ನಿರ್ವಹಿಸಿದರು. ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಕೃಷ್ಣಮೂರ್ತಿ ವಂದಿಸಿದರು.

ಭಾಗವತ ಗೃಹ ಸಂದರ್ಶನ ಅಭಿಯಾನ | ವಿದ್ಯೇಶತೀರ್ಥ ಶ್ರೀ ಸಂದೇಶ

ಧರ್ಮ, ಸಂಸ್ಕೃತಿಯ ಮರೆತರೆ ಬದುಕು ವಿನಾಶ

ಕುಂದಾಪುರ: ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋದ ನಮ್ಮ ಕಿರಿಯ ಜನಾಂಗದವರು ಇಂದು ನಮ್ಮ ಸನಾತನ ಧರ್ಮ, ಸಂಸ್ಕೃತಿಯನ್ನೇ ಮರೆಯುತ್ತಿದ್ದಾರೆ. ನಮ್ಮ ಹಿರಿಯರ ಜೀವನ ಕ್ರಮ, ಹಬ್ಬ ಹರಿದಿನಗಳು, ಸಮಸ್ತ ಜೀವರಾಶಿಗಳಿಗೂ ಒಳಿತಾಗಲಿ ಎಂಬ ಸ್ವಾರ್ಥರಹಿತ ಆಶಯ ಇವೆಲ್ಲ ನಮ್ಮಿಂದ ದೂರಾಗಿ ಮನುಷ್ಯ ಪಶುವಿನಂತೆ ಬದುಕುವ ಪರಿಸ್ಥಿತಿ ಬಂದಿದೆ ಎಂದು ಉಡುಪಿ ಭಂಡಾರಕೇರಿ ಮಠಾಧೀಶ ಶ್ರೀ ವಿದ್ಯೇಶತೀರ್ಥ ಸ್ವಾಮೀಜಿ ಹೇಳಿದರು.

ಭಾಗವತ ಗೃಹ ಸಂದರ್ಶನ ಅಭಿಯಾನದ ಅಂಗವಾಗಿ ಕಾಳಾವರದ ಶ್ರೀ ಶಂಕರ ಸಭಾ ಭವನಕ್ಕೆ ಶುಕ್ರವಾರ ಆಗಮಿಸಿ ಆಶೀರ್ವಚನ ನೀಡಿದರು.

ಮಠದ ವತಿಯಿಂದ ಭಾಗವತದ ಸಾರ ಸಂಗ್ರಹ 8 ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಶ್ರೀ ಮಠದ ಬೆಂಗಳೂರು ಶಾಖೆಯ ಐತರೇಯ ಶೋಧ ಪ್ರಕಾಶನ ಪೀಠದ ಶ್ರೀ ಭಾಗವತಾಶ್ರಮ ಪ್ರತಿಷ್ಠಾನದವರು, ಭಾಗವತದ ಎಲ್ಲಾ ಅಧ್ಯಾಯಗಳ ಸಾರಸಂಗ್ರಹ ರೂಪದಲ್ಲಿ 'ಭಾಗವತ ಬಿಂದುಸರ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಗೃಹ ಸಂದರ್ಶನದ ವೇಳೆ ಕುಟುಂಬದ ಮುಖ್ಯಸ್ಥರಿಗೆ ಈ ಗ್ರಂಥವನ್ನು ಉಚಿತವಾಗಿ ನೀಡಲಾಗುತ್ತದೆ. ಪ್ರತಿ ದಿನವೂ ಕುಟುಂಬ ಸದಸ್ಯರೆಲ್ಲರೂ ಸೇರಿ



> ಪಾಶ್ಚಿಮಾತ್ಯ ಪ್ರಭಾವ ನಮ್ಮ ಸನಾತನ ಧರ್ಮ – ಸಂಸ್ಕೃತಿ ಉಳಿಯಬೇಕಾದರೆ ಮನೆ ಮನೆಗಳಲ್ಲಿ ಭಾಗವತದ ನಂದಾ ದೀಪ ಬೆಳಗಬೇಕು. ಮೊದಲು ಹಿರಿಯರು ಇದನ್ನು ಅರ್ಥ ಮಾಡಿಕೊಂಡು ನಂತರ ಕಿರಿಯರಿಗೆ ತಿಳಿಸಬೇಕು. ಈ ಬಗೆಯ ಧರ್ಮ ಜಾಗೃತಿಗಾಗಿಯೇ ಭಂಡಾರಕೇರಿ ಮಠದ ವತಿಯಿಂದ ಭಾಗವತ ಗೃಹ ಸಂದರ್ಶನ ಅಭಿಯಾನ ಆರಂಭಿಸಲಾಗಿದೆ.
>
> ● ಶ್ರೀ ವಿದ್ಯೇಶತೀರ್ಥ

ಕನಿಷ್ಠ ಹತ್ತು ನಿಮಿಷವಾದರೂ ಈ ಗ್ರಂಥ ಪಾರಾಯಣ ಮಾಡಬೇಕು ಎಂದು ಸೂಚಿಸಲಾಗಿದೆ. ಇದು ಆ ಕುಟುಂಬಕ್ಕೆ ರಾಕ್ಷೋಘ್ನವಾಗಿ ಒಳಿತನ್ನುಂಟು ಮಾಡುತ್ತದೆ ಎಂದು ಆಶೀರ್ವದಿಸಿದರು.

ಪ್ರೊ. ಶಂಕರ ರಾವ್ ಕಾಳಾವರ ದಂಪತಿ ಶ್ರೀಗಳಿಗೆ ಮಾಲಿಕೆ ಮಂಗಳಾರತಿ ನೆರವೇರಿಸಿ, ಫಲ ಪುಷ್ಪ ಸಮರ್ಪಿಸಿದರು.

ಶ್ರೀ ಭಂಡಾರಕೇರಿ ಮಠಾಧೀಶರಾಗಿದ್ದ ಶ್ರೀ ವಿದ್ಯಾಮಾನ್ಯತೀರ್ಥ ಸ್ವಾಮಿಗಳ ಶ್ರೀ ಸತ್ಯತೀರ್ಥ ಪೀಠಾರೋಹಣ ಶತಮಾನೋತ್ಸವ ಸ್ಮಾರಕವಾಗಿ ಶ್ರೀ ವಿದ್ಯೇಶತೀರ್ಥರ 47ನೇ ಚಾತುರ್ಮಾಸ್ಯ ವ್ರತಾಚರಣೆ ಈ ಬಾರಿ ಬಾರ್ಕೂರಿನಲ್ಲಿರುವ ಭಂಡಾರಕೇರಿ ಮೂಲ ಮಠದಲ್ಲಿ ನಡೆಯಲಿದೆ ಎಂದು ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಶಂಕರ ರಾವ್ ಕುಟುಂಬ ಸದಸ್ಯರು, ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ ಕಾರ್ಯದರ್ಶಿ ಬಿ. ವಾದಿರಾಜ ಹೆಬ್ಬಾರ್, ಶಿಷ್ಯ ವರ್ಗದವರು ಉಪಸ್ಥಿತರಿದ್ದರು.

ಇಂದಿನಿಂದ ಉಡುಪಿಯಲ್ಲಿ ವರ್ಷಪೂರ್ತಿ ಸಾಂಸ್ಕೃತಿಕ ಕಾರ್ಯಕ್ರಮ

'ಸುಮನಸಾ ಕೊಡವೂರು' ರಜತ ಸಂಭ್ರಮ

ಉಡುಪಿ: ಕರಾವಳಿಯ ಪ್ರತಿಷ್ಠಿತ ಸಾಂಸ್ಕೃತಿಕ ಸಂಸ್ಥೆಯಾದ 'ಸುಮನಸಾ ಕೊಡವೂರು' ತನ್ನ ಯಶಸ್ವಿ 25 ವರ್ಷಗಳ ರಂಗಯಾನದ ನೆನಪಿಗಾಗಿ ವರ್ಷಪೂರ್ತಿ ವೈವಿಧ್ಯಮಯ 'ರಜತ ಮಹೋತ್ಸವ' ಕಾರ್ಯಕ್ರಮಗಳನ್ನು ಆಯೋಜಿಸಿದೆ. ಈ ರಜತ ಸಂಭ್ರಮದ ಉದ್ಘಾಟನಾ ಸಮಾರಂಭವು ಮೇ 31ರ ಭಾನುವಾರ ಸಂಜೆ 5ಕ್ಕೆ ಕುಂಜಿಬೆಟ್ಟಿನ ಐವೈಸಿ ಸಭಾಂಗಣದಲ್ಲಿ ಜರುಗಲಿದೆ ಎಂದು ಸುಮನಸಾ ಕೊಡವೂರು ರಜತ ಸಂಭ್ರಮ ಸಮಿತಿಯ ಅಧ್ಯಕ್ಷ ಹರಿಪ್ರಸಾದ್ ರೈ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ರಂಗಭೂಮಿ ಕ್ಷೇತ್ರಕ್ಕೆ ಕೊಡುಗೆ

ಎರಡೂವರೆ ದಶಕದ ಹಿಂದೆ ಸಂಕಷ್ಟದಲ್ಲಿದ್ದ ಕುಟುಂಬಕ್ಕೆ ಮನೆ ಕಟ್ಟಿ ಕೊಡುವ ಮಾನವೀಯ ಉದ್ದೇಶದೊಂದಿಗೆ ಆರಂಭಗೊಂಡ ಈ ಸಂಸ್ಥೆ ಇಂದು ಯುವ ಪ್ರತಿಭೆಗಳೊಂದಿಗೆ ರಂಗಭೂಮಿ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದೆ ಎಂದು ಅವರು ವಿವರಿಸಿದರು.

ಮೇ 31ರ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಹರಿಪ್ರಸಾದ್ ರೈ ವಹಿಸಲಿದ್ದು, ಪಡುಬಿದ್ರಿ ಯಸ್ಸೆನ್ ಸ್ಪೆಶಲ್ ಎಕಾನೋಮಿಕ್ ಜೋನ್ ಹಿರಿಯ ಮಹಾ ಪ್ರಬಂಧಕ ಅಶೋಕ ಕುಮಾರ್ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.



ಸಾಂಸ್ಕೃತಿಕ ರಂಗ ಸಂಭ್ರಮ

ಅಂದು ಸಂಜೆ 5:00 ಗಂಟೆಗೆ ಸುಮನಸಾ ಸಂಸ್ಥೆಯ ಆಯ್ದ ನಾಟಕಗಳ ಗೀತೆಗಳನ್ನೊಳಗೊಂಡ 'ಸುಮಲಹರಿ ರಂಗಗೀತಾ ಗಾಯನ' ನಡೆಯಲಿದೆ. 6:00 ಗಂಟೆಗೆ ಸಭಾ ಕಾರ್ಯಕ್ರಮ ಜರುಗಲಿದ್ದು, ತದನಂತರ ರಾತ್ರಿ 7ಕ್ಕೆ ಗಂಟೆಗೆ ಮಕ್ಕಳ ರಂಗಶಿಬಿರ 'ಅಟ್ಟಮುಟ್ಟ'ದಲ್ಲಿ ಸಿದ್ಧಗೊಂಡಿರುವ, ಚರಿತ್ ಸುವರ್ಣ ನಿರ್ದೇಶನದ 'ರಿಟಯರ್ಡ್ ಬೆಕ್ಕು' ಹಾಗೂ 'ಸೂಪರ್ ಹೀರೋಸ್ ಆಫ್ ಸುಮನಸಾ' ನಾಟಕಗಳು ಪ್ರದರ್ಶನಗೊಳ್ಳಲಿವೆ ಎಂದು ಹರಿಪ್ರಸಾದ್ ರೈ ಅವರು ಮಾಹಿತಿ ನೀಡಿದರು.

ಉಡುಪಿ ಶಾಸಕ ಯಶಪಾಲ್ ಸುವರ್ಣ ಅವರು ರಜತ ಸಂಭ್ರಮದ ಅಧಿಕೃತ ಲೋಗೋ ಅನಾವರಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಯಕ್ಷಗಾನ ಗುರು ಬನ್ನಂಜೆ ಸಂಜೀವ ಸುವರ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ ಹಾಗೂ ತುಳು ಸಾಹಿತ್ಯ ಅಕಾಡೆಮಿ ಸದಸ್ಯ ಉದ್ಯಾವರ ನಾಗೇಶ್ ಕುಮಾರ್ ಭಾಗವಹಿಸಲಿದ್ದಾರೆ. ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ಪ್ರಮೋದ್ ಮಧ್ವರಾಜ್, ಎಂ.ಎ. ಸಾಮಗ, ಎಂ.ಎಸ್. ಭಟ್, ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು ಹಾಗೂ ಸಂಚಾಲಕ ಭಾಸ್ಕರ ಪಾಲನ್ ಉಪಸ್ಥಿತರಿರಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಪ್ರಮುಖರಾದ ಎಮ್.ಎಸ್.ಭಟ್, ಪ್ರಕಾಶ್ ಜಿ.ಕೊಡವೂರು, ಭಾಸ್ಕರ್ ಪಾಲನ್ ಹಾಗೂ ವಿನಯ್ ಕಲ್ಮಾಡಿ ಉಪಸ್ಥಿತರಿದ್ದರು.

ಕೋಡಿ ಗ್ರಾಮ ಪಂಚಾಯತ್ ಪರಿಸರ: ಹಿಂದೂ ರುದ್ರಭೂಮಿ ಲೋಕಾರ್ಪಣೆ



ಕೋಟ: ಹಿಂದೂ ರುದ್ರಭೂಮಿಗೆ ತಮ್ಮ ಶಾಸಕ ನಿಧಿಯಿಂದ ಒಂದು ಹಂತದಲ್ಲಿ ಕಾರ್ಯನಿರ್ವಹಣೆಗೆ ಯೋಗ್ಯ ವಾತಾವರಣ ಕಲ್ಪಿಸಿದರೆ ಇನ್ನುಳಿದ ಅಭಿವೃದ್ಧಿಯನ್ನು ದಾನಿಗಳ ಸಹಕಾರ ಪಡೆದು ನಿರ್ಮಿಸಿಕೊಳ್ಳಬಹುದು ಎಂದು ಕುಂದಾಪುರ ವಿಧಾನಸಭಾ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅಭಿಪ್ರಾಯಪಟ್ಟರು.

ಬೇಡಿಕೆ ಈಡೇರಿಕೆ

ಕೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೋಡಿ ತಲೆಯಲ್ಲಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ತಮ್ಮ ಶಾಸಕರ ಅನುದಾನದಡಿ ಹಿಂದೂ ರುದ್ರಭೂಮಿ ಲೋಕಾರ್ಪಣೆಗೊಳಿಸಿ ಮಾತನಾಡಿ, ಗ್ರಾಮದ ಕೆಲ ಪ್ರದೇಶಕ್ಕೆ ಅನುಗುಣವಾಗಿ ಹಿಂದೂ ರುದ್ರಭೂಮಿ ಅಗತ್ಯ ಈ ದಿಸೆಯಲ್ಲಿ ಕೋಡಿ ತಲೆ ಗ್ರಾಮದ ಬಹುಕಾಲದ ಬೇಡಿಕೆಯ ರುದ್ರಭೂಮಿ ಕನಸು ಸಾಕಾರಗೊಂಡಂತಾಗಿದೆ ಎಂದರು. ಈ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಶವಸಂಸ್ಕಾರದ ಸಿಲಿಕಾನ್ ಛೇಂಬರ್ ಅನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಯೋಜನಾಧಿಕಾರಿ ರಮೇಶ್ ಪಿ.ಕೆ ಉದ್ಘಾಟಿಸಿದರು. ಅನುದಾನ ಒದಗಿಸಿದ ಶಾಸಕರನ್ನು ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಕೋಡಿ ಪಂಚಾಯತ್ ಅಭಿವೃದ್ಧಿ ಅಧಿ ಕಾರಿ ರವೀಂದ್ರ ರಾವ್,ಮಾಜಿ ಅಧ್ಯಕ್ಷೆ ಗೀತಾ ಖಾರ್ವಿ,ಮಾಜಿ ಸದಸ್ಯರಾದ ಕೃಷ್ಣ ಪೂಜಾರಿ, ಮಾಜಿ ಉಪಾಧ್ಯಕ್ಷ ಅಣ್ಣಪ್ಪ ಕುಂದರ್, ಹಿಂದೂ ರುದ್ರಭೂಮಿ ಸಮಿತಿಯ ಅಧ್ಯಕ್ಷ ಚಂದ್ರ ಖಾರ್ವಿ, ಸ್ಥಳದಾನಿ ಮಂಜುನಾಥ್ ಖಾರ್ವಿ, ಸ್ಥಳೀಯರಾದ ದಾಸ ಖಾರ್ವಿ, ಸುದಿನ, ವಿಶ್ವನಾಥ ಖಾರ್ವಿ,ಗುತ್ತಿಗೆದಾರ ಉದಯ್ ಕಾಂಚನ್, ಗ್ರಾಮಾಭಿವೃದ್ಧಿ ಯೋಜನೆಯ ಸೇವಾಪ್ರತಿನಿಧಿಗಳು ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಬಿಜೆಪಿ ಸ್ಥಳೀಯ ಮುಖಂಡ ಸುಧೀರ್ ಕುಮಾರ್ ನಿರೂಪಿಸಿ, ವಂದಿಸಿದರು.

ವಕ್ವಾಡಿ ದೇವಳದ ಸಂಪರ್ಕ ರಸ್ತೆ ಅಭಿವೃದ್ಧಿಗೆ ಕ್ರಮ: ಶಾಸಕ ಕಿರಣ್ ಕೊಡ್ಗಿ



ಕುಂದಾಪುರ: ದುಡಿಮೆಯ ಒಂದಷ್ಟು ಭಾಗವನ್ನು ಸಮಾಜಕ್ಕೆ ನೀಡುವ ಮನಸ್ಥಿತಿ ಎಲ್ಲರಲ್ಲೂ ಬೆಳೆಯಬೇಕು. ಊರಿನಲ್ಲಿ ದೇವಸ್ಥಾನ, ಶಾಲೆ ಅಭಿವೃದ್ಧಿಯಾದರೆ ಆ ಊರು ಪ್ರಗತಿ ಕಾಣಿಸುತ್ತದೆ. ನಶಿಸಿಹೋಗಿದ್ದ ದೈವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿ ಅದರ ಒಂದನೇ ವರ್ಷದ ವರ್ಧಂತಿಯ ಸಂದರ್ಭದಲ್ಲಿ ದಾನಿ ಪ್ರವೀಣ್ ಕುಮಾರ್ ಶೆಟ್ಟಿಯವರ ಸಹಕಾರದಲ್ಲಿ ಸಭಾಭವನ ನಿರ್ಮಿಸಿರುವುದು ಉತ್ತಮ ವಿಚಾರ ಇಲ್ಲಿನ ಊರು ಹಾಗೂ ದೇವಸ್ಥಾನ ಸಂಪರ್ಕದ ರಸ್ತೆ ನಿರ್ಮಾಣಕ್ಕೆ ಆದ್ಯತೆ ಮೇರೆಗೆ ಕ್ರಮವಹಿಸಲಾಗುತ್ತದೆ ಎಂದು ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ಕುಂದಾಪುರ ತಾಲೂಕಿನ ವಕ್ವಾಡಿ ಗ್ರಾಮದ ಹಳೆಯಮ್ಮ, ಚಿಕ್ಕಮ್ಮ ಮತ್ತು ಹೈಗುಳಿ ಪರಿವಾರ ದೈವಸ್ಥಾನ ಹಾಗೂ ನಾಗದೇವರ ಸನ್ನಿಧಿಯ ಪ್ರಥಮ ಪ್ರತಿಷ್ಠಾ ವರ್ಧಂತ್ಯುತ್ಸವದ ಅಂಗವಾಗಿ ನಿರ್ಮಿಸಲಾದ ನೂತನ ಹಳೆಯಮ್ಮ ದೇವಿ ಸಭಾಭವನವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಭಾಭವನ ನಿರ್ಮಾಣಕ್ಕೆ ಸಹಕರಿಸಿದ ಮುಖ್ಯ ದಾನಿ, ದುಬೈ ಉದ್ಯಮಿ ಪ್ರವೀಣ್ ಕುಮಾರ್ ಶೆಟ್ಟಿ ವಕ್ವಾಡಿ ಅವರನ್ನು ಸನ್ಮಾನಿಸಲಾಯಿತು. ನಿವೃತ್ತ ಮುಖ್ಯೋಪಾಧ್ಯಾಯ ಕರುಣಾಕರ ಶೆಟ್ಟಿ ಮೇಲ್ಮನೆ, ಬ್ಯಾಂಕ್ ಆಫ್ ಬರೋಡ ಕುಂಭಾಶಿ ಶಾಖೆಯ ಪ್ರಬಂಧಕ ಕರುಣಾಕರ ಶೆಟ್ಟಿ, ಅವತಾರಚಿಕ್ಕು ಹೆಗ್ಗಾರ್‌ಬೈಲ್ ದೈವಸ್ಥಾನದ ಆಡಳಿತ ಮೊಕ್ತೇಸರ ಮಾಲಾಡಿ ರಾಜೀವ ಶೆಟ್ಟಿ, ವಕ್ವಾಡಿ ಹಳೆಯಮ್ಮ ದೇವಿ ಟೆಂಪಲ್ ಟ್ರಸ್ಟ್ ಅಧ್ಯಕ್ಷ ಶಾಂತರಾಮ ಶೆಟ್ಟಿ ಮೊದಲಾದವರಿದ್ದರು. ಹಳೆಯಮ್ಮ ದೇವಿ ದೇವಸ್ಥಾನದ ಆಡಳಿತ ಮೊಕ್ತೇಸರ ಬಾಲಕೃಷ್ಣ ಶೆಟ್ಟಿ ಪಟೇಲರಮನೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವನೀತಾ ಪ್ರಾರ್ಥಿಸಿ, ಅಕ್ಷತಾ ಗಿರೀಶ್ ಐತಾಳ ಕಾರ್ಯಕ್ರಮ ನಿರೂಪಿಸಿ, ದೈವಸ್ಥಾನದ ಪ್ರಧಾನ ಅರ್ಚಕ ಗಿರೀಶ್ ಐತಾಳ್ ವಂದಿಸಿದರು.

ಬಜೆ ಅಣೆಕಟ್ಟಿಗೆ ಒಳಹರಿವು ಆರಂಭ: ಯಶ್‌ಪಾಲ್ ಸುವರ್ಣ



ಉಡುಪಿ: ನಗರಸಭೆಗೆ ಕುಡಿಯುವ ನೀರು ಸರಬರಾಜು ಮಾಡುವ ಬಜೆ ಅಣೆಕಟ್ಟು ಪ್ರದೇಶಕ್ಕೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಣೆಕಟ್ಟಿನ ನೀರಿನ ಪ್ರಸ್ತುತ ನೀರಿನ ಲಭ್ಯತೆಯ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಈಗಾಗಲೇ ಬಜೆ ಅಣೆಕಟ್ಟಿಗೆ ನೀರಿನ ಒಳಹರಿವು ಆರಂಭಗೊಂಡಿದೆ. ಇದರಿಂದ ನಗರ ಭಾಗಕ್ಕೆ ನಿರಂತರ ನೀರು ಸರಬರಾಜಿಗೆ ಅಗತ್ಯ ಪ್ರಮಾಣದ ನೀರು ಲಭ್ಯವಾಗಿದೆ ಎಂದು ಯಶ್ ಪಾಲ್ ಸುವರ್ಣ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಉಡುಪಿ ನಗರಸಭೆ ಮಾಜಿ ಅಧ್ಯಕ್ಷರಾದ ಪ್ರಭಾಕರ ಪೂಜಾರಿ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಜೂ.5ರಂದು ವಿದ್ಯುತ್ ವ್ಯತ್ಯಯ

ಉಡುಪಿ: ತುರ್ತು ನಿರ್ವಹಣಾ ಕಾಮಗಾರಿ ಹಿನ್ನಲೆಯಲ್ಲಿ ಮೂಡುಬೆಟ್ಟು, ಆದಿ ಉಡುಪಿ, ಚೆನ್ನಂಗಡಿ, ಬಂಕೇರಕಟ್ಟ, ಸಂಕೇಶ್ ಭಜನಾ ಮಂದಿರ, ಕಲ್ಮಾಡಿ ಗರಡಿ, ಮಲ್ಪೆ ಮುಖ್ಯ ರಸ್ತೆ, ಪಂದುಬೆಟ್ಟು, ಇನ್ ಕಾಂ ಟ್ಯಾಕ್ಸ್ ಆಫೀಸ್ ಹತ್ತಿರ, ಕಿದಿಯೂರು, ಬಾಪುತೋಟ, ಬಂಕೇರಕಟ್ಟ, ಕೊಪ್ಪಲತೋಟ, ನಿಟ್ಟೂರು ಎಸ್.ಟಿ.ಪಿ, ಕರಾವಳಿ ಬೈಪಾಸ್ ಮತ್ತು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.5ರಂದು ಬೆಳಿಗ್ಗೆ 9.30ರಿಂದ ಸಂಜೆ 5.30 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ.

ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನಿಂದ ರೂ. 60,09,887 ಪ್ರೋತ್ಸಾಹ ಧನ ವಿತರಣೆ, ಜ್ಞಾನಸುಧಾದ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಮಾತ-ಪಿತರನ್ನು ಗೌರವಿಸಿದರೆ ಜೀವನದಲ್ಲಿ ಸಫಲತೆ ಪಡೆಯಬಹುದು: ಅಜಿತ್ ಮಣ್ಣಿಕೇರಿ

ಕಾರ್ಕಳ: ಶಿಕ್ಷಣ ಕ್ಷೇತ್ರದಲ್ಲಿ ಡಾ.ಸುಧಾಕರ್ ಶೆಟ್ಟಿಯವರು ನಿಜವಾದ ಶರಣರು. ಅವರಿಗಿರುವ ಶೈಕ್ಷಣಿಕ ಕಾಳಜಿ, ಬದ್ಧತೆಯನ್ನು ಸರ್ವರೂ ಮೆಚ್ಚಲೇ ಬೇಕು. ಮಾತ-ಪಿತರನ್ನು ಗೌರವಿಸಿದವರು ಜೀವನದಲ್ಲಿ ಸದಾ ಸಫಲತೆಯನ್ನು ಪಡೆಯುತ್ತಾರೆ ಎಂದು ಬಾಗಲಕೋಟೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಅಜಿತ್ ಸಿ. ಮಣ್ಣಿಕೇರಿ ಹೇಳಿದರು.

ಅವರು ಕುಕ್ಕುಂದೂರಿನ ಗಣಿತನಗರದ ಶ್ರೀ ಮಹಾಗಣಪತಿ ದೇವಳದ 13ನೇ ವರ್ಷದ ಪ್ರತಿಷ್ಠಾ ಮಹೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಮುಖ್ಯ ಅತಿಥಿ ಸಾಯಿರಾಧಾ ಸಮೂಹ ಸಂಸ್ಥೆಗಳ ಸಂಸ್ಥಾಪಕ ಹಾಗೂ ಆಡಳಿತ ನಿರ್ದೇಶಕರು ಆಗಿರುವ ಮನೋಹರ್ ಎಸ್. ಶೆಟ್ಟಿ ಮಾತನಾಡಿ, ನಾವೆಷ್ಟೇ



ಶಿಕ್ಷಣ ಪಡೆದು ಪದವೀದರರಾದರೂ, ವ್ಯಕ್ತಿತ್ವದ ಗುಣಮಟ್ಟ ಎನ್ನುವುದು ನಮ್ಮ ಸಂಸ್ಕಾರದಿಂದ ಕೂಡಿರಲು ಸಾಧ್ಯ. ಅಂತಹ ಸಂಸ್ಕಾರಯುತವಾದ ಶಿಕ್ಷಣ ಜ್ಞಾನಸುಧಾದಿಂದ ಲಭಿಸುತ್ತಿದೆ ಎಂಬುದಕ್ಕೆ ಇಂದಿನ ಕಾರ್ಯಕ್ರಮವೇ ಸಾಕ್ಷಿ ಎಂದರು.

ಅಧ್ಯಕ್ಷತೆಯನ್ನು ವೆಂಕಟರಮಣ ದೇವ್ ಎಜ್ಯುಕೇಶನಲ್ ಕಲ್ಚರಲ್ ಟ್ರಸ್ಟ್ ಕುಂದಾಪುರ ಇದರ ಕಾರ್ಯದರ್ಶಿ ಕೆ. ರಾಧಾಕೃಷ್ಣ ಶೆಣೈ ವಹಿಸಿ, ಪ್ರತಿಭಾನ್ವಿತ ವಿದ್ಯಾರ್ಥಿಗಳ ಜೊತೆಗೆ ಅವರ ಏಳಿಗೆಗೆ ಬೆನ್ನೆಲುಬಾದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವರ್ಗವನ್ನು ಪ್ರೋತ್ಸಾಹಿಸುತ್ತಿರುವ ಅಜೆಕಾರ್ ಟ್ರಸ್ಟಿನ ಕಾರ್ಯ ಶ್ಲಾಘನೀಯ ಎಂದರು.

ಪ್ರತಿಭಾ ಪುರಸ್ಕಾರ, ಜ್ಞಾನಸುಧಾ ಪತ್ರಿಕೆ ಬಿಡುಗಡೆ

ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವತಿಯಿಂದ ಇದೇ ಸಂದರ್ಭದಲ್ಲಿ ಸೇವಾ ನಿವೃತ್ತರಾದ ಗೋಪಾಲ್ ಸುವರ್ಣ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯಲ್ಲಿ 10 ವರ್ಷಗಳ ಸೇವೆ ಸಲ್ಲಿಸಿದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಸಾಧಕರನ್ನು ಜೊತೆಗೆ ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಗೂ ಉಪನ್ಯಾಸಕವರ್ಗವನ್ನು ಗೌರವಿಸಲಾಯಿತು. ಟ್ರಸ್ಟಿನಿಂದ ಈ ಬಾರಿ 60 ಲಕ್ಷದ 9 ಸಾವಿರದ ಎಂಟುನೂರ ಎಂಬತ್ತೇಳು ರೂಪಾಯಿ ಮೊತ್ತದ ಪ್ರೋತ್ಸಾಹ ಧನ ವಿತರಿಸಲಾಯಿತು. 41ನೇ ಸಂಚಿಕೆ ಜ್ಞಾನಸುಧಾ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

ಟ್ರಸ್ಟಿನ ಟ್ರಸ್ಟಿಗಳಾದ ಸಿ.ಎ. ನಿತ್ಯಾನಂದ ಪ್ರಭು, ಅನಿಲ್ ಕುಮಾರ್ ಜೈನ್ ಹಾಗೂ ವಿದ್ಯಾವತಿ ಎಸ್ ಶೆಟ್ಟಿ, ಉಜ್ವಲ ಡೆವಲಪರ್ಸ್ ಪುರುಷೋತ್ತಮ ಶೆಟ್ಟಿ, ಗಣಿತನಗರದ ಶ್ರೀ ಮಹಾಗಣಪತಿ ದೇವಸ್ಥಾನದ ಭಜನಾ ಮಂಡಳಿ ಅಧ್ಯಕ್ಷ ಕಮಲಾಕ್ಷ ನಾಯಕ್, ಕಾರ್ಕಳ ಜ್ಞಾನಸುಧಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಪ್ರಾಂಶುಪಾಲ ದಿನೇಶ್ ಎಂ. ಕೊಡವೂರು, ಉಪಪ್ರಾಂಶುಪಾಲರಾದ ಸಾಹಿತ್ಯ ಹಾಗೂ ಮತ್ತಿತರರು ಇದ್ದರು. ಟ್ರಸ್ಟಿನ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಆಂಗ್ಲಭಾಷಾ ವಿಭಾಗದ ಮುಖ್ಯಸ್ಥ ಸಂಗೀತಾ ಕುಲಾಲ್ ನಿರೂಪಿಸಿ, ವಂದಿಸಿದರು. ಉಪನ್ಯಾಸಕ ಶರತ್ ಆರ್. ಸಾಧಕರ ಪಟ್ಟಿಯನ್ನು ಹಾಗೂ ಸನ್ಮಾನಿತರ ಪತ್ರವನ್ನು ಸಂತೋಷ್ ನೆಲ್ಲಿಕಾರು ವಾಚಿಸಿದರು.